ಸಂಗ್ಯಾ ಬಾಳ್ಯಾ ಮತ್ತು ಖರೇ ಖರೇ ಸಂಗ್ಯಾ ಬಾಳ್ಯಾ ಕೃತಿಗಳ ಒಂದು ಅಧ್ಯಯನ

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ ಇವರಿಗೆ
ಎಂ.ಫಿಲ್ ಅಂಶಿಕ ಪದವಿಗಾಗಿ ಸಾದರ ಪಡಿಸಿದ ಸಂಶೋಧನ ಕಿರು ಪ್ರಬಂಧ)

ಸಂಶೋಧಕರು

ಜ್ಯೋತಿ ಈಶಪ್ಪಾ ಬಿಹಾರಿ

ಮಾರ್ಗದರ್ಶಕರು

ಡಾ. ಈಶ್ವರಯ್ಯ ಮಠ

ಕ.ರಾ.ಶಿ.ಸಂಸ್ಥೆಯ
ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ

ಕನ್ನಡ ವಿಶ್ವವಿದ್ಯಾಲಯ ಹಂಪಿ

ವಿದ್ಯಾರಣ್ಯ - ೫೮೩ ೨೭೬

ಸೆಪ್ಟೆಂಬರ - ೨೦೦೪

ಸಂಗ್ಯಾ ಬಾಳ್ಯಾ ಮತ್ತು ಖರೇ ಖರೇ ಸಂಗ್ಯಾ ಬಾಳ್ಯಾ ಕೃತಿಗಳ ಒಂದು ಅಧ್ಯಯನ

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ ಇವರಿಗೆ ಎಂ.ಫಿಲ್ ಅಂಶಿಕ ಪದವಿಗಾಗಿ ಸಾದರ ಪಡಿಸಿದ ಸಂಶೋಧನ ಕಿರು ಪ್ರಬಂಧ)

ಸಂಶೋಧಕರು

ಜ್ಯೋತಿ ಈಶಪ್ಪಾ ಬಿಹಾರಿ

ಮಾರ್ಗದರ್ಶಕರು

ಡಾ. ಈಶ್ವರಯ್ಯ ಮಠ

ಕ.ರಾ.ಶಿ.ಸಂಸ್ಥೆಯ

ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ.

ಕನ್ನಡ ವಿಶ್ವವಿದ್ಯಾಲಯ ಹಂಪಿ

ವಿದ್ಯಾರಣ್ಯ - ೫೮೩ ೨೭೬

ಸೆಪ್ಟೆಂಬರ - ೨೦೦೮

ಘೋಷಣಾ ಪತ್ರ

"ಸಂಗ್ಯಾ ಬಾಳ್ಯಾ" ಮತ್ತು "ಖರೇ ಖರೇ ಸಂಗ್ಯಾ ಬಾಳ್ಯಾ" ಕೃತಿಗಳ ಒಂದು ಅಧ್ಯಯನ ಎಂಬ ಪ್ರಬಂಧವನ್ನು ಡಾ. ಈಶ್ವರಯ್ಯ ಮಠ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಕ.ರಾ.ಶಿ.ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಇವರಿಗೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು. ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ದಿನಾಂಕ : 30-09-2008

ಸ್ಥಳ : ಬೀದರ.

ಜ್ಯೋತಿ ಈಶಪ್ಪಾ ಬಿಹಾರಿ
ಎಂ.ಫಿಲ್ ವಿದ್ಯಾರ್ಥಿನಿ
ಕ.ರಾ.ಶಿ.ಸಂಸ್ಥೆಯ
ಸ್ನಾತಕೋತ್ತರ ಕನ್ನಡ ಸಂಶೋಧನಾ
ಕೇಂದ್ರ, ಬೀದರ.

ಪ್ರಮಾಣ ಪತ್ರ

"ಸಂಗ್ಯಾ ಬಾಳ್ಯಾ" ಮತ್ತು "ಖರೇ ಖರೇ ಸಂಗ್ಯಾ ಬಾಳ್ಯಾ" ಕೃತಿಗಳ ಒಂದು ಅಧ್ಯಯನ ಎಂಬ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಜ್ಯೋತಿ ಈಶಪ್ಪಾ ಬಿಹಾರಿ ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು. ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 30-09-2008

ಸ್ಥಳ : ಬೀದರ.

ಡಾ. ಈಶ್ವರಯ್ಯ ಮಠ

ಸಂಶೋಧನಾ ಮಾರ್ಗದರ್ಶಕರು

ಕ.ರಾ.ಶಿ.ಸಂಸ್ಥೆಯ ಸ್ನಾತಕೋತ್ತರ ಕನ್ನಡ

ಸಂಶೋಧನಾ ಕೇಂದ್ರ, ಬೀದರ.

ಪರಿವಿಡಿ

ಅಧ್ಯಾಯ ೧

೧. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೨. ನಾಟಕ ಸಾಹಿತ್ಯ ಬೆಳದು ಬಂದ ಬಗೆ

೧. ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿ

ಯಾವುದೇ ವಿಷಯವಾಗಲಿ, ಅಧ್ಯಯನದ ಉದ್ದೇಶದಿಂದ ನಾವು ನೋಡಲು ಹೊರಟಾಗ ಅನೇಕ ವಿಷಯಗಳ ಬಗ್ಗೆ ಗಮನ ಹರಿಸುವುದು ಅವಶ್ಯವಾಗಿರುತ್ತದೆ. ಜನಪದರ ಅಧ್ಯಯನ ಎಂದರೆ ಮುಗಿಯಿತು ಅಲ್ಲಿ ಅಂಥದೇನಿದೆ ಎಂದು ಮೂಗು ಮುರಿಯುವ ಜನಗಳಿಗೇನು ಕಮ್ಮಿಯಿಲ್ಲ. ಜನಪದಗಳ ಕಲೆಗಳು ಅಂದರೆ ಮುಖಕ್ಕೆ ಬಣ್ಣ ಬಳಿಯುವುದು, ಶೃಂಗಾರ ಮಯವಾದ ಉಡುಗೆ ತೊಡುಗೆ ಆಭರಣಗಳ ವೈಭವ, ಇಷ್ಟೇ ಇದನ್ನು ಬಿಟ್ಟರೆ ಹೊಸದೇನಿದೆ ಎಂದು ನಿರಾಸಕ್ತಿ ಮೂಡಿಸುವವರು ಇದ್ದಾರೆ. ಗುಣಗಾನ ಮಾಡುವ ಜನರೂ ಇದ್ದಾರೆ. ಒಂದು ವಿಷಯ ಸಮಾಜದ ಎದುರುಗಡೆ ಬಂದಾಗ ಪರ-ವಿರೋಧಗಳು ಅನಾದಿ ಕಾಲದಿಂದಲೂ ಇದ್ದವುಗಳೇ ಅದಕ್ಕೇನು ಯಾವ ಕಾಲದಲ್ಲಿಯೂ ಬರವಿಲ್ಲ. ಹೀಗಾಗಿ ಸಂಶೋಧಕ ಎದೆಗುಂದದೆ ಹೊಸತನವನ್ನು ಹುಡುಕಲು ಹೋಗುತ್ತಾನೆ. ಸಂಶೋಧನೆ ಎಂದರೆ ಸುಳ್ಳಿಗೆ ಮತ್ತು ವರ್ಣನೆಗೆ ಅಲ್ಲಿ ಜಾಗ ಇರುವುದಿಲ್ಲ. ಒಟ್ಟಾರೆ ಅದು ಏನೇಇರಲಿ, ಸತ್ಯ ಇರಬೇಕು ಎಂದು ಸತ್ಯಾನ್ವೇಷಣೆ ಮಾಡಲು ಹೊರಟವನೇ ನಿಜವಾದ ಸತ್ಯಾನ್ವೇಷಕ. ಹೀಗಾಗಿ ಈ ಒಂದು ಪ್ರಮುಖ ಅಂಶ ಈ ಸಂಗ್ಯಾ ಬಾಳ್ಯಾ ಮತ್ತು ಖರೇ ಖರೇ ಸಂಗ್ಯಾ ಬಾಳ್ಯಾ ಎನ್ನುವ ಕೃತಿಗಳು, ಸಣ್ಣಾಟ ಎನ್ನುವ ರಂಗಭೂಮಿಯಲ್ಲಿ ಹೊಸ ಕ್ರಾಂತಿಯನ್ನೇ ಎಬ್ಬಿಸಿವೆ.

ಸಂಗ್ಯಾ ಬಾಳ್ಯಾ ಕೃತಿಯ ಪ್ರಮುಖ ಅಂಶಗಳು ಅನೇಕ ತರಹದ ಸ್ಥಿತಿಯಲ್ಲಿ ನಮಗೆ ಕಾಣ ಸಿಗುತ್ತವೆ. ಈ ಒಂದು ಕೃತಿಯಲ್ಲಿ ಅಡಕವಾಗಿರುವ ಅನೇಕ ಅಂಶಗಳು ಅಧ್ಯಯನದ ದೃಷ್ಟಿಯಿಂದ ತುಂಬಾ ಉಪಯುಕ್ತವೆನ್ನಿಸುತ್ತದೆ. ಈ ಕೃತಿಗಳಲ್ಲಿ ಪ್ರಾದೇಶಿಕತೆ ಭಾಷೆ ಶೈಲಿ, ತಂತ್ರ, ಸಂಸ್ಕೃತಿ, ಪುರುಷ ಪ್ರಧಾನತೆ, ಸ್ತ್ರೀಅಸಹಾಯಕತೆ ಮೇಲು ವರ್ಗ, ಕೆಳವರ್ಗ, ಹೀಗೆ ಹಲವಾರು ಪ್ರಮುಖ ಅಂಶಗಳು ಇಲ್ಲಿ ಗೋಚರವಾಗುತ್ತದೆ. ಒಂದೊಂದು ಅಂಶವು ಒಂದೊಂದು ದೃಷ್ಟಿಯಿಂದ ಪ್ರಮುಖವಾಗಿರುತ್ತದೆ.

ಪ್ರಾದೇಶಿಕ ದೃಷ್ಟಿಯಿಂದ ಹೇಳುವುದಾದರೆ, ಬೆಳಗಾಂವ ಜಿಲ್ಲೆಯ ಬೈಲಹೊಂಗಲು ತಾಲೂಕಿನಲ್ಲಿರುವ ನೈಜ ಘಟನೆಯನ್ನು ನಮ್ಮ ಎದುರಿಗೆ ತಂದು ನಿಲ್ಲಿಸಿರುವ ಘಟನಾವಳಿಗಳು, ಹಾಗೂ ಅಲ್ಲಿರುವ ಪ್ರಕೃತಿಯ ನೈಜ್ಯ ಚಿತ್ರಣವು, ಈ ಕೃತಿಯಲ್ಲಿ ವ್ಯಕ್ತಗೊಂಡಿರುವುದು ಕಂಡು ಬರುತ್ತದೆ. ಅಲ್ಲಿರುವ ನೆಲ, ಜಲ, ಹೊಲಗದ್ದೆಗಳು ನಮ್ಮ ಕಣ್ಣೆದುರಿಗೆ ಬಂದು ನಿಲ್ಲುತ್ತವೆ. ಪ್ರಾದೇಶಿಕ ದೃಷ್ಟಿಯಿಂದ ನೋಡುವುದಾದರೇ ನಾವು ಹೈದ್ರಾಬಾದ ಭಾಗಕ್ಕೆ ಬಂದಿರುವ ಪ್ರದೇಶವನ್ನು ಹೈದ್ರಾಬಾದ ಕರ್ನಾಟಕವೆಂದು ಮುಂಬೈ ಪ್ರಾಂತಕ್ಕೆ ಹೊಂದಿರುವ ಪ್ರದೇಶವನ್ನು ಮುಂಬೈ-ಕರ್ನಾಟಕ ವೆಂದು ಮತ್ತು ಮೈಸೂರ ಪ್ರದೇಶವೆಂದು ಓಗೆ ನಾವು ಕೆಲವು ಪ್ರಾದಶಿಕತೆಯ ಭಾಗಗಳಾಗಿ ನಾವು ಸ್ವತಃ ವಿಂಗಡಿಸಿಕೊಂಡಿದ್ದೇವೆ.

ಎರಡು ಕೃತಿಗಳು ಪ್ರಾದೇಶಿಕ ದೃಷ್ಠಿಯಿಂದ ಒಂದು ಹೊಸತನವನ್ನು ಬಿಂಬಿಸುತ್ತದೆ. ಈ ಸಣ್ಣಾಟದ ಪ್ರಮುಖ ಕಥಾ ವಸ್ತು ಹುಟ್ಟಿಕೊಂಡಿರುವುದೇ ಬೆಳಗಾಂವ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಬೈಲವಾಡ ಗ್ರಾಮದಲ್ಲಿ. ಗ್ರಾಮಗಳೆಂದರೆ ಮುಗಿಯುತು. ಒಂದು ಮನೆಯು ಕೂಡ ಇಡೀ ಆ ಗ್ರಾಮ ಇದ್ದಂತೆ ಹೇಗೆಂದರೆ ಒಂದು ಮನೆಯ ಸುದ್ದಿ ಮತ್ತೊಂದು ಮನೆಯಲ್ಲಿ ಪ್ರಸ್ತಾಪವಾಗಿರುತ್ತದೆ. ಒಬ್ಬರ ಮನೆಯಲ್ಲಿ ಕೆಟ್ಟದಾಗಿರಲಿ, ಒಳ್ಳೆಯಾದಾಗಿರಲಿ ಇಡೀ ಗ್ರಾಮದ ವಿಷಯವಾಗಿ ಬಿಡುತ್ತದೆ. ಹೀಗಾಗಿ ಗ್ರಾಮದ ವಿಷಯಗಳು ಅನೇಕ ಸಂಸ್ಕೃತಿಯನ್ನು ಬಿಂಬಿಸುವಂಥಹಗಳೆ.

ಪ್ರತಿಯೊಂದು ಹಬ್ಬ ಹರಿದಿನಗಳು ಈ ಬೈಲವಾಡ ಗ್ರಾಮದಲ್ಲಿ ನಡೆಯುತ್ತಿರುತ್ತವೆ. ಹೀಗಾಗಿ ಆ ಭಾಗದ ಗ್ರಾಮದ ಚಿತ್ರಣವೂ ಆಯಾ ಪ್ರಾದೇಶಿಕತೆಯ ವಿಶಿಷ್ಟತೆಯನ್ನು ಸಾರುವುದಾಗಿದೆ.

ಗಾದೆ ಮಾತುಗಳು ಒಗಟುಗಳು ಈ ಕಥಾವಸ್ತುವಿನ ಅನೇಕ ಸನ್ನಿವೇಷಗಳಲ್ಲಿ ಬಳಕೆಯಾಗಿವೆ.

"ಬಡವನ ಸಿಟ್ಟು ದವಡಿಗೆ ಮೂಲ" ಕೂತು ಉಣ್ಣುವವನಿಗೆ ಕೂಡಿಕೆ ಹೊನ್ನು ಸಾಲದು.

"ಹುಣುಸಿಗಿಡ ಮುಪ್ಪು ಆದ್ರೂ ಹುಳಿ ಮುಪ್ಪು ಆದೀತೇನು.?"

"ಮಾಡಿಕೊಂಡ ಗಂಡ ಬೇಡಿಕೊಂಡ್ರು ಬಿಡುವುದಿಲ್ಲ."

"ನೋಡಿಕೊಂಡು ಬಾ ಅಂದ್ರ, ಮಾಡಿಕೊಂಡು ಬಂದ"

"ಸೂಳಿ ಪಾಪ ಸನ್ಯಾಸಿಗೆ ಅಂತ". ಹೀಗೆ ಸಂದರ್ಭಕ್ಕೆ ತಕ್ಕಂತೆ ಅನೇಕ ರೀತಿಯ ಗಾದೆಗಳು ಈ ಕೃತಿಯಲ್ಲಿ ಕಂಡು ಬರುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು, ಎನ್ನುವಂತೆ ಈ ಗಾದೆಗಳು ಆ ಭಾಗದ ವೈಶಿಷ್ಟ್ಯವನ್ನು ನಮಗೆ ಪ್ರಚುರ ಪಡಿಸುತ್ತವೆ. ಈ ಮಾತುಗಳು ಆ ಭಾಗದಲ್ಲಿ ಅನೇಕ ಜನರು ಆಗಾಗ ಬಳಸುತ್ತಲೆ ಇರುತ್ತಾರೆ. ಹತ್ತಾರು ಮಾತಿನ ಅರ್ಥ ಕೆವಲ ಒಂದು ಸಾಲಿನಲ್ಲಿ ವಿವರಿಸುವ ಮಾತುಗಳು ಒಂದೊಂದು ಸಲ ಇವುಗಳ ಬಳಕೆಯಿಂದ ಜನಪದರಲ್ಲಿ ಅಡಗಿರುವ ಸಾಹಿತ್ಯದ ವಾಸನೆಯು ಕೇಳುವವರಿಗೆ ಅರ್ಥವಾಗದೇ ಇರುವ ದಾಟಿಯಲ್ಲಿ ತಿರುಚಿ ಹೇಳುತ್ತಾರೆ. ಹೀಗಾಗಿ ಈ ಕೃತಿಯಲ್ಲಿ ಸನ್ನಿವೇಷಗಳು ಸಮಯಕ್ಕೆ ತಕ್ಕಂತೆ ಬಳಕೆಯಾಗಿದೆ.

ಆಯಾ ಭಾಗದಲ್ಲಿ ಹಬ್ಬ-ಹರಿದಿನಗಳು, ಜಾತ್ರೆಗಳು, ಗುಡಿ ಗುಂಡಾರಗಳು, ಹೀಗೆ ಅನೇಕ ರೀತಿಯ ಸಾಂಪ್ರದಾಯಿಕ ಹಬ್ಬಗಳು ಅವುಗಳ ಸಂಸ್ಕೃತಿಯನ್ನು ಬೆಳಗಾಂವ ಜಿಲ್ಲೆಯ ಭಾಗದ ಜನರು ಪ್ರತಿಬಿಂಬಿಸುವುದು ಈ ಕೃತಿಯಲ್ಲಿ ಅವರು ಆಚರಿಸುವುದರಿಂದ ಗೋಚರವಾಗುತ್ತದೆ.

ನಾನು ಬೆಳೆದದ್ದು, ಗ್ರಾಮೀಣ ಪ್ರದೇಶದಲ್ಲಿ ಅಲ್ಲಿನ ಜನಪದ ಸಂಪತ್ತು ಅಗಿತ ಹೋದಂತೆ ಹೆಚ್ಚಾಗುತ್ತದೆ. ನಾನು ಚಿಕ್ಕವಳಾಗಿರುವಾಗ, ನಮ್ಮೂರಲ್ಲಿ ಆಡುವ ಆಟಗಳು, ಸಣ್ಣಾಟಗಳು, ನನ್ನ ಕಣ್ಣಿಗೆ ಕಟ್ಟುವ ರೀತಿಯಲ್ಲಿ ಹಿಂದಿನ ನೆನಪುಗಳು ಕಣ್ಣಮುಂದೆ ಜಾರಿ ಹೋಗುತ್ತವೆ. ಹಳ್ಳಿಯ ಕಲೆ ಅಗೋಚರ ವಾದಂಥದ್ದು, ಅದರ ಮೇಲೆ ಮತ್ತೆ ಮತ್ತೆ ಬೆಳಕು ಚೆಲ್ಲುತ್ತಾ ಹೋಗಬೇಕಾಗಿದೆ. ಸಂಶೋಧನೆಗಳು ನಡಿತಾ ಇರಬೇಕು. ಅನ್ನುವ ದೃಷ್ಟಿಯಿಂದ ಈ ಅಧ್ಯಯನಕ್ಕೆ ನಾನು ಆಸಕ್ತಿ ತೋರಿಸಿದ್ದು, ಮತ್ತು ಹಳ್ಳಿಯಲ್ಲಿ ಇರುವುದರಿಂದ ನನಗೆ ಈ ಕೃತಿಗಳ ಅಧ್ಯಯನದ ಕಡೆಗೆ ಸಹಜವಾಗಿ ಹಂಬಲ ಹೆಚ್ಚಾಯಿತು. ಜನಪದ ಎಂಬುದು ಇಂದು ಹೆಚ್ಚು ಅರ್ಥದಲ್ಲಿ ಬಳಸಲಾಗುತ್ತಿದೆ. ಏಕೆಂದರೆ, ಇದರ ವ್ಯಾಪ್ತಿ ವಿಶಾಲವಾದದ್ದು, ಇಲ್ಲಿನ ಹಾಡು, ಕಲೆ, ನಲೆ, ಗಾದೆ, ಒಗಟು, ವೇಷ ಭೂಷಣ, ವಾದ್ಯ ಸಲಕರಣೆ, ಕ್ರೀಡೆಗಳು, ಹೀಗೆ ಹಲವಾರು ವಿಷಯಗಳನ್ನು, ತನ್ನ ಬಾಹುವಿನಲ್ಲಿ ಜೋಪಾನವಾಗಿ ಹಿಡಿದುಕೊಂಡು, ಮತ್ತು ಕಾಯ್ದುಕೊಂಡು ಬಂದಿದೆ. ಜನಪದವನ್ನು ಸೂಕ್ಷ್ಮವಾಗಿ ಅಧ್ಯಾಯನ ಕೈಗೊಳ್ಳುವ ಪರಿಪಾಠ ನಡೆದಿದೆ. ಆಧುನಿಕ ಸಂದರ್ಭದಲ್ಲಿ ಜನಪದ ಅಳಿವಿನ ಅಂಚಿನಲ್ಲಿ ಇದೆ. ಹೀಗಾಗಿ ಅಧ್ಯಯನ ಕೈಗೊಳ್ಳುವ ಪರಿಪಾಠ ನಡೆದಿದೆ. ಪ್ರಾದೇಶಿಕ ಸಂಸ್ಕೃತಿ ಅದರ ಆಚಾರ - ವಿಚಾರಗಳು, ಅಳಿಯುವ ಮುನ್ನ ಅವುಗಳನ್ನು ಹಿಡಿದಿಡುವ ಸಾಹಸ ಮಾಡುವುದು, ಅತಿ ಅವಶ್ಯ ಎನ್ನಿಸುತ್ತದೆ. ಈಗಾಗಲೇ ಜಾನಪದವು ತಮ್ಮ ಮೂಲ ಸ್ವರೂಪ ಕಳೆದುಕೊಳ್ಳುತ್ತ ಹೊಸ ರೂಪ ತಾಳುತ್ತಿದೆ.

ಈ ನೆಲೆಯಲ್ಲಿ ಮೂಲ ದೇಶಿ ಅಥವಾ ಪ್ರಾದೇಶಿಕ ಜನಪದ ಸಂಶೋಧನ ಅಧ್ಯಯನ ಮಾಡುವುದು ಪ್ರಸ್ತುತವೆನ್ನಿಸುತ್ತದೆ. ಜಾನಪದ ವಿಷಯದಲ್ಲಿ ಈ ನಾಡಿನಲ್ಲಿ ನಡೆದ ಅಧ್ಯಯನಗಳು ಕಡಿಮೆಯೇ ಎನ್ನಿಸುತ್ತದೆ. ಕಾರಣ, ಜನಪದ ಕಲೆಯನ್ನು ಪ್ರೋತ್ಸಾಹಿಸುವುದಾಗಲೀ, ಪ್ರದರ್ಶನಕ್ಕೊಳಪಡಿಸುವುದಾಗಲೀ, ಅಥವಾ ಅವುಗಳ ಕುರಿತು ಮಾಹಿತಿಗಳನ್ನು ಸಂಗ್ರಹಿಸುವುದಾಗಲೀ, ಹೆಚ್ಚು ಅಭಿರುಚಿಯನ್ನು ತೋರಿಸುತ್ತಿಲ್ಲ.

ಮುಖ್ಯವಾಗಿ ನಾವು ಇಲ್ಲಿ ಅಧ್ಯಯನ ಮಾಡಲು ಹೊರಟಿರುವ ಉದ್ದೇಶವೆಂದರೆ, ಪ್ರಮುಖವಾಗಿ ಸಂಗ್ಯಾಬಾಳ್ಯ ಕೃತಿಯ ಮೂಲ ವಿಷಯದ ಬಗ್ಗೆ ಮತ್ತು ಖರೇ ಖರೇ ಸಂಗ್ಯಾಬಾಳ್ಯಾ ಕೃತಿಯ ಬಗ್ಗೆ, ಈ ಎರಡು ಕೃತಿಗಳು ಒಂದುನೊಂದ ಭಿನ್ನವಾದ ರೀತಿಯಲ್ಲಿ ಕಥೆ ಹೇಳುತ್ತವೆ. ಇದರಲ್ಲಿ ಮೂಲತಃ ವಾಗಿ ಜನಪದ ಕವಿ ಪತ್ತಾರ ರಾಯಪ್ಪ ರಚಿಸಿದ ಸಂಗ್ಯಾ ಬಾಳ್ಯಾ ಎನ್ನುವ ಕೃತಿ ಈ ಕೃತಿಯನ್ನು ಆಧಾರವಾಗಿಟ್ಟುಕೊಂಡು ಎಂ.ಎಂ.ಕಲಬುರ್ಗಿಯವರು ರಚಿಸಿರುವ ಖರೇ ಖರೇ ಸಂಗ್ಯಾ ಬಾಳ್ಯಾ ಮೂಲ ಕೃತಿಯಿಂದ ಮತ್ತೊಂದು ಕೃತಿ ಇಲ್ಲಿ ಹೊರಬಂದಿದೆ. ಒಟ್ಟಾರೆ ಯಾಗಿ ಎರಡೂ ಕೃತಿಗಳ ಅಧ್ಯಯನವು ನಾವು ಇಲ್ಲಿ ಕೈಗೊಂಡಿದ್ದೇವೆ. ಈ ಕೃತಿಯ ಮೂಲ ಉದ್ದೇಶವನ್ನು ನಾವು ಮುಂದೇ ಪ್ರಸ್ತಾಪಿಸುತ್ತಾ, ಹೊರಟ್ಟದ್ದೇವೆ.

ಸಂಗ್ಯಾ ಬಾಳ್ಯಾ ಮತ್ತು ಖರೇ ಖರೇ ಸಂಗ್ಯಾ ಬಾಳ್ಯಾ ಕೃತಿಗಳು ಪ್ರಾದೇಶಿಕತೆ, ಭಾಷೆ, ಸಂಸ್ಕೃತಿ ಎಲ್ಲವೂ ಒಂದೇ ತೆರನಾಗಿವೆ. ಆದರೂ ಇಲ್ಲಿ ಈ ಎರಡೂ ಕೃತಿಗಳು, ಕಥಾವಸ್ತುವಿನಲ್ಲಿ ಕಂಡುಬರುವ ಬದಲಾವಣೆಯನ್ನು ಅರಿಯುವ ಕೆಲಸ ಮಾಡಬೇಕಾಗಿದೆ. ಎರಡೂ ಕೃತಿಗಳಲ್ಲಿ ಅವೇ ಪಾತ್ರ, ಅದೇ ವಿಷಯ. ಅದೇ ದುರಂತವನ್ನು ಒಳಗೊಂಡಿದರೂ, ಬದಲಾವಣೆಗೆ ಕಾರಣ ಏನೂ ಎನ್ನುವ ವಿಷಯ ಮುಖ್ಯವಾಗಿದೆ. ಈ ಎರಡು ಕೃತಿಗಳು ಬಯಲು ರಂಗ ಮಂದಿರದ ಮೇಲೆ ಬಣ್ಣ ಹಚ್ಚಿಕೊಂಡು ಪ್ರದರ್ಶನ ನೀಡುವಂಥವುಗಳೇ, ಜನಪದ ಶೈಲಿ, ಜನರು ಆಡುವ ಭಾಷೆ, ಅಲ್ಲಿಯ ಜನಜೀವನ, ವೃತ್ತಿ, ಬದುಕು, ಉಡುಗೆ ತೊಡುಗೆ, ಎಲ್ಲವೂ ಒಂದೇ ಶೈಲಿಯಲ್ಲಿ ಕೃತಿಗಳು ತುಂಬಿಕೊಂಡಿವೆ. ಸಂಗ್ಯಾ ಬಾಳ್ಯಾ ಕೃತಿಯಲ್ಲಿ, ಪಾತ್ರಗಳು ಮತ್ತು ಖರೇ ಖರೇ ಸಂಗ್ಯಾ ಬಾಳ್ಯಾ ಕೃತಿಯಲ್ಲಿಯ ಪಾತ್ರಗಳು ಸಂಖ್ಯಾ ದೃಷ್ಠಿಯಿಂದ ಸರಿ-ಸಮವೇ ಇವೆ. ಹೀಗೆಂದ ಮೇಲೆ ನಾವು ಎರಡು ಕೃತಿಗಳ ಬಗ್ಗೆ ತೌಲನಿಕ ಅಧ್ಯಯನ ಮಾಡಲು ಹೊರಟಿಲ್ಲ. ಎರಡೂ ಕೃತಿಯಲ್ಲಿ ಕಥಾವಸ್ತುವಿನ ಹುರಣ ಎಂಥದ್ದು. ಎಂದು ಅರಿಯುವ ಕೆಲಸ ಇದಾಗಿದೆ. ಖರೇ ಖರೇ ಸಂಗ್ಯಾ ಬಾಳ್ಯಾ ಮತ್ತು ಸಂಗ್ಯಾ ಬಾಳ್ಯಾ ಕೃತಿಗಳು ಜನಪದ ಕೃತಿಗಳಾಗಿವೆ. ಜನ ಮನ್ನಣೆ ಪಡೆದ ಕೃತಿಗಳು ಮತ್ತು "ಸಂಗ್ಯಾ ಬಾಳ್ಯಾ ಕೃತಿಯು ಚಲನ ಚಿತ್ರ" ವಾಗಿಯು ಖ್ಯಾತಿ ಪಡೆದುಕೊಂಡ ಕೃತಿ ಇದಾಗಿದೆ. ಅನೇಕ ಜನರು ಅರಿತಿರುವಂಥಹ ಕೃತಿಗಳು ಇವುಗಳಾಗಿವೆ. ಹೀಗಾಗಿ ನಾವು ಸತ್ಯತೆಯನ್ನು ಅರಿಯಲು ಎರಡು ಕೃತಿಗಳ ಬಗ್ಗೆ ಅಧ್ಯಾಯನವನ್ನು ಆರಂಭಿಸುತ್ತೇವೆ. ಎರಡು ಕೃತಿಗಳು ದುರಂತದಲ್ಲಿ ಅಂತ್ಯಗೊಂಡಿವೆ. ಗಂಗಿ ಮತ್ತು ಸಂಗ್ಯಾ ಪಾತ್ರಗಳು ಒಂದು ದೃಷ್ಠಿಯಿಂದ ನೋಡಿದರೆ. ದುರಂತದಲ್ಲಿಯೇ ಮುಕ್ತಾಯವಾಗುತ್ತವೆ. ಮುಖ್ಯವಾಗಿ ಅಧ್ಯಯನ ದೃಷ್ಠಿಯಿಂದ ಎರಡು ಕೃತಿಗಳು ಉತ್ತಮವಾಗಿವೆ.

೧. ನಾಟಕ ಬೆಳೆದು ಬಂದ ಬಗೆ

ಸಾಹಿತ್ಯ ಕ್ಷೇತ್ರದಲ್ಲಿ ಒಂದು ಪ್ರಕಾರವಾಗಿ ಬೆಳೆದು ಬಂದಿರುವ ನಾಟಕ ಕ್ಷೇತ್ರಕ್ಕೆ ಒಂದು ವಿಶಿಷ್ಟವಾದ ಮೈಲುಗಲ್ಲಿದೆ. ತನ್ನದೆ ಆಗಿರುವ ತನ್ನ ತನವನ್ನು ಕಾಯ್ದುಕೊಂಡು ಬಂದಿರುವ ಒಂದು ವಿಶಿಷ್ಟ ಕ್ಷೇತ್ರ ಇದಾಗಿದೆ.

ನಾಟಕ ಎಂದಾಕ್ಷಣ ನಾವು ನಮ್ಮ ಗಮನವನ್ನು ಕೇಂದ್ರಿಕರಿಸುವುದು ಬಣ್ಣದ ಲೋಕವೆಂದು ಮುಖಕ್ಕೆ ಬಣ್ಣ ಬಳಿದುಕೊಂಡು ಸಂದರ್ಭಕ್ಕೆ ತಕ್ಕಂತೆ ಉಡುಗೆ, ತೊಡುಗೆ ಧರಿಸಿಕ್ಕೊಂಡು ಹಾಡುತ್ತ, ಕುಣಿಯುತ್ತಾ, ಬಳಕುತ್ತಾ, ಬರುವ ಪಾತ್ರಗಳ ಚಿತ್ರಣ ಇಷ್ಟಕ್ಕೆ ನಾವು ನಾಟಕ ಎಂದು ಅರಿತರೆ ಅದರ ಅರ್ಥ ಕಳೆದುಕೊಳ್ಳುತ್ತದೆ. ನಾಟಕಕ್ಕೆ ಪುರಾತನವಾದ ಇತಿಹಾಸವಿದೆ. ಅನಾದಿ ಕಾಲದಿಂದಲೂ ಮಾನವನು ತನ್ನ ಕಲೆಯ ಅಭಿವ್ಯಕ್ತಿಯೊಂದಿಗೆ ಯಾವುದಾದರೂ ಒಂದು ಕಥಾವಸ್ತುವನ್ನಿಟ್ಟುಕೊಂಡು ಆಟ ಆಡುತ್ತ ಬಂದಿದ್ದಾನೆ. ಬರುತ್ತಿದ್ದಾನೆ. ಅದು ನಾಟಕದ ಯಾವುದೇ ಪ್ರಕಾರವಾಗಿರಬಹುದು. ದೊಡ್ಡಾಟ ಆಗಿರಲಿ. ಸಣ್ಣಾಟವೇ ಆಗಿರಲಿ, ಡಪ್ಪಿ ನಾಟವಾಗಿರಲಿ, ಬಹುರೂಪಿಯಾಟದ ಆಗಿರಲಿ, ಸಾಮಾಜಿಕ ನಾಟಕವಾಗಿರಲಿ, ಹಾಗೂ ಪೌರಾಣಿಕ ನಾಟಕವಾಗಿರಲಿ, ಒಟ್ಟಾರೆ ಇನ್ನು ಅನೇಕ ನಾಟಕ ಪ್ರಕಾರಗಳಲ್ಲಿ ಒಂದಾಗಿರಲಿ, ಎಲ್ಲವನ್ನು ನಾವು ನೋಡುವುದು ಮನೋರಂಜನೆಯ ದೃಷ್ಠಿಯಿಂದಲೇ ಏನ್ನುವುದಕ್ಕಿಂತ ನಾಟಗಳಲ್ಲಿರುವ ಕಥಾವಸ್ತುವಿನಿಂದ ಮಾನವನು ತನ್ನ ನೈಜ ಜೀವನದ ಘಟನೆಯನ್ನು ಅಳವಡಿಸಿಕೊಳ್ಳಬಹುದಾದ, ಅನೇಕ ಮಾನವಿಯ ಮೌಲ್ಯಗಳನ್ನು ನಾವು ನಾಟಕದಿಂದ ಅರಿಯಬಹುದಾಗಿದೆ ಮತ್ತು ಇದರಿಂದ ಪ್ರಭಾವಿತರು ಆಗುತ್ತೇವೆ.

ಈ ನಾಟಕಗಳು ಇತ್ತಿತಲಾಗಿ ಅಳಿವಿನ ಅಂಚಿನಲ್ಲಿ ತಮ್ಮ ಅವಸಾನವನ್ನು ಕಾಣುವ ಸ್ಥಿತಿಯಲ್ಲಿ ಬಂದು ಬಿಟ್ಟಿದೆ. ಆಧುನಿಕ ಯುಗದ ತಂತ್ರಜ್ಞಾನ ಪರಿಣಾಮದಿಂದಾಗಿ, ಚಲನ ಚಿತ್ರಗಳು ಬೆಳ್ಳಿ ತೆರೆಯ ಮೇಲೆ ಮಿಂಚುವುದರಿಂದ ಜನರ ಒಲವು ಈ ಚಲನಚಿತ್ರದತ್ತ ಹರಿಯುವುದರಿಂದ ನಾಟಕಗಳು ಯಾರು ನೋಡದಂಥ, ಪ್ರೋತ್ಸಾಹಿಸದಂಥ, ಸ್ಥಿತಿಯಲ್ಲಿ ಸಾಗುತ್ತಿವೆ, ತಂತ್ರಗಾರಿಕೆಯಿಂದ ನಾಟಕ ಲೋಕ ಮಣ್ಣು ಮುಕ್ಕಿದೆ ಎಂದು ನಾವು ಕಂಡಿದ್ದೇವೆ. ಅರಿತಿದ್ದೇವೆ.

ಈ ನಾಟಕಗಳು ಎರಡು ರೀತಿಯಲ್ಲಿ ನಾವು ನೋಡಬಹುದು.

1) ಹವಾಸಿ ರಂಗಭೂಮಿ

2) ವೃತ್ತಿ ಮತ್ತು ರಂಗಭೂಮಿ

ಪ್ರಮುಖವಾಗಿ ನಾಟಕ ಕ್ಷೇತ್ರದಲ್ಲಿ ಜನಜನಿತವಾಗಿರುವ ನಾಟಕ ಪ್ರಕಾರಗಳಿಂದಲೇ ಈ ಮೇಲಿನವುಗಳು ಹುಟ್ಟಿವೆ.ಇವುಗಳು ಜನಸಾಮಾನ್ಯರು ಕೂಡಾ ಹತ್ತಿರದಿಂದ ನೋಡುವಂತಹ ನಾಟಕದ ಪ್ರಕಾರಾಗಳಾಗಿವೆ

೧. ಹವ್ಯಾಸಿ ರಂಗಭೂಮಿ :-

ಈ ನಾಟಕಗಳು ಯಾರಿಂದಲು ಹಣ ಪಡೆದುಕೊಂಡು ನಾಟಕವನ್ನು ಪ್ರದರ್ಶಿಸುವುದಿಲ್ಲ. ರೈತ ಜನಾಂಗ, ಕೂಲಿ ಕಾರ್ಮಿಕರು, ಒಟ್ಟಾರೆ ಕೃಷಿಕರು ತಮ್ಮ ಬಿಡುವಿನ ವೇಳೆಯಲ್ಲಿ ತಮ್ಮ ಒಂದು ತೃಪ್ತಿಗೋಸ್ಕರ ಹಾಗೂ ಜನರ ತೃಪ್ತಿಗೋಸ್ಕರ, ತಮ್ಮ ಸ್ವಂತ ಖರ್ಚಿನಿಂದ ಯಾವುದಾದರೊಂದು, ಭಕ್ತಿ ಪ್ರಧಾನವಾಗಿರುವಂಥ ಪೌರಾಣಿಕ ನಾಟಕಗಳನ್ನು ಆಡುತ್ತಿದ್ದರು. ಉದಾ :- ರಾಮಾಯಣ ಅಥವಾ ಮಹಾಭಾರತದ ಒಂದು ಸನ್ನಿವೇಷವನ್ನು ಆಯ್ದುಕೊಂಡು, ಇದರ ಕಥಾವಸ್ತುವಿಗೆ ಭಂಗ ಬರದಂತೆ. ಒಬ್ಬ ಭಾಗವತ (ನಾಟಕ ಕಲಿಸುವವ) ನನ್ನ ನೇಮಕ ಮಾಡುತ್ತಾರೆ. ಆತನು ಈ ನಾಟಕ ಕಲಿಸಿ ಜನರ ಮುಂದೆ ಬಣ್ಣ ಹಚ್ಚಿಕೊಂಡು ಪ್ರದರ್ಶನ ಮಾಡಿದರೆ ಮುಗಿಯಿತು. ಅವನಿಗೆ ಇಂತಿಷ್ಟು ಸಂಬಳ ಎಂದು ಗೊತ್ತು ಪಡಿಸುತ್ತಾರೆ. ಮತ್ತು ಭಾಗವತನನ್ನು ಅತಿಯಾದ ಗೌರವನಿಂದ ಕಾಣುತ್ತಾರೆ. ಇದಕ್ಕೆಲ್ಲ ಹಣವನ್ನು ಎಲ್ಲಾ ಪಾತ್ರಗಳು ಸೇರಿಕೊಂಡು ನಾಟಕಕ್ಕೆ ತಗುಲುವ ಖರ್ಚನ್ನು ನಿಭಾಯಿಸುತ್ತಾರೆ. ಯಾರಿಂದಲೂ ದೇಣಿಗೆ ಪಡೆಯುವುದಿಲ್ಲ. ಇಷ್ಟೆಲ್ಲಾ ಆದ ಮೇಲೆ ಒಂದು ನಾಟಕ ಸಿದ್ದವಾಗಿ ಜನರ ಮುಂದೆ ಪ್ರದರ್ಶನಗೊಳ್ಳಬೇಕಾದರೆ ಕನಿಷ್ಟ ಎಂದರೂ ಎರಡು - ಮೂರು ತಿಂಗಳಾದರೂಬೇಕು. ನಾಟಕದಲ್ಲಿರುವ ಎಲ್ಲಾ ಪಾತ್ರಗಳು ಪುರುಷರೇ ಪ್ರದರ್ಶಿಸುತ್ತಾರೆ. ಅದು ಸ್ತ್ರೀ ಪಾತ್ರವೇ ಆಗಿರಲಿ ಅಥವಾ ಮತ್ಯಾವದೇ ಪಾತ್ರ ಆಗಿರಲಿ, ಈ ನಾಟಕದ ಸಂಭಾಷಣೆ, ಗೀತ ರಚನೆಯನ್ನು ಭಾಗವತನೆ, ಪಾತ್ರಗಳಿಗೆ ಹೇಳಿಕೊಟ್ಟ ನಂತರ ಒಂದು ನಾಟಕ ಸಿದ್ದಗೊಳ್ಳುತ್ತದೆ.

ಈ ರೀತಿ ಸಿದ್ದಗೊಂಡಿರುವ ನಾಟಕವು ಆ ಗ್ರಾಮದ ಯಾವುದಾದರೂ ಹಬ್ಬ - ಹರಿದಿನಗಳಲ್ಲಿ ಅಥವಾ ಜಾತ್ರೆಗಳಲ್ಲಿಯಾಗಲಿ, ಒಂದು ಪ್ರಮುಖ ದಿನವನ್ನು ಆಯ್ದುಕೊಂಡು ರಾತ್ರಿಯ ಸಮಯದಲ್ಲಿ ಪ್ರಮುಖ ಜನ ಬಸದಿಯ ಪ್ರೇಕ್ಷಣಿಯ ಸ್ಥಳಗಲ್ಲಿ ತನ್ನದೆ ಆದ ಒಂದು ರಂಗ ಮಂದಿರ ಸೃಷ್ಟಿಸಿಕೊಂಡಿರುತ್ತಾರೆ. ಇದಕ್ಕೆ ಬಯಲು ರಂಗ ಮಂದಿರ ಎನ್ನುತ್ತಾರೆ.

ನಾಟಕ ಎಂದರೆ ಮುಗಿಯಿತು, ಗ್ರಾಮಗಳಲ್ಲಿ ಹಬ್ಬದ ವಾತವರಣ ಸೃಷ್ಠಿಯಾಗುತ್ತದೆ. ಸುತ್ತಮುತ್ತಲಿನ ಗ್ರಾಮಗಳ ಜನರು ನಾಟಕ ನೋಡಲು ಸಾಯಂಕಾಲ ತಮ್ಮೂರಿನಿಂದ ನಾಟಕ ಇರುವ ಗ್ರಾಮಗಳ ಕಡೆಗೆ ಬರಲು ಪ್ರಾರಂಭಿಸುತ್ತಾರೆ. ನಾಟಕ ಪ್ರಾರಂಭವಾಗುವುದೇ ರಾತ್ರಿ ಸಮಯದಲ್ಲಿ. ವಿದ್ಯುತ ಇಲ್ಲದಿದ್ದರೂ ತಮ್ಮದೆ ಆದ ರೀತಿಯಲ್ಲಿ ಬೆಳಕಿನ ಸೌಲಭ್ಯ ಮಾಡಿಕೊಂಡಿರುತ್ತಾರೆ.

ರಾತ್ರಿಯ ಸಮಯದಲ್ಲಿ ನಾಟಕವು ಪ್ರಮುಖವಾದ ಕಥಾವಸ್ತುವಿನೊಂದಿಗೆ, ಯಾವುದಾದರೂ ದೇವರ ಭಕ್ತಿಗೀತೆಯೊಂದಿಗೆ, ವೇದಿಕೆಯ ಮೇಲೆ ಪ್ರಾರಂಭಿಸುತ್ತಾರೆ. ವಾದ್ಯ ಮೇಳಗಳೆಲ್ಲವುದರ ಮುಖಾಂತರ ಎರಡು ಪ್ರಮುಖ ಸಣ್ಣ ಪಾತ್ರಗಳೊಂದಿಗೆ ಇಡಿ ನಾಟಕದ ಸಾರಾಂಶ ಮತ್ತು ವಿಶ್ಲೇಷಣೆಯನ್ನು ಈ ಪಾತ್ರಗಳಿಂದ ಜನರಿಗೆ ಪ್ರಚುರ ಪಡಿಸಿ ನಾಟಕವನ್ನು ಪ್ರಾರಂಭಿಸುತ್ತಾರೆ.

ಅನೇಕ ಪ್ರೇಕ್ಷಕರು ಸಮುದಾಯದ ಬಯಲಿನ ವೇದಿಕೆಯ ಮುಂದೆ ಕುಳಿತುಕೊಂಡಿರುತ್ತಾರೆ. ಯಾರು ಯಾರಿಗೂ ಹಣ ಕೊಡದೆ ಪುಕ್ಕಟೆಯಾಗಿ ಇಡಿ ಒಂದು ರಾತ್ರಿ ವ್ಯವಸ್ಥಿತ ರೀತಿಯಲ್ಲಿ ತಾಳ್ಮೆ ಕಳೆದು ಕೊಳ್ಳದೆ.

ನಾಟಕದ ಇಡಿ ಕಥಾವಸ್ತುವನ್ನು ಆನಂದದಿಂದ ಸವಿಯುವ ಈ ಪ್ರೇಕ್ಷಕರ ಗುಂಪು ತಮಗೆ ಸರಿ ಎನಿಸಿದ ಪಾತ್ರಾಭಿನಯದ ಪಾತ್ರಧಾರಿಗೆ ಸಂತೋಷದ ಪ್ರತೀಕವಾಗಿ ಹಣದ ರೂಪದಲ್ಲಿಯೇ ಆಗಲಿ. ಮತ್ಯಾವುದೇ ರೂಪದಲ್ಲಿಯೇ ಆಗಲಿ ವೇದಿಕೆ ಮೇಲೆ ಕರೆದು ಬಹುಮಾನ ಕೊಡುತ್ತಾರೆ. ಪ್ರೇಕ್ಷಕರು ಕಲೆಗೆ ಮೆಚ್ಚಿ ಕೊಡುವ ಅಪರೂಪದ ಕಾಣೆಯಾಗಿರುತ್ತದೆ.

ಗ್ರಾಮೀಣ ಪ್ರದೇಶಗಳಲ್ಲಿ ಕಲೆಯು ಇಂದಿಗೂ, ಜೀವಂತವಿದೆ ಇದ್ದರೂ, ಅವಸಾನದ ಅಂಚಿನಲ್ಲಿ ಅಲ್ಲೋ ಇಲ್ಲೋ ಎಂಬಂತೆ ಆಮೆ ನಡಿಗೆಯ ರೂಪದಲ್ಲಿ ಎಷ್ಟೋ ದಿವಸಗಳಿಗೊಮ್ಮೆ ಪ್ರದರ್ಶನ, ಆಗುತ್ತಿವೆ. ನಾಟಕಗಳ ಉಳಿವು ಗ್ರಾಮಗಳಲ್ಲಿ ಮಾತ್ರ ಎನ್ನುವಂತಾಗಿದೆ. ಜನಪದರು ತಮ್ಮ ಬಿಡುವಿನ ವೇಳೆಯಲ್ಲಿ ಮನೋರಂಜನೆಯ ಸಲುವಾಗಿ ಆಡುವ ನಾಟಕಗಳಿಗೆ ಈಗ ಅಷ್ಟೊಂದು ಮಾನ್ಯತೆ ದೊರೆಯುತ್ತಿಲ್ಲ. ಕಾರಣಗಳು ಹುಡುಕುತ್ತಾ ಹೋದರೆ ಅನೇಕ, ಅಪರೂಪಕ್ಕೊಮ್ಮೆಯಾದರೂ ಸಹ ಇಂದಿಗೂ ನಾಟಕಗಳು ಕಾಣಸಿಗುವುದು, ಗ್ರಾಮಾಂತರ ಪ್ರದೇಶಗಳಲ್ಲಿ ಮಾತ್ರ. ನಾಟಕಗಳ ಅಳಿವಿಗೆ ಕಾರಣಗಳೇನೂ ? ಎನ್ನುವ ಪ್ರಶ್ನೆಗೆ ಮುಂದಿನ ಅಧ್ಯಾಯನದಲ್ಲಿ ಅರಿಯುವುದು ಸೂಕ್ತ ಒಟ್ಟಾರೆಯಾಗಿ ಪುಕ್ಕಟೆಯಾಗಿ ಕಾಣ ಸಿಗುವ ನಾಟಕಗಳ ಬಗ್ಗೆ ಸ್ವಲ್ಪ ಪಕ್ಷಿ ನೋಟ ಬೀರಿದಂತಾಯಿತೇ ವಿನಹ : ಸಂಪೂರ್ಣ ಮಾಹಿತಿ ಇಲ್ಲಿ ಕೊಡುವುದು ಸೂಕ್ತ ಎನಿಸುವುದಿಲ್ಲ ಅನಿಸುತ್ತದೆ.

೨. ವೃತ್ತಿ ರಂಗ ಭೂಮಿ :-

ಆಧುನಿಕ ಯುಗ ದಿನ ಕಳೆದಂತೆ ಹೊಸತನವನ್ನು ಬಯಸುವ ಕಾಲ, ದಿನದಿಂದ ದಿನಕ್ಕೆ, ಕಾಲದಿಂದ ಕಾಲಕ್ಕೆ ತನ್ನ ಚೌಕಟ್ಟನ್ನು ಮೀರಿ ಮುಂದೋಡುವ ಮಾಯಾ ಲೋಕ ಎಂತಲು ಕರೆಯಬಹುದು. ಹೀಗಾಗಿ ಮನೋರಂಜನೆ ಒಂದು ಸ್ಥಾನವನ್ನು ಹಿಂದಿನಿಂದಲೂ ಕಲ್ಪಿಸಿಕೊಂಡು ಬಂದಿರುವುದು ಒಂದು ಇತಿಹಾಸವೇ ಹೌದು.

ಭರತನು ತನ್ನ ನಾಟ್ಯ ಶಾಸ್ತ್ರದಲ್ಲಿ ನಾಟಕಗಳ ಬಗ್ಗೆ ಅನೇಕ ಅಂಶಗಳನ್ನು ಪ್ರತಿಬಿಂಬಿಸಿದ್ದಾನೆ. ಮುಂದೆ ಅರಸು ಮನೆತನಗಳು ಕೂಡ ತಮ್ಮ ಅರಮನೆಯ ಆಸ್ಥಾನದಲ್ಲಿ ಒಂದೊಂದು ದೊಡ್ಡ ನಾಟಕದ ಹಜಾರಗಳನ್ನು ಸೃಷ್ಠಿಸಿಕೊಂಡಿದ್ದಾರೆ. ರಾಜ್ಯಕ್ಕೆ ಯಾವುದೇ ರೀತಿಯ ಸಂತಸದ ಸುದ್ದಿ ಬಂದರೆ, ಯುದ್ಧದಲ್ಲಿ ಜಯಸಿದರೆ, ನಾಡಿಗೆ ಕೀರ್ತಿ ಬಂದ ಸಂತೋಷದಲ್ಲಿ ಅರಮನೆಯ ಹಜಾರಿನಲ್ಲಿ ನರ್ತಕಿಯರ ನಾಟ್ಯ ರಾಜನ ಸಮ್ಮುಖದಲ್ಲಿ ಅತ್ಯಾನಂದದಿಂದ ನಡೆದಿರುವ ಎಷ್ಟೋ ಸನ್ನಿವೇಷಗಳು ನಮಗೆ ಇತಿಹಾಸದಿಂದ ಮನದಟ್ಟಾಗಿವೆ.

ಕಾಲ ಉರುಳಿದಂತೆ ನಾಟಕಗಳು ಮುಂದೆ ಬಂದು ಹೆದ್ದಾರಿಗೆ ಕವಲು ದಾರಿಗಳೆಷ್ಟು ಎಂಬಂತೆ, ನಾಟಕಗಳು ಮುಂದೆ ಹೊಟ್ಟೆ ಪಾಡಿಗಾಗಿ ನಾಟಕಗಳು ಎಂಬಂತಾಯಿತು. ಗ್ರಾಮದಿಂದ ಗ್ರಾಮಕ್ಕೆ , ಪಟ್ಟಣದಿಂದ ಪಟ್ಟಣಕ್ಕೆ ಸಂಚರಿಸಲು ಆರಂಭಗೊಂಡವು. ಒಂದೊಂದು ತಂಡಗಳಾಗಿ ರೂಪಗೊಂಡವು. ಅದಕ್ಕೆ ಒಬ್ಬ ಒಡೆಯ ಹೀಗೆ ನಾಟಕಗಳು ಬಂದು ಗ್ರಾಮಗಳಲ್ಲಿ ಡೇರೆ ಅಥವಾ ಟೆಂಟ, ಹೊಡೆದು ಕೊಂಡು ಗಂಡು - ಹೆಣ್ಣುಗಳೆಂಬ ಭೇದವಿಲ್ಲದ ಪಾತ್ರಗಳು ಸೃಷ್ಠಿಯಾದವು. ರಾತ್ರಿ ಸಮಯದಲ್ಲಿ ತಾವು ಪ್ರದರ್ಶಿಸುವ ನಾಟಕದ ಬಗ್ಗೆ ಗ್ರಾಮಗಳಲ್ಲಿ ಸುಮಾರು 5-6 ಗಂಟೆಗೆ ಜನರಿಗೆ ಇದರ ಬಗ್ಗೆ ಮಾಹಿತಿ ಕೊಡುತ್ತಿದ್ದರು. ಡಂಗೂರು ರೂಪದಲ್ಲಿ ಟಂ ಟಂ ಹೊಡಿಸಿ ಜನರಿಗೆ ಮಾಹಿತಿ ಕೊಡುತ್ತಿದ್ದರು. ಈ ಮಾಹಿತಿಯಿಂದ ಜನರು ತಮ್ಮ ಮನೆಗೆಲಸವನೆಲ್ಲಾ ಮುಗಿಸಿ, ನಾಟಕದ ಕಂಪನಿಗಳ ಹತ್ತಿರ ಬಂದು, ನಾಟಕದ ಮುಖ್ಯಬಾಗಿಲಿನಲ್ಲಿ ಹಣ ನೀಡಿ ರಸೀದಿ ಪಡೆದುಕೊಂಡು ನಾಟಕದ ಅಂಗಳದಲ್ಲಿ ಹೋಗಿ ಕುಳಿತುಕೊಳ್ಳುವವರು. ಹೀಗೆ ತಮಗೆ ಬೇಕಾದಷ್ಟು ಜನ ಬಂದರೆ ಕಂಪನಿದಾರ ಸಂತೋಷದಿಂದ, ಆ ದಿನದ ನಾಟಕ ಪ್ರಾರಂಭಿಸುತ್ತಿದ್ದ. ಈ ರೀತಿಯಾಗಿ ಹಣ ಪಡೆದುಕೊಂಡು ಪ್ರದರ್ಶನಗೊಳ್ಳುವ ನಾಟಕಗಳು ಇಂದಿಗೂ ಅಲ್ಲಲ್ಲಿ ಕಂಡುಬರುತ್ತವೆ. ಇದರಿಂದಲೇ ನಾಟಕದಲ್ಲಿರುವ ಕಲಾವಂತರಿಗೂ, ತಾಂತ್ರಿಕದಾರರಿಗೂ, ಸಂಬಳ ದೊರೆಯುತ್ತದೆ.

ಪ್ರಸ್ತುತವಾಗಿ ಹೇಳುವುದಾದರೆ ನಾಟಕಗಳು ಜನರಿಗೆ ಎರಡು ರೀತಿಯಲ್ಲಿ ನೋಡಲು ದೊರೆಯುತ್ತಿದ್ದವು. ಆದರೆ ಒಂದು ದುರಂತ ಎಂದರೆ ಇಲ್ಲಿ ಹೇಳಲೇಬೇಕಾಗುತ್ತದೆ. ಈ ಆಧುನಿಕ ಯುಗದಲ್ಲಿ ಚಲನಚಿತ್ರಗಳು ಹುಟ್ಟಿಕೊಂಡ ಮೇಲೆ, ಹಾಗೂ ಸಮೂಹ ಮಾಧ್ಯಮದ ಪ್ರಭಾವದಿಂದಾಗಿ ನಾಟಕಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಅಬ್ಬರದ ಪ್ರಚಾರದಿಂದಾಗಿ ನಾಟಕಗಳು ತಮ್ಮ ಬೆನ್ನೆಲುಬುವಿಲ್ಲದ ಸರಿಸೃಪಗಳಂತೆ ನೆಲದ ಮೇಲೆ ತೆವಳುವ ಸ್ಥಿತಿಯಲ್ಲಿವೆ. ನಾಟಕವೆಂದರೆ ಅಷ್ಟೊಂದು ಬೇಡಿಕೆ ಇಲ್ಲದ ಸ್ಥಿತಿಯಲ್ಲಿವೆ.

ಜನರ ಒಲವು ಚಲನಚಿತ್ರ, ಧಾರವಾಹಿಗಳ, ಕಡೆಗೆ ಹರಿಯುತ್ತಿರುವುದರಿಂದ ನಾಟಕಗಳು ದಿವಾಳಿಯಾಗುತ್ತಿವೆ. ಅಳಿದುಳಿದ ಕಂಪನಿಗಳು ಅನೇಕ ರೀತಿಯ ಪ್ರಕೃತಿ ವಿಕೋಪಗಳಿಗೆ ಸಿಲುಕಿ ಹಾಳಾಗುತ್ತಿವೆ, ಭೀಕರ ಮಳೆ, ಬಿರುಗಾಳಿಗಳಿಗೆ ತಮ್ಮ ಡೇರೆಗಳು ಹಾಳಾಗಿ ಕಿತ್ತು ಹೋಗಿವೆ. ಸರಿಯಾಗಿ ಜನ ನಾಟಕ ನೋಡುತ್ತಿಲ್ಲ, ನೋಡಿದರು ಅಷ್ಟಕ್ಕಷ್ಟೆ ಹೀಗಾಗಿ ಅದರ ಖರ್ಚು ಸರಿ ಹೋಗದ ಕಾರಣ ಅನೇಕ ಕಂಪನಿಗಳು ತಮ್ಮಷ್ಟಕ್ಕೆ ತಾವೇ ಎಂಬಂತೆ ಚಲ್ಲಾಪಿಲ್ಲಿಯಾಗಿ ಹರಿದು ಹಂಚಿ ಹೋಗುತ್ತಿವೆ.

ಅಳಿದುಳಿದ ಹರಿದು ಹಂಚಿ ಹೋಗುತ್ತಿರುವ ನಾಟಕಗಳ ಬಗ್ಗೆ ಅಧ್ಯಯನ ಆಗಬೇಕು. ಅವುಗಳ ನಿಜವಾದ ಅಸ್ತಿತ್ವವಾದರು ಉಳಿಯಬೇಕು. ಅದಕ್ಕಾಗಿ ಸಾಹಿತ್ಯಾ ಕ್ಷೇತ್ರ ಕೇವಲ ಅದರ ರೂಪ ಹಿಡಿದಿಡುವ ಕೆಲಸವನ್ನಾದರೂ ಮಾಡಿದರೆ ಮುಂದಿನ ಪೀಳಿಗೆಗಾದರು ಮಾಹಿತಿಗಾಗಿ ಉಳಿಯುತ್ತದೆ. ಎನ್ನುವ ಕಾರಣದಿಂದ ಅಧ್ಯಯನದ ಅವಶ್ಯಕತೆಯಿದೆ.

ಅಷ್ಟು ಇಷ್ಟು ಎಂಬಂತೆ ಸಣ್ಣ ನಾಟಕ ಕಂಪನಿಗಳು, ಇನ್ನು ತಾಂತ್ರಿಕತೆಯ ಅಬ್ಬರ ಇಲ್ಲದ ಕುಗ್ರಾಮಗಳಲ್ಲಿ ಮಾತ್ರ ಕಂಡು ಬರುತ್ತಿವೆ.

ಅಧ್ಯಾಯ ೨

೧. ಸಂಗ್ಯಾ ಬಾಳ್ಯಾ ಕೃತಿಯ ಕಥಾವಸ್ತು

೨. ಸಂಗ್ಯಾ ಬಾಳ್ಯಾ ಕೃತಿಯ ಪಾತ್ರಚಿತ್ರಣ

೧. ಕಥಾ ವಸ್ತು

ಉತ್ತರ ಕರ್ನಾಟಕದಲ್ಲಿ ಹುಟ್ಟಿ ಬೆಳೆದಿರುವ ಸಂಗ್ಯಾ ಬಾಳ್ಯಾ ಕೃತಿಯವು ಒಂದು ಹೆಣ್ಣಿನ ದುರಂತ ಚಿತ್ರಣವನ್ನು ಪ್ರತಿ ಬಿಂಬಿಸುವ ಕೃತಿಯಾಗಿದೆ. ಇದನ್ನೆ ಡಪ್ಪಿನಾಟವು ಎಂದು ಕರೆಯುತ್ತಾರೆ. ಸಣ್ಣಾಟಗಳು ಪ್ರದರ್ಶಿಸುವಾಗ ಪ್ರಮುಖವಾಗಿ ಉಪಯೋಗಿಸುವ ವಾದ್ಯವೆಂದರೆ ಡಪ್ಪು ಅದಕ್ಕಾಗಿ ಡಪ್ಪಿನಾಟವು ಎಂದು, ಸಣ್ಣಾಟವು ಎಂದು ಕರೆಯುವುದುಂಟು. ಈ ಕೃತಿಯು ವೇದಿಕೆಯ ಮೇಲೆ ಪ್ರದರ್ಶನಗೊಂಡಾಗ ಹಲವಾರು ಜನರಿಂದ ಮೆಚ್ಚುಗೆಯ ಪಡೆದಿರುವ ಕೃತಿಯಾಗಿದೆ.

ಬೆಳಗಾಂವ ಜಿಲ್ಲೆಯಲ್ಲಿಯೇ ಸಣ್ಣಾಟಗಳ ಬೆಳವಣಿಗೆಯ ಎರಡನೆಯ ಘಟ್ಟವನ್ನು ಕಾಣುತ್ತೇವೆ. 1920 ರಿಂದಿಚೆಗೆ ಎರಡನೆಯ ಈ ಘಟ್ಟದಲ್ಲಿ, ನೀಲಕಂಠಪ್ಪ ಮತ್ತು ಫತ್ತಾರ ಮಾಸ್ತಕರು ಪ್ರಮುಖರು......1

ಅಂದ ಮೇಲೆ ಸಣ್ಣಾಟಗಳು ಪ್ರಪ್ರಥಮವಾಗಿ ಕಾಣಿಸಿಕೊಂಡಿರುವುದು, ಕರ್ನಾಟಕದ ಬೆಳೆಗಾಂವ ಜಿಲ್ಲೆಯಲ್ಲಿಯೇ ಎನ್ನುವುದು ಗೊತ್ತಾಗುತ್ತದೆ. ಈ ಸಣ್ಣಾಟಗಳ ಮೂಲ ಪುರುಷರು ಎಂದರೆ ಪತ್ತಾರ ಮಾಸ್ತರರು ಮತ್ತು ನೀಲಕಂಠಪ್ಪನವರು ಎಂದು ಗಮನಕ್ಕೆ ಬರುತ್ತದೆ.

ಪತ್ತಾರ ಮಾಸ್ತರರು, ಸಣ್ಣಾಟಗಳನ್ನು ರಚಿಸಿ ಅವುಗಳನ್ನು ರಂಗಭೂಮಿಯ ಮೇಲೆ ತರುವಲ್ಲಿ ಯಶಸ್ವಿಯನ್ನು ಪಡೆದವರು. ಅವರು ರಚಿಸುವ ನಾಟಕಗಳ, ಕಥಾವಸ್ತು ಗ್ರಾಮೀಣ ಜೀವನದ ಮೇಲೆ ಬೆಳಕು ಚೆಲ್ಲುವಂಥವುಗಳಾಗಿವೆ. ಗ್ರಾಮೀಣ ಜೀವನದ ರೀತಿ ನೀತಿ, ಕಲೆ ಸಂಸ್ಕೃತಿಯನ್ನು ಯಥಾವತಾಗಿ ನೈಜ ಘಟನಾವಳಿಗಳನ್ನು ತುಂಬಿಕೊಂಡು, ಹೊರ ಬಂದಿರುವ ಸಣ್ಣಾಟಗಳು ಇಂದಿಗೂ ಪ್ರಾಮುಖ್ಯತೆಯನ್ನು ಪಡೆದಿವೆ.

ಪತ್ತಾರ ಮಾಸ್ತರರ ರಚನೆಯಲ್ಲಿಯೆ ಹುಟ್ಟಿಕೊಂಡಿರುವ ನಾಟಕವೆಂದರೆ ಈ "ಸಂಗ್ಯಾ ಬಾಳ್ಯಾ" ಕೃತಿ ಇದೊಂದು ಸಮಾಜಿಕ ನಾಟಕ, ಗ್ರಾಮದ ಬದುಕಿನ ಚಿತ್ರಣವನ್ನು ಪ್ರತಿಬಿಂಬಿಸುವ ಪ್ರಾಮುಖ್ಯತೆಯನ್ನು ಇಲ್ಲಿ ಕಾಣುತ್ತೇವೆ. ಈ ಕೃತಿಯು ವಾಸ್ತವತೆಯಿಂದ ಕೂಡಿರಬಹುದು ಅಥವಾ ಅವಾಸ್ತವತೆಯಿಂದ ಕೂಡಿರಬಹುದು ಎನ್ನುವ ಗುಮಾನಿಯೂ ಉಂಟು.

ಬೆಳಗಾಂವ ಜಿಲ್ಲೆಯ ಬೈಲಹೊಂಗಲ ತಾಲೂಕಿನಲ್ಲಿ ಹುಟ್ಟಿಕೊಂಡಿರುವ ಈ ಕಥೆಯು, ಭಾಷೆ, ಸಂಸ್ಕೃತಿ ಮತ್ತು ಪ್ರಾದೇಶಿಕತೆಯನ್ನು ಕೂಡ ಪ್ರತಿಬಿಂಬಿಸಿದೆ. ಬೈಲವಾಡ ಗ್ರಾಮ ಒಂದು ಕುಗ್ರಾಮ. ಸರಿಯಾಗಿ ರಸ್ತೆ ವ್ಯವಸ್ಥೆಗಳಿಲ್ಲದ ಊರು, ಆದರೂ, ಅಲ್ಲಿಯ ಸಂಪ್ರಾದಯಗಳಿಗೇನೂ ಕೊರತೆಯಿಲ್ಲ. ಸಂಸ್ಕೃತಿಯನ್ನು ಬಿಂಬಿಸುವ ಉಡುಗೆ ತೊಡುಗೆ, ಆಚಾರ ವಿಚಾರ, ಸಂಪ್ರದಾಯಗಳಿಗೆ ಮನ್ನಣೆ ಕೊಟ್ಟು ಬದುಕುವ ಜನಜೀವನ ಇಲ್ಲಿಯದು.

---

1) ಕರ್ನಾಟಕ ಜನಪದ ಕಲೆಗಳ ಕೋಶ : ಸಂ : ಹಿ.ಚಿ.ಬೋರಲಿಂಗಯ್ಯಾ ಪುಟ : 280

ಗಂಗಿಯೂ ಈ ಕೃತಿಯಲ್ಲಿ ಪ್ರಮುಖ ಕೇಂದ್ರ ಬಿಂದು. ಈ ಗಂಗಿಯ ಸುತ್ತಲೂ ಹುಟ್ಟಕೊಂಡಿರುವ ಕಥೆ ಸಂಗ್ಯಾ ಬಾಳ್ಯ ನಾಟಕದ ಪ್ರಮುಖ ಅಂಶಗಂಗಿಯ ಪಾತ್ರದ ಸುತ್ತಲೂ ಎಲ್ಲಾ ಪಾತ್ರಗಳು ಸುತ್ತುತ್ತಿರುತ್ತವೆ. ಗಂಗಿಯ ಸೌಂದರ್ಯವು ಇಡೀ ಗ್ರಾಮದಲ್ಲಿ ಎದ್ದು ಕಾಣುವ ಸುರಸುಂದರಿಯಾಗಿ ಇಲ್ಲಿ ಕಂಡು ಬಂದಿದ್ದಾಳೆ. ಅವರ ರೂಪ ಲಾವಣ್ಯದ ಪ್ರತಿಮೆಯೇ ಮುಂದಿನ ಎಲ್ಲಾ ಬೆಳವಣಿಗೆಗೆ ಕಾರಣವಾಗುತ್ತದೆ.

ಬೆಳಗಾಂವ ಜಿಲ್ಲೆಯ ಬೈಹೊಂಗಲದ ಸೊಸೆಯಾದ ಗಂಗಮ್ಮ ಲಗಳೆರ ಮನೆತನ ಒಡತಿ. ಲಗಳೆಯರ ಮನೆತನವು ಶ್ರೀಮಂತಿಕೆಯಿಂದ ಕೂಡಿರುವ ಒಂದು ಸುಸಂಸ್ಕೃತ ಮನೆತನ. ಈ ಮನೆತನದ ಹಿರಿಯ ಮಾಲೀಕನೆಂದರೆ ಈರಪ್ಪ. ಈ ಕೃತಿಯಲ್ಲಿ ಈತನನ್ನು ಈರ್ಯಾ ಎಂತಲೇ ಕರೆಯುವುದುಂಟು. ಬೈಲವಾಡ ಗ್ರಾಮದವಳಾದ ಗಂಗಿ ಈ ಲಗಳೆರ ಮನೆತನದ ಒಡತಿ ಈರಪ್ಪನನ್ನು ಮದುವೆಯಾಗಿ ಮನೆ ತುಂಬುತ್ತಾಳೆ. ಇಲ್ಲಿ ಈರ್ಯಾ ಮತ್ತು ಆತನ ತಮ್ಮಂದಿರಾದ ಇರಪಕ್ಷಿ ಮತ್ತು ಬಸವಂತ ಎನ್ನುವ ಇಬ್ಬರು. ಇವರು ಗಟ್ಟಮುಟ್ಟಾದ ಮೈಕಟ್ಟು ಹೊಂದಿದವರಾಗಿದ್ದು, ಅಣ್ಣನ ಮಾತನ್ನು, ಮೀರಿ ನಡೆದವರಲ್ಲ. ಅದರಂತೆ ತಮ್ಮ ಅತ್ತಿಗೆಯಾದ ಗಂಗವ್ವಳನ್ನು ಮನೆಯ ದೇವತೆ ಎಂದು ಪೂಜ್ಯ ಭಾವನೆಯಿಂದ ಕಾಣುವ ಈ ಇಬ್ಬರು, ಅಣ್ಣನಿಗೆ ಕೊಡುವ ಮರ್ಯಾದೆಯಷ್ಟೆ ಅತ್ತಿಗೆಗೂ ಕೊಡುತ್ತಿದ್ದರು. ಅತ್ತಿಗೆಯನ್ನು ತಮ್ಮ ತಾಯಿಯ ಸಮಾನ ಎಂದು, ಗೌರವದಿಂದ ಕಾಣುತ್ತಿದ್ದರು. ಮನೆಯಲ್ಲಿ ತಾಯಿಯ ಸ್ಥಾನದಲ್ಲಿ ನಿಂತುಕೊಂಡು ಮನೆಯನ್ನು ನಿಭಾಯಿಸುವ ಸಾಮರ್ಥ್ಯ ಗಂಗವ್ವ ಹೊಂದಿದ್ದಳು.

ಈರಪ್ಪ ತಾನಾಯ್ತು ತನ್ನ ವ್ಯಾಪಾರವಾಯ್ತು ಎಂಬಂತೆ. ದಿನ ಬೆಳಗಾದರೆ ಸಾಕು ವ್ಯಾಪರದೇ ಚಿಂತೆ. ಹೇಗಾದರೂ ಹಣ ಸಂಪಾದನೆ ಮಾಡುವುದು ಒಂದೇ ತನ್ನ ಜೀವನದ ಧ್ಯೇಯ ಎಂಬಂತೆ, ಊರಿನಿಂದ ಊರಿಗೆ, ಕೇರಿಯಿಂದ ಕೇರಿಗೆ ಅಲೆಯುವ ಒಬ್ಬ ಸಂಸಾರವಿಲ್ಲದ ವ್ಯಾಪಾರಿಯಂದೇ ಹೇಳಬಹುದು ಮದುವೆಯಾದ ಹೊಸತರದಲ್ಲಿ ಹೆಂಡತಿಯೊಂದಿಗೆ ಒಂದು ದಿವಸವೂ ಸುಖಃದುಖದ ವಿಷಯ ಮಾತಾಡಿದವನಲ್ಲ. ವ್ಯಾಪಾರಕ್ಕೆಂದು ಹೋದರೆ ಮುಗಿಯಿತು, ತಿಂಗಳೇನು, ಅರ್ಧವರ್ಷವಾದರೂ ಸರಿ ಹಾಗೆಯೇ ಮನೆ ಬಿಟ್ಟು ಹೋಗುತಿರುತ್ತಾನೆ. ಅಂಥ ಮನೆಯಲ್ಲಿ ಗಂಗಿ ಒಬ್ಬಳೇ ಇರಬೇಕು. ಮೈದುನರು ಹೊಲದಲ್ಲಿಯೇ ದುಡಿಯುವುದು. ರಾತ್ರಿ ಮನೆಗೆ ಬಂದು ಊಟ ಮುಗಿಸಿಕೊಂಡು ಹೋದರೆ ಮುಗಿಯಿತು, ಮತ್ತೆ ಮರು ದಿವಸವೇ ಮನೆಗೆ ಬರುವುದು. ಅಂಥದರಲ್ಲಿ ಗಂಗಿಯಾದವಳು ಒಬ್ಬಳೇ ಮನೆಯಲ್ಲಿ ಹೇಗೆ ಕಾಲ ಕಳೆಯಬೇಕು. ಆದರೂ ಗತಿಯಿಲ್ಲ, ಹಾಗೆಯೇ ಗಂಗಿಯ ಮನೆಯಲ್ಲಿ ಏಕಾಂತವಾಗಿ ಕಾಲಕಳೆಯುವ ಜೀವನ ಇವಳದ್ದಾಗಿದೆ. ರಾತ್ರಿ ಒಬ್ಬಳೆ ಮನೆಯ ಜಂತಿ ಎಣಿಸುತ್ತಾ, ಕಣ್ಣು ಬಿಡುತ್ತಾ ಗಂಡನ ವ್ಯಾಪಾರ ಜೀವನ ಬೆಸತ್ತವಳು. ಆದರೂ ಮರ್ಯಾದೆಯಿಂದ ಮನೆತನಕ್ಕೆ ಕುಂದು ತರುವ ರೀತಿಯಲ್ಲಿ ಬಾಳುವವಳಲ್ಲ.

ಹುಬ್ಬಳ್ಳಿಗೆ ವ್ಯಾಪಾರಕ್ಕೆಂದು ಹೋದ ಈರಪ್ಪಾ ಅಂದು ಮರಳಿ ಮನೆಗೆ ಬರುತ್ತಿರುತ್ತದೆ, ಈ ಸುದ್ದಿ ಮೊದಲೇ ಜನರಿಂದ ತಿಳಿದ ಗಂಗಿ, ಒಮ್ಮಿಂದೊಮ್ಮೆ ಸಂತೋಷದಿಂದ ಗಂಡನ ಕಾಲಿಗೆ ನೀರು, ಟವಲ್ಲು ತರುತ್ತಾಳೆ. ಅವಳ ಮುಖದಲ್ಲಿ ಮಂದ ಹಾಸವಿರುತ್ತದೆ. ಆಂತರಿಕವಾಗಿ ಸಂತೋಷ ಪಡುತ್ತಿರುತ್ತಾಳೆ. ಈರಪ್ಪ ಕೈಕಾಲು ತೊಳೆದುಕೊಂಡು ಅಡುಗೆ ಮನೆಯ ಪಡಸಾಲೆಗೆ ಬಂದು ಊಟಕ್ಕೆಂದು ಕುಳಿತುಕೊಳ್ಳುತ್ತಾನೆ. ಗಂಗಿಯು ಆತುರ ಆತುರದಿಂದಲೇ ಗಂಡನಿಗೆ ತೆಳ್ಳನೆಯ ಜೋಳದ ರೊಟ್ಟಿ, ಕೆನೆ ಮೊಸರು ತಂದು ಊಟಕ್ಕೆ ಬಡಿಸುತ್ತಾಳೆ. ಗಂಡ, ಊಟ ಮಾಡುತ್ತಲೇ ಇರುತ್ತಾನೆ. ವಿನಃ ಗಂಗಿಯ ಕಡೆಗೆ ಕಿಂಚಿತಲೂ ಗಮನ ಹರಿಸುವುದಿಲ್ಲ. ತಿಂಗಳು ಗಟ್ಟಲೆ ಹೋದರೂ ಚಿಂತೆ ಇಲ್ಲ, ಆದರೆ ಬಂದಾಗಲೂ ಹೆಂಡತಿಯೊಂದಿಗೆ ಸಲಿಗೆಯಿಂದ ಇರುವುದೇ ಇಲ್ಲ, ಬರಿ ಬಡ್ಡಿ ವ್ಯವಹಾರ, ವ್ಯಾಪಾರ, ಹೊಲ ಮನಿಯದ್ದೇ ಚಿಂತೆ, ಆದರೆ ಹೆಂಡತಿಯ ಬಗ್ಗೆ, ಕಿಂಚಿತವೂ ಚಿಂತೆ ಇರುವುದಿಲ್ಲ, ತನ್ನ ಹೆಂಡತಿಗೆ ಮನೆಯಲ್ಲಿ ಸುಖ, ಸಂತೋಷ ಕೊಡುವವನು ನಾನೇ ಎನ್ನುವ ಪರಿಜ್ಞಾನವೇ ಈತನಲ್ಲಿ ಕಂಡುಬರುವುದಿಲ್ಲ. ವ್ಯಾಪಾರ ಮುಗಿಸಿ ಊರಿಗೆ ಬಂದರೂ, ಇಲ್ಲಿಯೂ ವ್ಯಾಪಾರದ್ದೇ ಚಿಂತೆ ಮತ್ತೆ ಊರ ಜನರ ಜೊತೆಗಿನ ವ್ಯವಹಾರಿಕ ಸಂಬಂಧ ಮನೆಯ ಪಡಸಾಲೆಯಲ್ಲಿ, ಮುಂದುವರಿದು. ಅದರಲ್ಲಿಯೇ ನಿರತನಾಗುತ್ತಾನೆ. ರಾತ್ರಿ ಗಂಡನಿಗೆ ಊಟ ಬಡಿಸುವಾಗ, ಆಗ ಸ್ವತಃ ಗಂಗಿನೆ ಮಾತು ಆರಂಭಿಸುತ್ತಾಳೆ.

ಏನ್ರೀ ನೀವು ನನ್ನ ಭಾವನೆಗಳ ಅರ್ಥ ಆಗ್ತಾದ ಇಲ್ಲ, ನಿಮಗ ಬರಿ ವ್ಯಾಪಾರ ಅಂದ್ರ ಹ್ಯಾಂಗ ಎಂದು ಮಾತು ಆರಂಭಿಸುತ್ತಾಳೆ. ಆಗ ಈರಪ್ಪ ಏನೇ ಗಂಗಾ ಏನ ಮಾತ್ತಾಡ್ತಲೇ ನಂಗೂನಿಂದ ಮನ್ಸ ಅರ್ಥ ಆಗ್ತದ ಆದ್ರೂ ಏನ ಮಾಡದು. ನಿನ್ನ ಮೈದುನಗಳು ನಿನಗೆ ತಾಯಿ ಅಂತ ತಿಳಿದಾವ. ಮೊದಲು ಅವ್ಕ ಒಂದು ಒಳ್ಳೆದಂತು ಆಗ್ಲಿ. ಆಮೇಲ ನೋಡುಳಂತಾ. ಅನ್ನುತ್ತಾನೆ. ಇದರಿಂದ ಗಂಗಿಯು ನಿರಾಸೆಯಾಗುತ್ತಾಳೆ. ಆದರೂ ಅವಳಿಗೆ ಗಂಡನನ್ನು ಇಂದು ಎದುರಿಸಲೇಬೇಕೆಂದು ನಿರ್ಧರಿಸಿ, ಮತ್ತೆ ಗಂಡನನ್ನು ಕೆಣಕುತ್ತಾಳೆ. ಆವಾಗಲೂ ಈರಪ್ಪನದು ಅದೇರಾಗ ಅದೇ ಹಾಡು, ಎಂಬಂತೆ, ಆಗ ಗಂಗಿಗೆ ಕೋಪ ಹೆಚ್ಚುತ್ತದೆ.

ಗಂಗಿ : ಏನ್ರೀ ಮದ್ವೆ ಆಗಿ ಆರವರ್ಸ ಆತು.
ರಂಗೋಲಿ ಕೆಡಸಾಕ ಒಂದು ಕೂಸ ಇಲ್ಲ ನಮ್ಗೆ

ಈರಪ್ಪ : ಆರವರ್ಸ ಏನ ಅರ್ವತ್ತ ವರ್ಸ ಏನ
ಆಗತ್ತಾದೆ. ನೋಡುಣಂತ, ಎಂದು ಮಾತು ಮುರಿಯುತ್ತಾನೆ............!

ಸಂಸಾರದಲ್ಲಿ ಆಸಕ್ತಿ ಇರದ ಈರಪ್ಪನಿಗೆ ಗಂಗಿಯ ಮನಸ್ಸು ಅರಿಯುವ ಗೋಜಿಗೆ ಹೋಗುವುದಾದರೂ ಹೇಗೆ. ಅಲ್ಲಿಯು ಗಂಗಿಗೆ ನಿರಾಶೆಯಾಗುತ್ತದೆ. ವಿರಹ ವೇದನೆ ಅವಳನ್ನು ಆವರಿಸಿ ಬಿಡುತ್ತದೆ. ಗಂಡ ಗಂಗಿಯ ಮನಸ್ಸು ಅರಿಯುವುದಿಲ್ಲ ರಾತ್ರಿಯಾಗುತ್ತದೆ. ಗಂಡ ಹೆಂಡತಿ ಇಬ್ಬರು

ಸಂಖ್ಯಾ ಬಾಳ್ಯಾ ಚಲನಚಿತ್ರದ ಸಂಭಾಷಣೆ :

ರಾತ್ರಿ ಮಂಚದ ಮೇಲೆ ಮಲಗುವಾಗ ಗಂಡನಿಗೆ ಗಂಗಿ ಎಲೆ ಅಡಿಕೆ ಅಂದರೆ ತಾಂಬೂಲ ಕೊಡುತ್ತಾ. ಆತನ ಕಾಲುಗಳು ಒತ್ತುತ್ತಾ ಮಾತು ಆರಂಭಿಸುತ್ತಾಳೆ. ತನ್ನ ಬದುಕಿನ ಬಗ್ಗೆ ಆಗಲೂ ಒಳ್ಳೆಯ ಸಕಾರತ್ಮ ಪ್ರತಿಕ್ರಿಯೇ ಗಂಡನಿಂದ ಬರುವುದೇ ಇಲ್ಲ. ಕೊನೆಗೆ ಒಂದು ಮಾತು ಹೇಳುತ್ತಾನೆ. ಅದು ತನ್ನ ಅಂತಿಮ ನಿರ್ಧಾರ ಎಂಬಂತೆ.

ಈರಪ್ಪಾ : ನೋಡ ಗಂಗಾ ನಿನ್ನ ಮೈದುನಗಳದ ಮದುವೆ ಆಗ್ಲಿ
ಆವಾಗ ಮೂರು ತೊಟ್ಲು ಒಮ್ಮೆ ತೂಗಲಿ. ಅಲ್ಲಿ ತನಕ ಏನು ಬ್ಯಾಡ
ಕನಸ್ಸು ಕಾಣ್ಬೇಡ.ಎಂದು................2

ನಿದ್ರೆಗೆ ಮಗ್ಗಲು ಕೊಡುತ್ತಾನೆ. ಗಂಗಿಯು ನಿಸ್ಸಾಯಕಳಾಗಿ ಗಂಡನಿಂದ ಏನನ್ನು ಬಯಸಿರುವಳೋ ಅದನ್ನು ದೊರೆಯುವುದಿಲ್ಲ. ಎಂದು ಅರಿತು ಮೂಕಳಾಗಿ ಮಲಗುತ್ತಾಳೆ. ಗಂಡ ಜೊತೆಯಿದ್ದರೂ ಅಷ್ಟೇ ಇರದಿದ್ದರೂ ಅಷ್ಟೇ ಮತ್ತೆ ಮನೆಯ ಜಂತಿ ಎಣಿಸುತ್ತಾ ಮಲಗುವುದು, ಗಂಗಾಳ ನಿತ್ಯದ ಬದುಕು ಆಗಿರುತ್ತದೆ.

ಈರಪ್ಪ ಬೆಳಿಗ್ಗೆ ಎದ್ದವನೇ ತನ್ನ ವ್ಯಾಪಾರದ ಕಾಯಕದಲ್ಲಿ ನಿರತನಾಗುತ್ತಾನೆ. ಗ್ರಾಮದಲ್ಲಿ ಜನರಿಗೆ ಬಡ್ಡಿ ಸಾಲಕ್ಕೆ ಹಣ ಕೊಡುವುದು, ಮತ್ತು ವಸೂಲಿ ಮಾಡುವ ಧಂದೆಗೆ ನಿಲ್ಲುತ್ತಾನೆ. ಮನೆಯ ಮುಂದೆ ಹತ್ತಿಪ್ಪತ್ತು ಜನರು ಸಾಲಕ್ಕಾಗಿ ನಿಂತಿರುವರು. ಅವರಿಂದ ಹಣ ವಸೂಲಿ ಮತ್ತು ಕೊಡುವುದು ಹೀಗೆ ಮುಂದುವರಿಯುತ್ತದೆ. ಪಕ್ಕದ ಮನೆಯ ಮುಂದಿನ ಹಜಾರದಲ್ಲಿ ನಿಂತು ಗಂಡನ ಮೇಲೆ ವ್ಯಾಮೋಹದ ದೃಷ್ಟಿ ಬಿರುತ್ತಾ. ಗಂಡನನ್ನೆ ನೋಡುತ್ತ ಗಂಗಿ ನಿಂತಿರುತ್ತಾಳೆ.ಗಂಡನದು ವ್ಯಾಪಾರದ ಮೇಲೆ ಕಣ್ಣಾದರೆ. ಹೆಂಡತಿಯದು ಗಂಡನ ಮೇಲೆ ಕಣ್ಣು. ಆದರೆ ಇಲ್ಲಿ ಯಾರಿಗೆ ಯಾವ ಚಿಂತೆ ಎಂಬಂತೆ ಕೆಲಸ ನಡೆದಿದೆ. ಈರಪ್ಪನಿಗೆ ವ್ಯಾಪಾರ ಎಂದರೆ ಮುಗಿಯಿತು ಊಟದ್ದು ಹಸಿವೆಯದ್ದು, ಚಿಂತೆಯೇ ಇಲ್ಲ, ಗಂಡನಿಗೊಂದು ಚಿಂತೆಯಾದರೇ, ಹೆಂಡತಿಗೊಂದು ಚಿಂತೆ.

ಗಂಗಿಯು ಕಡೆ ಈರ್ಯಾನ ದೃಷ್ಟಿಯೇ ಇಲ್ಲ. "ಅಜ್ಜಗೆ ಮಗಳ ಚಿಂತೆ, ಮಗಳಿಗೆ ಮತ್ಯಾರದೋ ಚಿಂತೆ" ಎಂಬಂತೆ ಕಾಲ ಕಳೆಯುತ್ತಿದೆ. ಹೆಂಡತಿಯ ಮನಸ್ಸಿನ ಭಾವನೆಗಳಿಗೆ ಇಲ್ಲಿ ಈರಪ್ಪ ಸ್ಪಂದಿಸುವುದೇ ಇಲ್ಲಾ, ಶ್ರೀಮಂತಿಕೆಯಲ್ಲಿ ಕಾಲ ಕಳೆಯುವ ಈರಪ್ಪನಿಗೆ ಹೆಂಡತಿಯ ಮನಸ್ಸಾದರೂ ಹೇಗೆ ಅರಿಯಾನು. ಇಂಥ ಸಮಯದಲ್ಲಿ ತಡವೇಕೆ ಎಂಬಂತೆ, ಕ್ಷಣದಲ್ಲಿಯೇ, ಅಂದರೆ ಈರ್ಯಾ ಬಂದ ಮರುದಿವಸ ಬೆಳಿಗ್ಗೆಯೇ ಮತ್ತೆ ಒಂದು ಚೀಟಿ ಈರ್ಯಾನ ಕೈಗೆ ಗ್ರಾಮದ ಒಬ್ಬ ವ್ಯಕ್ತಿ ತಂದುಕೊಡುತ್ತಾನೆ. ಅದು ಈರ್ಯಾ ನೋಡಿದವನೇ ತಡಾ ಇದು ಬಳ್ಳಾರಿ ಸಾವುಕಾರ ಚೀಟಿ ಇದೇಯಲ್ಲಾ. ಎಂದು ಎಲ್ಲಾ ಕೆಲಸ ಬಿಟ್ಟು ಮೇಲೇಳುತ್ತಾನೆ. ದೂರದಿಂದಲೆ ನಿಂತು ಗಂಡನನ್ನು ನೋಡುತ್ತಿರುವ ಗಂಗಿಗೂ ಈ ದೃಶ್ಯ ಮನವರಿಕೆಯಾಗುತ್ತದೆ. ಗಂಡ ಗಡಬಿಡಿಯಿಂದ ಬಡಿದಾಡುವುದು ಕಂಡು ಗಂಗಿ ಕೇಳುತ್ತಾಳೆ. ಏನ್ರಿ ಅದು ಚೀಟಿ ಎಂದು.

---

1) ಸಂಗ್ಯಾ ಬಾಳ್ಯ ಚಲನ ಚಿತ್ರದ ಭಾಗ

ಆಗ ಈರಪ್ಪ ಹೇಳ್ತಾನೆ. ನಾನು ಮತ್ತೆ ಬಳ್ಳಾರಿಗೆ ಹೋಗಬೇಕು. ಸಾವುಕಾರ ಬರಬೇಕು ಎಂದಿದ್ದಾನೆ. ಎಂದು ಹೇಳುತ್ತಾನೆ. ಆಗ ಗಂಗಿ ಗಂಡನನ್ನು ಪ್ರಶ್ನಿಸುತ್ತಾಳೆ. ನೀವು ನಿನ್ನೆ ಬಂದವರು ಮತ್ತೆ ಹೋಗುವದು ಎಂದರ ಹ್ಯಾಂಗ ನಾ ಒಬ್ಬಳೇ ಮನೆಯಲ್ಲಿ ಇರದಂದ್ರ, ಎಂದು ಮಾತು ಆರಂಬಿಸುತ್ತಿದ್ದಂತೆ. ಈರಪ್ಪ ಇದ್ಯಾವದು ಲೆಕ್ಕಕಿಲ್ಲ ಎಂಬಂತೆ ಮನೆ ಕಡೆ ಹುಷಾರು, ತಮ್ಮಂದಿರನ್ನು ಚನ್ನಾಗಿ ನೋಡ್ಕೊ ಎಂದು ಹೇಳಿ ಪಕ್ಕದ ಮನೆಯ ಪರವ್ವಳನ್ನು ಇವಳ ಜೊತೆಗಿರಲು ಹೇಳಿ, ವ್ಯಾಪಾರಕ್ಕೆಂದು ಮತ್ತೆ ತಡ ಮಾಡದೆ ಹೊರಟೆ ಬಿಡುತ್ತಾನೆ. ವ್ಯಾಪಾರ ಎಂದರೆ ಮುಗಿಯಿತು ಈರಪ್ಪ ನಡುರಾತ್ರಿಯಲ್ಲಿಯೂ ಎದ್ದು ಹೋಗುವ ಅಸಾಮಿ. ಮನೆಯಲ್ಲಿ ಬಿಡುವಿನ ಸಮಯ ಕಳೆಯುವುದೆಯಿಲ್ಲ. ಬಳ್ಳಾರಿಯಿಂದ ಬಂದ್ದದೆ ತಡ ಮರುದಿವಸವೆ ಮತ್ತೆ ಪ್ರಯಾಣ ಎಂದರೆ ಗಂಗಿಗೆ ಜೀವ ಹಿಂಡಿವಂತಾಗುತ್ತದೆ. ಜೀವನ.ಮತ್ತೆ ಮೊದಲಿನಂತೆಯೆ, ಒಂದು ದೊಡ್ಡದಾದ ದೊಡ್ಡಿ ಅದರಲ್ಲಿ ಇಡಿ ರಾತ್ರಿ ತಾ ಒಬ್ಬಳೇ ಕಾಲ ಕಳೆಯಬೇಕು.

ಪರವ್ವ ಆಗೊಮ್ಮೆ ಈಗೊಮ್ಮೆ ಎಂಬಂತೆ ಮನೆಗೆ ಬಂದು ಹೋಗುತ್ತಾಳೆ.ರಾತ್ರಿಯಾದರೆ ಭಯ. ದೊಡ್ಡದಾದ ಮನೆಯಲ್ಲಿ ಒಬ್ಬಳೇ ಕಾಲ ಕಳೆಯುವುದೆಂದರೆ ಹೇಗೆ ಸಾಧ್ಯ. ಆದರು ಏಕಾಂಗಿಯ ಬದುಕು ಗಂಗಿಗೆ ಬಿಡುವುದೇ ಇಲ್ಲ. ಗಂಗಿಗೆ ಒಂಟಿತನ ಮತ್ತೆ ಹೆಚ್ಚಾಗುತ್ತದೆ. ಗಂಡನಾದವನೇ ಹೆಂಡತಿಯ ಮನಸ್ಸು ಅರಿಯಲು ಸಾಧ್ಯವಿಲ್ಲ. ಎಂದಾಗ ಮತ್ಯಾರಿಗೆ ಹೇಳಬೇಕು. ಎನ್ನುವ ಸಂಕಟದಲ್ಲಿ ಗಂಗಿಯ ಏಕಾಂತ ಬದುಕು ಹಾಗೇ ಕಳೆದು ಹೋಗುತ್ತಿರುತ್ತದೆ. ರಾತ್ರಿ ಮೈದುನರು ಹೊಲಕ್ಕೆ ಹೋದರೆ ಮುಗಿಯಿತು. ಮತ್ತೆ ಮುಂಜಾನೆ ಊಟಕ್ಕೆಂದೆ ಬರುವುದು. ನಂತರ ಮತ್ತೆ ಹೊಲದ ಕೆಲಸವೇ ಅವರಿಗೆ ಮೀಸಲು ಗಂಗಿ ಹೊಲಕ್ಕೂ ಹೋಗುವವಳಲ್ಲ. ಮನೆಯಲ್ಲಿಯೇ ಬದುಕ ಬೇಕು. ಅಲ್ಲಿಯೇ ತನ್ನ ಜೀವನ ಸೀಮಿತ ಎಂಬಂತೆ ಗಂಗಿಯ ಒಂಟಿತನದ ಮುಂದುವರಿಯುತ್ತದೆ. ಯಾರ ಮುಂದೆಯು ಹೇಳಲು ಆಗದೇ ಇರುವಂಥ ವಿಷಯ ಇವಳಿಗೆ ಹತ್ತಿರದವರೆಂದರೆ ಯಾರೂ ಇಲ್ಲ. ಮನೆಯ ಮರ್ಯಾದೆಗೆ ಅಂಜಿ ತನ್ನ ನೋವನ್ನು ಹಾಗೆ ಮರೆಯುತ್ತಾಳೆ.

ಪರವ್ವ ಪಕ್ಕದ ಮನೆಯವಳಾದರೂ ಅವಳು ತನ್ನ ಕೆಲಸ ಮುಗಿದ ಮೇಲೆ ಗಂಗಿ ಹತ್ತಿರ ಬರುವವಳು. ಅವಳಿಗೆ ಮಕ್ಕಳಂತೂ ಯಾರು ಇಲ್ಲದಿದ್ದರೂ ತನಗೆ ವಯಸ್ಸಾದ ಒಬ್ಬ ಮುದುಕ, ಗಂಡ ಮನೆಯಲ್ಲೇ ಇರುವನು. ಆತನು ಮತ್ತು ಈ ಪಾರವ್ವ ಇಬ್ಬರು ಮಣ್ಣಿನ ಕುಡಿಕೆಯಲ್ಲಿ ಗಿಡದ ಸೇಂದಿ ಕುಡಿದು ಆರಾಮವಾಗಿ ಸುಖ ಜೀವಿಯಂತೆ ಕಾಲ ಕಳೆಯುತ್ತಾರೆ. ಯಾವುದರ ಚಿಂತೆಯೂ ಈ ಮುದುಕ ಮುದುಕಿಯರಿಗೆ ಇಲ್ಲ. ಸುಖ ಜೀವಿಗಳು, ದಿನ ರಾತ್ರಿಯಾದರೆ ಸಾಕು ನುಗ್ಗೆ ಕಾಯಿ ಸಾರು, ಸೆಂಧಿ ಹೊಡೆದು ಇಬ್ಬರು ಆರಾಮವಾಗಿ ದಿನ ಕಳೆಯುವ ಮುಪ್ಪು ವಯಸ್ಸಿನ ಪ್ರಣಯ ಜೀವಿಗಳು. ವಯಸ್ಸಾದರು ಒಬ್ಬರನ್ನೊಬ್ಬರು ಬಿಟ್ಟು ಬದಕುವ ಅಸಾಮಿಗಳಲ್ಲ, ಸೆಂಧಿ ಕುಡಿಯುವಾಗ ತನ್ನ ಹೆಂಡತಿಯ ವರ್ಣನೆಯನ್ನು ಹಲ್ಲಿಲ್ಲದ ಬಾಯಿಯಿಂದ ಹೊಗಳುತ್ತಾನೆ. ಇಲ್ಲಿ ಇಬ್ಬರೂ ಆನಂದವಾಗಿ ಕಾಲ ಕಳೆಯುವ ವೃದ್ಧ ದಂಪತಿಗಳು. ಆದರೆ ಗಂಗಿ ಮತ್ತು ಈರಪ್ಪನಲ್ಲಿ ಇದರ ಗಂಧವೇ ಇಲ್ಲ. ಯೌವ್ವನದ ಭರಟೆ ಇದ್ದರೂ, ರಸಿಕತೆ ಇಲ್ಲದ ಬದುಕು ಇವರದ್ದು.

ಈರಪ್ಪ ವ್ಯಾಪಾರಕ್ಕೆಂದು ಬಳ್ಳಾರಿಗೆ ಹೋಗುವಾಗ ಮನೆಯ ಕಡೆ ಪರವ್ವನನ್ನು ಬಿಟ್ಟು ಗಂಗಿಗೆ ಸಮಧಾನ ಹೇಳುತ್ತಾನೆ. ಗಂಗಾ ನಾ ವ್ಯಾಪಾರಕ್ಕೆ ಹೋದ ಮೇಲೆ ನೀನು ಗುಡ್ಡದ ಮೇಲಿರುವ ಮರಡಿ ಬಸವಣ್ಣನ ಗುಡಿಗೆ ಹೋಗಿ ನೈವಿದ್ಯ ಕೊಡುವುದನ್ನು ಮರಿಯಬೇಡ. ಏಕೆಂದರೆ ಆ ಬಸವಣ್ಣ ನಮ್ಮ ಮನೆಯ ದೇವರು. ಎಂದು ಹೇಳಿ ಹೋಗಿರುತ್ತಾನೆ.

ಪರವ್ವ ದಿನಾಲು ಗಂಗಿಯ ಮನೆಯಲ್ಲಿ ಬಂದು ರಾತ್ರಿ ಅವಳ ಸಂಗಾತಿಯಾಗಿ ಕಾಲ ಕಳೆಯಲು ಪ್ರಾರಂಭಿಸುತ್ತಾಳೆ. ಮನೆಯಲ್ಲಿ ಒಬ್ಬಳೇ ಏಕಾಂತದಲ್ಲಿ ಕಾಲ ಕಳೆಯುವ ಗಂಗಿಗೆ ಸಹಾಯಕಳಾಗಿ ಪರವ್ವ ಇರುತ್ತಾಳೆ. ಗಂಗಿಯ ಒಳ ಮನಸ್ಸು ಅರಿತು ಪರವ್ವ ಗಂಗಿಗೆ ದೇವರ ಜಾತ್ರೆಗೆ ಹೋಗುವುದಾಗಿ ತಿಳಿಸುತ್ತಾಳೆ. ಗಂಗಿ ಇದ್ಯಾವದಕ್ಕೂ ಒಪ್ಪುವುದಿಲ್ಲ. ಯಾವ ಊರೇನು, ಜಾತ್ರೆಯೇನು, ಎಂದು ನಿರಾಶೆಯಿಂದ ನಿರಾಕರಿಸುತ್ತಾಳೆ. ಮದುವೆಯಾದ ಅನೇಕ ದಿನಗಳಿಂದ ಗಂಡನ ಸುಖ ಕಾಣದೆ, ಬರಡು ಭೂಮಿಯಂತೆ ನನ್ನ ಸ್ಥಿತಿ ಪರವ್ವ ಎಂದು ತನ್ನ ಮನದ ಅಳಲನ್ನು ತೋಡಿಕೊಳ್ಳುತ್ತಾಳೆ. ಇದು ನನಗೆ ಅರ್ಥ ವಾಗುತ್ತದೆ. ತಾಯಿ ನಿನ್ನ ದುಖ ಏನ ಮಾಡಾದು : ಸಾವುಕಾರ್‍ಗ ತಿಳಿವಲ್ದು : ಎಂದು ಅವಳ ನೋವಿಗೆ ಸ್ಪಂದಿಸುತ್ತಾಳೆ. ಆದರೂ ದೇವರು ಸತ್ಯವಂತ ಆತನ ದರ್ಶನವಾದರೂನಿನಗೆ ಒಂದು ಮಗು ಹುಟ್ಟಿದರೂ, ಹುಟ್ಟುತ್ತದೆ. ತಾಯಿ, ದೇವರಿಗೆ ಹೋಗೋಣ ನಡಿ ಎಂದು ಆದ್ಯಾತ್ಮಿಕದ ಮೇಲೆ ಭಾರ ಹಾಕಿ ಗಂಗಿಯನ್ನು ದೇವರ ಜಾತ್ರೆಗೆ ಕರೆದುಕೊಂಡು ಬರುತ್ತಾಳೆ.

ಮರಡಿ ಬಸವಣ್ಣನ ಜಾತ್ರೆಯೆಂದರೆ ಇಡಿ ಊರಿಗೂರೇ ಸಂಭ್ರಮದಿಂದ ಆಚರಿಸುವ ಜಾತ್ರೆ. ಊರ ಬಿಟ್ಟು ಒಂದು ಕಿಲೋಮೀಟರ ದೂರದ ಗುಡ್ಡದ ಮೇಲೆ ಬಸವಣ್ಣನ ದೇವಾಲಯ ಎಲ್ಲರೂ ಅಲ್ಲಿಗೆ ಹೋಗಿ ದರ್ಶನ ಪಡೆಯುತ್ತಾರೆ. ಗಂಗಾಗೆ ಯೌವನ ಆದರೆ ಪರವ್ವಳಿಗೆ ಮುಪ್ಪಿನ ವಯಸ್ಸು, ಗಂಗಿ ಭರದಿಂದ ಮುಂದೆ ಸಾಗುತ್ತಾಳೆ. ಪರವ್ವ ಹಿಂದೆ ಬೀಳುತ್ತಾಳೆ. ಪರವ್ವಳ ಸ್ಥಿತಿ ಕಂಡ ಗಂಗಿ ಬಾರವ್ವ ಪರವ್ವ ಎಂದು ಕರೆದಾಗ, ಪರವ್ವಳಿಗೆ ಮಿತಿ ಮೀರಿದ ಆಯಾಸವಾಗುತ್ತದೆ. ಸಾವಿರಾರು ಮೆಟ್ಟಿಲುಗಳು ಹತ್ತುವುದೆಂದರೆ ಸಾಮಾನ್ಯ ಮಾತಲ್ಲ.

ನಾನ ಇಲ್ಲೆ ಕೂಡ್ತಿನಿ ನನ್ನವ್ವ
ನಡಿಯಾಕ ಆಗಲ್ಲ, ನೀ ದರ್ಶನು
ಮಾಡಿ ಬಾ, ನಾ ಇಲ್ಲೆ ಕುಂತಿರ್ತಿನಿ..........1

ಎಂದು ಗಂಗಿಯನ್ನು ಬಿಟ್ಟು ಇನ್ನು ಕೆಲವೇ ಮೆಟ್ಟಿಲುಗಳ ಅಂತರದಲ್ಲಿ ಮರಡಿ ಬಸವಣ್ಣನ ಗುಡಿ ಇರುತ್ತದೆ. ಆಯಾಸದಿಂದ ಅಲ್ಲಿಯೇ ಕುಳಿತು ಬಿಡುತ್ತಾಳೆ. ಗಂಗಿ ದೇವರ ದರ್ಶನ ಮಾಡುತ್ತಾಳೆ. ಮರಡಿ ಬಸವಣ್ಣನ ಗುಡಿಯ ಪೂಜಾರಿ ಗಂಗಿಯ ಸೌಂದರ್ಯಕ್ಕೆ ಮಾರು ಹೋಗಿ, ದೇವರ ದರ್ಶನ ಮಾಡಿಸುವಲ್ಲಿ ಗಂಗಿಯ ರೂಪಕ್ಕೆ ಮರುಳಾಗಿ ಗಂಗಿಯನ್ನೆ ಧಿಟ್ಟಿಸುತ್ತಾನೆ. ನೈವಿದ್ಯ ಕೊಡುವ ನೆಪದಲ್ಲಿ ಗಂಗಿಯ ಸೌಂದರ್ಯಕ್ಕೆ ಮಾರು ಹೋಗಿ ಅವಳ ಕೈ ಹಿಡಿಯುತ್ತಾನೆ. ಆವಾಗ ಸಿಟ್ಟಿನಿಂದ ಆತನ ಕೈ ಹಿಂದಕ್ಕೆ ತಳ್ಳುತ್ತಾಳೆ. ದೇವಾಲಯದ ಪವಿತ್ರ ಸ್ಥಾನದಲ್ಲಿರುವ ಪೂಜಾರಿಯ ವರ್ತನೆ, ಗಂಗಿಗೆ ದಿಗ್ಭ್ರಾಂತಳಾಗಿಸುತ್ತದೆ. ದೇವಾಲಯದ ಅರ್ಚಕರು ಇಂಥವರೇ ಎಂದು ಶಪಿಸುತ್ತಾಳೆ.

---

1) ಸಂಗ್ಯಾ ಭಾಳ್ಯಾ ಚಲನ ಚಿತ್ರ

ಇದನ್ನರಿತ ಗಂಗಿ ಆತನಿಂದ ಬೇಗನ ದೂರ ಸರಿದು, ಒಂದು ಕಲ್ಲಿನ ಮೇಲೆ ಕುಳಿತು ತನ್ನ ಮುಂದಿನ ಬದುಕಿನ ಬಗ್ಗೆ ಕನಸು ಕಾಣುತ್ತಾಳೆ.

ಸಂಗ್ಯಾ ಎನ್ನುವ ಸಾವುಕಾರ ತನ್ನ ಜೀವದ ಗೆಳೆಯನೊಂದಿಗೆ ಮರಡಿ ಬಸವಣ್ಣನ ದೇವರ ಜಾತ್ರೆಗೆ ಬಂದಿರುತ್ತಾನೆ. ಸಂಗ್ಯಾ ಬಾಳ್ಯಾ ಇವರಿಬ್ಬರು ಜಾತ್ರೆಯಲ್ಲಿ ಪಗಡೆ ಆಟ ಆಡುತ್ತಿರುತ್ತಾರೆ. ಒಮ್ಮಿಂದೊಮ್ಮೆ ಸಂಗ್ಯಾನ ದೃಷ್ಟಿ ಗಂಗಿಯ ಮೇಲೆ ಬೀಳುತ್ತದೆ. ಮೊದಲೇ ಸೌಂದರ್ಯವತಿಯಾದ ಗಂಗಿಯ ರೂಪ ಲಾವಣಕ್ಕೆ ಬೆರಗಾಗಿ ಬೆಚ್ಚಿ ಬೀಳುತ್ತಾನೆ. ಹೇಗಾದರು ಮಾಡಿ ಗಂಗಿಯತ್ತ ಹರಿದಿರುವ ಈತನ ಕೆಟ್ಟ ದೃಷ್ಟಿ ಗಂಗಿಯನ್ನು ತನ್ನ ಕಾಮಕ್ಕೆ ಬಳಸಿಕೊಳ್ಳುವ ಆಚಾತುರ್ಯ್ಯ ಕೆಲಸಕ್ಕೆ ಕೈ ಹಾಕುತ್ತಾನೆ. ಜಾತ್ರೆಯ ತುಂಬೆಲ್ಲಾ ತಿರುಗಿ ಆಟ ಆಡುವ ಈತ ಆಟವನ್ನು ಬಿಟ್ಟು, ಗಂಗಿಯ ಬೆನ್ನ ಹಿಂದೆಯೇ ಅವಳಿಗೆ ಅರಿವು ಇಲ್ಲದಂತೆ ಹಿಂಬಾಲಕನಾಗಿ ಅವಳ ಸೌಂದರ್ಯ ಸವಿಯುತ್ತ ತಿರುಗುತ್ತಿರುತ್ತಾನೆ. ದೇವರ ಗುಡಿಗೆ ಬಂದ ಗಂಗಿಯನ್ನು ಹಿಂಬಾಲಿಸುತ್ತಾ ಅವಳಿಗಾಗಿ ತಡವರಿಸುತ್ತಾನೆ. ದರ್ಶನ ಪಡೆದ ಗಂಗಿ ದೇವರ ಗುಡಿಯ ಮುಂದಿನ ಒಂದು ಬಂಡೆಗಲ್ಲಿನ ಮೇಲೆ ಕುಳಿತು ತನ್ನ ಭಾವಿ ಜೀವನದ ಕನಸು ಕಾಣುತ್ತ ಹಗಲು ಗನಸಿನಲ್ಲಿ ಮೈ ಮರೆತಿರುವಾಗ, ಸದ್ದಿಲ್ಲದಂತೆ ಅವಳ ಹಿಂದೆ ಬಂದು ಸಂಗ್ಯಾ ಅವಳಕೊರಳಿನ ಸರಗಿಯನ್ನು ಕದಿಯುತ್ತಾನೆ. ಅವಳಿಗೆ ಇದರ ಪರಿವಿಯೇ ಇರುವುದಿಲ್ಲ. ಸರಗಿ ಕದ್ದು ಸಂಗ್ಯಾ ಅಲ್ಲಿಂದು ದೂರ ಸರಿಯುತ್ತಾನೆ. ಗಂಗಿಗೆ ಇದರ ಅರಿವು ಇರುವುದೇ ಇಲ್ಲ.

ಜಾತ್ರೆಯಲ್ಲಿ ದರ್ಶನವಾದ ಮೇಲೆ ಗಂಗಿ ಮತ್ತು ಪರವ್ವ ಇಬ್ಬರು ಮನೆಗೆ ಮರಳುವಾಗ, ಗಂಗಿ ತನ್ನ ಕೊರಳಿನ ಸರಗಿಯತ್ತ ದೃಷ್ಟಿ ಹಾಯಿಸುತ್ತಾಳೆ. ಕೊರಳಲ್ಲಿ ಸರಗಿ ಇರುವುದಿಲ್ಲ. ಗಂಗಿ ಭಯಭೀತಳಾಗುತ್ತಾಳೆ. ತನ್ನ ಸರಗಿ ಇಲ್ಲ ಏನ ಮಾಡಾದು, ಯಾರನ್ನ ಕೇಳದು ಎಂದು ಚಡಪಡಿಸುತ್ತಾಳೆ. ಪರವ್ವಳು ಕೂಡ ಭಯಭೀತಳಾಗುತ್ತಾಳೆ. ಎಲ್ಲಿ ಕಳಿತು ತಾಯಿ ಸಾವುಕಾರಗ ಏನಂತ ಹೇಳದು, ಮೊದಲೇ ನಿನ್ನ ಗಂಡ ಕೋಪದ ಅಸಾಮಿ, ಸರಗಿ ಹ್ಯಾಂಗ ಕಳಿತು, ಜಾತ್ರೆಯಲ್ಲಿ ಮೈಮರೆತು ತಿರುಗಿರಬೇಕು, ಎಂದು ಬೈದರೆ, ಗತಿ ಏನು ಎಂದು ಇಬ್ಬರು ಭಯಪಡುತ್ತಾರೆ.

ಪರವ್ವ ಮತ್ತು ಗಂಗಿ ಇಬ್ಬರು ಚಡಪಡಿಸುವುದನ್ನು ದೂರದಿಂದಲೇ ಕಾಕ ದೃಷ್ಠಿ ಬಿರುತ್ತ ನೋಡುತ್ತಿರುವ ಸಂಗ್ಯಾ ಪರವ್ವಳ ಹತ್ತಿರ ಬಂದು ಏನ್ ಆಗ್ಯಾದ ಪರವ್ವ ಎಂದು ಕೇಳುತ್ತಾನೆ. ಗಂಗಿ ಸಾವಕಾರ್ತಿ ಗಂಗವ್ವನ ಕೊರಳ ಸರಗಿ ಕಳದಿದೆ ಸಂಗ್ಯಾ. ನೀ ಎಲ್ಲಾರ ಹುಡುಕು ಎನ್ನುತ್ತಾಳೆ. ಇದೆ ಸಮಯಕ್ಕಾಗಿ ಕಾದಿರುವ ಸಂಗ್ಯಾ ಪರವ್ವಳಿಗೆ ಈ ಮಾತು ಹೇಳುತ್ತಾನೆ.

ಸಂಗ್ಯಾ : ಪರವ್ವ ಅದು ಕಳಿಲಿ ಬಿಡ, ಅಂಥದ ಇನ್ನೊಂದು ಸರಗಿ ಮಾಡ್ಸಿ.
ತಂದ ಕೊಡ್ತಿನ, ತಗೊತ್ತಾಳೇನ ಕೇಳಬೇ.

ಪರವ್ವ : ಯಾಕೋ ತಮ್ಮ ತಲಿಗಿಲಿ ಕೆಟ್ಟದೇನ ಅಂತ ಗದರಿಸುತ್ತಾಳೆ.........1

---

1) ಸಂಗ್ಯಾ ಭಾಳ್ಯಾ ಚಲನ ಚಿತ್ರ

ಇಲ್ಲಿ ಸಂಗ್ಯಾನ ಆಂತರಿಕ ಮನಸ್ಸು ಪರವ್ವಳ ಮುಂದೆ ವ್ಯಕ್ತವಾಗುತ್ತದೆ, ಸಂಗ್ಯಾನಿಗೆ ಎಲ್ಲದಕ್ಕಿಂತ ಮುಖ್ಯವಾಗಿ ಗಂಗಿಯ ಮೇಲೆ ಮನಸ್ಸು ಮಾಡಿ, ಅವಳ ಬೆನ್ನ ಹಿಂದೆಯೆ ಅಲೆಯುತ್ತಿರುವ ಕಾಮಾತುರದ ವ್ಯಕ್ತಿ ಗಂಗಿ ಮದುವೆಯಾಗಿದೆ. ಅವಳು ಇನ್ನೋಬ್ಬರ ಹೆಂಡತಿ ಅಂಥವರ ಮೇಲೆ ಮನಸ್ಸು ಮಾಡುವುದು ಸರಿಯಲ್ಲಾ, ಎಂದು ಅರಿಯದ ಅವಿವೇಕಿ ಸಂಗ್ಯಾ ಗಂಗಿಯ ಮೇಲೆ ಮನಸ್ಸು ಮಾಡಿರುತ್ತಾನೆ. ಗಂಗಿ ಇದ್ಯಾವದು ಅರಿಯದ ಮುಗ್ಧ ಜೀವಿ. ಆದರೆ ಸಂಗ್ಯಾ ಇದೆಲ್ಲವೂ ಮನಸ್ಸಿನಲ್ಲಿ ರೂಪಿಸಿಕೊಂಡೇ ಅವಳ ಕೊರಳ ಸರಗಿ ಉದ್ದೇಶ ಪೂರ್ವಕವಾಗಿಯೇ ಕದಿಯುತ್ತಾನೆ. ಈ ಸರಗಿ ತನ್ನಲ್ಲಿ ಇದ್ದರೂ ಮರಳಿ ಕೊಡುವ ಸ್ಥಿತಿಯಲ್ಲಿ ಸಂಗ್ಯಾ ಇರುವುದಿಲ್ಲ. ಈ ಸರಗಿಯ ಸಹಾಯದಿಂದ ಗಂಗಿ ಬಲೆಗೆ ಬೀಳಬಹುದು ಎಂದು ತಂತ್ರ ರೂಪಿಸುವುದು ಆತನ ಉದ್ದೇಶವಾಗಿದೆ.

ಸರಗಿ ಕಳದಾಗಿನಿಂದಲೂ ಗಂಗಿಗೆ ಎಲ್ಲಿಲ್ಲದ ಭಯ ಆವರಿಸಿ ಮನೆ ಮಾಡಿರುತ್ತದೆ. ಮನೆಯಲ್ಲಿ ಮನಸಿಲ್ಲ, ಎಲ್ಲಿ ಗಂಡ ಹೊಡಿತಾನೋ ಬಡಿತಾನೋ ಎನ್ನುವ ಆತಂಕ ಆವರಿಸುತ್ತಲೇ ಹೋಗುತ್ತದೆ. ಗಂಗಿಯ ಮನಸ್ಸಿನಲ್ಲಿರುವ ಭಯ ಹೇಗೆ ನಿವಾರಿಸಬೇಕು. ಎಂದು ಗಂಗಿಯನ್ನು ಸಮಧಾನ ಪಡಿಸಲು ಪರವ್ವ ಪ್ರಯತ್ನಿಸುತ್ತಲಿಯೆ ಇರುತ್ತಾಳೆ. ಇದರಿಂದ ಪರವ್ವಳಿಗೂ ಭಯ ಮೊದಲೇ ಲಗಳೆಯ ಮನೆಯವರ ಕೋಪದ ತೀವ್ರತೆ ಎಂಥದ್ದು ಎನ್ನುವುದು ಇವಳಿಗೆ ಗೊತ್ತು.

ಸಂಗ್ಯಾ ಪರವ್ವಳ ಮನೆಗೆ ಬರುತ್ತಾನೆ. ಪರವ್ವ ಮತ್ತು ಪರವ್ವಳ ಗಂಡ ಇಬ್ಬರೂ ಮನೆಯಲ್ಲಿ ಇರುತ್ತಾರೆ. ಮನೆಯಲ್ಲಿ ಅತಿ ಸಲಿಗೆಯಿಂದ ಪರವ್ವಳ ಹತ್ತಿರ ಕುಳಿತು ಬಿಡುತ್ತಾನೆ. ಪರವ್ವಳಿಗಾಗಿ ಚಂದ್ರಕಾಳಿ ಸೀರೆಯನ್ನು ತಂದು ಕೊಡುತ್ತಾನೆ. ಯಾಕೊ ಸಂಗ್ಯಾ ಮತ್ಯಾಕ ಈ ಸೀರಿ ತಂದಿಯ ಎಂದು, ಇದು ಜಾತ್ರೆಯದು. ಐತಿ ಎಂದು ತಿಳಿಸುತ್ತಾ, ಗಂಗಿಯ ವಿಷಯದತ್ತ ನಾಲಿಗೆ ಹರಿಬಿಡುತ್ತಾನೆ. ಸಾವಕಾರ್ತಿಯ ಕೊರಳ ಸರಗಿ ಸಿಕ್ತೆನಬೆಯತ್ತಿ ಎಂದಾಗ ಇಲ್ಲ ಸಂಗ್ಯಾ, ಅಂದ್ರ ಪರವ್ವ ಉತ್ತರಿಸುತ್ತಾಳೆ. ಏಯತ್ತಿ ಸಾವಕಾರ್ತಿ ಕೊರಳ ಸರಗಿ ನನ್ನ ಹತ್ತಿರ ಇರುದಾಗಿ ಹೇಳುತ್ತಾನೆ. ಆದರೆ ಈ ಸರಗಿ ಸುಮ್ಮ ಸುಮ್ಮನೆ ಕೊಡಲು ಆಗುವುದಿಲ್ಲ. ಈ ಸರಗಿ ಗಂಗಿಗೆ ಕೊಡಬೇಕಾದರೆ ಅವಳು ಒಂದು ರಾತ್ರಿ ನನ್ನೊಂದಿಗೆ ಕಾಲ ಕಳೆಯಬೇಕು. ಎಂದು ಶರತ್ತು ಇಡುತ್ತಾನೆ. ಪರವ್ವ ಇದಕ್ಕೆ ತೀವ್ರ ವಿರೋಧ ಮಾಡುತ್ತಾಳೆ. ಆದರೂ ಅವಳಿಗೂ ಸಂಗ್ಯಾ, ವಸ್ತ್ರ, ಒಡವೆ ಇವುಗಳ ಆಸೆಯು ತೋರಿಸಿ ಮರಳು ಮಾಡುತ್ತಾನೆ.

ಪರವ್ವ ಸಾವಕಾರ ಈರಪ್ಪ ಬಂದು ನಿಮಗೆ ಸುಮ್ನೆ ಬಿಡಲ್ಲ ಯಾಕಂದ್ರೆ, ಮೊದಲು ನಿನ್ನ ಫಜೀತಿ ಆಗ್ತದೆ. ಅದು ಹ್ಯಾಗಂದ್ರ ಜಾತ್ರೆಗೆ ಕರ್ಕೊಂಡು ಹೋದವಳು ನೀನು, ಅದಕ್ಕೆ ನೀವು ವಿಚಾರ ಮಾಡು ನನ್ನ ಮಾತಿಗೆ ನೀನು ಒಪ್ಪಿದ್ರೆ. ಒಂದು ಕಲ್ಲಿಗೆ ಎರಡು ಕಾಯಿ ಉದರ್ತವ ಎನ್ನುತ್ತಾನೆ ಹ್ಯಾಗಂದ್ರೆ, ಕೇಳ್ಬೆಯತ್ತಿ.

ಗಂಗಿಗೆ ಸರಗಿ ಸಿಕ್ರ ಅದು ಅವಳಿಗೆ ಲಾಭ,

ಪರವ್ವ ನಿನಗೆ ಸಾವಕಾರ್ಸನಿಂದ ಬೈಗಳು ತಪ್ತಾವ ಅದು ನಿನಗ ಲಾಭ,

ನನಗೆ ಅದರಿಂದ ಸುಖನು ಸಿಗ್ತಾದ, ಅಂದ್ರ ಗಂಗಿ ಸಿಗತ್ತಾಳ .

ಇದರಿಂದ ಅದು ನನಗೆ ಲಾಭ ಮೂರು ಕೆಲಸ ಆಗ್ತದಬೇ ಎಂದು, ಪರವ್ವಳನ್ನು ಮಾಯಮಾಡಿ ಗಂಗಿಯ ಸಂಗಕ್ಕೆ ಮುಸಲತ್ತು ಮಾಡುತ್ತಾನೆ. ಪರವ್ವ ಈ ಮಾತಿಗೆ ಒಪ್ಪಿ ಗಂಗಿಯನ್ನು ಒಲಿಸುವ ಪ್ರಯತ್ನ ಮುಂದುವರಿಸುತ್ತಾಳೆ. ಇದಕ್ಕಿಂತಲೂ ಮೊದಲು ಸಂಗ್ಯಾ ಸುಮ್ಮನೆ ಕುಳಿತುಕೊಳ್ಳುವ ಅಸಾಮಿ ಅಲ್ಲ. ಸಂಗ್ಯಾನಿಗೆ ಗಂಗಿಯ ಚಿಂತೆ, ಆತನಿಗೆ ಹತ್ತಿರುವ ರೋಗ. ಹೇಗಾದರೂ ಸರಿ, ಗಂಗಿಯನ್ನು ಒಲಿಸಿಕೊಳ್ಳುವುದೇ ಆತನ ಪ್ರಮುಖ ಉದ್ದೇಶ. ಹೀಗಾಗಿ, ಬಾಳ್ಯಾನಿಂದಲೂ ಗಂಗಿಯನ್ನು ಒಲಿಸಿಕೊಳ್ಳಲು ಮೊದಲು ಸಂಗ್ಯಾ ಪ್ರಯತ್ನ ಮಾಡಿ ವಿಫಲನಾಗುತ್ತಾನೆ. ಗಂಗಿಯ ಅಮಲಿನಲ್ಲಿ ದಿನಾ ಕಳೆದರೂ, ಅದೆ ಚಿಂತೆಯಲ್ಲಿ ಸಂಗ್ಯಾ ಕಾಲ ಹರಣ ಮಾಡುತ್ತಾನೆ. ಗಂಗಿಯ ಗುಂಗು ಸಂಗ್ಯಾನ ನೆತ್ತಿಯ ತುಂಬೆಲ್ಲಾ ತುಂಬಿಕೊಂಡು, ದಿನವಿಡಿ ಒದ್ದಾಡುತ್ತಾನೆ. ಹೇಗಾದರು ಮಾಡಿ ಗಂಗಿಯ ಸೌಂದರ್ಯ ಸವಿಯಲು ಸತತ ಪ್ರಯತ್ನಗಳು ಮುಂದುವರಿಸುತ್ತಾನೆ. ಬಾಳ್ಯಾನಿಂದ ಆಗದಿರುವುದು ಈ ಕೆಲಸ ಎಂದು ಅರಿತು ಹೆಣ್ಣಿಗೆ ಹೆಣ್ಣೆ ಸಾರಿ ಎಂದು ತಿಳಿದು ಗಂಗಿಯ ಸಂಗ ಮಾಡಬೇಕಾದರೆ, ಪರವ್ವಳೇ ಇದಕ್ಕೆ ಸಾಠಿ. ಇವಳ ಮುಖಾಂತರ ಗಂಗೆಯ ಮೇಲೆ ತನ್ನ ನಿಗಾ ಹಾಕುತ್ತಾ, ಗಂಗಿಯ ಕೊರಳಿನ ಸರಗಿ ಕದ್ದು. ಅದು ಅವಳಿಗೆ ಮರಳಿ ಒಪ್ಪಿಸಿದರೆ, ಸಾಕು, ಆದರೆ ಅವಳು ಒಂದು ರಾತ್ರಿ ನನಗೆ ಸುಖಃ ಕೊಡಬೇಕು. ನಾ ಅದನ್ನು ಅನುಭವಿಸಬೇಕು. ಎಂದು, ರಾತ್ರಿ ಇಡೀ ನಿದ್ದೆ ಇಲ್ಲದಂತೆ ಗಂಗಿಯ ಗುಂಗಿನಲ್ಲಿ ರಾತ್ರಿ ಹಗಲು ಕಳೆಯುತ್ತಾನೆ.

ಗಂಗಿಗೆ ಅತಿಯಾದ ಭಯದ ವಾತವರಣ ಅವಳಲ್ಲಿ ಮನೆ ಮಾಡಿರುತ್ತದೆ. ಗಂಡ ಯಾವಾಗ ಮನೆಗೆ ಬರುತ್ತಾನೋ ನಾನರಿಯೇ, ಅಲ್ಲಿಯವರೆಗೆ ನನಗೆ ಸರಗಿ ಸಿಕ್ಕರೆ ಯಾವ ಚಿಂತೆಯು ಇರುವುದಿಲ್ಲ. ಎಂದು ಚಿಂತಾ ಕ್ರಾಂತಳಾಗಿ ರಾತ್ರಿ ಮನೆಯ ಕೋಣೆಯಲ್ಲಿ ದೀಪದ ಬೆಳಕಿನಲ್ಲಿ ಕುಳಿತಿರುತ್ತಾಳೆ. ಇದೆ ಸಮಯಕ್ಕೆ ಪರವ್ವ ಗಂಗಿಯ ಮನೆಯಲ್ಲಿ ಪ್ರವೇಶ ಮಾಡುತ್ತಾಳೆ. ಇಲ್ಲಿ ಮುಖ್ಯವಾಗಿ ಗಂಗಿಗೆ ಒಂದು ಚಿಂತೆಯಾದರೆ, ಪರವ್ವಳಿಗೆ ಮತ್ತೊಂದು ಚಿಂತೆ. ಹಾಗೆಯೇ ಸಂಗ್ಯಾನಿಗೆ ಮಗದೊಂದು ಚಿಂತೆ ಎಂಬಂತೆ ಈ ಮೂರು ಪಾತ್ರಗಳಿಗೆ ಇಲ್ಲಿ ಸದ್ಯದ ಪರಸ್ಥಿತಿಯಲ್ಲಿ ಸರಗಿ ಒಂದೇ ಪ್ರಮುಖ ವಿಷಯವಾಗಿದೆ. ಮುಂದೆ ಅದರಿಂದಲೇ ಏನೆಲ್ಲಾ ಘಟನೆಗಳು ಘಟಿಸುತ್ತವೆ. ಗಂಗಿಗೆ ಸರಗಿ ಬೇಕು, ಸಂಗ್ಯಾನಿಗೆ ಗಂಗಿ ಬೇಕು, ಪರವ್ವಳಿಗೆ ಸಾವುಕಾರರಿಂದ ಬೈಗಳು ತಪ್ಪಬೇಕು, ಇದು ಇವರ ಒಳ ಗುಟ್ಟು, ಎಂಬಂತೆ, ಸಂಗ್ಯಾನ ಸಂಗ್ಯಾ ಗಂಗಿಯ ಸಂಗ ಮಾಡಬೇಕು. ಅದು ಹೇಗೆ ನಿಭಾಯಿಸಲಿ ಎಂದು ಪರವ್ವ ಚಡಪಡಿಸುತ್ತಾಳೆ.

ಪರವ್ವ, ಭಯದ ನೆರಳಿನಿಂದಲೇ ಗಂಗಿಯ ಮನೆ ಪ್ರವೇಶಿಸುತ್ತಾಳೆ. ಗಂಗಿಯು ಕುಳಿತಿರುತ್ತಾಳೆ. ಮನೆಗೆ ಬಂದವಳೆ ಗಂಗಿಯ ಜೊತೆ ಮಾತಿಗೆ ಮಾತು ಬೆಳಸುತ್ತಾಳೆ. ಹಿಗೆ ಚಿಂತೆಯಲ್ಲಿ ಕುಳಿತರೆ ಪರಿಹಾರ ಸಿಗುತ್ತದೆಯೇ ನನ್ನವ್ವ ಅದಕ್ಕೊಂದು ಪರಿಹಾರ ಸಿಕ್ಕಿದೆ. ಎಂದು ಗಂಗಿಯನ್ನು ಹೇಳುತ್ತಾಳೆ. ಏನದು ಪರವ್ವ ಎಂದಾಗ ಗಂಗವ್ವ ನಿನ್ನ ಸರಗಿ ಸಿಕ್ಕಿದೆ. ಎಂದು ಹೇಳಿದ್ದೆ ತಡ ಗಂಗಿಯ ಮುಖದ ಮೇಲೆ ಮೂಡಿರುವ ಸಂತಸದ ಹೊನಲು ಹರಿದಂತೆ ಕಂಡು ಬರುತ್ತದೆ. ಗಂಗಿಯ ಅತಿಯಾದ ಸಂತೋಷವಾಗುತ್ತದೆ.ಆತುರಾತುರದಿಂದಲೆ ಪರವ್ವ ಎಲ್ಲೈತಿ, ತಂದು ಕೊಡು ಎಂದು ಕೇಳಿದಕ್ಕೆ ಪರವ್ವ ಉತ್ತರಿಸುವ ರೀತಿ ಇದು.ಕೊಡುತ್ತೇನೆ ತಾಯಿ, ಆದರೆ ಅದು ನನ್ನ ಹತ್ತಿರ ಇಲ್ಲ. ಅದು ಇರುವುದು ಮತ್ತೋಬ್ಬರ ಹತ್ತಿರ ಯವ್ವಾ, ಯಾರ ಹತ್ತಿರ ಪರವ್ವಾ.

ಪರವ್ವ	:	ಸರಗಿ ಸಿಕ್ಕಿದ್ದು ಜಾತ್ರೆಯಲ್ಲಿ ಆ ಸಂಗ್ಯಾನಿಗೆ ಸಿಕ್ಕಿದೆ ತಾಯಿ
ಗಂಗಿ	:	ಆತನಿಂದ ತಕ್ಕೊಂಡು ಬಾ ಪರವ್ವ
ಪರವ್ವ	:	ಅವಂದು ಒಂದು ಷರತ್ ಇಟ್ಟಾನ ತಾಯಿ
ಗಂಗಿ	:	ಏನದು
ಪರವ್ವ	:	ನಿನಗೆ ಅಂವ ಸರಗಿ ಕೊಡಕ ತಯ್ಯಾರಾದಾನ, ಅದ್ಕ ನೀ ಒಂದ ರಾತ್ರಿ ಅವ್ನೊಂದಿಗ ಕಳಿಬೇಕಂತ ತಾಯಿ :1 ಅಂದ್ರ ಸರಗಿ ಕೊಡ್ತಾನಂತ

ಎಂದಾಗ ಗಂಗಿಯ ಭಯದ ಮುಖದಲ್ಲಿ ಸಿಟ್ಟಿನ ಅಲೆಯು ಒಮ್ಮಿಂದೊಮ್ಮೆ ಹರಿಯುತ್ತದೆ. ಪರವ್ವಳನ್ನು ಬೈಯುತ್ತಾಳೆ. ನೀನೇನು ಕುಂಟಲತನ ಮಾಡಲು ಹೊರಟಿಯೇನು ಪರವ್ವ ಎಂದು ಹೆದರಸಿ ಬಿಡುತ್ತಾಳೆ. ಆವಾಗ ಪರವ್ವ ಮತ್ತೆ ಒತ್ತಿ ಮಾತನಾಡುತ್ತಾಳೆ.

ನೋಡು ತಾಯಿ ಮದುವೆಯಾದಂನಿಂದ ನಿನಗ ಯಾತರದ ಸುಖ : ಐತಿ. ಈ ಸಿರಿ, ಸಂಪತ್ತು, ಏನಿದ್ದರೂ ಯಾವುದಕ್ಕೆ ಬರುತ್ತದೆ. ನಿನಗೆ ಕಾಲಿನಿಂದ ತಲೆವರೆಗೂ ಈ ಬಂಗಾರ ಸುರಿದರೂ ಅದಕ್ಕೆ ಸುಖ ಅಂತಾರೇನು, ನಿನ್ನ ಜೀವನದಲ್ಲಿ ಇಲ್ಲಿಯವರೆಗೂ ನಿನಗ ನಿನ್ನ ಗಂಡನಿಂದ ಸಿಗಬೇಕಾದ ಸುಖ ಸಿಕ್ಕಿಲ್ಲ. ಅದು ಈಗ ನಿನ್ನ ಮನಿತನಕ ಬರುತ್ತಿದೆ. ಒಂದು ಮಗು ಆದರೂ ಆಗುತ್ತದೆ. ನಿನಗೆ ಸರಗಿಯು ಸಿಗುತ್ತದೆ ಮತ್ತು ಸುಖವು ಸಿಗುತ್ತದೆ. ಎರಡು ಕೆಲಸ ಆಗ್ತಾವೆ. ಎಂದಾಗ ಗಂಗಿಯ ಮನಸ್ಸು ಮೆತ್ತಗಾಗಿ ಪರವ್ವಳ ಉಪದೇಶಕ್ಕೆ ತಲೆಬಾಗುತ್ತಾಳೆ.

ಇವಳ ಒಪ್ಪಿಗೆಯು ಪರವ್ವಳಿಗೆ ಸಂತೋಷ ತರುವುದರೊಂದಿಗೆ, ಸಂಗ್ಯಾನಿಗೆ ಇದರಿಂದ ಅತಿಯಾದ ಆನಂದ ಉಕ್ಕಿ ಹರಿಯುತ್ತದೆ. ಈ ಸುದ್ದಿ ಸಂಗ್ಯಾನಿಗೆ ಮುಟ್ಟಿಸುವ ಆತುರದಲ್ಲಿ ಪರವ್ವ ಇರುತ್ತಾಳೆ. ಸಂಗ್ಯಾ ರಾತ್ರಿ ಯಾವಾಗ ಮನಿಗೆ ಬರಬೇಕೆಂದರೆ ಅವಳು ಬರುವ ಸಮಯ ಗಂಗವ್ವ ಈ ರೀತಿಯಾಗಿ ಹೇಳುತ್ತಾಳೆ.

ಗಂಗಾ	:	ಕೇಳ ಅಂಗಾರ, ಕಟ್ಟೆ ಕಲ್ಲ ಕದಲಿರಬೇಕು. ಮರಕ್ಕ ಮರ ಹೊಂದಿರಬೇಕ ಮಲಗೀ ಹೂ ಅಳ್ಳಿರಬೇಕ ಆವಾಗ ಬರ್ಲಿ
ಪರವ್ವ	:	ಅಯ್ಯ ನನ್ನ ಮಗಳಾ ಇದೇನ ಯವ್ವಾ ಒಗಟಾ ? ಬಿಡಿಸಿ ಹೇಳೆಯವ್ವಾ
ಗಂಗೆ	:	ಇಷ್ಟು ತಿಳಿದುಲ್ಲಾ ಪರಮ್ಮ ಕೇಳ - ಕಟ್ಟೆ ಕದಲಿರಬೇಕು ಅಂದ್ರ - ಕಟ್ಟಿಮ್ಯಾಲಿನ ಮಂದಿಯಲ್ಲಾ ಒಳಗೆ ಹೋಗಿರಬೇಕು. ಮರಕ ಮರ ಹೊಂದಿರಬೇಕ ಅಂದ್ರು - ಬಾಗಿಲ ಇಕ್ಕಿರಬೇಕು ಮಲ್ಲಿಗೆ ಹೂ ಅಳ್ಳಿರಬೇಕ ಅಂದ್ರು- ತಾರಕ್ಕಿ ಬಿದ್ದಿರಬೇಕು (ಚುಕ್ಕೆ) ಇಂಥಾ ವ್ಯಾಳೆದಾಗ ಸಂಗ್ಯಾನ ಕರಕೊಂಡು ಬಾ......1

---

1) ಸಂಗ್ಯಾ ಬಾಳ್ಯಾ ಬಯಲಾಟ : ಡಾ. ಮಲ್ಲಿಕಾರ್ಜುನ ಲಠೆ - ಪುಟ 61

ಸಂಗ್ಯಾ ಬರುವ ಸಮಯ ಗಂಗಿಯು ಹೇಳಿಕೊಟ್ಟಂತೆ ಹೋಗಿ ಪರವ್ವ ಸಂಸ್ಯಾನಿಗೆ ತಿಳಿಸುತ್ತಾಳೆ. ಸಂಗ್ಯಾನಿಗೆ ಆಕಾಶವೇ ಕೈಗೆ ಎಟುಕಿದಂತೆ ಅತಿಯಾದ ಸಂತೋಷದ ಅಲೆಯಲ್ಲಿ ಪರವ್ವಳನ್ನು ಎತ್ತಿಕೊಂಡು ಕುಣಿದಾಡುತ್ತಾನೆ.ಸಂಗ್ಯಾನ ಮನದ ಆಸೆಯ ಇಮ್ಮಡಿಸುತ್ತದೆ. ಸಂಗ್ಯಾ ಪರವ್ವಳನ್ನು ಅತಿ ಆನಂದದಿಂದ ಅಪ್ಪುತ್ತಾನೆ. ಪರವ್ವಳ ಬಗ್ಗೆ ಸಂತೋಷದ, ಅನುಕಂಪದ ಅಲೆಯಲ್ಲಿ ತೆಲುತ್ತಾನೆ. ಗಂಗಿಯ ಸೌಂದರ್ಯದ ಸುಖಕ್ಕಾಗಿ ಹಾತೋರೆಯುತ್ತಾನೆ.

ಗಂಗಿ ಕೊಟ್ಟ ಸಮಯವು ಅತಿ ಮುಖ್ಯವೆಂದು ಪರಿಗಣಿಸಿರುವ ಸಂಗ್ಯಾ. ಒಂದು ಚಿಂತೆಯಲ್ಲಿ ಕೆಲ ಸಮಯ ಮಗ್ನನಾಗುತ್ತಾನೆ. ನಾನು ಒಂದು ಗೃಹಿಣಿ ಹೆಣ್ಣಿನ ಸಂಗ ಮಾಡುವುದು ಸರಿಯೇ ? ಅವಳ ಕೊರಳ ಸರಗಿಯ ಸಲುವಾಗಿಯೇ ನನಗೆ ಹತ್ತಿರವಾಗುತ್ತಿದ್ದಾಳೇ ? ಹೊರತು ಸ್ವಮನಸ್ಸಿನಿಂದಲ್ಲ ಎಂದು. ನಾನು ತಪ್ಪು ಮಾಡುತ್ತಿರುವೆನಲ್ಲ. ಎಂದು ವಿಚಾರಿಸುತ್ತಲೂ ಹೆಜ್ಜೆ ಇಡುತ್ತಾನೆ. ರಾತ್ರಿ ಮನೆಯಲ್ಲಿ ಯಾರು ಇಲ್ಲದ ಸಮಯವನ್ನು ಕಂಡು ಹೋಗಿ ಗಂಗಿಯ ಮನೆಯ ಬಾಗಿಲ ತಟ್ಟುತ್ತಾನೆ. ಗಂಗಿ ಭಯದಿಂದಲೇ ಬಾಗಿಲು ತೆರೆಯುತ್ತಾಳೆ. ಸಂಗ್ಯಾ ಮನೆಗೆ ಬಂದಿರುತ್ತಾನೆ. ಆತನನ್ನು ಯಾರಿಗೂ ಗೊತ್ತಾಗದಂತೆ ಮನೆಯ, ತನ್ನ ಮಂಚಕ್ಕೆ ಕರೆದೊಯ್ಯುತ್ತಾಳೆ.

ಸಂಗ್ಯಾ	:	ಸಾವಕಾರ್ತಿ
ಗಂಗಿ	:	ಸಾವಕಾರ್ತಿ, ಅನಬ್ಯಾಡ ಹೆಸರತಕ್ಕೊಂಡ ಕರಿ
ಸಂಗ್ಯಾ	:	ಗಂಗಾ
ಗಂಗಿ	:	ಸಂಗ್ಯಾ
ಸಂಗ್ಯಾ	:	ನನಗೆ ಹಸವಿ ಆಗ್ಯತೆ
ಗಂಗಿ	-	ಧಿಟ್ಟ ಹಸುನಾ ಏನ ಹೊಟ್ಟಿ ಹಸು
ಸಂಗ್ಯಾ	-	ಎರಡು, ಎಂದಾಗ ಗಂಗಿಯು ಆತನನ್ನು ಬಾ...........1

ಮೊದಲು ಹೊಟ್ಟೆ ಹಸು ಹಿಂಗಲಿ ಎಂದು ಅಡುಗೆ ಮನೆಯಿಂದ ಆತನಿಗೆ ತರತರದ ಅಡುಗೆ ಬಡಿಸುತ್ತಾಳೆ. ಊಟವಾದ ಮೇಲೆ ಮಂಚದೆಡೆಗೆ ಇಬ್ಬರು ಹೊರಡುತ್ತಾರೆ. ಗಂಗಿ ಸಂಗ್ಯಾನನ್ನು ಕುರಿತು ನನ್ನ ಕೊರಳ ಸರಗಿ ಕೊಡು ಎನ್ನುತ್ತಾಳೆ. ಆವಾಗ ಸಂಗ್ಯಾ ಮೊದಲು ತನ್ನ ಕಾಮತೃಷೆಯನ್ನು ತೀರಿಸಿಕೊಳ್ಳುತ್ತಾನೆ. ಗಂಡನಿಂದ ಸಿಗದೇ ಇರುವ ಸುಖವನ್ನು ಸಂಗ್ಯಾನಿಂದ ಗಂಗಿ ಪಡೆಯುತ್ತಾಳೆ. ಇಬ್ಬರ ಕಾಮಲೀಲೆಗಳು ಸ್ವಚಂದವಾಗಿ ಮಂಚದ ಮೇಲೆ ಒಬ್ಬರನ್ನೊಬ್ಬರು ಅಪ್ಪುತ್ತ ಸುಖ ಪಡುತ್ತಾರೆ. ಕೃತಿಯಲ್ಲಿ ಈ ಘಟನೆ ವರ್ಣಮಯವಾಗಿ ಚಿತ್ರಿತಗೊಂಡಿದೆ. ಸಂಗ್ಯಾನ ಕಾಲಿನ ಕಡಗವು ಅಲ್ಲಿಯೇ ಮೈಮರೆತು ಹಾಸಿಗೆಯ ಪಕ್ಕದಲ್ಲಿ ಕಳಚಿ ಬಿದ್ದಿರುತ್ತದೆ. ಇದು ಗಂಗಿಗೂ ಮತ್ತು ಸಂಗ್ಯಾನಿಗೂ, ಅರಿವೆ ಇಲ್ಲದಂತೆ ಕಳಚಿರುತ್ತದೆ. ಸಂಗ್ಯಾ ದಟ್ಟನೆ ಎದ್ದವನೇ ಹಾಗೆ ಯಾರಿಗೂ ಕಾಣದಂತೆ ಗಂಗಿಯ ಮನೆಯಿಂದ ಹೋಗುತ್ತಾನೆ.

---

1) ಸಂಗ್ಯಾ ಬಾಳ್ಯಾ ಚಲನ ಚಿತ್ರದ ಸಂಭಾಷಣೆ :-

ಮಾರನೆಯ ದಿವಸ ಗಂಗಿಯ ಕೋಣೆಯು ಸ್ವಚ್ಛಗೊಳಿಸಲು ಹೋದ ಕೆಲಸದವಳ ಕೈಗೆ ಕಡಗ ಸಿಗುತ್ತದೆ. ಇದನ್ನು ಅವಳು ತಂದು ಗಂಗಿಗೆ ಕೊಡುತ್ತಾಳೆ. ಅವ್ವಾ ನಿಮ್ಮ ಕೋಣೆಯಲ್ಲಿ ಇದು ಬಿದ್ದಿತು. ಎಂದು ಹೇಳಿದ ತಕ್ಷಣವೇ ಗಂಗಿ ಭಯ ಭೀತಳಾಗುತ್ತಾಳೆ. ಆತು, ನಿನ್ನ ಕೆಲಸ ನೀ ಮಾಡಲು ಹೋಗೆಂದು ಕೆಲಸದವಳಿಗೆ ಅಲ್ಲಿಂದ ಕಳಿಸುತ್ತಾಳೆ. ಮುಂದೆ ಭಯ ಆತಂಕ ಎರಡು ಒಮ್ಮಿಲೆ ಗಂಗಿಗೆ ಆವರಿಸಿ ಬಿಡುತ್ತವೆ. ತಾನು ಮೊದಲೇ ಇಂಥ ಕೆಲಸಕ್ಕೆ ಅನಿವಾರ್ಯವಾಗಿ ಕೈ ಹಾಕಿರುವೆ ಇದೊಂದು ಭಯ ನನಗೆ ಕಾಡುತ್ತದೆ. ಕೈ ನಡಗುತ್ತವೆ. ಗದ ಗದ ಕಂಪಿಸುತ್ತದೆ. ಗಡಬಿಡಿಯಿಂದ ಕಾಲ್ಗಡಗವು ಮನೆಯ ಮುಂದಿನ ಬಾವಿಯಲ್ಲಿ ಬೀಸಾಡುತ್ತಾಳೆ. ಯಾವದೋ ಮಾಡಲು ಹೋಗಿ ಏನೋ ಆಯಿತೆಂಬಂತೆ ಗಂಗಿಯ ಗಡಿಬಿಡಿಯು ಅಲ್ಲಿಂದಲೇ ಪ್ರಾರಂಭಗೊಳ್ಳುತ್ತದೆ ಗಂಗಿಗೆ ಇದನ್ನು ಎದುರಿಸುವ ಚಾತುರ್ಯ ಇರುವುದಿಲ್ಲ.

ಸಂಗ್ಯಾನ ಕಾಲ್ಗಡಗ ಮನೆಯ ಕೆಲಸದವಳಿಗೆ ಸಿಕ್ಕೊಡನೆ ಅದು ಮುಂದೆ ಬೇರೆ ಸ್ವರೂಪವೇ ಪಡೆದುಕೊಳ್ಳುತ್ತದೆ. ಕೆಲಸದವಳು ಈ ಸುದ್ದಿ ಇಡಿ ಊರಿನ ತುಂಬೆಲ್ಲಾ ಟಂಟಂ ಭಾರಿಸುತ್ತಾಳೆ. ಇಂಥ ಸುದ್ದಿ ಕ್ಷಣಾರ್ಧದಲ್ಲಿಯೇ ಇಡಿ ಗ್ರಾಮದ ತುಂಬೆಲ್ಲಾ ಕಾಳ್ಗಿಚಿನಂತೆ ಹಬ್ಬುತ್ತದೆ. ಮನೆ ಮನೆಗೆ ಸುದ್ದಿ ಹಬ್ಬಿ ಪಂಚಾಯತ ಕಟ್ಟೆಯಲ್ಲಿಯು ಈ ಮಾತುಗಳು ಜನ ಆಡಲಾರಂಭಿಸುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಇಂಥ ವಿಷಯಗಳು ಮುಚ್ಚುವುದು ಅಪರೂಪ.

ಗಂಗಿಯ ಗಂಡ ಬಳ್ಳಾರಿಯಿಂದ ವ್ಯಾಪಾರ ಮುಗಿಸಿಕೊಂಡು ಬೈಲಹೊಂಗಲಕ್ಕೆ ಬರುತ್ತಾನೆ. ಕುದುರೆಯ ಸವಾರಿಯ ಸರದಾರ ಗ್ರಾಮದ ಅಗಸೆಯ ಬಾಗಿಲಿಗೆ ಬರುತ್ತಲ್ಲೆ. ಗ್ರಾಮದಲ್ಲಿಯ ಅಣುಕದ ಮಾತುಗಳು ಈರಪ್ಪನ ಕಿವಿಯ ಮೇಲೆ ಬೀಳುತ್ತವೆ. ಈರಪ್ಪ ಬರುವುದು ಗ್ರಾಮದ ಜನತೆ ತಿಳಿದಿರಲ್ಲಿಲ್ಲ. ಅವರು ತಮ್ಮಷ್ಟಕ್ಕೆ ತಾವು ಎಂಬಂತೆ ಮಾತನಾಡುತ್ತಾರೆ.

ಲಗಳೆರ ಮನಿ ಅಗಳಿ ಅಳಗ್ಯಾಡಕ ಹತ್ಯಾತಂತ
ಚಿಲಕ ಬಲಕ ಬಿದ್ದು ಕಿಲಕ ಅನ್ನಕ ಹತ್ಯಾತಂತ................1

ಎಂದು ಕೆಕೆ ಹಾಕಿ ನಗುವ ಜನರ ಶಬ್ದಗಳು ಈರಪ್ಪನ ಕಿವಿಯ ತಮಟೆಯ ಮೇಲೆ ಭಾರಿಸಿ ಅಪ್ಪಳಿಸುತ್ತವೆ. ಈರ್ಯಾನಿಗೆ ತನ್ನ ಮುಂದಿನ ಮುಂದಾಲೋಚನೆ ಸಂಶಯಕ್ಕೆ ಎಡಮಾಡಿಕೊಡುತ್ತದೆ. ಲಗಳೆಯ ಮನಿ ಅಗಳಿ ಅಳಗಾಡಲು ಹತ್ತಿತೆಂದರೆ ಇದರ ಅರ್ಥ ಏನೋ ನಮ್ಮ ಮನೆಯಲ್ಲಿ ಯಾವುದೋ ಒಂದು ಘಟನೆ ಘಟಸಿದಿ ಎಂದು ತಿಳಿಯುತ್ತಾನೆ.

ಬಳ್ಳಾರಿಗೆ ವ್ಯಾಪಾರಕ್ಕೆಂದು ಹೋದ ಈರಪ್ಪನಿಗೆ ಅಪಶಕುನದ ಕನಸು ಬೀಳುತ್ತದೆ. ಅದನ್ನು ತಲೆಯಲ್ಲಿ ಇಟ್ಟುಕೊಂಡು ಬರುತ್ತಿರುವಾಗಲೇ ತನಗೆ ಗ್ರಾಮದಲ್ಲಿ ಆಡುವ ಜನರ ಮಾತುಗಳು, ಲಗಳೆರ ಮನಿಯ ಲಗಳಿ ಬಗ್ಗೆ ಜನರು ಮಾತನಾಡುವುದರಿಂದ ಸಹಜವಾಗಿಯೇ ಈರ್ಯಾನಿಗೆ ಮನೆಯಲ್ಲಿ ಏನೋ ಆಗಿದೆ ಎಂದು ವಿಚಾರ ಮಗ್ನನಾಗುತ್ತಾನೆ. ದಾರಿಯಲ್ಲಿ ಜನರು ಆಡುವ ಮಾತಿನ ಮರ್ಮವಾದರೂ ಏನು ? ಲಗಳೆರ ಮನೆಯಲ್ಲಿ ಕಂಡಿರುವ ಅಂಶಗಳೇನು ? ಎನ್ನುವ ಹತ್ತು ಹಲವಾರು ಕೆಟ್ಟ ವಿಚಾರಗಳು ಈರಪ್ಪನ ತಲೆಯಲ್ಲಿ ಸುಳಿಯಲು ಶುರುಮಾಡುತ್ತವೆ.

---

1) ಸಂಗ್ಯಾ ಬಾಳ್ಯಾ ಚಲನ ಚಿತ್ರದ ಭಾಗ

ಮನೆಗೆ ಬಂದು ಬಾಗಿಲು ತೆರೆದು ಒಳಗೆ ಬರುವವುದರಲ್ಲಿ ಗಂಗಿ ಯಾವುದೋ ಒಂದು ವಿಚಾರದಲ್ಲಿ ಕುಳಿತಿರುತ್ತಾಳೆ. ಗಂಗಿಗೆ ಬಾಗಿಲಲ್ಲಿ ಈರ್ಯ ಬಂದಿರುವ ಅರಿವು ಆಗುತ್ತಿದಂತೆ. ಕೈಯಲ್ಲಿ ತಂಬಿಗೆ ನೀರು ತೆಗೆದುಕ್ಕೊಂಡು ಈರ್ರ್ಯಾನಿಗೆ ಕೊಡುತ್ತಾಳೆ. ಮೊದಲಿನಂತೆ ಅವಳು ಈಗ ಈರಪ್ಪನಿಗೆ ಕಾಣಿಸುವುದಿಲ್ಲ. ಅಡುಗೆ ಮನೆಗೆ ಹೋಗಿ ಊಟಕ್ಕೆ ಕುಳಿತಿರುವ ಗಂಡನಿಗೆ ಗಂಗಿ ಊಟ ಬಡಿಸುವ ಧ್ಯಾನದಲ್ಲಿ ಇರುವುದಿಲ್ಲ. ಗಂಡ ಕೇಳಿದ ಯಾವುದಕ್ಕೂ ಸರಿಯಾಗಿ ಗಂಗಿ ಉತ್ತರಿಸದೇ ಆಂತರಿಕ ಭಯದಿಂದ ಗಂಟಲು ತಡವರಿಸಿ ಉತ್ತರ ಕೊಡುತ್ತಾಳೆ. ಇದನ್ನರಿತ ಈರಪ್ಪ ಯಾಕೋ ನಿನ್ನ ದೃಷ್ಟಿ ನಡೆ ರೀತಿ ಎಲ್ಲವೂ ಬೇರೆಯಾಗಿದೆಯಲ್ಲ. ನಾನು ಕೇಳುವುದು ನಿನಗೆ ಸರಿಯಾಗಿ ಕೇಳಿಸುತ್ತದೆ ಅಥವಾ ಇಲ್ಲ. ಎಂದು ದೊಡ್ಡ ಧ್ವನಿಯಲ್ಲಿ ಗದರಿಸಿದಾಗ ಭಯಭೀತಳಾಗಿ ಅರಿಯದವರಂತೆ ಮಾತನಾಡುತ್ತಾಳೆ. ಗಂಗಿಗೆ ಮನಸ್ಸಿನಲ್ಲಿ ಭಯ ಆವರಿಸುತ್ತದೆ. ಕುಂಬಳಕಾಯಿ ಕಳ್ಳ ಎಂದರೆ ಭುಜ ಮುಟ್ಟದವ. ಹಾಗೆಯೇ ಗಂಗಿ ತನ್ನ ತಪ್ಪು ತಾನೇ ಹೊರ ತೆಗೆಯುವಂತೆ ಸಂಶಯದ ಸುಳಿಯಲ್ಲಿ ಸಿಲುಕಿರುವಂತೆ ಅವಳು ನಡೆದುಕೊಳ್ಳುತ್ತಾಳೆ.

ಗಂಗಿಯ ಹಾವಭಾವಗಳನ್ನು ಅರಿತ ಈರಪ್ಪ ಗಂಗಿಯಲ್ಲಾದ ಬದಲಾವಣೆಯಿಂದ, ಒಂದು ಉಪಾಯ ಹುಡುಕಿ ಮಾತನಾಡುತ್ತಾನೆ. ಗಂಗಾ ನಾನು ಮತ್ತೆ ಲಕ್ಷ್ಮೇಶ್ವರಕ್ಕೆ ಹೋಗಬೇಕು. ಅದಕ್ಕೆ ನೀ ಎಲ್ಲಾ ಸಿದ್ದತೆ ಮಾಡು ಎಂದಾಗ ಗಂಗಿ ಒಮ್ಮಿಂದೊಮ್ಮೆ ಹೂಂ ಎಂದು ಉತ್ತರಿಸುತ್ತಾಳೆ. ಅಲ್ಲಿಗೆ ಸುಮ್ಮನಿರದ ಈರಪ್ಪ, ನಾನು ಎಂಟು ದಿವಸಬೇಕು ಮತ್ತೆ ಹೋಗಿ ಊರಿಗೆ ಬರಲಿಕ್ಕೆ ಎಂದಾಗಲೂ ಗಂಗಿ ಹುಂ ಎಂದು ಉತ್ತರಿಸುತ್ತಾಳೆ. ಗಂಡ ಹೇಳುವ ಪ್ರತಿಯೊಂದು ಮಾತು ಕೂಡ ಗಂಗಿಗೆ ಭಯದ ಮಾತುಗಳಾಗಿ ಕಾಣುತ್ತದೆ.

ಗಂಗಿ ಉತ್ತರಿಸುವದನ್ನು ಅರಿತ ಈರಪ್ಪ ಮನದಲ್ಲಿ ಗೊಣಗುತ್ತಾನೆ. ಮೊದಲು ಊರಿಗೆ ಹೋಗುವುದೆಂದರೆ ಚಡಪಡಿಸುವ ಗಂಗಿ, ಇವಾಗ ನಾನು ಇವತ್ತೆ ಬಂದವನು ಮತ್ತೆ ಹೋಗುತ್ತೇನೆಂದರು ಯಾಕೆ ಹೋಗ್ರಿ ಅನ್ನುವ ಸ್ಥಿತಿಯಲ್ಲಿ ಇಲ್ಲಲ್ಲಾ ಎಂದು ಅರಿತು ಮತ್ತೆ ಪ್ರಶ್ನಿಸುತ್ತಾನೆ. ಗಂಗಾ ನಿನಗ ನಾ ಹೋಗುವುದರಿಂದ ಏನಾದರೂ ಬೇಸರವೇ ? ಎಂದು ಕೇಳಿದಕ್ಕೆ ಹಾಗೆನಿಲ್ಲ. ನೀವು ಹೋಗ್ರಿ ಎಂದು ಉತ್ತರಿಸುವುದನ್ನರಿತ ಈರ್ರ್ಯಾನಿಗೆ ಗಂಗಿಯಲ್ಲಾದ ಬದಲಾವಣೆಯನ್ನು, ಮತ್ತಷ್ಟು ಸಂಶಯಕ್ಕೆ ಎಡೆಮಾಡಿ ಕೊಡುತ್ತದೆ

ಪೂರ್ವ ಸಿದ್ಧತೆಯಂತೆ ಈರಪ್ಪ ಊರಿಗೆ ಹೊರಡುತ್ತಾನೆ. ಗಂಗಿ ಈರಪ್ಪನು ಹೋಗುತ್ತಿದ್ದರು ಸುಮ್ಮನೆ ನಿಂತಿರುತ್ತಾಳೆ. ಎಂದಿನಂತೆ ಮತ್ತೆ ರಾತ್ರಿ ಅದೇ ಸಮಯಕ್ಕೆ ಸಂಗ್ಯಾ ಗಂಗಿಯ ಮನೆ ಪ್ರವೇಶಿಸುತ್ತಾನೆ. ಗಂಗಿ ಬೇಡವೆಂದರೂ ಬಾಗಿಲಲ್ಲಿ ನಿಂತು ಕದ ತಟುತ್ತಾನೆ. ಇದರಿಂದ ಗಂಗಿ ಬಾಗಿಲ ತೆರೆಯುತ್ತಾಳೆ. ಮತ್ತೆ ಯಾಕೆ ಬಂದಿಯೋ ಸಂಗ್ಯಾ ಎಂದು ಕೇಳಿದರೆ ನನ್ನ ಕಾಲಿನ ಕಡಗ ಕಳೆದಿದೆ ಅದು ರಾತ್ರಿ ಇಲ್ಲೆ ಬಿದ್ದಿದೆ ಎನ್ನುತ್ತಾನೆ. ಇಲ್ಲ ಸಂಗ್ಯಾ ಕಡಗ ಸಿಕ್ಕಿತು ಆದರೆ ಅದು ಬಾವಿಗಿ ಹಾಕಿನಿ ಎನ್ನುತ್ತಾಳೆ. ಕಡಗ ಕಳೆದರೂ ಚಿಂತೆಯಿಲ್ಲ ನನಗೆ ಅದರ ಬದಲಾಗಿ ಇವತ್ತು ಹ್ಯಾಂಗಾರ ಮನೆಗೆ ಬಂದಿನ, ಇವತ್ತ ಒಂದು ರಾತ್ರಿ ನೀ ಸುಖ ಕೊಡು ಎಂದು ಚಡಪಡಿಸುತ್ತಾನೆ. ಇದಕ್ಕೆ ಗಂಗಿ ತಿರಸ್ಕರಿಸಿದರೂ ಸಂಗ್ಯಾನ ಹಠ ಮುಂದುವರಿಯುತ್ತದೆ. ರಾತ್ರಿ ಸಂಗ್ಯಾ ಗಂಗಿಯ ಕೈಯಿಂದ ಊಟ ಮಾಡಿ ಇನ್ನೇನು ಇಬ್ಬರು ಸೇರಬೇಕು ಎನ್ನುವಷ್ಟರಲ್ಲಿಯೇ ಈರ್ರ್ಯಾ ಮನೆಯ ಹೊರಗಡೆ ಬಾಗಿಲು ಬಡಿಯುಲು ಪ್ರಾರಂಭಿಸುತ್ತಾನೆ.

ಗಂಗಿ ಮತ್ತು ಸಂಗ್ಯಾ ಇಬ್ಬರು ಭಯದಿಂದ ಮನೆಯಲ್ಲಿ ಚಡಪಡಿಸುತ್ತಾರೆ. ಸಂಗ್ಯಾನನ್ನು ಗಂಗಿ ಚಾಪೆಯ ಸುರುಳಿಯಲ್ಲಿ ಮುಚ್ಚಿಡಲು ಪ್ರಯತ್ನಿಸುತ್ತಾಳೆ. ಸಂಗ್ಯಾ ಇದಕ್ಕೆ ಒಪ್ಪುವುದಿಲ್ಲ. ನಾನು ಏನು ಹೇಡಿಯಲ್ಲ ಎಂದು ಪೌರುಷ ಪ್ರದರ್ಶಿಸುತ್ತಾನೆ. ಆದರೆ ಸಮಯ ಇಲ್ಲಿ ಸಂಗ್ಯಾನ ಪರವಾಗಿ ಇರುವುದಿಲ್ಲ. ಬಾಗಿಲ ಬಡಿಯುವುದು ಜೋರಾಗುತ್ತದೆ.

ಬಾಗಿಲ ತೆಗಿಯೇ ಗಂಗಿ ಎಂದು ಅಬ್ಬರಿಸುತ್ತಾನೆ. ಗಂಗಿ ಸಂಗ್ಯಾನನ್ನು ಇದರಿಂದ ಪಾರು ಮಾಡಲು ಮನೆಯಲ್ಲಿ ಬೆಳಗುವ ದೀಪ ಆರಿಸಿ ಕತ್ತಲು ಸೃಷ್ಟಿ ಮಾಡುತ್ತಾಳೆ. ಕತ್ತಲೆಯಿಂದ ಸಂಗ್ಯಾ ಓಡಲು ಸಿದ್ಧನಾಗಿ ಜಗಿಯುತ್ತಾನೆ. ಸಂಗ್ಯಾ ಅಲ್ಲಿಂದ ಪಾರಾದ ಮೇಲೆ ಗಂಗಿಯೂ ಆವಾಗ ಬಾಗಿಲು ತೆರೆಯುತ್ತಾಳೆ. ಈರಪ್ಪ ಬಾಗಿಲ ತೆರೆಯಲು ಯಾಕ ಇಟ ತಡ, ಎಂದಾಗ ಗಂಗಿ ಊಟಕ್ಕೆ ಕುಳಿತಿರುವುದಾಗಿ ಹೇಳುತ್ತಾಳೆ. ಹ್ಯಾಂಗ ಊಟ ಮಾಡಕ ಹತ್ತಿ, ಊಟದ ಗತಿ ಇದೇನಾ ಸೂಳೇ, ಮುಚ್ಚಿಯಾಕ ಇಡ್ತೆ ಹಾದರಗಿತ್ತಿ ಸತ್ಯ ಹೇಳು ನೀನು ಏನು ಮಾಡಿಯಂತ ಹಾದರ ಗಿತ್ತಿ, ಊಟ ಮಾಡಕ ಹತ್ತಿಯೋ ಎನ ಉಣಸಕ ಹತ್ತಿಯೋ ಯಾರ ಅಂವ ನಿನ್ನ ಮಿಂಡ ಹೇಳಲೇ ಬೋಸಡಿ - 1

ಗಂಗಿ ಧೈರ್ಯ ಗಟ್ಟಿ ಮಾಡಿ ಗಂಡನನ್ನು ಎದುರಿಸ್ತಾಳೆ. ಬಾಯಿ ಒತ್ತಿ ಹಿಡಿದು ಮಾತಾಡಿ, ನಾ ಹಂತಾಕಿ ಅಲ್ಲ. ಎನ್ನುವಷ್ಟರಲ್ಲಿಯೇ ಇರಪಾಕ್ಷಿ ಮತ್ತು ಬಸವಂತರು ಕದ್ದು ಓಡುವ ವ್ಯಕ್ತಿಯನ್ನು ಹಿಡಿಯುತ್ತಾರೆ. ಆದರೆ ಆ ವ್ಯಕ್ತಿ ಮತ್ತೆ ಇವರ ಕೈಯಿಂದ ತಪ್ಪಿಸಿಕೊಂಡು ಓಡಿ ಹೋಗುತ್ತಾನೆ. ತನ್ನ ತಲೆಯ ಮೇಲಿನ ಜರದ ರುಮಾಲು ಕಳಚಿ ಬೀಳುತ್ತದೆ. ಇದನ್ನು ಹಿಡಿದುಕೊಂಡು ಇರಪಾಕ್ಷಿ ಮರಳಿ ಬರುತ್ತಾನೆ. ಈರಪ್ಪ ಹಿಡಿಯಿರಿ ತಮ್ಮಗಳಿರಾ ಅವನು ಯಾರ ಅದನಾ, ಹಿಡ್ರಿ ಕಡಿರಿ, ಎಂದು ಅಬ್ಬರಿಸುತ್ತಾನೆ. ಕೈಗೆ ಸಿಗುವುದಿಲ್ಲ. ಆ ರುಮಾಲು ಮಾತ್ರ ಸಿಗುತ್ತದೆ. ಈ ರುಮಾಲು ಯಾರದು ಎಂದು ಈರಪ್ಪ ಪತ್ತೆ ಹಚ್ಚುತ್ತಾನೆ. ಇದು ಆ ಮೇಲಿನ ಮನಿ ಸಂಗ್ಯಾ ಸೂಳಿ ಮಗಂದು ಎಂದು, ರುಮಾಲನು ತನ್ನ ಕಾಲಲ್ಲಿ ಹಾಕಿ ತುಳಿಯುತ್ತಾನೆ. ಗಂಗಿಗೆ ಯಾವ ಮಾತುಗಳು ಬಾಯಿಂದ ಬರುವುದಿಲ್ಲ. ಈರಪ್ಪನ ಸಿಟ್ಟು ನೆತ್ತಿಗೆ ಎರುತ್ತದೆ. ಕೈಯಲ್ಲಿ ಕೊಡಲಿ ಹಿಡಿದಿಕೊಂಡು ಗಂಗಿಯನ್ನು ಕಡಿಯಲು ಓಡಿ ಬರುತ್ತಾನೆ. ಆದರೆ ಆತನ ತಮ್ಮಂದಿರಾದ, ಇರಪಾಕ್ಷಿ ಮತ್ತು ಬಸವಂತ ತಡೆಯುತ್ತಾರೆ. ಅಣ್ಣ ಅತ್ತಿಗೆಯನ್ನು ಕೊಲ್ಲಬೇಡ. ಅವಳು ನಮಗೆ ತಾಯಿಯ ಸಮಾನ, ತಾಯಿ ಸತ್ತ ಮೇಲೆ ನಮಗೆ ತಾಯಿಯ ಪ್ರೀತಿಕೊಟ್ಟಾಳ. ಅಂಥ ತಾಯಿಯನ್ನು ಕೊಲ್ಲಬ್ಯಾಡ. ಅವಳು ಮಾಡಿರುವುದನ್ನು ಅವಳು ಅನುಭವಿಸುತ್ತಾಳೆ. ಬೀಡು ಅವಳನ್ನು ಎನ್ನುತ್ತಾರೆ. ತಮ್ಮಂದಿರು ಹೇಳಿರುವ ಮಾತುಗಳಿಗೆ ಅಣ್ಣ ಮೆತ್ತಗಾಗುತ್ತಾನೆ.

ಗಂಗಿ ಮೂಕ ಪ್ರಾಣಿಯಂತೆ ಅಪರಾಧಿಯಾಗಿ ಏನನ್ನು ಉತ್ತರಿಸಲಾಗಾದೆ ಮೌನವಾಗಿಯೇ ನಿಲ್ಲುತ್ತಾಳೆ. ಈರಪ್ಪನ ಕೋಪ ಮೆತ್ತಗಾಗುತ್ತದೆ. ತಮ್ಮಂದಿರ ಮಾತಿನಿಂದ ಮೆತ್ತಗಾದ ಈರಪ್ಪನಿಗೆ ತನ್ನ ತಪ್ಪಿನ ಅರಿವು ಆಗುತ್ತದೆ.

ತಿಂಡಿ ಬಿಟ್ಟಾಗ ನಾವ ತುರಸಲಿಲ್ಲ ಅಂದು

ಅದ್ಕ ಹ್ಯಾಂಗ ಬೇಕಾದಂಗ ತುರುಸ್ಕೊಂಡು

ಹುಣ್ಣ ಮಾಡ್ಕೋಳುದಾ............ತಪ್ಪು ತನ್ನದೆ ಎಂದು ಮನಸ್ಸಿನಲ್ಲಿ ಸಂಕಟ ಪಡುತ್ತಾನೆ ಊರೆಲ್ಲ ಉಡುಗಿ ಚೇಲಿಗೆ ಬಂದ ಮೇಲೆ ಎಂಬಂತೆ ಗಂಗಿಯು ಗಂಡನ ಸಂಗಕ್ಕಾಗಿ ಚಡಪಡಿಸಿದರೂ ಆತ ಹೆಂಡತಿಯ ಮನಸ್ಸನ್ನು ಅರಿಯುವುದಿಲ್ಲ. ತನ್ನ ತಪ್ಪುತಾನೆ ಒಪ್ಪುತ್ತಾನೆ. ತಪ್ಪೆಲ್ಲಾ ನನ್ನದೆ ಗಂಗಾ ನಿನ್ನದಲ್ಲ. ನಿನ್ನ ಮನಸ್ಸನ್ನು ನಾ ಅರ್ಥ ಮಾಡಿಕೊಂಡಿಲ್ಲ. ನಿನ್ನ ಬಯಕೆ ಯಾವುದು ನಾ ಈಡೇರಿಸಿಲ್ಲ. ನಿನ್ನ ಭಾವನೆಗಳಿಗೆ ನಾ ಸ್ಪಂದಿಸಿಲ್ಲ. ನಿನ್ನನ್ನು ಕೊಲ್ಲಿದರೆ ನನಗೆ ಮಹಾ ಪಾಪ ತಟ್ಟುತ್ತಿತ್ತು. ನಾ ನಿನ್ನನ್ನು ಕೊಲ್ಲುವುದಿಲ್ಲ ಎಂದು ಹೇಳಿ.ಹೋಗು ಎಲ್ಲಾದರೂ ಹೋಗಿ ಬದುಕು ಎಂದು ಹೇಳಿ ತನ್ನ ತಮ್ಮಂದಿರಿಗೆ ತಿಳಿಸುತ್ತಾನೆ. ತಮ್ಮಗಳಿರಾ ಇವಳಿಗೆ ಬೆಳಗಾಗುವುದರಲ್ಲಿ. ತವರು ಮನಿಗೆ ಒಟ್ಟು ಬರ್ರಿ ಎಂದಾಗ ರಾತೋ ರಾತ್ರಿ ಬೈಲ ಹೊಂಗಲದಿಂದ ಬೈಲವಾಡ ಗ್ರಾಮಕ್ಕೆ ಕರೆದುಕೊಂಡು ಹೋಗಿ ಬಿಟ್ಟು ಬರುತ್ತಾರೆ.

ಗಂಗಿಯ ಕೊರಳಲ್ಲಿರುವ ತಾಳಿ ಒಂದನ್ನು ಬಿಟ್ಟು ಎಲ್ಲವನ್ನು ಗಂಡನ ಮನೆಯಲ್ಲಿ ಬಿಟ್ಟು ನಿರಾಸೆಯಿಂದ ಅನಿವಾರ್ಯವಾಗಿ ದಾರಿ ತುಳಿಯುತ್ತಾಳೆ. ಕ್ಷಣಿಕ ತೃಪ್ತಿಯು ಗಂಗಿಯ ಜೀವನದ ದಿಕ್ಕನ್ನು ಬದಲಾಯಿಸುತ್ತದೆ. ಗಂಗಿಏನೋ ತವರು ಮನೆ ಸೇರಿದಳು ನಿಜ. ಮನೆಯಲ್ಲಿ ಅವಳಿಗೂ ನೆಮ್ಮದಿ ಇಲ್ಲ. ಇತ್ತ ಲಗಳೇರ ಮನೆತನ ಲಗಳಿ ಎಂಬಂತೆ ಪ್ರತಿಷ್ಠೆಯ ಮನೆತನದ ಮರ್ಯಾದೆಯು ಉಳಿಯುವುದಿಲ್ಲ. ಅತ್ತ ಸಂಗ್ಯಾನಿಗು ತೊಂದರೆಯ ಲಕ್ಷಣಗಳು ಗೋಚರಿಸುತ್ತವೆ. ಸಂಗ್ಯಾನ ಗೆಳೆಯನಾದ ಬಾಳ್ಯಾನಿಗು ಸಮಧಾನವಿಲ್ಲ ಪರವ್ವಳಿಗೆ ಭಯದ ನೆರಳು ಬೆನ್ನು ಹತ್ತಿರುತ್ತದೆ. ಹೀಗೆ ಸಂಗ್ಯಾಬಾಳ್ಯ ಕೃತಿಯಲ್ಲಿ. ಗಂಗಿ ಮತ್ತು ಸಂಗ್ಯಾರ ಹಾದರದ ವಿಷಯದಿಂದ ಇಡಿ ಊರಿಗೂರೆ ಮೌನವಾಗುತ್ತದೆ. ರಾತೋ ರಾತ್ರಿ ಎಂಬಂತೆ ಗಂಗಿಯ ಸಂಸಾರ ಛಿದ್ರವಾಗಿ ಬಿಡುತ್ತದೆ. ಒಡೆದ ಕನ್ನಡಿಯಾಗಿ ಒಂದು ಮುಖದ ರೂಪ ನೂರಾರು ಎಂಬಂತೆ ಸುಂದರ ಸಂಸಾರ ಹರಿದು ಹೋಗುತ್ತದೆ.

ಗ್ರಾಮದಲ್ಲಿ ಪ್ರತಿಷ್ಠೆಯ ಮನೆತನವಾಗಿರುವ ಲಗಳೆಯರ ಮಾನ ಮರ್ಯಾದೆ, ಗ್ರಾಮದಲ್ಲಿ ಗೌರವದಿಂದ, ಬದುಕಿರುವ ಕುಟುಂಬ. ಅಂಥವರಲ್ಲಿ ಇಡಿ ಗ್ರಾಮದಲ್ಲಿಯೇ ತಲೆ ಎತ್ತಿ ನಡೆಯದ ರೀತಿ ನಮಗೆ ಬಂದಿದೆಯಲ್ಲಾ ಎಂದು ಈರಪ್ಪನ ಸಿಟ್ಟು ಕುದಿಯುತ್ತಿರುತ್ತದೆ. ಹೇಗಾದರೂ ಮಾಡಿ ಸಂಗ್ಯಾನನ್ನು ಮುಗಿಸಲೇಬೇಕು. ಅವನನ್ನು ಜೀವಂತ ಬಿಟ್ಟರೆ ನಮ್ಮ ಮನೆ ಗೌರವ ಕಾಸಿಗೂ ಕಿಮ್ಮತಿಲ್ಲದಂತೆ ಆಗುತ್ತದೆ. ಎಂದು ನಿರ್ಧರಿಸಿ ಸಂಗ್ಯಾನ ಕೊಲೆಗೆ ಸಂಚು ರೂಪಿಸುತ್ತಾರೆ. ಅಣ್ಣ ತಮ್ಮಂದಿರು ಒಟ್ಟಿಗೆ ಕುಳಿತುಕೊಂಡು ಸಂಗ್ಯಾನನ್ನು ಹೇಗೆ ಹಿಡಿಯಬೇಕು, ಕಡಿಯಬೇಕು ಎಂದು ಯೋಜನೆ ರೂಪಿಸಲು ಮುಂದಾಗುತ್ತಾರೆ.

---

1) ಸಂಗ್ಯಾ ಬಾಳ್ಯ ಚಲನ ಚಿತ್ರದ ಸಂಭಾಷಣೆ

ತಮ್ಮಗಳಿರಾ ಸಂಗ್ಯಾನನ್ನು ಯಾರಿಂದ ಹಿಡಿಯಬೇಕು ಎಂದು ಕೇಳಿದಕ್ಕೆ, ಅಣ್ಣಾ ಸಂಗ್ಯಾನನ್ನು ಹಿಡಿಯಲು ಐತಿ ಒಂದು ಮೂಗಧಾರ ಆತನ ಜೀವದ ಗೆಳೆಯನಾದ ಬಾಳ್ಯಾನನ್ನು ಹಿಡಿದರೆ ಸಂಗ್ಯಾ ಸಿಕ್ಕೆ ಸಿಗುತ್ತಾನೆ. ಎಂದು ನಿರ್ಧರಿಸಿ. ಮೇಲಿನ ಕೇರಿಯಲ್ಲಿರುವ ಬಾಳ್ಯನನ್ನು ಹಿಡಿಯುತ್ತಾರೆ. ನೋಡು ಬಾಳಣ್ಣಾ ನೀ ಸಂಗ್ಯಾನ ಗೆಳೆಯ ಇದ್ದಿ. ನಿನಗ ಸಂಗ್ಯಾ ಎಲ್ಲಿ ಅದನಾ ಎನ್ನುವುದು ಗೊತ್ತು ಎಂದಾಗ ಅದಕ್ಕೆ ಬಾಳ್ಯ ನಿರಾಕರಿಸುತ್ತಾನೆ. ಸಂಗ್ಯಾ ನನಗೆ ಗೊತ್ತಿಲ್ಲ. ಮೇಲಾಗಿ ನಾ ಈ ಊರಾಂವ ಅಲ್ಲ. ಎಂದಾಗ. ಇರಪಕ್ಷಿ ಮತ್ತು ಬಸವಂತ ಮನ ಬಂದಂತೆ ಬಾಳ್ಯಾನನ್ನು ಥಳಿಸುತ್ತಾರೆ. ಜೀವ ಬೆದರಿಕೆ ಹಾಕುತ್ತಾರೆ. ಮೇಲಾಗಿ ಬಾಳ್ಯಾನಿಗೆ ಹಣದ ಆಸೆಯು ಹುಟ್ಟಿಸುತ್ತಾರೆ.

ನಿನಗೆ ಹೊಲ ಕೊಡ್ತಿವಿ, ಎಮ್ಮೆ ಕೊಡತ್ತಿವ,
ಮನೆ ಕೊಡತ್ತಿವ, ನೂರು ರೂಪಾಯಿನ ಕೊಡತ್ತಿವಿ, ಎಂದು

ಹೀಗೆ ಹೇಳಿ ಸಂಗ್ಯಾನ ಸುಳಿವು ಪಡೆಯುತ್ತಾರೆ. ಸಂಗ್ಯಾನ ಕೊಲೆ ಮಾಡುವುದು ಖಚಿತ ಎಂದು ಅರಿತ ಪರವ್ವ, ಗಂಗಿಯ ಊರಿಗೆ ಅಂದರೆ, ತವರು ಮನೆಗೆ ಹೋಗಿ. ಗಂಗಿಯ ದುಖಃ ಅರಿತು, ಸಮಧಾನ ಹೇಳುತ್ತಾಳೆ. ಗಂಗಿಯ ಜೀವನದ ಸ್ಥಿತಿಯ ಬಗ್ಗೆ ಅರಿತು, ನಿನ್ನ ಈ ದುಖಕ್ಕೆ ನಾನೇ ಕಾರಣ ತಾಯಿ, ಎಂದು ಸಹಭಾಗಿತ್ವ ಪಡೆಯುತ್ತಾಳೆ. ಸಂಗ್ಯಾನ ಕೊಲೆಯ ಸಂಚು ರೂಪಿಸಿರುವ ಗಂಗಿಯ ಗಂಡ ಮತ್ತು ಮೈದುನರ ಬಗ್ಗೆ ಹೇಳುತ್ತಾಳೆ. ಸಂಗ್ಯಾನ ವಿಷಯ ಪರವ್ವಳ ಬಾಯಿಂದ ಬರುತ್ತಿದ್ದಂತೆ, ಗಂಗಿಯು ಸಿಡಿದು ನಿಲ್ಲುತ್ತಾಳೆ. ಅವನ ಮಾತು ಆಡುವುದಕ್ಕೂ ಆಸ್ಪದ ಕೊಡುವ ಸ್ಥಿತಿಯಲ್ಲಿ ಗಂಗಿ ಇರುವುದಿಲ್ಲ. ಅವನಿಂದ ನನ್ನ ಸಂಸಾರ ಹಾಳಾಗಿ ಹೋಯ್ತು ಹೆಸರು ಎತ್ತದಿರು ಎಂದು ಪರವ್ವಳಿಗೆ ತಾಕಿತು ಮಾಡುತ್ತಾಳೆ.

ಎಷ್ಟಾದರೂ, ಸಂಗ್ಯಾ ಪರವ್ವಳಿಗೆ ಸೋದರಳಿಯ, ಪರವ್ವ ಸಂಗ್ಯಾನಿಗೋಸ್ಕರವೇ ಸಿರಿವಂತಿಕೆಯ ಬದುಕು ನಡೆಸುತ್ತಿರುವ ಸಾವಕಾರ ಗಂಗಿಯನ್ನು ಅಡ್ಡದಾರಿಗೆ ತರುತ್ತಾಳೆ. ಪರವ್ವಳ ಹೇಗಾದರೂ ಮಾಡಿ ಸಂಗ್ಯಾ ಸಾಯಬಾರದು ಎಂದು ಮತ್ತೆ ಅವನ ಉಳಿಯುವಿಕೆಗಾಗಿ ಪರಿತಪಿಸುತ್ತಾಳೆ. ಸಂಗ್ಯಾನಿಂದ ಗಂಗಿಯ ಜೀವನ ಹರಿದು ಹೋಯಿತು ಎನ್ನುವ ಪರಿಜ್ಞಾನವು ಇವಳಿಗೆ ಇರುವುದಿಲ್ಲ ಮತ್ತೆ ಗಂಗಿಯ ಹತ್ತಿರ ಬಂದದ್ದು ಸಂಗ್ಯಾನನ್ನು ಬದುಕಿಸಬೇಕೆಂದು.

ಎವ್ವಾ ನಿನ್ನದಂತು ಹಾಳಾಯ್ತು ಅವರು ಸಂಗ್ಯಾನ ಕೊಲ್ಲುತಾರ ತಾಯಿ. ನೀ ಸಂಗ್ಯಾನನ್ನು ಉಳಿಸಬೇಕು. ನಿನ್ನ ಮಾತ ಅಂವ ಕೇಳತಾನ. ಅವನಿಗ ಊರ ಬಿಟ್ಟು ಹೋಗಂತ ಹೇಳ ತಾಯಿ. ಎಂದು ಗಂಗಿಯ ಮನ ಕರಗುವಂತೆ ಹೇಳುತ್ತಾಳೆ. ಗಂಗಿಯು ಇಲ್ಲಿ ವಿಚಾರಿಸುತ್ತಾಳೆ. ನನ್ನದಂತು ಹಾಳಾಯ್ತು. ಅಂದ ಮ್ಯಾಗ ಸಂಗ್ಯಾನಾದರೂ ಬದುಕಲಿ ಎಂದು ತ್ಯಾಗ ಮನೋಭಾವನೆಯತ್ತ ಪರಿವರ್ತನೆಯಾಗುತ್ತಾಳೆ. ಆಯ್ತು ಪರವ್ವ ಎಂದು ಹೇಳಿ ಮಾಸ್ತರ ಕೈಯಿಂದ ಪತ್ರ ಬರೆಯಿಸಿ ಸಂಗ್ಯಾ ನಿನ್ನ ಜೀವದ ಗೆಳೆಯ ಬಾಳ್ಯಾನ ಮೇಲು ವಿಶ್ವಾಸ ಇಡಬೇಡ ಎಂದು ಹೇಳುತ್ತಾಳೆ.

265

ಆದರೆ ಈ ಚೀಟಿಯು ಒಬ್ಬ ಮುದುಕನ ಕೈಯಿಂದ ಬಾಳ್ಯನಿಗೆ ತಲುಪುತ್ತದೆ. ಈ ಪತ್ರ ಓದಿರುವ ಬಾಳ್ಯ ನದಿಯಲ್ಲಿ ಹರಿಬಿಡುತ್ತಾನೆ. ಈ ವಿಷಯ ತಿರುಚಿ ಸಂಗ್ಯಾನಿಗೆ ಹೇಳುತ್ತಾನೆ. ಸಂಗಣ್ಣ ನಿನಗೆ ಗಂಗಾ ಬಂದು ಭೇಟಿಯಾಗೆಂದು ಹೇಳಿದ್ದಾಳೆ. ಪಾಪ ನಿನ್ನಿಂದ ಅವಳ ನಿನ್ನ ಬದುಕು ಹಾಳಾಯ್ತು, ನಡಿ ಎಂದು ಕರೆದುಕೊಂಡು ಬರುತ್ತಾನೆ.

ದಾರಿಯಲ್ಲಿ ಬರುವಾಗ ಕತ್ತಲೆ ಆವರಿಸಿರುತ್ತದೆ. ಸಂಗ್ಯಾನಿಗೆ ಬರುವ ಮನಸ್ಸಿರುವುದಿಲ್ಲ. ಆದರೂ ಮನಸ್ಸಿಲ್ಲದ ಮನಸ್ಸಿನಿಂದ ಬಾಳ್ಯಾನ ಮೇಲಿನ ವಿಶ್ವಾಸದಿಂದ ಗಂಗಿಗೆ ಭೇಟಿಯಾಗಲು ಹೊರಡುತ್ತಾನೆ. ದಾರಿಯಲ್ಲಿ ಬರುವಾಗ ಸಂಗ್ಯಾನಿಗೆ ಏನೇನೋ ಅಪಶಕುನಗಳು ಎದುರಾಗುತ್ತವೆ, ಭಯ ಪಡುತ್ತಾನೆ, ಅಂಜುತ್ತಾನೆ.

ಗೂಗಿ ಅರಚುವುದು, ಗುದ್ದಲಿ ಸಲಿಕೆ ಹಿಡಿದು ಜನ ಬರುವುದು ಬೆಕ್ಕು ಅಡ್ಡ ಹಾದು ಹೋಗುವುದು. ಇವೆಲ್ಲವು ಸಂಗ್ಯಾನಿಗೆ ಅಪಶಕುನದ ಸಂಕೇತಗಳಾಗಿ ಪರಿಣಮಿಸುತ್ತದೆ. ಇದನ್ನರಿತ ಸಂಗ್ಯಾ ಬ್ಯಾಡೋ ಬಾಳಣ್ಣ ನನಗೆ ಯಾಕೋ ಭಯ ಆಗುತ್ತಿದೆ. ಅಪಶಕುನಗಳು ಎದುರಾಗುತ್ತಿವೆ. ಎಂದು ಹೇಳಿದರೂ, ಬಾಳ್ಯಾ ಅವುಗಳಿಗೆ ಮನ್ನಣೆ, ನೀಡದಂತೆ, ಅದು ಗೊಡ್ಡು ಸಂಪ್ರದಾಯವೆಂದು ಹೇಳುತ್ತಾನೆ. ಸಂಗ್ಯಾನಿಗೆ ಜೀವದ ಗೆಳಯನಾಗಿರುವ ಬಾಳ್ಯಾ ಸಂಗ್ಯಾನನ್ನು ಸಾವಿನ ಕೂಪಕ್ಕೆ ತಳ್ಳಲು ಕರೆದುಕೊಂಡು ಹೋಗುತ್ತಾನೆ. ಹಣದ ಆಸೆಗೋ ಅಥವಾ ಜೀವ ಭಯದಿಂದಲೋ ಭಯಾನಕವಾದ ಕಾಡಿನಲ್ಲಿ. ಕರೆದುಕೊಂಡು ಹೊರಡುತ್ತಾನೆ. ಆಯಾಸದಿಂದ ಸಂಗ್ಯಾ ಮತ್ತು ಬಾಳ್ಯ ಇಬ್ಬರು ಒಂದು ಮರದ ದಿನ್ನೆಗೆ ತಲೆಕೊಟ್ಟು ಮಲಗುತ್ತಾರೆ. ಸಂಗ್ಯಾನಿಗೆ ನಿದ್ರೆ ಹತ್ತಿರುವುದೇ ತಡ. ಬಾಳ್ಯಾ ಅಲ್ಲಿಂದ ಎದ್ದು ದೂರದಲ್ಲಿರುವ ಈರಪ್ಪ ಅವನ ತಮ್ಮಂದಿರನ್ನು ಕಂದಲಿಯ ಸಹಾಯದಿಂದ, ಸನ್ನೆಯ ಮುಖಾಂತರ ಮಾಹಿತಿ ನೀಡಿ ಅಲ್ಲಿಂದ ದೂರ ಹೋಗುತ್ತಾನೆ.

ಸಂಗ್ಯಾನ ಕೊಲೆ ಮಾಡುವವರೆಗೂ ನಿದ್ರೆ ಇಲ್ಲದವರಂತೆ ಚಡಪಡಿಸುತ್ತಿರುವ ಈರಪ್ಪ ಮತ್ತು ಅವನ ತಮ್ಮಂದಿರು, ನಿದ್ದೆಯಲ್ಲಿ ಮಲಗಿರುವ ಸಂಗ್ಯಾನನ್ನು ಎಬ್ಬಿಸುತ್ತಾರೆ. ಸಂಗ್ಯಾ ಕಣ್ಣು ಬಿಟ್ಟಾಗ. ಎದುರಿಗೆ ಮೂವರು ಅಂದರೆ ಈರಪ್ಪ ಇರಪಾಕ್ಷಿ ಮತ್ತು ಬಸವಂತರು ನಿಂತಿರುತ್ತಾರೆ. ಕೈಯಲ್ಲಿ ಕೊಡಲಿ, ಬರ್ಚಿ, ಕುಡಗೋಲು ಹಿಡಿದು ನಿಂತಿರುತ್ತಾರೆ. ಥಟ್ಟನೆ ಎದ್ದವನೆ ಸಂಗ್ಯಾ ಎಲೇ ಬಾಳ್ಯಾ ಎಂದು ಅರಚುತ್ತಾನೆ. ನನ್ನ ಜೀವದ ಗೆಳೆಯ ನೀನು ಅಂದುಕೊಂಡಿದೆಯಲ್ಲೋ ಘಾತವಾಯ್ತು ಬಾಳ್ಯಾ ನಿನಗ ಒಳ್ಳೆಯ ಗೆಳೆಯ ಅಂದುಕೊಂಡಿದ್ದೆ. ಯಲ್ಲೋ ಎಂದು, ಎದ್ದು ಓಡಲು ಪ್ರಯತ್ನಿಸುತ್ತಾನೆ. ಆದರೆ ಸುಸಜ್ಜಿತವಾಗಿ ಬಂದಿರುವ ಈ ಮೂವರ ಕೈಯಿಂದ ಸಂಗ್ಯಾ ತಪ್ಪಿಸಿಕೊಳ್ಳಲು ಆಗುವುದೇ ಇಲ್ಲ.

ಈರಪ್ಪ ಮತ್ತು ಅವನ ತಮ್ಮಂದಿರ ಕೋಪ ನೆತ್ತಿಗೇರುತ್ತದೆ. ತನ್ನ ಹೆಂಡತಿಯನ್ನು ಮುಟ್ಟಿರುವ ಇತನ ಅಂಗಾಗಳನ್ನು ಈ ರೀತಿಯಲ್ಲಿ ಕತ್ತರಿಸುತ್ತಾರೆ.

ನನ್ನ ಗಂಗಿಯನ್ನು ಮುತ್ತಿಟ್ಟ ತುಟಿ ಇದೆನಾ ಸೂಳಿ ಮಗನೇ
ನಮ್ಮ ಅತ್ತಿಗೆಯ ಮೈ ಮುಟ್ಟಿರುವ ಕೈ ಇದೆನಾ ಬೊಸಡಿ ಮಗನೇ
ನಮ್ಮ ಅತ್ತಿಗೆ ಮೇಲೆ ಹಾಕಿರುವ ಕಾಲು ಇದೆನಾ. ಎಂದು.............1

ಒಂದೊಂದು ಅಂಗವನ್ನು ಹೆಸರಿಸುತ್ತ ರೋಷದಿಂದ ಕತ್ತರಿಸುತ್ತಾರೆ. ಚಿತ್ರ ಹಿಂಸೆಯಿಂದ ಸಂಗ್ಯಾನನ್ನು ಭಯಾನಕವಾದ ರೀತಿಯಲ್ಲಿ ಕತ್ತರಿಸಿ ತುಂಡರಿಸುತ್ತಾರೆ. ಸಂಗ್ಯಾ ಛಿದ್ರಛಿದ್ರವಾಗಿ ತುಂಡರಿಸುತ್ತಾನೆ. ಅಲ್ಲಿಗೆ ಸಂಗ್ಯಾನ ಭಯಾನಕ ಸಾವು ಗುಡ್ಡದ ಕಣಿವೆಯಲ್ಲಿ ನಡುರಾತ್ರಿಯಲ್ಲಿ ಬಾಳ್ಯಾನ ಕುತಂತ್ರದಿಂದ ಹೆಣವಾಗಿ ಬಿಡುತ್ತಾನೆ.

ಸಂಗ್ಯಾನ ಕೊಲೆಯು ಸುದ್ದಿಯು ಗ್ರಾಮದ ತುಂಬೆಲ್ಲಾ ಹರಡುತ್ತದೆ. ಪರವ್ವ ಬಿಕ್ಕಿ ಬಿಕ್ಕಿ ಅಳುತ್ತಾಳೆ. ಆದರೂ ಸಂಗ್ಯಾ ಬರುವಂತಿಲ್ಲ. ಆತನ ಶವ ಮೂರಾ ಬಟ್ಟೆಯಾಗಿ, ಚಲ್ಲಾ ಪಿಲ್ಲಿಯಾಗಿ ಬಿದ್ದಿರುತ್ತದೆ. ಗ್ರಾಮದ ತುಂಬೆಲ್ಲ ಭಯದ ವಾತವರಣ ಆವರಿಸಿರುತ್ತದೆ. ಯಾರು ಬಾಯಿ ಬಿಡುವಂತಿಲ್ಲ. ಜೀವದ ಗೆಳೆಯನಾದ ಬಾಳ್ಯಾನಿಂದಾಗಿ ಸಂಗ್ಯಾನ ಸಾವು ಸಂಭವಿಸುತ್ತದೆ.

ಕೊಲೆಯಾದ ಮೇಲೆ ನೇರವಾಗಿ ಈರಪ್ಪ ಮತ್ತು ಅವನ ತಮ್ಮಂದಿರು, ಬೈಲ ಹೊಂಗಲದ ಠಾಣೆಗೆ ತಾವೆ ಕೊಂದಿರುವುದಾಗಿ ಖುದ್ದು ಹೇಳಿಕೆ ಕೊಟ್ಟು ಶರಣಾಗಿರುತ್ತಾರೆ. ಆಗ ಬ್ರಿಟಿಷ ಸರಕಾರದ ಆಡಳಿತ. ಹೀಗಾಗಿ ಬ್ರಿಟಿಷರ ಕಾನೂನಿನ ಪ್ರಕಾರ ಈರಪ್ಪನಿಗೆ ಮರಣದಂಡನೆ ಶಿಕ್ಷೆಯಾಗುತ್ತದೆ. ಅವನ ತಮ್ಮಂದಿರಾದ ಈರಪಕ್ಷಿ ಮತ್ತು ಬಸವಂತರಿಗೆ ಜೀವಾವಧಿ ಶಿಕ್ಷೆಯಾಗುತ್ತದೆ. ಅಲ್ಲಿಗೆ ಸಂಗ್ಯಾ ಬಾಳ್ಯ ಕಥೆಯು ಮುಕ್ತಾಯವಾಗುತ್ತದೆ.

---

1) ಸಂಗ್ಯಾ ಬಾಳ್ಯ ಚಲನ ಚಿತ್ರದ ಭಾಗ

೨. ಪಾತ್ರ ಚಿತ್ರಣ

ಸಂಗ್ಯಾ ಬಾಳ್ಯ ಕೃತಿಯು ಉತ್ತರ ಕರ್ನಾಟಕ ಭಾಗದ ಬೆಳಗಾಂವ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಬೈಲವಾಡ ಗ್ರಾಮದ ಆಡು ಭಾಷೆಯಲ್ಲಿ, ಸೃಷ್ಟಿಗೊಂಡ ಈ ಕೃತಿಯು ಕೌಟುಂಬಿಕ ಚಿತ್ರಣದೊಂದಿಗೆ, ಗ್ರಾಮದ ವಾಸ್ತವಿಕತೆಯ ಸಂಪೂರ್ಣ ಛಾಯೆಯನ್ನು ಕೃತಿಯ ತುಂಬೆಲ್ಲಾ ಆವರಿಸಿಕೊಂಡಿದೆ. ಕಥೆಯ ತಿರುಳು ಯಾವ ರೀತಿಯಲ್ಲಿ ಬಿಂಬಿತವಾಗಿರುವುದೆಂದರೆ ಒಂದು ಅನೈತಿಕ ಸಂಬಂಧದ ಸುತ್ತ ಹಾಸು ಹೊಕ್ಕಾಗಿ ಈ ಕೃತಿಯಲ್ಲಿ ಮುಕ್ತಾಯಗೊಂಡಿದೆ ವಿಷಯ ವಸ್ತುಗಳನ್ನೊಳಗೊಂಡಿದೆ. ಇಲ್ಲಿಯ ಪಾತ್ರ ಚಿತ್ರಣ ಸನ್ನಿವೇಷ, ವಿಷಯ ವಸ್ತು ಸಾಮಾಜಿಕ ಪ್ರತಿಬಿಂಬವನ್ನು ಕಾಣುವ ರೀತಿಯಲ್ಲಿ ಕಾಥಾ ವಸ್ತು ಎದ್ದು ಕಾಣುತ್ತದೆ. ಇಲ್ಲಿಯ ಪಾತ್ರಗಳು ಕಂಡು ಬರುವುದು ಕೇವಲ ಬೆರಳಣಿಕೆಯಷ್ಟೆ ಮಾತ್ರ. ಪಾತ್ರಗಳು ಇಡಿ ಕೃತಿಯ ತುಂಬೆಲ್ಲಾ ಕಂಡು ಬರುತ್ತವೆ. ಈ ಕೃತಿಯ ದೃಷ್ಟಿಯಿಂದ ನೋಡುವುದಾದರೆ ಕೇವಲ ಏಳು ಪಾತ್ರಗಳು ಮಾತ್ರ ಕಂಡು ಬರುತ್ತವೆ. ಪ್ರಧಾನ ಪಾತ್ರ ಮತ್ತು ಉಪ ಪಾತ್ರಗಳೆಂದು.

ಪ್ರಧಾನ ಪಾತ್ರಗಳು :-

1) ಗಂಗಿ

2) ಸಂಗ್ಯಾ

ಉಪ ಪಾತ್ರಗಳು :-

1) ಈರಪ್ಪಾ

2) ಇರಪಕ್ಷಿ


3) ಬಸಂತ

4) ಪರವ್ವ

5) ಬಾಳ್ಯ

- ಹೀಗೆ ಪ್ರಮುಖವಾದ ಪಾತ್ರಗಳನ್ನು ನಾವು ಕಾಣುತ್ತೇವೆ. ಈ ಕೃತಿಯಲ್ಲಿ ಗಂಗಿಯೇ ಕೃತಿಯಲ್ಲಿ ಕೇಂದ್ರ ಬಿಂದುವಾಗಿದ್ದಾಳೆ.

ಪ್ರಮುಖವಾದ ಪಾತ್ರಗಳ ಚಿತ್ರಣವನ್ನು ಈ ರೇಖಾ ಚಿತ್ರದಿಂದ ಅರಿಯಬೇಕು



ವರ್ತುಲದ ರೇಖಾ ಚಿತ್ರವನ್ನು ಗಮನಿಸಿದರೆ ಈ ಕೃತಿಯಲ್ಲಿ ಪ್ರಧಾನ ಪಾತ್ರಗಳಲ್ಲಿ ಕಂಡು ಬರುವ ಪಾತ್ರವೆಂದರೆ ಗಂಗಿಯ ಪಾತ್ರ ಗಂಗಿಯ ಸುತ್ತಮುತ್ತಲು ಅನೇಕ ಪಾತ್ರಗಳು ಸುತ್ತುತ್ತಿರುತ್ತವೆ. ಇಲ್ಲಿ ಗಂಗಿಯೇ ಪ್ರಧಾನಳು ಕೃತಿಕಾರರು ಇವಳನ್ನು ಕೃತಿಯ ತುಂಬೆಲ್ಲಾ ಕೇಂದ್ರ ಸ್ಥಾನದಲ್ಲಿಟ್ಟು ಗುರುತಿಸುತ್ತಾರೆ. ಪ್ರಮುಖವಾಗಿ ಏಳು ಪಾತ್ರಗಳು ಗಂಗಿಯ ಸುತ್ತಲು ಸುತ್ತುತ್ತಿರುತ್ತವೆ. ಹೀಗಾಗಿ ಇವಳಿಗೆ ಇರುವಷ್ಟು ಸ್ಥಾನ ಈ ಕೃತಿಯಲ್ಲಿ ಮತ್ತೆ ಯಾವ ಪಾತ್ರಕ್ಕೂ ಇಲ್ಲದೇ ಇರುವುದು ಒಂದು ವಿಶೇಷತೆ.

ಹೀಗಾಗಿ ಸುಮಾರು ಏಳು ಪಾತ್ರಗಳ ಸಂಗಮವೇ ಈ ಕೃತಿಯ ಚಿತ್ರಣ. ಕೃತಿಕಾರ ಇಲ್ಲಿ ಇನ್ನೊಂದು ಒಳ್ಳೆಯ ತಂತ್ರವನ್ನು ಬಳಸಿದ್ದಾರೆ. ಎಂದು ಹೇಳಬಹುದು. ಹೇಗೆಂದರೆ ಕೆಲವು ಕೃತಿಗಳಲ್ಲಿ ಅನೇಕ ಪಾತ್ರಗಳನ್ನು ಸೃಷ್ಠಿ ಮಾಡಿರುತ್ತಾರೆ. ಆದರೆ ಕೆಲವು ಪಾತ್ರಗಳು ನಾಟಕ ನೋಡಿದರು. ನಮ್ಮ ದೃಷ್ಟಿಯಿಂದ ಉಳಿಯದೆ ಮಾಯಾವಾಗುತ್ತವೆ. ಗಿಜಬಿಜ, ಅಬ್ಬರದ ಧ್ವನಿ, ಮಿತಿ ಮೀರಿದ ಪಾತ್ರಗಳು, ವಿಪರೀತ ಸಂಭಾಷಣೆಗೆ, ತಂತ್ರಗಾರಿಕೆ ಪ್ರೇಕ್ಷಕರನ್ನು ಗಿಜಬಿಜಿಯಾಗಿಸುವ ರೀತಿಯಲ್ಲಿ ಇದ್ದಿರುವುದು ಕಂಡು ಬರುತ್ತದೆ. ಆದರೆ ಇಲ್ಲಿ ಮಾತ್ರ ಹಾಗಾಗಿಲ್ಲ.

ಪಾತ್ರಗಳ ದೃಷ್ಟಿಯಿಂದ ಹೇಳುವುದಾದರೆ ಸಂಗ್ಯಾಬಾಳ್ಯಾ ಕೃತಿಯಲ್ಲಿ ಪಾತ್ರಗಳ ಸಂಖ್ಯೆ ತೀರಾ ಕಡಿಮೆ ಇದ್ದಿರುವುದು ಒಂದು ರೀತಿಯ ಸತ್ಯದ ಸಂಗತಿಯಾದರೂ. ಓದುಗರರಿಗೆ ಎಲ್ಲಿಯು ನಿರಾಶೆ ತರುವುದಿಲ್ಲ ಕೂತುಹಲವೆ ಮೂಡಿಸಿ ಇನ್ನೂ ಮುಂದಿನನ ಸನ್ನಿವೇಷಗಳನ್ನು ಇನ್ನೂ ಕಾತುರದಿಂದ ನೋಡುವಂಥ ಕಾತುರತೆಯು, ಓದುಗರರಲ್ಲಿ ಇದ್ದಿರುವುದು ಕಂಡು ಬರುತ್ತದೆ.

ಕೃತಿಯಲ್ಲಿ ಪೌರಾಣಿಕವಾಗಲಿ, ಐತಿಹಾಸಿಕವಾಗಲಿ, ಸಾಮಾಜಿಕವಾಗಲಿ ಅದರ ರಚನೆ ಗದ್ಯದಲ್ಲಿಯೇ ಇರಲಿ, ಪದ್ಯದಲ್ಲಿಯೇ ಇರಲಿ. ಅದರ ಗುರಿ ಮಾತ್ರ ಎಂದೆಂದಿಗೂ ಒಂದೆ........1

ಇಲ್ಲಿ ನಾವು ಒಂದಂಶ ಗುರ್ತಿಸುವುದೆನೆಂದರೆ ಕೃತಿಯು ಸ್ವರೂಪದಲ್ಲಿ ಅದು ಪದ್ಯವೇ ಸರಿ, ಗದ್ಯವೇ ಸರಿ, ಅದರ ಪ್ರಮುಖ ಗುರಿ ಮಾತ್ರ ಏಕ ದೃಷ್ಠಿಕೋನವನ್ನು ಇಟ್ಟು ಕೊಂಡಿರುವಂಥದ್ದು ಎಂದು. ಹೀಗಾಗಿ ಸಂಗ್ಯಾ ಬಾಳ್ಯಾ ಕೃತಿಯ ಗುರಿಯು ಒಂದೆ ಆಗಿದೆ ಅದು ಅನೈತಿಕ ಸಂಬಂಧದ ದುರಂತ ಚಿತ್ರಣವನ್ನು ಪ್ರತಿಬಿಂಬಿಸುವ ಗುರಿಯನ್ನು ಹೊಂದಿದ್ದಾಗಿದೆ.

---

1) ಕರ್ನಾಟಕ ರಂಗಭೂಮಿ – ಡಾ. ಎಚ.ಕೆ. ರಂಗನಾಥ ಪುಟ 25

ಬಯಲಾಟದ ಈ ಕವಿ ಕಥೆಯನ್ನು ತುಂಬಾ ರಸವತ್ತಾಗಿ ಹೆಣದಿದ್ದಾನೆ. ಹಾಡುಗಳ ಭಾಷೆಯ ಗತಿಯೂ ಭಾವ ಪ್ರಚೋದಕವಾಗಿದೆ. ಪಾತ್ರಗಳ ಬೆಳವಣಿಗೆಗೆ ಜೀವ ಪೂರ್ಣವಾಗಿದೆ - 1

ಈ ಮಾತನ್ನು ಸಂಗ್ಯಾ ಬಾಳ್ಯಾ ಎನ್ನುವ ಒಂದು ಅಂಕಣದಲ್ಲಿ ಪ್ರಕಟಗೊಂಡಿರುವ ಸಂಗತಿ ಕವಿಯಾದ ಪತ್ತಾರನು ತನ್ನ ಜನಪದ ಕೃತಿಯಲ್ಲಿ ಸಂಪೂರ್ಣವಾಗಿ ಒಂದು ಗ್ರಾಮದ ಅನೈತಿಕತೆಯ ಸಂಬಂಧವನ್ನು ಅರ್ಥವತ್ತಾಗಿ ಚಿತ್ರಿಸುವುದರ ಜೊತೆಗೆ ಇಲ್ಲಿನ ಕೆಲವೇ. ಕೆಲವು ಪಾತ್ರಗಳ ಬಗ್ಗೆ ಜೀವ ತುಂಬುವ ಕೆಲಸವನ್ನು ತುಂಬಾ ಮನಪೂರ್ವಕವಾಗಿ ಮಾಡಿರುವುದು ಕಂಡು ಬರುತ್ತದೆ.

ಡಾ. ಎಚ.ಕೆ.ರಂಗನಾಥ ಪುಟ ಸಂಖ್ಯೆ :- 25

ಪತ್ತಾರ ಜನಪದ ಕವಿಯ ದೃಷ್ಠಿಯಲ್ಲಿ ಪಾತ್ರಗಳ ಚಿತ್ರಣ

೧. ಗಂಗಿ

ಈ ಪಾತ್ರವು ಕೃತಿಯಲ್ಲಿ ಕೇಂದ್ರ ಬಿಂದು ಹೌದು. ಈ ಒಂದು ಪಾತ್ರದಿಂದಲೇ ಕೃತಿಯು ಅಷ್ಟೊಂದು ಜನಪ್ರಿಯತೆಯನ್ನು ಕಂಡುಕೊಂಡಿದೆ. ತನ್ನ ಸ್ವಂತಿಕೆಯ ಶೈಲಿಯಿಂದ ರೂಪಗೊಂಡ ಜನಪದ ಶೈಲಿಯ ಈ ಪಾತ್ರವು ಕೃತಿಯಲ್ಲಿ ಪ್ರಧಾನ ಪಾತ್ರವಾಗಿ ಪತ್ತಾರ ಕವಿಯ ದೃಷ್ಠಿಯಲ್ಲಿ ಎದ್ದು ಕಾಣುತ್ತದೆ.

ಲಗಳೆರ ಮನೆತನಕ್ಕೆ ಹಿರಿಯ ಒಡತಿಯಾಗಿ ಬಂದಿರುವ ಈ ಗಂಗಿ ಈರಪ್ಪನ ಧರ್ಮ ಪತ್ನಿಯು ಹೌದು. ಈರಪ್ಪನ ಹೆಂಡತಿಯಾಗಿ, ಬಸವಂತ. ಇರಪಾಕ್ಷಿಯವರಿಗೆ ಹಿರಿಯ ಅತ್ತಿಗೆಯಾದ ಇವಳು ಲಗಳೆರ ಮನೆತನದಲ್ಲಿ ಪ್ರಮುಖ ಸ್ತ್ರೀಯು ಹೌದು.

ಗಂಗಿಯು ವೃತ್ತಾಂತ ತಿಳಿಯಬೇಕಾದರೆ, ಮೂಲತ : ಇವಳು ಸಭ್ಯತೆಯ ನಡೆತೆಗೆ ಹೆಸರುವಾಸಿಯಾದವಳು, ತಾವಾಯ್ತು ತನ್ನ ಮನೆಯಾಯ್ತು ಇಷ್ಟೇ ಇವಳ ಕಾರ್ಯಕ್ಷೇತ್ರ ಗಂಡ ವ್ಯಾಪಾರಸ್ಥ ಮನೆ ಬಿಟ್ಟು ಹೋದರೆ. ಮೂರ್ನಾಲ್ಕು ತಿಂಗಳು ಮನೆ ಕಡೆ ಬರುವುದೆ ಇಲ್ಲ. ಮೈದುನರಂತು ತಾವಾಯ್ತು ತಮ್ಮ ಹೊಲವಾಯ್ತು ಎಂಬಂತೆ ಅವರ ಬದುಕು. ಗಂಗಿಯ ಏಕಾಂತ ಬದುಕು ಜೀವನದಲ್ಲಿ ವಿರಹ ವೇದನೆ ಮತ್ತು ಅಸಾಯಕತೆಯ ಬದುಕು ಇವಳದು. ಶ್ರೀಮಂತಿಕೆಗೇನು ಕೊರತೆ ಇಲ್ಲದ ಮನೆತನ ಗಂಗವ್ವಳ ಪಾಲಿಗೆ ಆದರೆ ಮಾನಸಿಕ ಶ್ರೀಮಂತಿಕೆ ಇಲ್ಲಿ ಇಲ್ಲವೇ ಇಲ್ಲ.

ಈರಪ್ಪ ತಾನು ಯಾವುದೇ ಊರಿಗೆ ಹೋದರು ಗಂಗಿಯ ಸಲುವಾಗಿ, ಅವಳ ಜೊತೆಗಾಗಿ ಪಕ್ಕದ ಮನೆಯ ಪರಮ್ಮನನ್ನು ಹೇಳಿ ಅವಳನ್ನು ನೋಡ್ತಾ ಇರು. ಅವಳ ಜೊತೆಗೆ ನೀ ಇದ್ದರೆ ಒಳ್ಳೆಯದು ಎಂದು ಹೇಳಿ ವ್ಯಾಪಾರಕ್ಕೆ ಹೋಗಿರುತ್ತಾನೆ.

ಗಂಗಿ ಮತ್ತು ಪರವ್ವ ಒಂದು ದಿವಸ ತನ್ನೂರಿನ ಬಸವಣ್ಣನ ಜಾತ್ರೆಗೆ ಅಂದರೆ ತಮ್ಮ ಮನೆಯ ಕುಲದೇವರಿಗೆ ನೈವಿದ್ಯ ಕೊಡವುದಕ್ಕಾಗಿ ತಾನು ಮತ್ತು ಪರವ್ವ ಇಬ್ಬರು ಸೇರಿಕೊಂಡು ಹೋಗುತ್ತಾರೆ. ಅಲ್ಲಿ ಯಾವುದೋ ಒಂದು ಗಳಿಗೆಯಲ್ಲಿ ಗಂಗಿಯ ಕೊರಳಿನ ಸರಗಿಯು ಕಳೆದು ಹೋಗುತ್ತದೆ. ಈ ಸರಗಿಯ ಇದೆ ಊರಿನ ಶ್ರೀಮಂತನಾದ ಸಂಗಣ್ಣನಿಗೆ ಸಿಗುತ್ತದೆ. ಆತ ಇವಳ ರೂಪ ಲಾವಣ್ಯಕ್ಕೆ, ಬೆರಗಾದ ಸಂಗಣ್ಣ ಹೇಗಾದರೂ ಮಾಡಿ ಈಕೆಯ ಸೌಂದರ್ಯ ಸವಿಯಬೇಕೆಂದು, ಅವಳ ಮೇಲೆ ವ್ಯಾಮೋಹಕನಾಗಿ ಬಿಡುತ್ತಾನೆ.

ಪರವ್ವ ಸಂಗ್ಯಾನ ಸಂಬಂಧಿಕಳು, ಬಾಳ್ಯ ತನ್ನ ಜೀವದ ಗೆಳೆಯ ಹೀಗಿರುವಾಗ ತನ್ನ ಆತ್ಮೀಯ ಗೆಳೆಯನಿಸಿಕೊಂಡ ಬಾಳ್ಯಾನನ್ನು ಸರಗಿಯ ನೆಪದಿಂದ ಅದರ ಲಾಭ ಪಡೆಯಲು ಗಂಗಿಯ ಮನೆಗೆ ಕಳುಹಿಸಿರುತ್ತಾನೆ. ಆಗ ಬಾಳ್ಯಾ ಗಂಗಿಯಿಂದ ಬೈಗಳು ತಿಂದು ಬಾಳ್ಯ ತನ್ನ ಮುಖ ಮುದ್ದಿ ಮಾಡಿಕೊಂಡು ಮನೆಗೆ ಮರಳುತ್ತಾನೆ. ಇಷ್ಟಕ್ಕೂ ಬಿಡದ ಸಂಗ್ಯಾ ಗಂಗಿಗೆ ಅತಿ ಸಲಿಗೆಯಿಂದರುವ ಪರವ್ವಳ ಸಹಾಯದಿಂದ ಮುಂದಿನ ಕೆಲಸಕ್ಕೆ ಕೈ ಹಾಕುತ್ತಾನೆ.

ಪರವ್ವ ಸಂಗ್ಯಾನ ಮಾತಿಗೆ ಒಪ್ಪಿರುತ್ತಾಳೆ. ಸರಗಿ ಸಿಕ್ಕಿರುವುದಾಗಿ ಹೇಳಿರುತ್ತಾಳೆ ಮತ್ತು ಸಂಗ್ಯಾನ ಹತ್ತಿರ ಇರುವುದಾಗಿ ಹೇಳುತ್ತದೆ ಮತ್ತು ಸಂಗ್ಯಾನು ಹಾಕಿರುವ ಷರತ್ತಿನ ಬಗ್ಗೆಯು ತಿಳಿಸುತ್ತಾಳೆ.

ಗಂಗಿಯು ಇಲ್ಲಿ ಯಾವುದು ಭಯದ ನೆರಳೋ ? ಅಥವಾ ತನ್ನ ವಿರಹವೇದನೆಯಲ್ಲಿಯೋ ? ಗಂಗಿಯು ಪರವ್ವಳ ಮಾತಿಗೆ ಒಪ್ಪಿ ಸಂಗ್ಯಾನ ಅನೈತಿಕ ಸಂಗಕ್ಕೆ ಒಪ್ಪಿಕೊಳ್ಳುತ್ತಾಳೆ. ಗಂಗಿ ಈ ಸಂಬಂಧದಲ್ಲಿ ಮುಂದುವರಿಯುತ್ತಾಳೆ. ಒಬ್ಬ ಸ್ವಂತಿಕೆಯಿಲ್ಲದ ನಾಯಕಿಯಾಗಿ ಪಾತ್ರಾರ ಕೃತಿಯಲ್ಲಿ ನಿಲ್ಲುತ್ತಾಳೆ.

ಸಂಗ್ಯಾ ಮತ್ತು ಗಂಗಿಯ ಸರಸಲ್ಲಾಪದ ಮಾತುಗಳು ಚಾವಡಿ ಕಟ್ಟೆಗಳಿಗೆ ಹೋಗಿ ಮುಟ್ಟಿರುತ್ತವೆ. ಊರಿನ ಎಲ್ಲಾ ಜನರು ಆಡಿಕೊಳ್ಳುವ ರೀತಿಯಲ್ಲಿ, ಒಂದು ವಿಷಯದ ವಸ್ತುವಾಗಿ ಮೆರೆಯುತ್ತದೆ. ಮುಂದೆ ಒಂದು ದಿನ ಈರಪ್ಪ ತನ್ನ ಮನೆಗೆ ಬಂದಾಗ, ಮನೆಯಲ್ಲಿ ಇಬ್ಬರು ಇರುವಾಗ ಈರಪ್ಪಾ ಬಾಗಿಲ ಕದ ತಟ್ಟುತ್ತಾನೆ. ಇದನ್ನರಿತ ಇಬ್ಬರು ಕಕ್ಕಾ ಬಿಕ್ಕಿಯಾಗಿ ಚಡಪಡಿಸುವ ಘಟನೆಯು ಇಬ್ಬರನ್ನು ದಿಕ್ಕು ತಪ್ಪಿಸಿ ಭಯ ಹುಟ್ಟಿಸುತ್ತದೆ.

ಗಂಗಿಯು ಹೇಗಾದರು ಮಾಡಿ ಸಂಗ್ಯಾನನ್ನು ಬಚ್ಚಿಡುವ ಪ್ರಯತ್ನ ಮಾಡಿದರು ವಿಫಲವಾಗುತ್ತದೆ. ಹಿತ್ತಲ ಬಾಗಿಲಿನಿಂದ ಸಂಗ್ಯಾ ಏಕಕಾಲದಲ್ಲಿ ಒಮ್ಮೆಂದೊಮ್ಮೆ ಜಿಗಿದು ಓಡುತ್ತಾನೆ. ಆವಾಗ ಆತನ ತಲೆಯ ಮೇಲಿರುವ ರುಮಾಲು ಜಾರಿ ಬೀಳುತ್ತದೆ. ಆವಾಗ ಒಳಗಡೆ ಬಂದ ಈರಪ್ಪ ಏನಲೇ ಬಸವಿ ಏನಲೇ ಹಾದರಗಿತ್ತಿ. ಈ ಒಂದು ನಾಟಕ ಎಷ್ಟು ದಿನದಿಂದ ನಡದಿದೆ. ಎಂದಾಗ ಏನಿಲ್ಲಾ ಇಲ್ಲೇನಿದೆ ಎಂದು ಜಾರಿಕೊಳ್ಳಲು ಪ್ರಯತ್ನಿಸುತ್ತಾಳೆ. ಆದರು ಸಿಕ್ಕಿರುವ ತಲೆಯ ಮುಂಡಾಸು ಕಂಡಿರುವ ಈ ಈರಪ್ಪ ಹೆಂಡತಿಯನ್ನು ಕೇಳುತ್ತಾನೆ.

ಏ ಬಸವಿ, ನಿ ಹಾದರ ಮಾಡಕ್ಕ ಹತ್ತಿಯೇನ
ಈ ಮುಂಡಾಸ ಈ ಊರಿನ ಸಾವುಕಾರ ಸಂಗ್ಯಾಂದ
ಅನ್ನುದು ನನ್ನಗ ಗೊತ್ತು ಮುಚ್ಚಬೇಡೆ ಹಾದರಗಿತ್ತಿ

ನಿನ್ನ ಕತಿ ಮುಗಿಸಿ ಬಿಡುತ್ತೆನೆ. ಎಂದಿನಿಂದ ಈ ಸೂಳೆಗಾರಿಕೆ ಮಾಡುತ್ತಿದೆಯೇ ಬಂಗಾಲ ಬಸವಿ ಹೀಗೆ ಅನೇಕ ಅವಾಚ್ಯ ಶಬ್ದಗಳು ಈರಪ್ಪನ ಬಾಯಿಂದ ಸುರಿಮಳೆಯಾಗಿ ಹರಿದು ಬರುತ್ತಿವೆ. ಈರಪ್ಪನ ರೌದ್ರತನ ಅಲ್ಲಿಗೆ ನಿಲ್ಲದೆ ತನ್ನ ತಮ್ಮಂದಿರನ್ನು ಮನೆಗೆ ಕರೆಯಿಸಿ ಅವರನ್ನು ಈರಪ್ಪ ಹಿಗ್ಗಾ-ಮುಗ್ಗಾ ಗದರಿಸುತ್ತಾನೆ. ಇದರಿಂದ ನುಸುಳಲು ಹಲವಾರು ವಿಷಯಗಳು ಹೇಳಿದರೂ ಈರ್‍ಯಾ ನಂಬುವ ಹಾಗಿಲ್ಲ. ಸತ್ಯವನ್ನು ಮರೆ ಮಾಚುವುದು ಯಾರಿಂದಲೂ ಸಾಧ್ಯವಿಲ್ಲ. ಗಂಗಿಯ ಹಾದರದ ಹಂದರ ನೆರಳಾಗಿ ಬಿದ್ದು ಅದರ ಕಂಪು ವಾಸನೆ ಎಲ್ಲೆಡೆಯಲ್ಲಿಯೂ ಹಬ್ಬಿರುವಾಗ ಯಾವ ಭಾಗಗಳಿಂದ ಮುಚ್ಚಿಡಲು ಸಾಧ್ಯವಿಲ್ಲ.

ಗಂಗಿಯು ಮುಂದೆ ಈರ್ಯಾನಿಂದ ದೂರಾಗುವ ಸಮಯಕ್ಕೆ ಕ್ಷಣಗಣನೆ ಮಾತ್ರ. ಗಂಗಿಯನ್ನು ಕೊಲ್ಲಲು ಈರ್ಯಾ ತನ್ನ ತಮ್ಮಂದಿರಿಗೆ ಹೇಳಿದರೂ ಒಂದು ಹೆಣ್ಣನು ಕೊಲ್ಲುವುದು ಅಥವಾ ಸಾಯಿಸುವುದು. ತೀರಾ ಹೀನಾಯಕರ ಎಂದರಿತ ಈರ್ಯ ಅವಳಿಗೆ ತನ್ನ ತೌವರು ಮನೆಗೆ ಕಳುಹಿಸಿಲು ನಿರ್ಧರಿಸಿ ಅವಳ ಸೀರೆಯ ಸೆರೆಗಳನ್ನು ಹರಿದು ಮನೆಯಿಂದ ಬೀದಿಗೆ ತಳ್ಳುತ್ತಾರೆ. ಗಂಗಿಯು ಇಲ್ಲಿ ದುರಂತದ ಪಾತ್ರವಾಗಿ ನಿಲ್ಲುತ್ತಾಳೆ.

ಗಂಗಿಯ ದುರಂತ ಈ ಸಂಗ್ಯಾಬಾಳ್ಯಾ ಕೃತಿಯ ಕೇಂದ್ರ ಬಿಂದುವಾಗಿದೆ. ಗಂಗಿಯೇ ಇಲ್ಲಿ ಪ್ರಧಾನ ಪಾತ್ರದಲ್ಲಿ ನಿಂತಿರುವ ನಾಯಕಿ. ಇವಳಿಗೆ ಕೊನೆಗೆ ಎಲ್ಲಿಯು ಸ್ವಾತಂತ್ರ್ಯ ಇಲ್ಲದ ಸತ್ತ ಜೀವಂತ ಶವದಂತೆ ಈ ಪಾತ್ರವು ಕೃತಿಯ ಕೊನೆಯಲ್ಲಿ ಬಿಂಬಿತವಾಗಿದೆ ಹೀಗಾಗಿ ಗಂಗಿಯು ಇಲ್ಲಿ ಸೋಲುತ್ತಾಳೆ. ಕ್ಷಣಿಕ ತೃಪ್ತಿಯ ಸುಖವು ಮುಂದೆ ಗಂಗಿಗೆ ಬಿಸಿ ತುಪ್ಪವಾಗಿ ಆ ಬಿಸಿ ತುಪ್ಪವೇ ಸ್ವಿಕರಿಸಿ ತನ್ನ ದೇಹವು ಸುಟ್ಟುಕೊಳ್ಳುತ್ತಾರೆ. ಇವಳ ಅನೈತಿಕ ಸಂಬಂಧದ ಛಾಯೆಯು ಮುಂದೆ ಇವಳನ್ನು ನುಂಗಿ ಬಿಡುತ್ತದೆ. ಬೀದಿಯ ಪಾಲಾಗುವ ಗಂಗಿಯ ಜೀವನ ಏನನ್ನು ಸಾಧಿಸದೆ ಇರುವ ಒಂದು ಜೀವಿಯಾಗಿ ಈ ಕೃತಿಗಳಲ್ಲಿ ಅಂತ್ಯವನ್ನು ಕಾಣುತ್ತಾಳೆ.

೨. ಸಂಗ್ಯಾ

ಸಂಗ್ಯಾ ಲಂಪಟ, ಲಫಂಗ, ಆಶೆ ಬುರುಕ, ಕಾಮುಕ, ಎನೆಲ್ಲಾ ಪದಗಳಿಂದ ಗುರುತಿಸಿದರು. ತಪ್ಪಲ್ಲ. ಇಲ್ಲಿ ಮುಖವಾಗಿ ಸಂಗ್ಯಾ ಶ್ರೀಮಂತ ವ್ಯಕ್ತಿ. ತನ್ನ ಶ್ರೀಮಂತಿಕೆಯ ಲಾಭದಲ್ಲಿ ಬಡವರನ್ನು ಕಟ್ಟಿ ಹಾಕುವ ಕುತಂತ್ರದ ಪಾತ್ರ ಇದಾಗಿದೆ. ಹಣವನ್ನು ಇದ್ದುದರ ಮಾತ್ರಕ್ಕೆ ಇಲ್ಲಿ ಪ್ರಮುಖವಾಗಿ ಎರಡು ಪಾತ್ರಗಳನ್ನು ಅಂದರೆ ಪರವ್ವ ಮತ್ತು ಬಾಳ್ಯ ಈ ಎರಡು ಪಾತ್ರಗಳು ಈ ಸಂಗ್ಯಾನ ಕೈಯಲ್ಲಿ ತಮ್ಮ ಅಸ್ತಿತ್ವವನ್ನು ಕಳೆದುಕೊಂಡು, ಆತನ ಕೈಯಲ್ಲಿ ಸೂತ್ರದ ಬೊಂಬೆಗಳಾಗಿ ಆಡುತ್ತಿರುತ್ತವೆ. ಆ ಪಾತ್ರಗಳು ಸಂಗ್ಯಾನು ಹೇಳಿರುವ ಮಾತುಗಳು ಕೇಳುವುದರೊಂದಿಗೆ ಕಾರ್ಯರೂಪಕ್ಕೆ ತರುವಲ್ಲಿಯೂ ಹಗಲಿರಳು ದುಡಿಯುತ್ತವೆ.

ಗಂಗಿಯನ್ನು ಮರಡಿ ಬಸವಣ್ಣನ ಜಾತ್ರೆಯಲ್ಲಿ ಕಂಡ ತಕ್ಷಣವೇ ಅವಳ ರೂಪ ಲಾವಣಕ್ಕೆ ಮಾರು ಹೋದ ಸಂಗ್ಯಾ, ಗಂಗಿಯನ್ನು ಯಾವ ರೀತಿಯಲ್ಲಾದರು ಅವಳ ಮನಸ್ಸನ್ನು ಪರಿವರ್ತಿಸಿ ಅವಳ ಸಂಗವನ್ನು ಮಾಡಲು ಬಯಸುತ್ತಾನೆ. ಇದಕ್ಕೆಲ್ಲಾ ಅನೇಕ ತನ್ನ ತಂತ್ರಗಳನ್ನು ಹೆಣೆಯುತ್ತಲೇ ಮುಂದುವರಿದು. ತನ್ನ ಜೀವದ ಗೆಳೆಯನಾದ ಬಾಳ್ಯನಿಗೆ ಗಂಗಿಯನ್ನು ತನಗೆ ಒಲಿಸುವಂತೆ ಮಾಡು ಎಂದು ಬಾಳ್ಯಾನಿಗೆ ಒತ್ತಾಯದಿಂದ ಅಣಿಗೊಳಿಸುತ್ತಾನೆ. ಬಾಳ್ಯಾನಿಗೆ ಇದು ಸರಿ ಕಾಣಿಸುವುದಿಲ್ಲ. ಆತನ ಮನಸ್ಸು ಈ ಕೆಲಸಕ್ಕೆ ಒಪ್ಪುವುದಿಲ್ಲ. ಆದರೂ ಗೆಳೆಯನ ಋಣದ ಭಾರ ಈತನ ಮೇಲೆ ಬಿದ್ದಿರುತ್ತದೆ. ಈ ಭಾರ ಸಂಗ್ಯಾನಿಂದ ಬಾಳ್ಯಾನ ಮೇಲೆ ಹೇರಿರುತ್ತದೆ. ಹೀಗಾಗಿ ಸಂಗ್ಯಾನ ಮಾತುಗಳು ಅನಿವಾರ್ಯವಾಗಿ ಬಾಳ್ಯಾ ಕೇಳಲೇಬೇಕಾಗುತ್ತದೆ. ಮುಂದೆ ಇದೇ ಮಾತನ್ನು ಗಂಗಿಯಲ್ಲಿಗೆ ಬಂದು ಪ್ರಸ್ತಾಪಿಸಿದಾಗ ಗಂಗಿಯ ಕೈಯಿಂದ ಉಗುಳಿಸಿಕೊಂಡು ಮನೆಗೆ ಬರುತ್ತಾನೆ.

ಇಷ್ಟಾದರು ಸುಮ್ಮನಿರದ ಸಂಗ್ಯಾ ಗಂಗಿಯ ಹತ್ತಿರದಲ್ಲಿರುವ ಪರವ್ವಳ ಮುಖಾಂತರವಾದರು ಈ ಪ್ರಯತ್ನಕ್ಕೆ ಮತ್ತೆ ಉತ್ತೇಜನ ನೀಡಲು ಮುಂದಾಗುತ್ತಾನೆ. ಪರವ್ವಳ ಗಂಗಿಗೆ ಹತ್ತಿರದವಳು. ಎಂದರಿತ ಸಂಗ್ಯಾ ತನ್ನ ಸೋದರತ್ತೆ ಸಂಬಂಧವಾಗಿರುವ ಪರವ್ವಳ ಮನ ಒಲಿಸಿಕೊಳ್ಳಲು ಅವಳು ಮುಂದೆ ಹೋಗಿ ತನ್ನ ಮನದ ಇಚ್ಛೆಯನ್ನು ಪ್ರಸ್ತಾಪಿಸುತ್ತಾನೆ. ಪರವ್ವಳಿಗೆ ಹಣದ ಆಸೆಯು ಇರುತ್ತದೆ. ಸಂಗ್ಯಾ ಗಂಗಿಯನ್ನು ಒಲಿಸಿಕೊಟ್ಟರೆ ನಿನಗೆ ಹಣ, ಬಟ್ಟೆ, ಎಲ್ಲವೂ ಕೋಡುತ್ತೇನೆ. ಎಂದು ಹೇಳಿ ಅವಳನ್ನು ಕೂಡ ತನ್ನ ಕೆಲಸಕ್ಕಾಗಿ ಬಳಸಿಕೊಳ್ಳುತ್ತಾನೆ.

ಪರವ್ವ ಮುಂದೆ ಹೇಗಾದರೂ ಮಾಡಿ ಗಂಗಿಯನ್ನು ಸಂಗ್ಯಾನಿಗಾಗಿ, ಯಾವುದಾದರು ರೀತಿಯಿಂದಾದರು ಸರಿ. ಅವಳನ್ನು ಸಂಗ್ಯಾನಿಗೆ ಒಲಿಯುವಂತೆ ಮಾಡಿದರೆ ಸಾಕು. ನನಗಂತು ಹಣ ಸಿಕ್ಕರೆ ಸಾಕು ಎಂದರಿತ ಪರವ್ವ ಅನೇಕ ರೀತಿಯಲ್ಲಿ ಪ್ರಯತ್ನಿಸಿ ಮುಂದೆ ಗಂಗಿಯನ್ನು ಸಂಗ್ಯಾನಿಗೆ ಒಲಿಯುವಂತೆ ಮಾಡುತ್ತಾಳೆ. ಕೊನೆಗೆ ಸಂಗ್ಯಾ ಗಂಗಿಯನ್ನು ಸೇರಲು ಹಾಕಿರುವ ಯೋಜನೆಯು ಸಾಕಾರಗೊಳ್ಳುತ್ತದೆ. ಮುಂದುವರಿದು ಗಂಗಿಯನ್ನು ಅನುಭವಿಸುತ್ತಾನೆ. ಗಂಗಿಯ ಸಂಗದಿಂದ ಸಂಗ್ಯಾ ತೃಪ್ತನಾಗುತ್ತಾನೆ. ನಿಶ್ಚಿತತೆಯಿಂದ ಸುಖ ಅನುಭವಿಸುತ್ತಿರುವ ಸಂಗ್ಯಾ, ಗಂಗಿಯ ಹಾದರದ ಸುದ್ದಿ. ಇಡಿ ಊರಿಗೂರೆ ಕೇಳಿ ತಿಳಿದು ಪಿಸುಗುಸು ಗುಟ್ಟುತ್ತಿರುತ್ತದೆ. ತಾನು ಒಂದು ಹೆಣ್ಣನ್ನು. ತಪ್ಪು ನೀತಿಯಿಂದ ಅವಳ. ದಾರಿ ತಪ್ಪಿಸಿ ತನ್ನ ಕಾಮ ತೃಷೆಯನ್ನು ತೀರಿಸಿಕೊಳ್ಳುತ್ತಿರುವುದು ಸಂಗ್ಯಾನ ಜೀವನದಲ್ಲಿ ಒಂದು ದುರಂತದ ಛಾಯೆ ಮೂಡಿಸುತ್ತದೆ. ಎಂದರಿಯದ ಸಂಗ್ಯಾ ಹಾಗೆಯೇ ತನ್ನ ಕಾಮಲೀಲೆಗಳಲ್ಲಿ ಕಾಲ ಕಳೆಯುತ್ತಾನೆ.

ಬಳ್ಳಾರಿಯಿಂದ ವ್ಯಾಪಾರ ಮುಗಿಸಿಕೊಂಡು ಮನೆಗೆ ಬರುತ್ತಿರುವ ಈರ್‍ಯಾನ ಸುದ್ದಿ, ಗಂಗಿಗೆ ಆಗಲಿ ಅಥವಾ ಸಂಗ್ಯಾನಿಗೆ ಆಗಲಿ, ಪರವ್ವಳಿಗೆ ಆಗಿರಲಿ, ಯಾರಿಗೂ ಗೊತ್ತಾಗುವುದಿಲ್ಲ. ಮನೆಗೆ ಬಂದವನೆ ನೇರವಾಗಿ ಬಾಗಿಲ ಬಡಿದ ತಕ್ಷಣ ಗಂಗಿ ಮತ್ತು ಸಂಗ್ಯಾ ಮನೆಯಲ್ಲಿ ರಾಸಲಿಲೆಗಳಲ್ಲಿ ಮಂಚದ ಮೇಲೆ ಮಲಗಿರುವವರಿಗೆ, ಒಮ್ಮಿಂದೊಮ್ಮೆ ಎದೆ ಝಲ ಎನ್ನುತ್ತದೆ. ಭಯಭೀತರಾಗುತ್ತಾರೆ. ಗಂಗಿಗೆ ತನ್ನ ಗಂಡ ಈರ್‍ಯಾ ಬಂದಲಿಲ್ಲ ಏನ್ಮಾಡದು ಎಂದು ಚಟಪಡಿಸುತ್ತಾಳೆ. ಸಂಗ್ಯಾನನ್ನು ಚಾಪೆಯ ಸುರುಳಿಯಲ್ಲಿ ಮುಚ್ಚಿಡಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಹೇಗಾದರೂ ಮಾಡಿ ಮನೆಯಿಂದ ಓಡಿ ಹೋಗಬೇಕೆಂದು ಅರಿತ ಸಂಗ್ಯಾ. ಈರ್‍ಯಾನ ಕೈಯಿಂದ ತಪ್ಪಿಸಿಕೊಂಡು ಹಿತ್ತಲಿನನ ಬಾಗಿಲಿನಿಂದ ಹೊರ ಓಡಿ ಹೋಗುತ್ತಾನೆ. ಓಡಿ ಹೋಗುವಾಗ ಆತನ ದುರ್ದೈವ ಎಂಬಂತೆ ತಲೆಯ ಮೇಲಿನ ಮುಂಡಾಸು ಕೆಳಗೆ ಬೀಳುತ್ತದೆ. ಇದನ್ನು ಈರ್‍ಯಾ ಸಂಗ್ಯಾನದೆ ಈ ಮುಂಡಾಸು ಎಂದರಿತು ಮುಂದೆ ಸಂಗ್ಯಾನ ಅಂತ್ಯಕ್ಕಾಗಿ ಯೋಜನೆಯನ್ನು ಸಿದ್ಧಗೊಳಿಸುತ್ತಾನೆ.

ಸಮಾಜ ಕೆಲವು ಚೌಕಟ್ಟುಗಳನ್ನು ರೂಪಿಸಿಕೊಂಡಿದೆ. ಪ್ರತಿಯೊಬ್ಬರು ಸಾಮಾಜಿಕ ಚೌಕಟ್ಟಿನಲ್ಲಿಯೇ ಬದುಕಬೇಕು. ಇಲ್ಲದಿದ್ದರು ಸಮಾಜ ಮನ್ನಿಸುವುದಿಲ್ಲ. ಈ ಚೌಕಟ್ಟುಗಳನ್ನು ಮೀರಿದರೆ ಸಮಾಜದಲ್ಲಿ ಗೌರವ ಮಾನ, ಮರ್ಯಾದೆ ಎಲ್ಲವೂ ಹಾಳಾಗುತ್ತದೆ. ಎಂಬಂತೆ ಗಂಗಿ ಮತ್ತು ಸಂಗ್ಯಾನ ಭವಿಷ್ಯ ಅಂತ್ಯದಲ್ಲಿ ನಿಂತಿರುತ್ತದೆ. ಸಂಗ್ಯಾ ತಪ್ಪು ನೀತಿಯಿಂದ ಗಂಗಿಯ ತಪ್ಪು ದಾರಿನಿಯ ಸಮಾಜದಲ್ಲಿ ಇವಳಿಗೆ ಸ್ಥಾನ ಇಲ್ಲದಂತೆ ಆಗುತ್ತದೆ.

ಸಂಗ್ಯಾ ಈರ್ಯಾನ ದೃಷ್ಟಿಯಿಂದ ಕೈತಪ್ಪಿ ಓಡಿ ಹೋಗಿರುತ್ತಾನೆ. ಓಡಿ ಹೋದರು ಈರ್ಯಾನ ಕೈಯಿಂದ ಓಡುವ ಸ್ಥಿತಿಯಲ್ಲಿಲ್ಲ. ಗಂಗಿಯು ಸಂಗ್ಯಾನಿಂದಾಗಿ ತನ್ನ ಮನೆಯಿಂದ ಬೀದಿಗೆ ಇಳಿಯುವ ಸ್ಥಿತಿಗೆ ಬರುತ್ತಾಳೆ. ಸಂಗ್ಯಾನ ಕಥೆಯಂತು ಇದಕ್ಕಿಂತಲೂ ಬಿಗಡಾಯಿಸುತ್ತದೆ. ಈರ್ಯಾ ತನ್ನ ತಮ್ಮಂದಿರನ್ನು ಕರೆಯಿಸಿ, ನೀವು ಮನೆಯ ಕಡೆ ಗಮನ ಇರಲಿ ಎಂದರೆ, ನೀವು ಇಲ್ಲಿಯವರೆಗೆ ಮಾಡಿರುವುದಾರೂ ಏನು ಎಂದು ಬೈಯುತ್ತಾನೆ. ಆದರೆ ಅವರಿಗೆ ಇದರ ವಾಸನೆಯು ಇರುವುದಿಲ್ಲ. ಈಗ ಅವರ ಬಿಸಿ ರಕ್ತ ಕುದಿಯುತ್ತಿರುತ್ತದೆ. ಹೇಗಾದರೂ ಮಾಡಿ ಸಂಗ್ಯಾನನ್ನು ಕೊಲ್ಲಲೇಬೇಕೆಂದು ನಿರ್ಧರಿಸಿ ಮುಂದಿನ ಹೆಜ್ಜೆ ಇಡುತ್ತಾರೆ.

ಗಂಗಿ ಸಂಗ್ಯಾನನ್ನು ಬದುಕಿಸಬೇಕು ಸಾಯಲು ಬಿಡಬಾರದು ಎಂದು ಮನದಲ್ಲಿಯೇ ಚಡಪಡಿಸುತ್ತಾಳೆ. ಇದಕ್ಕಾಗಿ ಮಾಸ್ತರರಿಂದ ಒಂದು ಪತ್ರವು ಬರೆದು ಕಳಿಸುತ್ತಾಳೆ. ನೀ ಬಾಳ್ಯಾನ ಗೆಳತನ ಬಿಡು ಎಂದು ಹೇಳುತ್ತಾಳೆ. ಆತನಿಂದ ಅಪಾಯವಿದೆಯಂದರೂ ಸಂಗ್ಯಾ ತನ್ನ ಪ್ರೀತಿಯ ಗೆಳೆಯನ ಬಗ್ಗೆ ಸಂಶಯ ಪಡುವುದಿಲ್ಲ. ಊರಿಗೆ ಹೋಗಿ ಗಂಗಿಗೆ ಉಡುಗೋರೆ ಕೊಟ್ಟು ಮನೆಗೆ ಬರುವಾಗ ರಾತ್ರಿಯ ಸಮಯದಲ್ಲಿ ಸಂಗ್ಯಾನನ್ನು ಬಾಳ್ಯಾ ಲಗಳೆಯರ ಕೈಗೆ ಒಪ್ಪಿಸಬೇಕೆಂದು ವಿಚಾರಿಸುತ್ತಾನೆ. ಮೊದಲೇ ಇರಪಾಕ್ಷಿ ಮತ್ತು ಬಸಂತ ಈರ್ಯಾ ಗೌಪ್ಯವಾಗಿ ಕರಾರು ಮಾಡಿಕೊಂಡಿರುತ್ತಾರೆ.

ಬಾಳ್ಯಾ ಮಗನೆ, ಇದಕೆಲ್ಲಾ ನೀನೆ ಕಾರಣ ನೀ ಹ್ಯಾಂಗಾರ ಮಾಡಿ ಊರಿನ ಪಕ್ಕದ ಹಳ್ಳದ ಕಡೆ ಕರೆದುಕೊಂಡ ಬರಬೇಕು. ಇಲ್ಲದಿದ್ದರೇ ಮೊದಲು ನಿನ್ನನ್ನೇ ಕೊಲ್ಲುತ್ತೇವೆ ಎಂದು ಹೆದರಿಸಿರುತ್ತಾರೆ. ಭಯಭೀತನಾದ ಬಾಳ್ಯಾ ನಿಸ್ಸಾಯಕನಾಗಿ ತನ್ನ ಗೆಳೆಯನ ಸಾವಿಗೆ ತಾನೆ ಕಾರಣಿಭೂತನಾಗುತ್ತಾನೆ. ಈರಪ್ಪಾ ಮತ್ತು ಆತನ ಸಹೋದರರ ಸವಾಲಿಗೆ ಹೆದರಿರುವ ಬಾಳ್ಯಾ, ರಾತ್ರಿ ಸಮಯದಲ್ಲಿ ಸಂಗ್ಯಾನನ್ನು ಹಿತ್ತಲಿನ ಸಮೀಪಕ್ಕೆ ಕರೆ ತಂದು ಕೊಲೆಗಡುಕರ ಕೈಗೆ ಬಿಡುತ್ತಾನೆ.

ಘಾತವಾಯ್ತು ಬಾಳ್ಯಾ ನನ್ನ ಜೀವತಿಂದಿಯಲ್ಲೋ ಕಂದಲಿಯ ಬೇಳಕಿಗೆ ಇದರ ಸನ್ನೆದಾಗ ನನ್ನ ಕೊಂದಿಯಲ್ಲೋ, ನೀ ನನ್ನ ಜೀವದ ಗೆಳೆಯ ಅಂತ ತಿಳಿದಿದ್ದಿನಲ್ಲೋ, ಬಾಳ್ಯಾ ನನ್ನ ಕತೆ ಮುಗಿಸಿದಲ್ಲೋ ಎಂದು ಹೆದರಿ ನೀರು ಬೇವರುತ್ತದೆ. ಮೊದಲೇ ಸಿಟ್ಟಿನ ಆವೇಶದಿಂದಿರುವ ಈರಪ್ಪ ಮತ್ತು ಆತನ ಸಹೋದರರು ಉರಿ ಕಣ್ಣಿನಿಂದ ಕ್ರೂರ ಮೃಗಗಳಂತೆ ಈ ಸಂಗ್ಯಾನನ್ನು ನೋಡಿ ಚಿತ್ರ ವಿಚಿತ್ರವಾಗಿ ಕೊಲ್ಲಲು ಮುಂದಾಗುತ್ತಾರೆ.

ಏನಲೇ ಕಳ್ಳ ಸಂಗ್ಯಾ ನೀ ನಮ್ಮ ಮನೆತನದಲ್ಲಿ ಕೈ ಹಾಕಿದಿಯಲ್ಲಲೆ ಮಗನೇ ಭೋಸಡಿ ಮಗನಾ ಎಂದು ಮಾರಮ್ಮನ ಜಾತ್ರೆಯಲ್ಲಿ ಹರಕೆಯ ಕುರಿಯನ್ನು ಕತ್ತರಿಸುವಂತೆ.

ನಮ್ಮ ಅತ್ತಿಗೆಯ ಮೈ ಮುಟ್ಟಿರುವ ಕೈ ಇದೇನಾ,
ನಮ್ಮ ಅಣ್ಣನ ಹೆಂಡತಿಯ ಮೇಲೆ ಕಣ್ಣಿಟ್ಟಿರುವ ಕಣ್ಣು ಇದೇನಾ.
ನಮ್ಮ ಅತ್ತಿಯ ಮೇಲೆ ಬಿದ್ದಿರುವ ಕಾಲು ಇದೇನಾ.
ನಮ್ಮ ಅತ್ತಿಗೆಗೆ ಮುತ್ತು ಇಟ್ಟಿರು ಬಾಯಿ ಇದೇನಾ
ಎಂದು ಅರ್ಭಟಿಸುತ್ತಾ..................!

ಹಂತ ಹಂತವಾಗಿ ಒಂದೊಂದು ಶರೀರದ ಅಂಗವನೆಲ್ಲಾ ಹೆಸರಿಸುತ್ತಾ ಹರಿತವಾದ ಬರ್ಚಿಯಿಂದ, ಕತ್ತಿಯಿಂದ ಕತ್ತರಿಸುತ್ತಾ (ಕಡಿಯುತ್ತಾ) ಹೋಗುತ್ತಾರೆ. ಕ್ಷಣ ಕ್ಷಣಕ್ಕೆ ಚಿತ್ರ ಹಿಂಸೆಯಿಂದ ಒಂದು ಶರೀರದ ಭಾಗಗಳನ್ನು ಕತ್ತರಿಸಿರುತ್ತಾರೆ. ಕೊನೆಗೆ ಸಂಗ್ಯಾನ ರುಂಡಾ, ತುಂಡು ತುಂಡಾಗಿ ಪ್ರಕೃತಿಯ ಧರೆಗೆ ಬೀಳುತ್ತದೆ.

ಹೀಗೆ ಭಯಾನಕವಾದ ರೀತಿಯಲ್ಲಿ ಸಂಗ್ಯಾನ ಅಂತ್ಯ ರುದ್ರ ನಾಟಕದ ಚಿತ್ರಣವನ್ನು ಬಿಂಬಿಸುವಂತೆ, ತನ್ನ ಸಾವಿನ ಇತಿಹಾಸವನ್ನು ತಾನೆ ಬರೆದುಕೊಂಡು ಸಂಗ್ಯಾ ಯಾರೂ ಸಹಾಯಕ್ಕೆ ಬರದೆ ಹರಕೆಯ ಕುರಿಯಂತೆ ಛಿದ್ರಛಿದ್ರವಾಗಿ ತುಂಡರಿಸಿ ತನ್ನ ಪ್ರಾಣವನ್ನು ಕಳೆದುಕೊಳ್ಳುತ್ತಾನೆ.

ಈರಪ್ಪನ ಸಹೋದರರಿಂದ ತನ್ನ ಅನೈತಿಕ ಸಂಬಂಧದ ಫಲಿತಾಂಶ ಈ ರೀತಿಯಾಗಿ ಪ್ರಕಟಗೊಳ್ಳುತ್ತದೆ. ತನ್ನ ಮನಸ್ಸು ಹಿಡಿತದಲ್ಲಿಟ್ಟುಕೊಳ್ಳಲು ಆಗದ ಸಂಗ್ಯಾ ಸತ್ತು ಹೋಗುವ ಒಂದು ದುರಂತ ಜೀವನ ಇದಾಗಿದೆ. ಭಯಾನಕವಾದ ರೀತಿಯಲ್ಲಿ ಸಂಗ್ಯಾ ಕೊಲೆಯಾಗುತ್ತಾನೆ. ಇದು ಸಂಗ್ಯಾನ ಪಾತ್ರ ಚಿತ್ರಣ ಕೃತಿಯಲ್ಲಿ ಕಂಡುಬರುತ್ತದೆ.

---

1) ಸಂಗ್ಯಾ ಬಾಳ್ಯಾ ಚಲನ ಚಿತ್ರದ ಸಂಭಾಷಣೆ

ಉಪ ಪಾತ್ರಗಳು

1. ಈರಪ್ಪಾ

ಪತ್ತಾರ ಕವಿಯ ದೃಷ್ಟಿಯಲ್ಲಿಯೂ, ಅಷ್ಟೆ ಮತ್ತು ಸಹೃದಯರ ದೃಷ್ಟಿಯಲ್ಲಿಯೂ ಅಷ್ಟೇ, ಬರಿ ವ್ಯಾಪಾರದ ಗುಂಗಿನಲ್ಲಿರುವ ಲಗಳೆಯರ ಮನೆತನದ ಲಗಾಮಿನ ವ್ಯಕ್ತಿ ಎಂದರೆ ಈತನೆ. ಲಗಾಮು ಎಂದರೆ ಕುದುರೆಗೆ ಹಾಕುವ ಕಡಿವಾಣ, ದಾರ, ಎಂದರ್ಥ ಕೂಡುತ್ತದೆ. ಆದರೆ ಇಲ್ಲಿ ಲಗಳೆಯರ ಮನೆತನದಲ್ಲಿ ಈತನೆ ಪ್ರಮುಖ ವ್ಯಕ್ತಿ. ಈತನ ಮಾತುಗಳು ತನ್ನ ತಮ್ಮಂದಿರು ಚಾಚು ತಪ್ಪದೇ ಪಾಲಿಸುವವರು ಆಗಿದ್ದಾರೆ. ಅಣ್ಣನ ಮಾತುಗಳು ಎಂದರೆ ಅದೇ ಇವರಿಗೆ ಮೊದಲ ಮಾತು ಹೌದು, ಕೊನೆಯ ಮಾತು ಹೌದು. ಹೀಗಾಗಿ ಈರಪ್ಪನು ತನ್ನ ವಯ್ಯಕ್ತಿಕ ಸ್ವಂತಿಕೆಯನ್ನು ಉಳಿಸಿಕೊಂಡು ಬಂದವನು. ಆದರೆ ಇವನು ತನ್ನ ಕೈ ಹಿಡಿದ ಹೆಂಡತಿಯ ಮನಸ್ಸು ಅರಿಯದ ವ್ಯಕ್ತಿಯಾಗಿಯು ಸಂಗ್ಯಾ ಬಾಳ್ಯಾ ಕೃತಿಯಲ್ಲಿ ಎದ್ದು ಕಾಣುತ್ತದೆ.

ಗಂಗಿಯನ್ನು ಈರಪ್ಪ ಮದುವೆಯಾಗುತ್ತಾನೆ. ಗ್ರಾಮೀಣ ಸಂಸ್ಕೃತಿಯಂತೆ ಮನೆಗೆ ಹಿರಿಯನಾದವನು ಅಂದಾಗ, ಅವನಿಗೆ ಮೊದಲೆ ಮದುವೆ ಆಗಬೇಕು. ಹಾಗಂತ ಲಗಳೆರ ಮನೆತನದ ಹಿರಿಯ ವ್ಯಕ್ತಿ ಇವನಾದುದರಿಂದ ಸಂಪ್ರದಾಯದಂತೆ ಈತನದೆ ಮೊದಲು ಮದುವೆಯಾಗುತ್ತದೆ. ಮೊದಲೇ ಹಿರಿಯ ಅಣ್ಣ ಮನೆಯ ಎಲ್ಲಾ ಜವ್ವಾದಾರಿಯು ಈತನ ಮೇಲೆ ಇರುತ್ತದೆ. ಶ್ರೀಮಂತಿಕೆಯ ಮನೆತನ ಸಿಕ್ಕಾಪಟ್ಟೆ ಆಸ್ತಿ ಹೊಲಗದ್ದೆ, ನೋಡಿಕೊಳ್ಳುವ ಜವಾಬ್ದಾರಿ ತನ್ನ ಸಣ್ಣ ತಮ್ಮಂದಿರಿಗೆ ವಹಿಸಿಕೊಟ್ಟು ತಾನು ಮಾತ್ರ ವ್ಯಾಪಾರ ಮುಂದುವರಿಸುತ್ತಾನೆ.

ಈರಪ್ಪನಿಗೆ ಮದುವೆಯಾಗಿದೆ, ಸುಂದರವಾದ, ಸೌಂದರ್ಯವತಿಯಾದ ಬೊಗಸೆ ಗೆನ್ನೆಗಳಿಂದ ತುಂಬಿ ತುಳುಕುವ ಯೌವನ, ಎಂಥವರ ಮನಸ್ಸು ಸೂರೆಗೊಳ್ಳುವ ಅಪ್ಪಟ ಚಲುವೆ, ಈ ಸಂದರ್ಭದಲ್ಲಿ ಹೇಳುವುದಾದರೆ ಇಡಿ ಗ್ರಾಮದಲ್ಲಿಯೇ ಅಪರೂಪದ ಸುಂದರಿ ಎಂದರೆ ಈ ಗಂಗಿ ಮನೆಯಿಂದ ಹೊರ ಬಂದವಳೇ ಇಲ್ಲ. ಒಂದು ಸಲ ಮರಡಿ ಬಸವಣ್ಣನ ಜಾತ್ರೆಗೆ ಬಂದವಳೇ ಅದೆ ಮೊದಲು ಇವಳ ಸೌಂದರ್ಯಕ್ಕೆ ಮಾರು ಹೊದವರು ಅನೇಕರು ಹಾಗೆ ಸಂಗ್ಯಾನು ಒಬ್ಬ ಇಂಥ ನಿರಾಭರಣ ಸೌಂದರ್ಯದ ಖನಿ ಗಂಗಿಯನ್ನು ಮದುವೆಯಾದ ಹೊಸದರಲ್ಲಿಯೇ, ಮನೆಯಲ್ಲಿ ಒಬ್ಬಂಟಿಯಾಗಿ ಬಿಟ್ಟು ವ್ಯಾಪಾರಕ್ಕೆಂದು ಬಳ್ಳಾರಿಯಡೆಗೆ ಹೋಗಿರುತ್ತಾನೆ. ತನ್ನ ಹೆಂಡತಿಯ ಬಗ್ಗೆ ಕಾಳಜಿ ಇಲ್ಲದಂತೆ ನಡೆದುಕೊಳ್ಳುವ ಒಬ್ಬ ಸ್ತ್ರೀ ಸಂವೇದನೆ ಇಲ್ಲದ ಪ್ರಾಣಿ ಎಂದೆ ಹೇಳಬಹುದು.

ನನ್ನ ಹೆಂಡತಿಯ ಮನಸನ್ನು ಅರಿಯದ ಒಬ್ಬ ಅವಿವೇಕಿಯ ಸ್ಥಾನದಲ್ಲಿ ತನ್ನನ್ನು ತಾನೆ ಗುರುತಿಸಿಕೊಂಡಿದ್ದಾನೆ. ಮನೆ ಬಿಟ್ಟು ಹೋದರೆ ಮುಗಿಯಿತು. ತಿಂಗಳುಗಟ್ಟಲೇ ಹಾಗೆಯೇ ಹೊರಟು ಹೋಗುವವನು. ಮನೆಗೆ ಯಾವಾಗ ಬರುತ್ತಾನೆ. ಎನ್ನುವ ಸ್ಥಿತಿಯಲ್ಲಿ ಇರದವನು. ಮನೆಯಲ್ಲಿ ಒಂದು ಜೀವಿ ನನಗಾಗಿ ಕಾಯುತ್ತಿದೆ. ನಾ ಅಲ್ಲಿಗೆ ಹೋಗಬೇಕು ಅವಳಿಗೂ ಆಶೆ-ಆಕಾಂಕ್ಷೆಗಳಿರುತ್ತವೆ. ಎಂದು ಅರಿಯದವನು.

ಮನೆಯ ಬಗ್ಗೆ ಅಂದರೆ ತನ್ನ ಹೆಂಡತಿಯ ಬಗ್ಗೆ ಸ್ವಲ್ಪವು ಅರಿಯದವನಾಗಿ, ತನ್ನ ಬದುಕನ್ನು ತಾನು ಕೂಡ ಹಾಳು ಮಾಡಿಕೊಳ್ಳುವುದರಲ್ಲಿ ಭಾಗಿಯಾಗಿದ್ದಾನೆ. ಗಂಗಿಯ ವಿರಹವೇದನೆಯೋ ಅಥವಾ ತನ್ನ ಕಾಮತೃಷೆಯೋ ಎನ್ನುವ ಹಾಗೆ ಸಂಗ್ಯಾನ ಸಂಗ ಬಯಸಿದ ಗಂಗಿ. ಅದರಲ್ಲಿಯೇ ತೃಪ್ತಿಯನ್ನು ಕಾಣುತ್ತಾಳೆ. ಗಂಡನ ರಸಿಕತೆಯಿಲ್ಲದ ಬದುಕು ಒಮ್ಮೊಮ್ಮೆ ಇವಳಿಗೆ ಬೇಸರ ತರುತ್ತದೆ. ಸಂಗ್ಯಾ - ಗಂಗಿಯ ಪ್ರಣಯ ಸಲ್ಲಾಪಗಳು ಮೊಳಕೆಯಾಗಿ ಒಡೆದು, ದೊಡ್ಡ ಕವಲಾಗಿ,ಟೊಂಗೆಗಳಾಗಿ ಬಿಟ್ಟವೆ. ಅಲ್ಲಿಯವರೆ ಈ ಸುದ್ದಿ ಮನೆಯ ಗಂಡ ಮತ್ತು ಮೈದುನರಿಗೆ ಕಿಂಚಿತವು ಗೊತ್ತಿರಲಿಲ್ಲ. ದುರ್ದೈವ ಎಂಬಂತೆ ಒಂದು ದಿವಸ ಗಂಗಿ ಮತ್ತು ಸಂಗ್ಯಾ ಏಕಾಂತವಾಗಿ ಕಾಲಕಳೆಯುವಾಗ ಈರಪ್ಪನ ಕೈಗೆ ಸಿಕ್ಕಿ ಹಾಕಿಕೊಳ್ಳುತ್ತಾರೆ. ಆವಾಗ ಅರಿವಾಗುತ್ತದೆ ಈರಪ್ಪನಿಗೆ ತನ್ನ ತಪ್ಪಿನ ಮಾತನ್ನು ತನ್ನ ಹೆಂಡತಿಗೆ ಹೇಳುತ್ತಾನೆ.

ನಿನಗೆ ತಿಂಡಿ ಎದ್ದಾಗ ನಾ ತುರಸಿಲ್ಲ
ನಾ ತುರುಸಿದರೆ, ಈ ಗತಿಸಿ ಆಗುತ್ತಿರಲಿಲ್ಲ............1

ಎಂದು ಖುದ್ದಾಗಿ ತಾನೆ ಈ ಮಾತನ್ನು ಆಡುತ್ತಾನೆ. ಅಂದ ಮೇಲೆ ಈರಪ್ಪನಿಗೆ ತನ್ನ ತಪ್ಪಿನ ಅರಿವಾಗಿದೆ. ಇಲ್ಲಿ ಆತನ ತಪ್ಪು ತನ್ನ ಬಾಯಿಯಿಂದಲೇ ಹೊರಬರುತ್ತದೆ. ನಿನಗೆ ನಾನು ಸುಖ ಕೊಟ್ಟರೆ ಈ ಸಮಸ್ಯೆಯೇ ಇರುತ್ತಿರಲಿಲ್ಲ. ಇದು ನನ್ನ ತಪ್ಪು. ಎಂದು ಆಡಿಕೊಳ್ಳುವ ಮಾತು. ಈ ರೀತಿ ತನ್ನ ತಪ್ಪನ್ನು ಒಪ್ಪಿಕೊಳ್ಳುತ್ತಾ. ಗಂಗಿಯನ್ನು ತನ್ನ ಮನೆಯಿಂದ ಹೊರ ಹಾಕುತ್ತಾನೆ. ಗಂಗಿಯನ್ನು ಮನೆಯಿಂದ ಹೊರ ಹಾಕುವಾಗ ಈರಪ್ಪನಿಗೂ ಆಂತರಿಕವಾದ ನೋವು ಇದೆ. ಈ ಒಂದು ಕಾರಣಕ್ಕೆ ಗಂಗಿ ಒಬ್ಬಳೆ ಹೋಣೆಗಾರಳಲ್ಲ. ನಾನೂ ಕೂಡ ಎಂದು ಆತನ ಹೃದಯ ಹೇಳುತ್ತಿರುತ್ತದೆ. ಆದರೆ ಕ್ಷಮಿಸುವ ಹಾಗಿಲ್ಲ. ಹೀಗಾಗಿ ಮುಂದೆ ಇವನು ಈ ಕೃತಿಯಲ್ಲಿ ಒಬ್ಬ ಕೊಲೆಗಡುಕನಾಗಿ ಈರ್ಯಾ ನಿಲ್ಲುತ್ತಾನೆ.

ತನ್ನ ತಮ್ಮಂದಿರೊಂದಿಗೆ ಸೇರಿಕೊಂಡು ಈರಪ್ಪ ತನ್ನ ಹೆಂಡತಿಯೊಂದಿಗೆ ಅನೈತಿಕ ಸಂಬಂಧದ ಸವಿ ನೋವು ಹಂಚಿಕೊಳ್ಳುತ್ತಾನ.

---

1) ಸಂಗ್ಯಾ ಬಾಳ್ಯಾ ಚಲನ ಚಿತ್ರದ - ಒಂದು ಸಂಭಾಷಣೆ.

ಸಾವುಕಾರ ಸಂಗ್ಯಾನ ಕೊನೆಯ ದಿನಗಳಿಗಾಗಿ ಕಾಯುತ್ತಾರೆ. ಹೇಗಾದರೂ ಮಾಡಿ ನಮ್ಮ ಮನೆತನದ ಮರ್ಯಾದೆ ತೆಗೆದಿರುವ ಸಂಗ್ಯಾನನ್ನು ಕೊಲೆ ಮಾಡಲೇ ಬೇಕು. ಎಂದು ನಿರ್ಧರಿಸಿ ಇದಕ್ಕೆ ಸಮಯ ನಿಗದಿ ಮಾಡಿ, ಸಂಗ್ಯಾನ ಗೆಳೆಯನಾದ ಬಾಳ್ಯಾನ ಸಹಾಯದಿಂದಲೇ, ಊರ ಸಮೀಪದ ಹಳ್ಳದ ದಡದಲ್ಲಿ ನಡು ರಾತ್ರಿಯಾಗಿ ಈರಪ್ಪ ತನ್ನ ತಮ್ಮಂದಿರೊಂದಿಗೆ ಸಂಗ್ಯಾನ ರುಂಡ(ತಲೆ) ಕತ್ತರಿಸುತ್ತಾರೆ. ಸಂಗ್ಯಾನ ಕಥೆಯು ಪೂರ್ತಿಭಾಗ ಈರಪ್ಪನ ಕೈಯಲ್ಲಿಯೇ ಆಗುತ್ತದೆ.

ಸಂಗ್ಯಾನ ಸಹೋದರತ್ತೆಯಾದ ಪರವ್ವ ಅಂದರೆ ಕುಂಟಲಗಿತ್ತಿ ಪರವ್ವ. ತನ್ನ ಸೋದರಳಿಯ ಸಂಗ್ಯಾನ ಕೊಲೆಯಾದುದರ ಬಗ್ಗೆ ಅರ್ಭಟಿಸುತ್ತಾಳೆ. ಅಂದಿನ ಬ್ರಿಟಿಷ ಸರಕಾರದ ಆಡಳಿತ ಇರುವ ಬೈಲಹೊಂಗಲದ ಬ್ರಿಟಿಷ ಅಧಿಕಾರಿ ಎದುರು ಖುದ್ದಾಗಿ ಸಂಗ್ಯಾನ ಕೊಲೆಯಾದುದರ ಬಗ್ಗೆ ಫಿರ್ಯಾದಿ ಕೊಡುತ್ತಾಳೆ.

ಪರವ್ವ : ಯಾರ ಕೊಂದಾರೋ ಸಂಗ್ಯಾನ್ನಾ !
ನನ್ನ ಅಳಿಯಾನ !
ಸಂಗ್ಯಾನ ಕೊಂದವರ
ಚೆಂಡಿಯ ಚಿವುಟಲಿ
ಸಂಗಪ್ಪ ಎನ್ನ ಅಳಿಯ !
ಬಂಗಾರದಂಥವಾ
ಅರ್ಜಿಯ ಹಾಕ್ತಿನಿ
ಮಾಮಲೆದಾರಗ

ಈರ್ಯಾ : ಯಾರ ಮ್ಯಾಲ ಅರ್ಜಿ ಮಾಡಲೆ !
ಹುಚ್ಚ ಹಾದರಗಿತ್ತಿ
ಹಣಾ ನಿಂದ ಎಷ್ಟೈತೆ ತೆಗೆ
ನೋಡೋಣಾ ಹೊಯ್ಮಾಲಿ....

ಎಂದು ಸಿಟ್ಟಿನ ಭರದಲ್ಲಿ ಅರ್ಭಟಿಸುತ್ತಾನೆ. ಮುಂದೆ ಸರಕಾರದ ಕಣ್ಣಲ್ಲಿ ಒಬ್ಬ ಅಪರಾಧಿಯಾಗಿ ನಿಂತು ಈರಪ್ಪ ಗಲ್ಲು ಶಿಕ್ಷೆಗೆ ಗುರಿಯಾಗಿ ತನ್ನಿ ಅಂತ್ಯವನ್ನು ಕಾಣುತ್ತಾನೆ.

ಈ ಒಂದು ಪಾತ್ರ ಇಲ್ಲಿ ಮೌಲ್ಯಗಳನ್ನು ಅರಿಯದ ರೀತಿಯಲ್ಲಿ ಚಿತ್ರಣಗೊಂಡಿದೆ. ಹೀಗಾಗಿ ತನ್ನ ಸ್ಥಿತಿಯು ಕೂಡ ತಾನೆ ಅಧೋಗತಿಗೆ ತಂದು ಕೊಂಡ ಪಾತ್ರ ಈರಪ್ಪನದಾಗಿದೆ. ಎಂದು ಇಲ್ಲಿ ವಿಶ್ಲೇಷಿಸಬಹುದು.

---

1) ಸಂಗ್ಯಾ ಬಾಳ್ಯಾ : ಪತ್ತಾರ ರಚಿತ ಪುಟ ಸಂಖ್ಯೆ : 88

2. ಇರಪಕ್ಷಿ ಮತ್ತು ಬಸವಂತ

ಸಂಗ್ಯಾ ಬಾಳ್ಯಾ ಕೃತಿಯಲ್ಲಿ ಅಷ್ಟೊಂದು ವಿಶೇಷತೆಯಾಗಿ ಕಂಡು ಬರದ ಪಾತ್ರಗಳು, ಪಾತ್ರಗಳು ಸಂಗ್ಯಾನ ಅಂತ್ಯ(ಕೊಲೆಯ) ಸನ್ನಿವೇಷದಲ್ಲಿ ಮಾತ್ರ ಕಂಡುಬರುತ್ತವೆ. ಈರ್ಯಾನ ತಮ್ಮಂದಿರಾದ ಇರಪಾಕ್ಷಿ ಮತ್ತು ಬಸವಂತ ಇವರು ಕೃತಿಯಲ್ಲಿ. ಅಷ್ಟೊಂದು ಪ್ರಮುಖ ಸ್ಥಾನ ಇವರಿಗೆ ಸಿಕ್ಕಿಲ್ಲ.

ಈರಪ್ಪ ಮೊದಲೇ ವ್ಯಾಪರಸ್ಥ, ವ್ಯಾಪಾರಕ್ಕೆಂದು ತಿಂಗಳುಗಟಲೆ ಮನೆ ಬಿಟ್ಟು ಹೋಗುವವನು. ಆತ ತಿರುಗಿ ಮನೆಗೆ ಬರುವವರೆಗೂ ಹೊಲ ಮತ್ತು ಮನೆಯ ಜವಾಬ್ದಾರಿಯನ್ನು ಈ ಇಬ್ಬರು ಅಣ್ಣ ತಮ್ಮಂದಿರು ನಿಭಾಯಿಸುವವರು. ತಮ್ಮ ಹಿರಿಯ ಅತ್ತಿಗೆಯಾದ ಗಂಗಮ್ಮನ ಪ್ರೀತಿ ವಾತ್ಸಲ್ಯಗಳಿಗೆ ಪಾತ್ರರಾಗಿರುವ ಈ ಇರಪಾಕ್ಷಿ ಮತ್ತು ಬಸವಂತರು. ಅತ್ತಿಗೆಯಂದರೆ ಅತಿಯಾದ ಪ್ರೀತಿಯಿಂದ ಕಾಣುವವರು. ಅದೇ ರೀತಿ ಗಂಗಿಯು ಕೂಡ ಇವರನ್ನು ಅಕ್ಕರೆಯಿಂದ ನೋಡಿಕೊಳ್ಳುವವಳು.

ಮುಂದೆ ಗಂಗಿಯ ಜೀವನದಲ್ಲಿ ಅನೈತಿಕ ಸಂಬಂಧದ ಹೋಗೆಯು ಕಿಚ್ಚಾಗಿ, ಇಡಿ ಊರಿನ ತುಂಬೆಲ್ಲಾ ಹಬ್ಬಿದಾಗ, ತನ್ನ ಅಣ್ಣನಾದ ಈರಪ್ಪ ಇವರಿಬ್ಬರನ್ನೂ ಕರೆದು ಬೈಯುತ್ತಾನೆ.

ನಾನು ವ್ಯಾಪಾರ ಮುಗಿಸಿ ಮನೆಗೆ

ಬರುವವರೆಗೂ ಮನೆ ಕಡೆ ಗಮನ ಇರಲಿ

ಎಂದರೆ ನೀವು ಮಾಡಿರುವುದೇನ್ರಲೇ. ತಮ್ಮಗಳಿರಾ

ಎಂದು ಕೋಪದಿಂದ ಗದರಿಸುತ್ತಾನೆ. ಇದನ್ನರಿತ ಇಬ್ಬರು ಅಣ್ಣ ತಮ್ಮಂದಿರು ತನ್ನ ಅಣ್ಣನ ಅಜ್ಞೆಯಂತೆ ನಡೆಯಲು ಮುಂದಾಗುತ್ತಾರೆ. ಹೇಗಾದರೂ ಮಾಡಿ ನಿಮ್ಮ ಅತ್ತಿಗೆಯನ್ನು ಮೋಹಿಸಿರುವ ಆ ಸಂಗ್ಯಾನನ್ನು ಕೊಲೆ ಮಾಡಬೇಕು. ಏನೇ ಆದರೂ ಸರಿ ಸಂಗ್ಯಾ ಇನ್ಮುಂದೆ ಈ ಭೂಮಿಯ ಮೇಲೆ ಇರಕೂಡದು ಎಂದು ಕಟ್ಟಪ್ಪಣೆ ಮಾಡುತ್ತಾನೆ. ತನ್ನ ಅಣ್ಣನ ಆಜ್ಞೆಯನ್ನು ಪಾಲಿಸಬೇಕು ಎಂದು ಈ ಕೆಲಸ ಮಾಡಲು ನಿರ್ಧರಿಸುತ್ತಾರೆ.

ಬಾಳ್ಯಾನೆ ಈ ಕೃತ್ಯದ ರೂವಾರಿ ಮೇಲಾಗಿ ಸಂಗ್ಯಾನ ಗೆಳೆಯನು ಹೌದು. ಹೀಗಾಗಿ ಈ ಬಸವಂತ ಮತ್ತು ಇರಪಕ್ಷಿ ಇಬ್ಬರು ಸೇರಿಕೊಂಡು ಬಾಳ್ಯಾನನ್ನು ಹೆದರಿಸುತ್ತಾರೆ.

ಎಲೆ ಬಾಳ್ಯಾ ನಿನೆ ಏನೆಲೇ ಮಗನ

ನಿನ್ನ ಗೆಳೆಯ ಸಂಗ್ಯಾ ಎಲ್ಲಿ ಅದನ

ಅವನನ್ನು ಹೇಗಾದರೂ ಮಾಡಿ ನಮಗೆ ಒಪ್ಪಿಸಬೇಕು. ಇಲ್ಲದಿದ್ದರೆ ನಿನ್ನ ಕತೆ ಮುಗಿಯಿತು ಅಂತ ತಿಳಿಯಲೇ, ಬಾಳ್ಯಾ, ನಮ್ಮಿಂದ ನಿನೆಗೆ ಏನಾದರೂ ಸಹಾಯ ಬೇಕಾದರು ಕೇಳಲೇ ಬಾಳ್ಯಾ. ನಾವು ಕೊಡಲು ಸಿದ್ಧ ಇಲ್ಲ ಅಂದರೆ ನಿನ್ನ ಕತೆಯು ಮುಗಿಸಿ ಬಿಡುತ್ತೇವೆ. ಎಂದು ಹೆದರಿದಾಗ. ಬಾಳ್ಯಾ ಅವರಿಂದ ಕೆಲವೊಂದು ವಸ್ತುಗಳು ಪಡೆಯುತ್ತಾನೆ. ಬಂಗಾರ, ಎತ್ತು, ಎಮ್ಮೆ ಹೀಗೆ ಕೆಲವು ಆಸ್ತಿಗಳನ್ನು ತೆಗೆದುಕೊಂಡು, ಬಾಳ್ಯಾ ಸಾಯಂಕಾಲದ ಸಂಜೆಯ ಸಮಯಕ್ಕೆ ಸಂಗ್ಯಾನನ್ನು ದಾರಿ ತಪ್ಪಿಸಿ ಬೇರ ಕಡೆಗೆ ಕರೆದುಕೊಂಡು ಹೋಗುತ್ತಾನೆ.

ಮೊದಲೇ ಆತ್ಮೀಯನಾಗಿದ್ದ ಸಂಗ್ಯಾನ, ಬಾಳ್ಯಾನ ಮಾತುಗಳನ್ನು ಕೇಳಿಕೊಂಡು ಅವನು ಹೇಳಿದಂತೆ ಗ್ರಾಮದ ಹತ್ತಿರದ ಹಳ್ಳದ ಕಡೆ ಬಂದು ಬಿಡುತ್ತಾನೆ. ಮೊದಲೇ ಯೋಜನೆ ಹಾಕಿದಂತೆ ಸಂಗ್ಯಾನ ಕೊಲೆಗಾಗಿ ಕಾಯುತ್ತಿದ್ದ ಈರಪ್ಪ, ಇರಪಾಕ್ಷಿ ಮತ್ತು ಬಸವಂತರು ಒಮ್ಮಿಂದೊಮ್ಮೆ ಸಂಗ್ಯಾನ ಮೇಲೆ ಎರಗುತ್ತಾರೆ.

ಈರಪ್ಪನ ಆಜ್ಞೆಯಂತೆ ಇರಪಾಕ್ಷಿ ಮತ್ತು ಬಸವಂತರೂ ಅಡ್ಡಾದಿಡ್ಡಯಾಗಿ ಮನಬದಂತೆ ಕೊಚ್ಚಿ ಸಂಗ್ಯಾನನ್ನು ಕೊಲೆ ಮಾಡುತ್ತಾರೆ. ಹೀಗೆ ಕೊಲೆ ಮಾಡುವಲ್ಲಿ ಪ್ರಮುಖವಾಗಿ ಎದ್ದು ಕಾಣುವ ಈ ಇರಪಾಕ್ಷಿ ಮತ್ತು ಬಸವಂತನ ಪಾತ್ರ. ಮತ್ಯಾವ ಸನ್ನಿವೇಷಗಳಲ್ಲಿ ಅಷ್ಟೊಂದು ಪ್ರಮುಖವಾಗಿ ಕಾಣದ ಪಾತ್ರಗಳಾಗಿವೆ. ಹೀಗಾಗಿ ಸಂಗ್ಯಾ ಬಾಳ್ಯಾ ಕೃತಿಯಲ್ಲಿ ಅಲ್ಪ ಪ್ರಮಾಣದ ಪಾತ್ರಗಳಾಗಿ ಕಂಡುಬರುತ್ತವೆ.

4. ಪರವ್ವಾ(ಪರವ್ವ)

ಪರಮ್ಮ ಇದು ಇವಳ ಸೂಕ್ಷ್ಮ ಹೆಸರು, ಆದರೆ ಕೃತಿಯಲ್ಲಿ ಮಾತ್ರ ಆಡು ಭಾಷೆಯ ರೂಡಿಯಾಗಿ ಕೃತಿಯ ತುಂಬೆಲ್ಲಾ ಇವಳನ್ನು ಪರವ್ವ ಪರವ್ವ, ಎನ್ನುತ್ತಲಿಯೇ ಬಳಕೆಯಾಗಿದೆ. ಗ್ರಾಮೀಣ ಭಾಷೆಯ ರೂಢಿಯಲ್ಲಿ ಹೀಗೆ ಕರೆಯುವುದು. ಇಂದಿಗೂ ರೂಡಿಯಲ್ಲಿದೆ. ಶುದ್ದವಾದ ಹೆಸರನ್ನು ಅಶುದ್ಧವಾಗಿ ಬಳಕೆಯಾಗುವುದು, ಗ್ರಾಮ ಭಾಷೆಯ ವೈಶಿಷ್ಟೆ

ಬೆಳಗಾಂವ ಜಿಲ್ಲೆಯ ಭಾಗಗಳಲ್ಲಿ ಕೃತಿಗಳು ಅತಿ ಪ್ರಾಮುಖ್ಯವಾಗಿ ಬೆಳೆದು ಬರಲು ಕಾರಣ ಭೂತರೆಂದರೆ ಪತ್ತಾರರು ಇವರು.

> ಹಾಡು ಮತ್ತು ತರ್ಕ ಬದ್ದ ನಾಟಕಗಳನ್ನು ಸಂಭಾಷಣೆ ಸೇರಿಸಿ
> ಸಣ್ಣಾಟ ರಚಿಸಿದ ಮೊದಲಿಗರು.............!

ಮತ್ತು ಅತಿ ಕಡಿಮೆ ಪಾತ್ರಗಳು ಸೃಷ್ಟಿಸಿ ಸಣ್ಣಾಟ ಆಡಿಸುವ ವಿಶಿಷ್ಟ ಶೈಲಿ ಇವರದ್ದಾಗಿದೆ. ಅಂತೆಯೇ ಸ್ತ್ರೀ ಪಾತ್ರಗಳು ಕೃತಿಯ ತುಂಬಾ ಹುಡುಕಿದರೂ ಕೇವಲ ಎರಡೇ ಎರಡು ಮಾತ್ರ ನಮಗೆ ಇಲ್ಲಿ ಪತ್ತಾರರು ಪ್ರಚುರ ಪಡಿಸುತ್ತಾರೆ. ಹೀಗಾಗಿ ನಾವು ಇಲ್ಲಿ ಎರಡನೆಯ ಸ್ತ್ರೀ ಪಾತ್ರದಲ್ಲಿ ಕಂಡು ಬರುವ. ಸ್ತ್ರೀ ಪಾತ್ರವೇ ಈ ಪಾರವ್ವಳದ್ದಾಗಿದೆ.

ಪರವ್ವ ಈ ಕೃತಿಯಲ್ಲಿ ಪ್ರಮುಖವಾಗಿ ಕಂಡು ಬರುವುದು ಒಂದು ಕುಂಟಲುತನದ ನೆಪದಲ್ಲಿ ಅಷ್ಟೆ ಅಲ್ಲ. ಈ ಕ್ರಿಯೆಯೂ ಇವಳು ಸಂಪೂರ್ಣವಾಗಿ ನಿಭಾಯಿಸಿಬಲ್ಲಳು. ಒಂದು ಸಮರ್ಥ ಹೆಣ್ಣು ಪಾತ್ರವೆಂದು ಹೇಳಬಹುದು. ತನ್ನ ಸೋದರಳಿಯ ಸಂಬಂಧಿಯಾದ ಸಂಗ್ಯಾನಿಗಾಗಿ ಗಂಗಿಯನ್ನು ಒಲಿಸಿಕೊಡುವ ತಂತ್ರಕ್ಕೆ ಕೈ ಹಾಕುತ್ತಾಳೆ. ಸಂಗ್ಯಾ ಇವಳಿಗೆ ಹಣ ಕೊಡುತ್ತಾನೆ. ಬಂಗಾರ - ಒಡವೆ ಕೊಡುತ್ತಾನೆ. ಗಂಗಿಯ ಸೌಂದರ್ಯಕ್ಕೆ ಮನಸೋತ ಈ ಸಂಗ್ಯಾ ಗಂಗಿಯನ್ನು ಅನುಭವಿಸಲು ಹತ್ತಾರು ತಂತ್ರರೂಪಿಸಲಿಕ್ಕೆ ಇವಳೇ ಒಂದು ರೀತಿಯ ಉತ್ತೇಜನಕಾರಿಯಂದು ಹೇಳಬಹುದು. ಸಂಗ್ಯಾ ಈ ಬೇಡಿಕೆಯಿಂದ ಪರವ್ವ. ಪರವ್ವಳಿಗೆ ಹತ್ತಿರ ಬಂದಾಗ ಇವಳು ಆತನಿಗೆ ಸರಿಯಾದ ಬುದ್ಧಿ ಹೇಳದೆ ಒಂದು ಅವಿವೇಕಿಯಾಗಿ ಕೆಲಸ ಮಾಡುತ್ತಾಳೆ. ಗಂಗಿಗೆ ಹಣದ ಆಶೆ, ಲಾಲಸೆಗಳು ಕೂಡ ಸಂಗ್ಯಾನಿಗೆ ವರವಾಗಿ ಪರಿಣಮಿಸುತ್ತವೆ. ಹೀಗಾಗಿ ಒಂದು ಆಶೆ ಬುರುಕ ಹೆಣ್ಣು ತನ್ನಮಾನವೀಯ ಮೌಲ್ಯಗಳ್ನ ಕಳಚಿಕೊಂಡು ಸಮಾಜದಲ್ಲಿ ಅನೈತಿಕ ಚಟುವಟಿಕೆಗೆ ಹೋಗಿ ಬೀಳಿಸುವ ಒಂದು ಕ್ರಿಯೆಯು ಈ ಪರವ್ವಳಲ್ಲಿ ಕಂಡು ಬರುತ್ತದೆ. ಇನ್ನೊಬ್ಬರ ಹೆಂಡತಿಯಾದ ಗಂಗಿಯನ್ನು ಈ ಅನೈತಿಕ ಸಂಬಂಧದ ಕರ್ಮಕೂಪಕ್ಕೆ ತಳ್ಳುವ ಪ್ರಕ್ರಿಯೆಗೆ ಕೈ ಹಾಕುವುದು ಮರ್ಯಾದೆಯರ ಲಕ್ಷಣವಲ್ಲ.

---

1) ಕರ್ನಾಟಕ ಜನಪದ ಕಲೆಗಳು ಕೋಶ : ಸಂ. ಹಿ.ಚಿ. ಬೋರಲಿಂಗಯ್ಯಾ ಪು. 282

ಆದರೆ ಪರವಳ್ಳಿಗೆ ಇದ್ಯಾವದು ಬೇಕಾಗಿಲ್ಲ. ತನಗೆ ಹಣದ ರುಚಿ ಹತ್ತಿರುವಾಗ ಇದೇನು ಅಂಥಾ ಮಹಾಕ್ರಿಯೆ ಎನ್ನುವ ನಿರ್ಧಾರಕ್ಕೆ ಬರುತ್ತಾಳೆ.

ಪರವ್ವ ಮುಂದುವರೆದಂತೆ ಗಂಗಿಯನ್ನು ಹೇಗಾದರೂ ಮಾಡಿ ಸಂಗ್ಯಾನಿಗೆ ಒಲಿಸಿಕೊಟ್ಟರೆ ಸಾಕು. ಇಷ್ಟೆ ನನ್ನ ಕೆಲಸ ಇದರಿಂದ ನನಗೆ ಅತಿಯಾದ ಲಾಭವಾಗುತ್ತಿದೆ. ಎಂದರಿತ ಪರವ್ವ ಸಂಗ್ಯಾನ ಎಲ್ಲಾ ಮಾತುಗಳಿಗೂ ಬೆಲೆ ಕೊಡುತ್ತಾಳೆ. ಗಂಗಿಯಲ್ಲಿಗೆ ಹೋಗಿ ಮನೆಯಲ್ಲಿ ಯಾರು ಇಲ್ಲದೆ ಇದ್ದಾಗ ಅವಳನ್ನು ತನ್ನ ಮಾಯಾ ಜಾಲದ ಮಡಿಕೆಯಲ್ಲಿ ಹಾಕುವ ಪ್ರಯತ್ನ ಮಾಡುತ್ತಾಳೆ. ಪರವ್ವಳ ಈ ವಿಚಾರದಿಂದ ಗಂಗಿ ತತ್ತರಿಸಿ ಇದಕ್ಕೆ ತಿರಸ್ಕರಿಸಿದರೂ, ಇವಳು ಅಲ್ಲಿಗೆ ವಿಷಯ ನಿಲ್ಲಿಸುವುದೇ ಇಲ್ಲ. ಮುಂದುವರಿಸುತ್ತಲಿಯೇ ಇರುತ್ತಾಳೆ.

ಈ ವಿಷಯ ಮುಂದುವರಿದು ಒಂದು ಘಟ್ಟ ತಲುಪುತ್ತದೆ. ಗಂಗಿಯ ಮನಸ್ಸು ಪರಿವರ್ತನೆಯಾಗುತ್ತದೆ. ಅವಳ ಅಂತರಾಳದಲ್ಲಿರುವ ಏಕಾಂತವನ್ನೆ ಪ್ರಮುಖವಾದ ವಿಷಯವಾಗಿಟ್ಟುಕೊಂಡು ಗಂಗಿಯ ಮನಸ್ಸು ಪರಿವರ್ತಿಸುತ್ತಾಳೆ. ಗಂಗಿಯನ್ನು ತನ್ನ ಮಾತುಗಳು ಕಲಾ ಕೌಶಲ್ಯದಿಂದ ಸೌಂದರ್ಯವತಿಯಾದ ಗಂಗಿಯನ್ನು ಸಂಗ್ಯಾನಿಗಾಗಿ ಸಿದ್ಧಗೊಳಿಸುತ್ತಾಳೆ. ಹೀಗಾಗಿ ಪರವ್ವಳ ಈ ಕ್ರಿಯಾತ್ಮಕ ಸೃಜನಶೀಲ ತಂತ್ರಕ್ಕೆ ಗಂಗಿಯ, ಮನಸ್ಸು ಸಂಗ್ಯಾನ ಹತ್ತಿರ ಹರಿದು ಹೋಗುತ್ತದೆ.

ಬಾಳ್ಯಾನಿಂದ ತಿರಸ್ಕೃತ ಗೊಂಡ ಸಂಗ್ಯಾನ ಬಯಕೆಯು ಪಾರವ್ವಳಿಂದ ಪುರಸ್ಕೃತಗೊಳ್ಳುತ್ತದೆ. ಗಂಗಿ ಮತ್ತು ಸಂಗ್ಯಾರ ಅನೈತಿಕ ಸಂಬಂದ ಒಗ್ಗೂಡಿಸಿ ಬಿಡುವ ತನಕ ಈ ಪರವ್ವ ಬಿಡುವುದೇ ಇಲ್ಲ. ಮುಂದಿನ ಆಗು ಹೋಗುಗಳಿಗೆ ಒಂದು ರೀತಿಯ ಸೂತ್ರಧಾರಿಯ ತರಹ ಈ ಪರವ್ವ. ಈ ಕೃತಿಯಲ್ಲಿ ತನ್ನದೆ ಆದ ವಿಶಿಷ್ಟ ಸ್ಥಾನವನ್ನು ಪಡೆಯುತ್ತಾಳೆ. ಪ್ರತಿಯೊಂದು ವಿಷಯ ಅಂದರೆ ಗಂಗಿ ಮತ್ತು ಸಂಗ್ಯಾನ ನಡುವಿನ ಸಂಬಂಧದ ಕೊಂಡಿಯಾಗಿ ಈಕೆಯ ಪಾತ್ರ ಕಂಡು ಬಂದಿದೆ.

ಮುಂದುವರಿದಂತೆ ಸಂಗ್ಯಾ ಮತ್ತು ಗಂಗಿಯ ಹಾದರದ ವಾಸನೆಯ ಬೈಲವಾಡ ಗ್ರಾಮದ ಮನೆ ಮನೆಯ ಮಾತಾಗಿ ಬಿಡುತ್ತದೆ. ಲಗಳೇರ ಮನೆತನಕ್ಕೆ ಮಾತ್ರ ಮುಟ್ಟರಲಿಲ್ಲ. ಲಗಳೇರ ಮನೆತನದಲ್ಲಿ ಇರುವ ಜೀವಿಗಳೆಂದರೆ ನಾಲ್ಕು ಜನ ಮಾತ್ರ. ಈರಪ್ಪ, ಇರಪಾಕ್ಷಿ ಮತ್ತು ಬಸವಂತ, ಗಂಗಿ. ಗಂಗಿಯನ್ನು ಈ ವಿಷಯದಿಂದ ನಾವು ಹೊರ ಇಡಬೇಕಾಗುತ್ತದೆ. ಮನೆತನದ ಸಂಖ್ಯಾ ದೃಷ್ಟಿಯಲ್ಲಿ ಸೇರಿಕೊಂಡು ಇವಳು ಆ ಮೂವರಿಂದ ಭಿನ್ನವಾದ ಸ್ಥಾನದಲ್ಲಿ ನಿಲ್ಲುತ್ತಾಳೆ. ಹೀಗಾಗಿ ಮೂವರಿಗೆ ಮಾತ್ರ. ಅಂದರೆ ಅಣ್ಣ ತಮ್ಮಂದಿರಿಗೆ ಈ ವಿಷಯ ಗೊತ್ತಿರುವುದಿಲ್ಲ. ಆದರೆ ಊರಿಗೆ ಊರೇ ಈ ವಿಷಯದಲ್ಲಿ ಗೌಪ್ಯ ಡಂಗುರ ಹೊಡೆದಂತೆ, ಆಡುವ ಮಾತಾಗಿರುತ್ತದೆ. ಹೀಗಾಗಿ ಒಂದು ದಿನ ಸಂಗ್ಯಾ ಮತ್ತು ಗಂಗಿ ಮುಸ್ಸಂಜೆಯ ಸಮಯದಲ್ಲಿ ಯಾರು ಮನೆಯಲ್ಲಿ ಇಲ್ಲದ ಸಮಯಕ್ಕೆ ಈರಪ್ಪನ ಕೈಯಲ್ಲಿ ಸಿಕ್ಕಿಕೊಂಡಿರುತ್ತಾರೆ. ಮುಂದೆ ಇದೆ ಒಂದು ಘಟನೆಯ ಮುಂದುವರೆದು ಸಂಗ್ಯಾನ ಕೊಲೆ ನಡೆಯುತ್ತದೆ.

ಪರವ್ವ ಸಂಗ್ಯಾನ ಕೊಲೆಗೆ ಕಾರಣಿಭೂತಳು ಆಗುತ್ತಾಳೆ. ಸಂಗ್ಯಾನಿಗೆ ಇದರ ರುಚಿ ಇಮ್ಮಡಿಗೊಳಿಸಿರುವವಳು ಎಂದರೆ ಪರವ್ವಳೆ ಅದಕ್ಕೆ ಅಂದರೆ ಸಂಗ್ಯಾನ ಮನದಾಸೆಗೆ ಇವಳು ಆಸ್ಪದ ಕೊಟ್ಟರುವುದೇ ಈ ಒಂದು ದುರಂತಕ್ಕೆ ಕಾರಣವಾಗುತ್ತದೆ. ಮುಂದೆ ಇಂಥ ಒಂದು ಸನ್ನಿವೇಶ ನಡೆಯುತ್ತದೆ. ಎನ್ನುವ ತರ್ಕ ಪರವ್ವ ಮಾಡಿರಲಿಲ್ಲ. ಮೊದಲೇ ಲಗಳೆರೆಂದರೆ ಬೆಂಕಿಯಂಥವರು ಎಂದರಿತ ಪರವ್ವ ತನ್ನ ಸ್ವದುರಾಸೆಯಿಂದ ಸಂಗ್ಯಾನ ಕೊಲೆಗೆ ಕಾರಣಿಭೂತಳಾಗುತ್ತಾಳೆ.

ಸಂಗ್ಯಾನ ಕೊಲೆಯಾದ ಮೇಲೆ ಚಡಪಡಿಸುತ್ತಾಳೆ.

4. ಬಾಳ್ಯಾ

ಸಂಸಾರದ ಜಂಜಾಟ, ಬಡತನ ಬೇಗ, ಪರಾವಲಂಬಿತನಕ್ಕೆ ಯಾವ ರೀತಿಯಲ್ಲಿ ಮನುಷ್ಯ ತನ್ನ ತನವನ್ನು ಕಳೆದುಕೊಳ್ಳುತ್ತಾನೆ. ಎನ್ನುವುದಕ್ಕೆ ಸಾಕ್ಷಿ ಎಂದರೆ ಬಾಳ್ಯಾನ ಪಾತ್ರವೇ ಸಾಕ್ಷಿ. ಬಾಳ್ಯಾ ಸಂಗ್ಯಾನ ಕೈಗೊಂಬೆಯಾಗಿರುತ್ತಾನೆ. ಸಂಗ್ಯಾನ ಸೂತ್ರದ ಗೊಂಬೆಯಾಗಿ ಕಾಲಕಳೆಯುವ ಪಾತ್ರ ಇದಾಗಿದೆ. ಸಂಗ್ಯಾನ ಜೀವದ ಗೆಳೆಯ ಎನಿಸಿಕೊಂಡ ಈ ಬಾಳ್ಯಾ ಕೃತಿಯ ತುಂಬೆಲ್ಲಾ ಬರಿ ಚಾಕರಿ ಕೆಲಸವನ್ನು ಬಿಟ್ಟರೆ ಮತ್ತೇನೂ ಮಾಡಿರುವುದೇ ಇಲ್ಲ. ಪರಸ್ಥಿತಿ ಬಾಳ್ಯಾನಿಗೆ ಆ ರೀತಿಯಾಗಿ ಇರುವಂಥ ಸಮಯ ಸೃಷ್ಟಿಯಾಗಿರುತ್ತದೆ.

ಸಂಗ್ಯಾ ಬಾಳ್ಯಾನ ದರಿದ್ರತನವನ್ನು ನಿವಾರಿಸುವ ಕೆಲಸ ಮಾಡಿರುವುದು ನಿಜವಾದರೂ ಆ ದಿನದ ರಾತ್ರಿ ಹಗಲಿನ ಉಪಜೀವನಕ್ಕಾಗಿಯೇ ಹೊರತು ಆತನನ್ನು ಪರಿಪೂರ್ಣವಾಗಿ ತನ್ನ ಕಾಲ ಮೇಲೆ ತಾ ನಿಲ್ಲುವಂತೆ ಮಾಡಿಲ್ಲ. ತನ್ನ ವಯ್ಯಕ್ತಿಕ ಸ್ವಾರ್ಥ ಕೆಲಸಗಳಿಗೋಸ್ಕರವೇ ಸಂಗ್ಯಾ ಬಾಳ್ಯಾನನ್ನು ಉಪಯೋಗಿಸಿಕೊಂಡಿದ್ದಾನೆ. ಹೀಗಾಗಿ ಕೃತಿಯ ತುಂಬೆಲ್ಲಾ ಬಾಳ್ಯಾನ ಸಮರ್ಥವಾದ ವ್ಯಕ್ತಿತ್ವ ಎಲ್ಲಿಯೂ ಕಂಡು ಬಂದಿಲ್ಲ.

ಬಾಳ್ಯ ಒಬ್ಬ ಅಂಚೆ ಅಣ್ಣನ ಕೆಲಸದಂತೆ ದುಡಿದಿದ್ದಾನೆ. ಸಂಗ್ಯಾನಲ್ಲಿ ಈತನ ವ್ಯಕ್ತಿತ್ವ ಮಾರಲ್ಪಟಂತೆಯಿದೆ. ಏಕೆಂದರೆ ಜೀವದ ಗೆಳೆಯರು ಎನಿಸಿರುವ ಸಂಗ್ಯಾ ಬಾಳ್ಯ ಇಬ್ಬರು ಒಬ್ಬರಿಗೊಬ್ಬರು ಬಿಟ್ಟು ಇರಲಾರದವರ್ರು, ದಿನ ಬೆಳಗಾದರೆ ಮುಗಿಯಿತು. ಒಟ್ಟಿಗೆ ಕಾಲ ಕಳೆಯುವವರು, ಯಾವ ಕಡೆ ಹೋದರು ಅಂಟಕೊಂಡವರಂತೆ ಕಾಲ ಕಳೆಯುವ ಜೀವಿಗಳು ನಿಜ, ಒಪ್ಪಲೇಬೇಕು. ಇಲ್ಲಿ ಒಂದಾಂಶ ಸಂಶೋಧಕ ಗಮನಿಸುವುದೇನೆಂದರೆ.

ಬಾಳ್ಯಾನಿಗೆ ಮತ್ತು ಸಂಗ್ಯಾನಿಗೆ ಆತ್ಮೀಯ ಗೆಳೆತನ ಇತ್ತು ಎಂದು ಪತ್ತಾರ ಕವಿಯೇ ಆಗಿರಲಿ ಅಥವಾ ಯಾರೇ ಆಗರಿಲಿ. ಯಾರು ಕೂಡ ಬಾಳ್ಯಾನ ವ್ಯಯ್ಯಕ್ತಿಕ ವಿಷಯ ಅಳೆಯುವ ಗೋಜಿಗೆ ಹೋಗದೆ ಬರಿ ಕಥೆಯ ನಿಜವಾದ ರೂಪವನ್ನು ಹುಡುಕುವ ಕೆಲಸವಾಗಿದೆ ಆದರೆ ಈ ಬಾಳಣ್ಣಾ ಎಲ್ಲಿಯು ತನ್ನ ತನವನ್ನು ಗುರುತಿಸುವ ಕೆಲಸ ಮಾಡಲಿಲ್ಲ. ಜಾತ್ರೆಯಲ್ಲಿ ಗಂಗಿಯ ಕೊರಳಿನ ಸರಗಿ ಕಳೆದಾಗ, ಅದು ಈ ಸಂಗ್ಯಾನಿಗೆ ಸಿಕ್ಕಿರುತ್ತದೆ. ಈ ಸರಗಿಯಿಂದ ಗಂಗಿಯನ್ನು ತಾನು ಒಲಿಸಿಕೊಳ್ಳಬೇಕು ಎಂದಾಗ ಈ ಬಾಳಣ್ಣಾ ವಿರೋಧಿಸುತ್ತಾನೆ.

ಈತನ ವಿರೋದತನವು ಕವಡೆಗೆ ಕಿಮ್ಮತ್ತು ಇಲ್ಲದಂಥ ರೀತಿಯಲ್ಲಿ ಬಾಳ್ಯಾನ ಉಪದೇಶ ಮುರಿದು ಬೀಳುತ್ತದೆ. ಸಂಗ್ಯಾ ಬಾಳ್ಯಾನ ಗೆಳೆತನ ಆಂತರಿಕವಾದ ಗೆಳತನವೇ ಅಥವಾ ಬಾಹ್ಯಾಗೆಳತನವೇ ಎನ್ನುವ ಸಮಸ್ಯ ಎದ್ದು ಕಾಣುತ್ತದೆ. ಸಂಗ್ಯಾ ಹೇಳಿರುವ ಪ್ರತಿಯೊಂದು ಮಾತು ಪ್ರತಿಯೊಂದು ಕ್ಷಣವು ವೇದ ವಾಕ್ಯದಂತೆ ಪಾಲಿಸುವ ಬಾಳ್ಯ, ಬಾಳ್ಯಾನ ಮಾತುಗಳೇ ಆಗಲಿ ಅಥವಾ ವಿಚಾರಗಳೇ ಆಗಲೆ ಸಂಗ್ಯಾ ಏಕೆ ಪಾಲಿಸುವುದಿಲ್ಲ. ಎಲ್ಲಿ ನೋಡಿದರೂ ಸಂಗ್ಯಾನ ಕೈಗೊಂಬೆಯಾಗಿ ಬರಿ ಕಾರಕೂನ ಕೆಲಸವನ್ನೆ ಮಾಡುವುದು ಕಂಡು ಬರುತ್ತದೆ. ಹೀಗಾಗಿ ಇಡೀ ಈ ಸಂಗ್ಯಾ ಬಾಳ್ಯಾ ಕೃತಿಯಲ್ಲಿ ಬಾಳ್ಯ ಸೇವಕನಾಗಿಯೇ ಕೆಲಸ ಮಾಡಿದ್ದಾನೆ ಹೊರತು ಗೆಳೆಯನಾಗಿ ಅಲ್ಲ. ಏಕೆಂದರೆ ಗೆಳೆತನದ ಅರ್ಥ ಈ ಕೃತಿಯಲ್ಲಿ ಕೃತಿಕಾರ ಗೆಳೆಯರೆಂದು ಗುರುತಿಸಿದರೂ, ಆಂತರಿಕವಾಗಿ ಸಂಗ್ಯಾ ಬಾಳ್ಯ ಗೆಳತನದ ಪದಕ್ಕೆ ಒಪ್ಪುವಂಥದಲ್ಲ.

ಸಂಗ್ಯಾ ತನಗೆ ಬೇಕಾದುದನೆಲ್ಲಾ ಕೊಡುತ್ತಾನೆ ತನ್ನ ಮನೆಯ ಖರ್ಚು ಕೂಡ ಆತನೆ ಭರಿಸುತ್ತಾನೆ. ಪ್ರತಿಯೊಂದು ದುಖಃದಲ್ಲಿಯೂ ನನಗೆ ಆತನೆ ಗತಿ, ಆತನನ್ನು ಬಿಟ್ಟರೆ ಮತ್ಯಾರು ನನಗಾಗಿಯಿಲ್ಲ. ಎಂದು ಅರಿತ ಬಾಳ್ಯಾ ಸಂಗ್ಯಾನ ಗೆಳೆತನ ಮಾಡಿರುತ್ತಾನೆ.

ಸಂಗ್ಯಾನದು ಅದೇ ಸ್ಥಿತಿ, ಬಾಳ್ಯಾನಿಗೆ ಯಾರು ಇಲ್ಲ. ನಾನೇ ಆತನನ್ನು ನೋಡಬೇಕು. ಆ ತನ್ನ ಸ್ಥಿತಿ ಅಷ್ಟಕಷ್ಟೆ ಇದೆ ಹೀಗಾಗಿ ಆತನಿಗೆ ನಾ ಸಹಾಯ ಮಾಡಿದರೆ, ಇತ ನನ್ನಪ್ರತಿಯೊಂದು ಕೆಲಸದಲ್ಲಿಯು ಸಹಾಯಕನಾಗಿರಬಹುದೆಂದು ಸಹಾಯ ಮಾಡುತ್ತಿರುತ್ತಾನೆ, ಹೊರತು ಗೆಳೆತನಕ್ಕಲ್ಲ. ಹೀಗೆ ಮುಂದೆ ನಾವು ಹೋದಂತೆಲ್ಲಾ ನಾಟಕದ ಕೊನೆಯವರೆಗೂ ಇದೆ ರೀತಿಯಲ್ಲಿ ಈ ಪಾತ್ರಗಳು ಕಂಡು ಬರುತ್ತವೆ. ಗಂಗಿಯ ಸಂಗದಿಂದ ಸಂಗ್ಯಾ ಗಂಗಿಯ ಗಂಡ ಈರಪ್ಪನ ಕೈಯಲ್ಲಿ ಸಿಕ್ಕಿ ಹಾಕಿಕೊಂಡ ಮೇಲೆ ಇದಕ್ಕೆ ಸಂಗ್ಯಾನ ಕೊಲೆಯಾಗುವಾಗ, ಈ ಜೀವದ ಗೆಳೆಯ ಬಾಳ್ಯಾನನ್ನ ಉಪಯೋಗಿಸಿಕೊಳ್ಳುತ್ತಾರೆ. ಈರಪ್ಪ ಇರಪಕ್ಷಿ, ಬಸವಂತ ಮೂವರು ಸೇರಿಕೊಂಡು ಸಂಗ್ಯಾನ ಕೊಲೆ ಮಾಡುತ್ತಾರೆ. ಆವಾಗ ಸಂಗ್ಯಾ ಆಡುವ ಮಾತು.

ಬಾಳ್ಯಾ ಅಂತ ! ಬಾಳ ನಂಬಿನ್ಯೋ ನಾನಾ !
ಬಾಳ್ಯಾ ನನಗ ನೀನು ! ಮೋಸ ಮಾಡಿದೀಯಾ !
ಕುರಿಯ ಸರಕ್ಕಾಗಿ ! ಪಂಚ ಹೇಳಿದ್ದೋ ಬಾಳ್ಯಾ !
ಬಂಟರ ಕೈಯಾಗ ! ಕೊಟ್ಟು ಹೊಂಟೆಯ್ಯಾ
ಜೋಡೆಮ್ಮಿ ಆಸೆಗಾಗಿ ! ಜೋಡಿಯು ಕಳಕೊಂಡ್ಯೊ
ಜಾಡಾ ನನ್ನನ್ನು ನೀನು ! ಜಾತೀಸೊದ್ದಿಯೋ
ಸಾವಿರ ತೆಗೆದುಕೊಂಡು ! ಸರಿದು ಹೋದಲ್ಲೋ ಬಾಳ್ಯಾ
ಸಾವಿಗೆ ಯನ್ನನ್ನು ! ಸೇರಿಸಿ ಹೋದಿಯಾ 1

---

1) ರಾಯಪ್ಪ ಪತ್ತಾರ, ಸಂಗ್ಯಾಬಾಳ್ಯಾ.....:.................ಪುಟ 40

ಸಂಗ್ಯಾನ ಸಾವಿಗೆ ಮುಂದೆ ಬಾಳ್ಯಾನೇ ಕಾರಣನಾಗುತ್ತಾನೆ. ಲಗಳೆರ ಈರಪ್ಪನ ಮನೆಯವರ ಆಸೆ-ಆಮಿಷಗಳಿಗೆ ಮತ್ತು ಭಯಕ್ಕಾಗಿ ಸಂಗ್ಯಾನ ಗುಟ್ಟೆಲ್ಲವು ಬಾಳ್ಯಾ ಬಾಯಿಬಿಟ್ಟಿರುತ್ತಾನೆ. ಮುಂದೆ ಸಂಗ್ಯಾನನ್ನು ಊರಿನ ಹಳ್ಳದ ಕಡೆಗೆ ಕರೆದುಕೊಂಡು ಬರುವುದಾಗಿ ಹೇಳುತ್ತಾನೆ. ಈರಪ್ಪ ಮತ್ತು ಆತನ ಸಹೋದರರಿಗೆ ತಿಳಿಸುತ್ತಾನೆ. ಬಾಳ್ಯಾ ಸಂಗ್ಯಾನನ್ನು ಹಳ್ಳದ ದಡಕ್ಕೆ ಮೋಸದಿಂದ ಕರೆದುಕೊಂಡು ಹೋಗಿ, ಮೊದಲೇ ಅಲ್ಲಿ ಹೊಂಚು ಹಾಕಿ ಕುಳಿತಿರುವ ಈರ್ಯಾ ಮತ್ತು ಆತನ ತಮ್ಮಂದಿರ ಕೈಗೆ ಕೊಟ್ಟು ಓಡಿ ಬರುತ್ತಾನೆ. ಆವಾಗ ಸಂಗ್ಯಾ ತನ್ನ ಗೆಳೆಯ ನೆನಿಸಿಕೊಂಡಿರುವ ಬಾಳ್ಯನನ್ನು ಕುರಿತು. ಬಂಗಾರಕ್ಕೆ ಎರಡೆಮ್ಮೆಗೆ ಆಶೆ ಹೊತ್ತು ಕೊಲೆಗಡುಕರ ಕೈಯಲ್ಲಿ ನನ್ನ ಕೊಟ್ಟಿಯಲ್ಲೋ ಬಾಳ್ಯಾ ಎಂದು ಗಡಬಡಿಸುತ್ತಾನೆ.

ಘಾತವಾಯ್ತು ಬಾಳ್ಯ ನನ್ನ ಜೀವ ತಿಂದಿಯಲ್ಲೋ
ಮಗನೆ ಎಂದು ಗೋಗರೆಯುತ್ತಾನೆ.

ಕೊನೆಗೆ ಸಂಗ್ಯಾನ ಸಾವು ಬಾಳ್ಯಾನಿಂದಲೇ ಆಗುತ್ತದೆ. ಹೀಗಾಗಿ ಸಂಗ್ಯಾನ ಗೆಳೆಯ ಬಾಳ್ಯಾ ಆಂತರಿಕವಾಗಿ ಇಲ್ಲದಿರುವುದು ಇಲ್ಲಿ ಪ್ರಸ್ತುತವೆನಿಸುತ್ತದೆ.

ಈ ರೀತಿಯಾಗಿ ಬಾಳ್ಯಾನ ಚರಿತ್ರೆಯು ಈ ಕೃತಿಯಲ್ಲಿ ಕಂಡು ಬರುತ್ತದೆ.

ಅಧ್ಯಾಯ ೩

೧. ಖರೇ ಖರೇ ಸಂಗ್ಯಾ ಬಾಳ್ಯಾ ಕೃತಿಯ ಕಥಾವಸ್ತು

೨. ಖರೇ ಖರೇ ಸಂಗ್ಯಾ ಬಾಳ್ಯಾ ಕೃತಿಯ ಪಾತ್ರಚಿತ್ರಣ

೧. ಖರೇ ಖರೇ ಸಂಗ್ಯಾಬಾಳ್ಯ ಕೃತಿಯ ಕಥಾವಸ್ತು

ಖರೇ ಖರೇ ಸಂಗ್ಯಾ ಬಾಳ್ಯಾ ಕಥಾವಸ್ತು ಎಂ.ಎಂ. ಕಲಬುರ್ಗಿಯವರ ದೃಷ್ಟಿಯಲ್ಲಿ ಭಿನ್ನವಾದ ರೀತಿಯಲ್ಲಿ ಒಡ ಮೂಡಿದೆ. ಎಂ. ಎಂ. ಕಲಬುರ್ಗಿಯವರು ಸಂಶೋಧಕರು. ಅವರ ಈ ಕಥೆಯ ಮೂಲ ಕಥೆಯು ಬೇರೆಯಾಗಿದೆ ಎಂದು ಹೇಳುತ್ತಾರೆ. ಗಂಗಿಯ ಮನೆತನ ಸುಸಂಸ್ಕೃತಿಯಿಂದ ಕೂಡಿರುವ ಮನೆತನ. ಬೈಲವಾಡ ಊರಲ್ಲಿ ಗಂಗಿಯು ಬೆಳೆಯುತ್ತಿದ್ದಂತೆ ಅವಳ ಮೇಲೆ ಹತ್ತಾರು ಕಾಮುಕ ಕಣ್ಣುಗಳು ಬೀಳಲಾರಂಭಿಸಿದವು. ಗಂಗಿಯ ಸೌಂದರ್ಯ ದಿನೆ ದಿನೆ ಇಮ್ಮಡಿಯಾಗಲು ಆರಂಭಿಸಿತು. ಮೊದಲೇ ಸೌಂದರ್ಯದ ಖನಿಯಾದ ಗಂಗವ್ವ ಮುಟ್ಟದರೆ ಮೈಲಿಗೆಯಾದಿತು. ಎನ್ನುವಂಥ ಕುಸುಮ ಬಾಲೆಯಂಥವಳು. ಇವಳ ಸೌಂದರ್ಯಕ್ಕೆ ಮಾರು ಹೋಗಿ ಅವಳನ್ನು ಕಂಡು ಜೊಲ್ಲು ಸುರಿಸುವ ನಾಯಿಗಳಿಗೇನು ಕೊರತೆ ಇದ್ದಿಲ್ಲ, ಅಂಥದರಲ್ಲಿ ಗಂಗಿಯ ಮೇಲೆ ಅದೇ ಗ್ರಾಮದ ಪತ್ತಾರ ಎಂಬ ಅಕ್ಕಸಾಲಿಗನ (ಜನಪದ ಕವಿ) - ಸಾಹಿತಿಯ ಕಣ್ಣು ಬೀಳುತ್ತದೆ.

ಸತ್ಯತೆಯನ್ನು ಹುಡುಕಲು ಹೊರಟ ಕಲಬುರ್ಗಿಯವರು ಈ ಕೃತಿಯ ಬಗ್ಗೆ ಅಧ್ಯಯನ ಆರಂಭಿಸುತ್ತಾರೆ. ಫತ್ತಾರ ಕವಿಯ ಬಗ್ಗೆ ಇರುವ ಮನಸ್ಸಿನ ಹೊಲಸನ್ನು ಅರಿತು, ಗಂಗಿಯನ್ನು ಇಷ್ಟೊಂದು ಮಲೀನವಾಗಿ ಚಿತ್ರಿಸಿರುವ ಈ ಫತ್ತಾರರ ಮೂಲ ಉದ್ದೇಶವಾದರೂ ಏನು ? ಎಂದು ಸತ್ಯತೆಯ ತಳಕ್ಕೆ ಕೈ ಹಾಕುವ ಪ್ರಯತ್ನ ಇವರದ್ದಾಗಿದೆ.

ಗ್ರಾಮದ ಕೆರಿಕೆರಿ, ಮನೆ ಮನೆಗೆ, ಅಂದರೆ ಗಂಗವ್ವನ ಸ್ವಂತ ಊರಾದ ಬೈಲಹೊಂಗಲದ ಬೈಲವಾಡಕ್ಕೆ ಖುದ್ದಾಗಿ ಭೇಟಕೊಟ್ಟು, ಅಲ್ಲಿಯ ಜನರಿಂದ ಪ್ರತ್ಯೇಕ್ಷವಾಗಿ ವಿಷಯ ಸಂಗ್ರಹಿಸುತ್ತಾರೆ. ಈ ವಿಷಯವನ್ನು ಸಂಗ್ರಹಿಸುತ್ತಾ ಮುಂದುವರಿದ ಕಲಬುರ್ಗಿಯವರು ಇದೊಂದು ಶುದ್ಧ ಸುಳ್ಳು ಕಥೆ, ಇದರಲ್ಲಿ ಅತಿರೇಕವಿದೆ, ಅಪವಿತ್ರತೆ ಇದೆ. ಅನಾವಶಕವಾಗಿ ಗಂಗಿ ಎಂಬ ಗರತಿಯನ್ನು ಗಯ್ಯಾಳಿಯ ಸ್ಥಾನಕ್ಕೆ ತಳ್ಳಿದ್ದಾರೆ. ಇದರಲ್ಲಿ ಫತ್ತಾರನ ಕೆಟ್ಟ ಕೆಲಸವು ಬರವಣಿಗೆಯ ರೂಪದಲ್ಲಿ ಈ ಕಥೆಯಲ್ಲಿ ಹುಟ್ಟಕೊಂಡಿದೆ. ಗಂಗಿಯ ಜೀವನದಲ್ಲಿ ಸಂಗ್ಯಾ ಪ್ರವೇಶ ಮಾಡಿಯೇ ಇಲ್ಲ. ಎಂದು ಖುದ್ದಾಗಿಯೇ ತಾವೊಂದು ಕೃತಿ ರಚಿಸಬೇಕು. ಅದು ಫತ್ತಾರ ಕವಿಯ ಸಂಗ್ಯಾಬಾಳ್ಯಾ ಕೃತಿಯ ಮತ್ತೊಂದು ನಿಜ ರೂಪಿಸುವ ಪ್ರತಿ ಬಿಂಬಿಸುವ ಸಲುವಾಗಿಯೇ ಈ ಖರೇ ಖರೇ ಸಂಗ್ಯಾಬಾಳ್ಯಾ ನಾಟಕ ಹುಟ್ಟಕೊಂಡಿದೆ.

ಈ ಖರೇ ಖರೇ ಸಂಗ್ಯಾಬಾಳ್ಯಾ ಕೃತಿಯು ನಾಟಕರಂಗ ಮಂದಿರದ ಮೇಲೆ ಪ್ರದರ್ಶನವಾಗುತ್ತಿದ್ದಂತೆಯೇ, ಗಟ್ಟಿ ಮೇಳಗಳ ಸದ್ದು ರಂಗ ಮಂಟಪದಲ್ಲಿ, ಪ್ರೇಕ್ಷಕರ ಎದುರಲ್ಲಿ ಆರಂಭವಾಗುತ್ತದೆ.

ಕೂಡಿದ ಜನಾ ಗಲ್ ಗಲ್
ಮಾಡ ಬ್ಯಾಡ್ರಿ ಗುಲ್ಲ
ನಿಮ್ ನೋಡಿ ನಾಚಿ ನಿಂತೆವೆಲ್ಲ ||೧||

ಹೆಣ್ಣು ಗಂಡು ಸಭಾ ಕೊಡೇತಿ
ಭರತಿನಾಗೇತಿ!
ನಮ್ಮ ಮ್ಯಾಲೆ ಇರಲಿ ನಿಮ್ಮ ಪ್ರೀತಿ ||೨||

ಸಂಗ್ಯಾಬಾಳ್ಯಾ ಕಥಿ ಮೆಜಕೂರ
ಆಟದ ಸಾರ
ಕುಂತು ಕೇಳ್ರಿ ಬಲ್ಲ ಹಿರಿಯರ ||೩||

ಗಂಡ ಮೆಟ್ಟಿದ ಗದುಗಿನ ಶಾಪೂರ
ಬಸವಣ್ಣದೇವರ
ಅತಗ್ಹೋಗಿ ಮಾಡುವ ನಮಸ್ಕಾರ ||೪||

ಈ ರೀತಿಯ ಆರಂಭದಲ್ಲಿ ಸ್ತೋತ್ರ ಪಾತ್ರಗಳು ಕಥೆಯ ಆರಂಭದ ಸಾರ ಹೇಳುತಿದ್ದಂತೆಯೆ ಪ್ರೇಕ್ಷಕ ವರ್ಗದಲ್ಲಿ ಇರುವ ಒಬ್ಬ ಮುದುಕನ ಪಿತ್ತ ನೆತ್ತಿಗೆರುತ್ತದೆ. ಒಬ್ಬ ಒಳ್ಳೆಯ ಗರತಿ ಗಂಗವ್ವಳನ ಬಗ್ಗೆ ಈ ರೀತಿಯಾಗಿ ಅವಹೇಳನ ನಾಟಕ ಪ್ರದರ್ಶನ ಮಾಡುವುದು ಸರಿಯಾದ ಆಟವೇ ಇದು. ಎಂದು ಸಿಟ್ಟನಿಂದ

ಮುದುಕ :-(ಪ್ರೇಕ್ಷಕ ವರ್ಗದಿಂದ ಎದ್ದು ಬರುತ್ತ)ಏ. ಬಂದ ಮಾಡ್ರಿ. ಈ ಆಟ ಬಂದ ಮಾಡ್ರಿ. ಯಾರ ಹೇಳ್ಯಾರ ಈ ಆಟ ಆಡಲಾಕ?

ಭಾಗವತ : ಯಾರ ಹೇಳೊದೇನು? ನಾವ ನಿರ್ಧಾರ ಮಾಡೀವಿ. ನಾವ ಆಡತಿವಿ.

ಮುದುಕು : ಏನ ಆಡ್ತಿರಿ? ಆಡವ್ರು ಬುದ್ದಿಗೇಡಿ, ನೋಡವ್ರು ನಿದ್ದಿಗೇಡಿ

ಭಾಗವತ : ಬರದಾವ?

ಮುದುಕ : ಕಿಡಿಗೇಡಿ ಮಹಾಕಿಡಿಗೇಡಿ, ಆಟ ಅಂದ್ರ ಹುಡುಗಾಟ ಅಂತ ತಿಳಕೊಂಡಾರ. ಇದು ಆಟ ಅಲ್ಲ ದುಷ್ಟ ಸಾಹಿತಿಯ ಕೆಟ್ಟ ಕೃತಿ. ಇದು ಬರದವಗ ಅಕ್ಷರ ಜವಾಬ್ದಾರಿ ಗೊತ್ತದ? ಅಕ್ಷರ ಅಂದ್ರ.......ಅದು ಬೆಂಕಿ ಎಚ್ಚರದಿಂದ ಬಳಸಬೇಕು. ಮಾತ ಮಲೀನ ಮಾಡಬಾರದು. ಬಾಯೊಳಗಿನ ಮಾತ್ರ. ಕೈಯೊಳಗಿನ ಲೇಖನಿ ಪವಿತ್ರವಾಗಿ ಬಳಸಬೇಕಂತ ಹಿರೇರು ಹೇಳ್ಯಾರ.ಎಂದು ಅತಿಯಾದ ಸಿಟ್ಟನಿಂದ ಕೃತಿಯ ಮುಂಭಾಗಕ್ಕೆ ಬಂದು ಪ್ರತಿಭಟಿಸುತ್ತಾನೆ.

ಖರೇ ಖರೇ ಸಂಗ್ಯಾ ಬಾಳ್ಯ ಪುಟ ಸಂಖ್ಯೆ : 1

ಚಾರಿತ್ರವಂತಳಾದ ಗಂಗಿಯ ಜೀವನದ ಕಥೆಯು, ಈ ರೀತಿಯಾಗಿ ನಾಟಕ ಆಡುವುದು ಅಂದ್ರೆ ಅತಿಯಾದ ಅನ್ಯಾಯವಾಗುತ್ತದೆ. ಎಂದು ಬರವಣಿಗೆಯವರಿಗೆ ತಿಳಿಸಿ ಹೇಳುತ್ತಾನೆ.

ಬೈಲವಾಡ ಗ್ರಾಮದಲ್ಲಿ ಗಂಗವ್ವಳಿಗೆ ಎಲ್ಲಿಲ್ಲದ ಗೌರವ. ಅವಳ ಬಗ್ಗೆ ಏಕಪಕ್ಷೀಯವಾಗಿ ಮಾತಾಡುವಂಥ ಶಕ್ತಿ ಯಾರಿಗೂ ಇರುವುದಿಲ್ಲ. ಅಪ್ಪಟ ಶೀಲವಂತಿಕೆಯಾದ ಗಂಗವ್ವಳಿಗೆ ಗೌರವ ಕೊಡುವುದು ನಮ್ಮ ಧರ್ಮ ಏಕೆಂದರೆ ಅವಳಲ್ಲಿ ಪವಿತ್ರತೆಯ ಮೌಲ್ಯಗಳು ಅಡಗಿವೆ. ಅಂಥ ಹೆಣ್ಣು ಮಗುವಿನ ಬಗ್ಗೆ ನಾಟಕ ಮಾಡುವದೆಂದರೆ ಮಹಾ ಪಾಪ ಎಂದು ಗರ್ಜಿಸುತ್ತಾನೆ. ಹಾಡಿನ ಮುಖಾಂತರವು ಪ್ರಸ್ತಾಪಿಸುತ್ತಾನ.

ಮಾನವಂತರು ಮಾರಿ ಎತ್ತದಾಂಗ
ಬರಿಯ ಬ್ಯಾಡ್ರಿ ತೆಗಳಿ ।
ಮಾನಗೇಡಿಗಳು ಮೆರೆಯುವ ಹಾಂಗ
ಬರಿಬ್ಯಾಡ್ರಿ ಹೊಗಳಿ ॥
ಬದುಕಿಸಿದರು ನೀವ್ ಭಂಡರ, ಅವರು
ಮುಂದ ಸಾಯತ್ತಾರ ।
ಸತ್ತು ಹೊಡೆದರೂ ಸತ್ಯವಂತರು
ಸತ್ತು ಬದುಕುತಾರ ॥
ಕೆಡಸ ಬ್ಯಾಡ್ರಿ ಕಾಗದ ಗರತಿಯ
ಮಿಂಡ ಮಸಿಯ ಕೆಳಗ ।
ತೊಳೆಯ ಬ್ಯಾಡರಿ ವಿಷದ ಲೇಖನಿ
ಕುಡಿವ ನೀರಿನೊಳಗೆ ॥...............1

ಈ ರೀತಿಯಾಗಿ ಭಾಗವತನ ಎದುರಿಗೆ ಬಂದು ಪ್ರದರ್ಶನಕ್ಕೆ ನಿಂತಿರುವ ನಾಟಕವನ್ನು 'ನಿಲ್ಲಿಸಿ ಬಿಡರಿ ಎಂದು ತನ್ನ ಆತ್ಮದ ನೋವಿನಿಂದ ಈ ಕ್ರಿಯೆಯನ್ನು ಪ್ರತಿಕ್ರಿಯಿಸುತ್ತಾನೆ. ಈ ಘಟನೆಯು ಕಾಲ್ಪನಿಕವಾಗಿ ರಚನೆಯಾಗಿದೆ. ಮೂಲ ಘಟನೆಯು ನಡದೇಯಿಲ್ಲ. ಅನಾವಶ್ಯಕವಾಗಿ ಒಂದು ಹೆಣ್ಣಿನ ಮಾನ ಬಟ್ಟ ಬಯಲಲ್ಲಿ ಕಳೆಯುವುದೆಂದರೆ ನಿಮಗೆ ಒಳ್ಳೆಯದಾಗುವುದಿಲ್ಲ. ಎಂದು ಲೇಖಕನಿಗೆ ಬರವಣಿಗೆಯ ಮಹತ್ವವನ್ನು ಹೇಳಿಕೊಡುವ ಒಂದು ಬುದ್ಧಿವಾದವು ಆ ಮುದುಕನಿಂದ ಹೊರ ಬೀಳುತ್ತದೆ.

ಖರೇ ಖರೇ ಸಂಗ್ಯಾ ಬಾಳ್ಯ ಪುಟ ಸಂಖ್ಯೆ : 2

ಒಂದು ಹಾಳೆಯು ಒಳ್ಳೆಯದಕ್ಕೆ ಬಳಸಬೇಕು. ಕೆಟ್ಟದಕ್ಕೆ ಅದು ಸಲ್ಲುವುದಿಲ್ಲ ಕವಿಯ ಕರ್ತವ್ಯದ ಬಗ್ಗೆಯು ಇಲ್ಲಿ ನಾವು ಆತನಿಗೆ ಇರಬೇಕಾದಂಥಹ ಅರ್ಹತೆಯ ಬಗ್ಗೆಯು ಜನರ ಬಾಯಿಂದ ಕೇಳಿ ಕಲಿಯಬೇಕಾಗುತ್ತದೆ. ಗಂಗಿಯ ಶೀಲದ ಬಗ್ಗೆ ಬರೆಯುವವನಿಗೆ ಒಳ್ಳೆಯದಾಗಲ್ಲ. ಅಂಥದರಾಗ ನೀವು ಒಳ್ಳೆಯವರ ಬಗ್ಗೆ ಕೆಟ್ಟದ್ದು ಬರದರೆ ಕೆಟ್ಟವರು ಬದುಕಿ ಉಳಿದು, ಒಳ್ಳೆಯವರ ಸಮಾದಿಯಾಗುತ್ತದೆ ಎಂದು ಆ ಮುದುಕಪ್ಪನ ಹೇಳುತ್ತಾನೆ.

ಇಲ್ಲಿ ಮುಖ್ಯವಾಗಿ ನಾವು ಗಮನಿಸುವುದು, ಗಂಗಿಗೆ ಒಳ್ಳೆಯ ಸ್ಥಾನವಿದೆ ಎಂದು ಗೊತ್ತಾಗುತ್ತದೆ. ಲೇಖಕನು ಬರೆಯುವ ಪೆನ್ನಿನ ಮಸಿಯು. ಆತನ ಕಾಗದ(ಹಾಳೆ) ಪವಿತ್ರತೆಯನ್ನು ಕಾಪಾಡಿಕೊಂಡು ಬರುತ್ತದೆ. ಆದರೆ ಇಲ್ಲಿ ಅಂಥ ಕೆಲಸವಾಗಬೇಕು ಎಂದು ಲೇಖಕನ ಕರ್ತವ್ಯವನ್ನು ಮುದುಕಪ್ಪ ಪ್ರಶ್ನಿಸ್ತುತಾನೆ.

ಲಗಳೆಯರ ಮನೆತನ ಗೌರವದಿಂದಿರುವ ಮನೆತನ ಇಲ್ಲಿ ಅನಾವಶ್ಯಕವಾಗಿ ಗಂಗಿಯ ಚಾರಿತ್ರ್ಯಯನ್ನು ಕಳೆಯುವ ಪ್ರವೃತ್ತಿ ಈ ನಾಟಕದಲ್ಲಿ ಕಂಡು ಬರುತ್ತದೆ. ಗಂಗಿ ಒಬ್ಬ ಸುಸಂಸ್ಕೃತ ಮನೆತನದ ಒಡತಿ. ತುಂಬಾ ಗೌರವಸ್ಥ ಕುಟುಂಬ. ಇಂಥವಳ ಬಗ್ಗೆ ನಾಟಕ ಬರದು, ಆಡಿದರೆ, ನಿಮಗೆ ಒಳ್ಳೆಯದಾಗಲ್ಲ. ಎಂದು ವಾದ ಮಾಡಿ, ಪ್ರತಿಭಟಿಸಿ ನಾಟಕವನ್ನು ಪ್ರಾರಂಭದಲ್ಲಿಯೇ ನಿಲ್ಲಿಸುತ್ತಾನೆ. ನಿಮಗೆ ಈ ಕಥೆಯ ಪ್ರಮುಖ ವಿಷಯ ಅಂದರೆ, ನಿಜವಾದ ಘಟನೆಯನ್ನು ಇನ್ನು ಮುಂದೆ ನಾನು ಹೇಳುತ್ತೇನೆ. ಎಂದು ಮುದುಕಪ್ಪಾ ತಾನೆ ಸ್ವತ ಕಥೆಯನ್ನು ಹೇಳಲು ಮುಂದಾಗುತ್ತಾನೆ.

ಸತ್ಯ ಸಂಗತಿಯನ್ನು ಹೇಳುವ ಮೊದಲು ಈ ಮುದುಕಪ್ಪನಿಗೆ ಎಲಿಲ್ಲದ ಸಂತಸ ಉಂಟಾಗುತ್ತದೆ. ಅಂದ ಮೇಲೆ ಕಥೆಯ ಮೂಲ ನನಗೆ ಪೂರ್ತಿಯಾಗಿ ಸತ್ಯಾ ಸತ್ಯತೆಯನ್ನು ಗೊತ್ತು. ಅದನ್ನು ನಾನು ಚಾಚು ತಪ್ಪದೆ ನಿಮಗೆ ಹೇಳುತ್ತೇನೆ. ಕೇಳಿರಿ ಎಂದು ಕಥೆಯ ಎರಡನೆ ಭಾಗದಲ್ಲಿ, ಅಂದರೆ ಎರಡನೆ ದೃಶ್ಯದಲ್ಲಿ ಸತ್ಯಕತೆಯತ್ತ ತಿರುಗುತ್ತಾನೆ.

ಲಗಳೆಯರ ಮನೆತನದ ವರ್ಣನೆಯನ್ನು ಇಲ್ಲಿ ಮುದುಕಪ್ಪಾ ಎಂಬ ಪಾತ್ರದ ಮುಖಾಂತರ, ಅವರ ಶಕ್ತಿಶಾಲಿ ವರ್ಚಸ್ಸು, ಗೌರವದ ಮಹತ್ವ, ಅವರ ಶ್ರೀಮಂತಿಕೆಯು ಮುದುಕಪ್ಪ ಹಾಡಿನ ಮುಖಾಂತರ ಪ್ರಪ್ರಥಮವಾಗಿ ಲಗಳೆರ ಮನೆತನದ ಸ್ವಲ್ಪ ಪರಿಚಯವನ್ನು ಕೊಡುತ್ತಾನೆ.

> ಈರಪ್ಪಾ ನಾನು ಬಹದ್ದೂರ ।
> ಬಯಲ ಹೊಂಗಲದಾಗ ಸಾವಕಾರ ।
> ಹಣದ ಹಳ್ಳ ಹೊಳಿ ಭರಪೂರ ।
> ಊರೆ ಹೊಗಳತದ ಮನಿ ಹೆಸರ ॥..................1

ಖರೇ ಖರೇ ಸಂಗ್ಯಾ ಬಾಳ್ಯ ಪುಟ ಸಂಖ್ಯೆ : 4

ಗರತಿ ಗಂಗವ್ವ ನನ್ನ ಹೆಂಡ್ತಿ ।
ಬಿಳಿ ಜೋಳಾ ರೊಟ್ಟಿ ಈ ಯುವತಿ ॥
ಮೀಸಲು ತುಪ್ಪ ಇವಳ ನಡತಿ ।
ಹಾಲಾಗ ಬೆಲ್ಲ ಬೆರತೈತಿ ॥
ಹುಲಿಯಂಥ ತಮ್ಮದೆರು ಪೈಲವಾನರು ।
ಹೊಲದಾಗ ಮನಿಯಾಗ ದುಡಿತಾರು ॥
ಸ್ವರ್ಗವೆ ಇಳದದ ಮನಿಯಾಗ ।
ಇದ್ದರ ಇರಬೇಕು ನಮ್ಮ ಹಾಂಗ ॥...........1

ಮುದುಕಪ್ಪನ ಹಾಡಿನ ಧಾಟಿಯು ಲಗಳೆಯರ ಮನೆತನದಲ್ಲಿ ಕಂಡು ಬರುವ ಪ್ರಮುಖ ಅಂಶಗಳು . ಆತನ ಹಾಡಿನಲ್ಲಿ ವ್ಯಕ್ತವಾಗುತ್ತದೆ . ಲಗಳೆಯರ ಶ್ರೀಮಂತಿಕೆಯು ಬೈಲ ಹೊಂಗಲದಾಗ ತುಂಬಿ ತುಳುಕುವ ಸಿರಿವಂತಿಕೆಯು ಇಲ್ಲಿ ಎದ್ದು ಕಾಣುತ್ತದೆ. ಅಂಥದರಲ್ಲಿ ಗರತಿ ಗಂಗಮ್ಮ ಎಂದರೆ ಲಗಳೆಯರ ಮನೆಗೆ ಹೇಳಿ ಮಾಡಿಸಿ ತಂದಂಥ ಬೊಂಬೆಯದು. ಗಂಗವ್ವ ಬಗ್ಗೆ ಸ್ವತ : ಈರಪ್ಪ ನನ್ನ ಹೆಂಡತಿಯಂದರೆ ಗರತಿ ಅದಾಳ, ಮತ್ತು ಬಿಳಿಜೋಳ ತೆಳ್ಳನೆಯ ರೊಟ್ಟಿಯಂಥವಳು, ಇವಳು ಮೀಸಲು ತುಪ್ಪದಂತವಳು, ತುಂಬಾ ರುಚಿಯಿಂದ ಕೂಡಿರುವ ಸಂಸಾರ ಇದು. ಇಂತಹ ಗರತಿಗೆ ರಕ್ಷಕರಂತೆ ಇರುವ ಮೈದುನರ ಬಗ್ಗೆಯು ಇಲ್ಲಿ ಹೆಮ್ಮೆ ಪಡುತ್ತಾಳೆ.

ಗಂಡ ವರುಷವಿಡಿ ವ್ಯಾಪಾರ ಅಂತ ಅಲೆದರೂ ಗಂಗಿಗೆ ಭಯವಿಲ್ಲ. ಏಕೆಂದರೆ ಮೈದುನರು ಹೇಳಿದಂತೆ ಕೇಳುತ್ತಾರೆ. ಗಂಗಿಯ ಒಂದು ಮಾತು ಕೂಡ ಮೀರುವವರಲ್ಲ. ಅತಿಯಾದ ಗೌರವ ಇರುವುದು ಇಲ್ಲಿ ಕಂಡು ಬರುವ ದೃಶ್ಯ. ಅತ್ತಿಗೆ ಎಂದರೆ ತಾಯಿಯ ಸಮಾನ, ದೇವರ ಸಮಾನ, ಎಂದು ಅರಿಯುವ ಮೈದುನರ ಶ್ರೀಮಂತಿಕೆಗೆ ಕಡಿಮೆಯೇ ಇರುವುದಿಲ್ಲ ಮೈದುನರು ಗಂಗಿಯ ಪಾಲಿಗೆ, ಆ ಮನೆತನದ ಪಾಲಿಗೆ, ಪೈಲವಾನರಂತೆ ಕಂಡು ಬರುವ ಸಿಂಹದ ಮರಿಗಳು. ಎಂದು ಮುದುಕಪ್ಪನ ಬಾಯಿಂದ ಹಾಡಿನ ಹೊನಲಾಗಿ ಹರಿಯುತ್ತಾ. ಲಗಳೆಯರ ಮನೆತನದ ಹೆಮ್ಮೆಯನ್ನು ಹೇಳುತ್ತಾನೆ.

ಅತ್ತಿಗೆಯಂದರೆ ದೇವರು ಎಂದು ತಿಳಿದ ತಮ್ಮಂದಿರಿಗೆ, ಅಣ್ಣ ಈರಪ್ಪ ಕೂಡ ಹೆಮ್ಮೆಯ ಅಣ್ಣನಾಗಿ ಮೆರದಿದ್ದಾನೆ. ಮನೆಯಲ್ಲಿ ಸಿರಿ ಸಂಪತ್ತಿಗೇನು ಕಡಿಮೆಯಿಲ್ಲ. ಸಿಕ್ಕಾಪಟ್ಟೆ ಆಸ್ತಿ ಇವರನ್ನು ಹುಡುಕಿಕೊಂಡು ಬರುತ್ತಿದೆ. ಮನೆಯಲ್ಲಿ ಅನುಭವಿಸುವವರೆ ಇಲ್ಲ. ಎಲ್ಲರೂ ದುಡಿಯುವವರೆ. ಈರಪ್ಪನ ವ್ಯಾಪಾರ, ಅಣ್ಣತಮ್ಮಂದಿರ ಹೊಲದ ಕೆಲಸ, ಹೀಗಾಗಿ ಇವರಿಗೆ ಆರ್ಥಿಕತೆಯ ಕೊರತೆ ಎಲ್ಲಿಯು ಕಾಣುವುದಿಲ್ಲ. ಮನೆಯಲ್ಲಿ ಯಾವಾಗಲೂ ಹಬ್ಬದ ವಾತಾವರಣವೇ.

ಖರೇ ಖರೇ ಸಂಗ್ಯಾ ಬಾಳ್ಯ ಪುಟ ಸಂಖ್ಯೆ :4

ಮೂವರು ಅಣ್ಣ ತಮ್ಮಂದಿರು ಊಟಕ್ಕೆ ಕುಳಿತಿರುತ್ತಾರೆ. ಆದರೆ ತಮ್ಮಂದಿರುವ ಊಟ ಮಾಡುವುದೇ ಇಲ್ಲ. ಏಕೆ ಎಂದು ಕೇಳಿದರೂ ಸರಿಯಾಗಿ ಉತ್ತರಿಸುವುದೇಯಿಲ್ಲ. ಒತ್ತಾಯ ಮಾಡಿದಾಗ ಹೇಳುತ್ತಾರೆ. ಅಣ್ಣ ಅತ್ತಿಗೆಯ ಮದುವೆಯಾಗಿ ಐದು ವರ್ಷ ಆಯ್ತು. ಆದರೆ ನಾವು ಅವಳಿಗೆ ಏನನ್ನೂ ಮಾಡಿಸಿಲ್ಲ. ಈ ವರ್ಷವಂತು ನಮಗೆ ಮಾಡಿದೆಲ್ಲಾ ಬಂಗಾರ. ಮುಟ್ಟಿದೆಲ್ಲವು ಲಕ್ಷ್ಮಿ ದೇವತೆ ಚಿನ್ನನೆ ಮಾಡಿಸಿದ್ದಾಳೆ. ಅಂಥದರಾಗ ನಾವು ಅತ್ತಿಗೆಗೆ ಏನಾದರೂ ಬಂಗಾರದ ಒಡವೆ ಮಾಡಿಸಬೇಕು. ಎಂದು ಅಂದಾಗ ಗಂಗಮ್ಮ ಎನ್ನುತ್ತಾಳೆ. ನನಗೆ ಯಾವ ಬಂಗಾರ ಸಿರಿ ಸಂಪತ್ತು ಬೇಡ. ನನಗೆ ಏನನ್ನು ಬೇಕು ಎನ್ನುವ ಮನಸ್ಸಿಲ್ಲ. ಯಾಕೆಂದರೆ ನನಗೆ ನೀವೆ ಬಂಗಾರ, ನೀವೆ ಶೃಂಗಾರ ಎಂದು ಹೃದಯ ತುಂಬಿ ಹೇಳುತ್ತಾರೆ. ಆದರೂ ಅಣ್ಣನಿಗೆ ತಮ್ಮಂದಿರ ಒತ್ತಡವು ಅತಿಯಾಗುತ್ತದೆ. ಇಲ್ಲಣ್ಣ ಈ ವರ್ಷದ ಲಾಭದಲ್ಲಿ ಅತ್ತಿಗೆಗೆ ನಾವು ಏನಾದರೂ ಕಾಣಿಕೆ ಕೊಡಲೇಬೇಕೆಂದು ಹಠ ಮಾಡುತ್ತಾರೆ. ಇವರ ಹಠ ನಿಲ್ಲುವುದೇ ಇಲ್ಲ. ಕೊನೆಗೆ ತಾವೆಲ್ಲರೂ ಊಟ ಮಾಡುವ ಸಮಯದಲ್ಲಿ ಸಂತೋಷದಿಂದ ಬಸವಂತ. ಐದು(5) ತೋಲಿ ಮತ್ತು ಇರಪಕ್ಷಿ ಐದು(5) ತೋಲಿ, ಬಂಗಾರ ಅತ್ತಿಗೆಗೆ ಅಣ್ಣ ಕೊಟ್ಟವನೆಂದು ಸುಳ್ಳು ಹೇಳಿ. ತಾವೇ ಅತಿಯಾದ ಅಕ್ಕರೆಯಿಂದ ಅತ್ತಿಗೆಗೆ ಕೊಡುತ್ತಾರೆ. ಅತ್ತಿಗೆ ಅದನ್ನು ತಿರಸ್ಕರಿಸಿದರೂ ಕೇಳುವ ಸ್ಥಿತಿಯಲ್ಲಿ ಇವರು ಇರುವುದಿಲ್ಲ.

ಚಿಕ್ಕ ವಯಸ್ಸಿನಲ್ಲಿ ತಾಯಿ ಕಳೆದಕೊಂಡ ಮೇಲೆ ಅವರ ತಾಯಿಯ ಜಾಗವನ್ನು ಇವಳು ತುಂಬಿದ್ದಾಳೆ. ಹೀಗಾಗಿ ಗಂಗವ್ವನನ್ನು ಮನೆಯ ಅತ್ತಿಗೆ ಎನ್ನುವುದಕ್ಕಿಂತ ಹೆಚ್ಚಾಗಿ ತಾಯಿಯೇ ಎಂದು ಕರೆದು ಪೂಜ್ಯನಿಯ ಭಾವದಿಂದ ಕಾಣುವ ಇವರಿಗೆ ಅತ್ತಿಗೆ ಸಾಕ್ಷತ ದೇವತೆಯಂತೆ ಇಲ್ಲಿ ಕಂಡು ಬಂದಿದ್ದಾಳೆ. ಕೊನೆಗೆ ಇವರು ಹಠಬಿಡದ ವಿಕ್ರಮನಂತೆ ಎಂಬಂತೆ ಊಟ ಮಾಡುವುದೇಯಿಲ್ಲ. ಕೊನೆಗೆ ಗಂಗಮ್ಮ ತಮ್ಮ ಅಕ್ಕರೆಯ ಮೈದುನರಿಂದ ತಲಾ ಐದೈದು ತೊಲಿ ಬಂಗಾರ ಪಡೆಯುತ್ತಾಳೆ. ಆವಾಗ ಅತಿಯಾದ ಸಂತೋಷದಿಂದ ಇರಪಕ್ಷಿ, ಬಸವಂತ ಊಟ ಮಾಡುತ್ತಾರೆ.ಗಂಡನಾದ ಈರಪ್ಪ ಕುಳಿತು ಮಗುಳ್ನಗೆಯನ್ನು ಬಿರುತ್ತಿರುತ್ತಾನೆ. ಏನೆ ಗಂಗಿ ನಾ ಮದಿವೆ. ಆದಂದಿನಿಂದಲೂ ಹೇಳುತ್ತಲಿಯೇ ಬಂದೆ ಆದರೆ ನನ್ನ ಮಾತು ನೀ ಕೇಳಲಿಲ್ಲ. ಕೊನೆಗೆ ಮೈದುನರ ಮಾತು ಕೇಳಿ ಒಪ್ಪಿಯಲ್ಲ ಎನ್ನುತ್ತಾನೆ. ಮೈದುನರು ಊಟ ಆದ ಮೇಲೆ ಹೊಲಗದ್ದೆಗೆ ಹೋಗುತ್ತಾರೆ. ನಂತರ ಈರಪ್ಪ ಗಂಗಿ ಇಬ್ಬರು ಊಟ ಮಾಡಿ ಹೊರ ಕಟ್ಟೆಯ ಮೇಲೆ ಸಲಿಗೆಯಿಂದ ಸುಲಿಗೆ ಕಾಯಿ ತಿನ್ನುತ್ತ ಗಂಗಿಯನ್ನು ಚೇಷ್ಠೆ ಮಾಡುತ್ತಿರುತ್ತಾನೆ. ಗಂಗಿ ನಾಚಿಕೆಯಿಂದ ಅವರ ಕೈಯಿಂದ ಬಿಡಿಸಿಕೊಂಡು ಮನೆಯ ಒಳಗೆ ಓಡಿ ಹೋಗುತ್ತಾಳೆ.

ಖರೇ ಖರೇ ಸಂಗ್ಯಾ ಬಾಳ್ಯ ಪುಟ ಸಂಖ್ಯೆ :5

ಹತ್ತು ತೊಲಿಯ ಬಂಗಾರ ತನ್ನ ಮೈದುನರ ಬಳುವಳಿಯಿಂದ ಸಂತಸದ ಬುಗ್ಗೆಯಲ್ಲಿರುವ ಗಂಗವ್ವ ಅದೇ ಬಂಗಾರದಿಂದ ಒಂದು ಸುಂದರವಾದ ಕೊರಳ ಹಾರ ಮಾಡಿಸಲು ಪರವ್ವನ ಜೊತೆಗೂಡಿ ಬಂಗಾರದ ಪೇಟೆಗೆ ಬರುತ್ತಾರೆ. ಅಲ್ಲಿ ಅಕ್ಕಸಾಲಿಗನ ಸ್ಥಾನದಲ್ಲಿರುವ ಫತ್ತಾರ ಅಂದರೆ ಅಕ್ಕ ಸಾಲಿಗನು ಹೌದು ಮತ್ತು ಕವಿಯು ಹೌದು ಇತನ ಹತ್ತಿರ ಬಂದು ಬಂಗಾರವನ್ನು ಕೊಟ್ಟು ಒಂದು ಒಳ್ಳೆಯ ಅಂದರ ನಮ್ಮ ಗಂಗವ್ವಳಿಗೆ ಒಪ್ಪುವಂಥ ಒಡವೆ ಮಾಡು ಎಂದು ಹೇಳುತ್ತಾರೆ.

ಅಕ್ಕಸಾಲಿಗಾನದ ಪತ್ತಾರನು ಬಂಗಾರ ಒಡವೆ ಮಾಡುವ ಕಾಯಕದವ ಈತನ ವೃತ್ತಿಯ ಬಗ್ಗೆ ಇಲ್ಲಿ ಮೂಡಿ ಬರುವ ಹಾಡು

ಪತ್ತಾರ, ಈ ಪತ್ತಾರ, ಈ ಪತ್ತಾರ
ಕೈತುಂಬ ಕೆಲಸ ಬಂಗಾರ
ಬರು ಹೋಗುವ ಹೆಣ್ಣು ಶೃಂಗಾರ ||
ಈ ಪತ್ತಾರ, ಈ ಪತ್ತಾರ, ಈ ಪತ್ತಾರ
ಕಾಣದಂಗೆ ಬಂಗಾರ ಕದಿವ
ಹೆಣ್ಣಗಳ ಮನಸ್ಸು ಇವ ಗೆದ್ದಿದವ ||...........1

ಹೀಗೆ ನೋಡಿದರೆ ಪತ್ತಾರ ಈ ಕಥೆಯಲ್ಲಿ ಬಂಗಾರದ ಕೆಲಸ ಮಾಡುವವ, ಇತನ ವೃತ್ತಿಯಿಂದ ಇವನಿಗೆ ಅಕ್ಕಸಾಲಿಗ ಎಂತಲೂ ಹೇಳಬಹುದು. ಬಂಗಾರ ಎಂದರೆ ಯಾವುದೇ, ಸ್ತ್ರೀಯರಿಗೆ ಅದು ಅಪರೂಪ ಅಂಥದರಲ್ಲಿ ಬಂಗಾರದ ಅಂಗಡಿಗೆ ಹೋಗುವವರೆಂದರೆ ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಣುಮಕ್ಕಳೆ, ಅದಕ್ಕಾಗಿಯೇ ಇಲ್ಲಿ ಹೆಣ್ಣುಗಳ ಮನಸ್ಸು ಇವ ಕದ್ದವ ಎನ್ನುವ ಮಾತು ಸರಿ ಎನಿಸುತ್ತದೆ. ಈತನಿಗೆ ಕೈ ತುಂಬ ಕೆಲಸ ಅನೇಕ ಸ್ತ್ರೀಯರು ಬಂದು ಹೋಗುವ ಅಂಗಡಿ ಇದು ಅಂಥದರಲ್ಲಿ ಪತ್ತಾರ ಇಲ್ಲಿ ಕಂಡು ಬರುವದು ಒಬ್ಬ ಸ್ತ್ರೀ ಮೋಹಿಯಂದು, ಯಾವುದೇ ಸ್ತ್ರೀಯರು ಅಂದರೆ ಸೌಂದರ್ಯ ವತಿಯರು ಬಂದರೆ ಮುಗಿಯಿತು. ಅವರ ಸೌಂದರ್ಯವನ್ನು ಕಂಡು ಜೋಲ್ಲು ಸೋರಿಸುವ ಪ್ರವೃತ್ತಿಯವನು ಈ ಪತ್ತಾರ.

ಗಂಗವ್ವ ಮೊದಲೇ ಸೌಂದರ್ಯದ ಖನಿ, ಬಂಗಾರವು ಇವಳ ಮುಂದೆ ನಾಚಬೇಕು. ಬಂಗಾರಕ್ಕಿಂತಲೂ ಫಳಪಳ ಹೊಳೆಯುವ ಇವಳ ಸೌಂದರ್ಯಕ್ಕೆ ಫತ್ತಾರನು ಮಾರು ಹೋಗುತ್ತಾನೆ. ಅವಳು ಬಂದಿದ್ದೆ ತಡ ಕಾಮಾಂಧುರನಾಗಿ ವರ್ತಿಸುತ್ತಾನೆ. ಗಂಗವ್ವ ಅಂಗಡಿಯಲ್ಲಿ ಬಂದವಳೆ ಪಾರವ್ವನೊಂದಿಗೆ ಕೆಲಹೊತ್ತು ಕುಳಿತು ತನಗೆ ಬೇಕಾದ ಒಡವೆಯ ಮಾಹಿತಿಯನ್ನು ಹೇಳುತ್ತಾಳೆ. ಆವಾಗ ಫತ್ತರನು ಇನ್ನು ಒಡವೆಯ ಬಗ್ಗೆ ಏನೆಲ್ಲಾ ಕೇಳುತ್ತಿರುತ್ತಾನೆ. ಇದರಿಂದ ಗಂಗವ್ವಳಿಗೆ ಮನೆಯ ಕಡೆ ಬರುವ ಹೊತ್ತು ಬಂದಿರುತ್ತದೆ. ಪರವ್ವ ನಾ ಮನಿಗೆ ಹೋಗುತ್ತೇನೆ. ಪತ್ತರಣ್ಣಾ ಏನೆಲ್ಲಾ ಹೇಳುತ್ತಾನ ಅದನ್ನು ಬರಕೊಂಡು ನೀ ಬಾ ನಾನು ಹೋಗುತ್ತೇನೆ ಎಂದು ಹೇಳುತ್ತಾಳೆ.

ಖರೇ ಖರೇ ಸಂಗ್ಯಾ ಬಾಳ್ಯ ಪುಟ ಸಂಖ್ಯೆ : 9

ಗಂಗವ್ವನ ಬಗ್ಗೆ ಮೊದಲೇ ಅಂದರೆ, ಬಂದ ಕ್ಷಣದಲ್ಲಿಯೇ ಕೇಳುತ್ತಾನೆ, ಇವಳನ್ನು ನಾ ನೋಡಿಯೇ ಇಲ್ಲ. ಎಂದಾಗ ಇವಳು ಬೈಲವಾಡದವಳು. ಅಂದರೆ ನಮ್ಮೂರು ಬೈಲವಾಡನೆ. ಆದರೆ ಕೆಲವು ವರ್ಷಗಳ ಹಿಂದೆ ನಾನು ಬೈಲವಾಡ ಬಿಟ್ಟು ಬಂದವನು. ಹೀಗಾಗಿ ಅವಳ ಪರಿಚಯ ನಮಗಿಲ್ಲ ಎನ್ನುತ್ತಾನೆ. ಗಂಗವ್ವ ಮನೆಗೆ ಹೋಗುತ್ತಾಳೆ.

ಗಂಗವ್ವ ಹೋದದ್ದೆ ತಡ ಪತ್ತಾರ ಪರವ್ವನನ್ನು ಮಾತಿಗೆ ಆರಂಭಿಸುತ್ತಾನೆ. ಏನ ಪರವ್ವ ನಿಮ್ಮ ಗಂಗವ್ವ ಬಹಳ ಚನ್ನಾಗಿ ಅದಾಳ ಎಂದು ಅವಳ ವರ್ಣನೆಯನ್ನು ಪದಗಳಿಗೆ ಪದ ಜೋಡಿಸಿ ವರ್ಣಿಸುತ್ತಾನೆ. ಇದನ್ನರಿತ ಪರವ್ವ ಸಿಟ್ಟನಿಂದ.

ಪರವ್ವ : (ಎಚ್ಚರಿಸುವಂತೆ) ಏ ಫತ್ತಾರಪ್ಪ. ಬೇಗ ಬರದು ಮುಗಸು. ಎಲ್ಲಿಗೆ ಬಂತು ?

ಫತ್ತಾರ : ಎಲ್ಲಿಗೆ ಬಂತು ? ಆಗ ಸೊಂಟಕ್ಕೆ ಬಂದಿತ್ತು : ಈಗ ಕುತ್ತಿಗೆ ಮಟ್ಟ ಬಂತು ?

ಪರವ್ವ : ಏನ ಹಾಗಂದರೆ

ಪತ್ತಾರ : ಹಾಗಂದರೆ ಹೀಂಗ (ಎರಡೂ ಕೈ ಬೆರಳು ಕೊಂಡಿ ಮಾಡುತ್ತಾನೆ) ?........1

ಇನ್ನು ಮುಂದುವರೆದು ಪರವ್ವ ಬಿಡಿಸ ಹೇಳಲಾ. ಎಂದಾಗ ಪತ್ತಾರ ತನ್ನ ಮನಸ್ಸಿನ ಸ್ಥಿತಿಯನ್ನು ಹೇಳುತ್ತಾನೆ. ನೀ ನನಗೆ ಅಕ್ಕನ ಸಮಾನ ಹ್ಯಾಂಗಾರ ಮಾಡಿ. ಗಂಗವ್ವನ ನನಗೆ ಒಲಿಸಿ ಕೊಡು. ಯಾಕೋ ಅವಳ ನೋಡಿದ ಕ್ಷಣದಲ್ಲಿಯೇ ನನ್ನ ಮನಸ್ಸು ಅವಳತ್ತ ಹರಿತದ ಎಂದು ಹೇಳುತ್ತಾನೆ.

ದುಂಡ ಮಾರಿ, ತುಟಿಯು ತೊಂಡಿ ಹಣ್ಣು ।
ಈಕಿ ಮೈಯು ಹಾಲಿನ ಕೆನಿ ಬಣ್ಣ ॥
ಕೈಯ ಮುಗಿವೆ ಮಾಡಿಸು ಗೆಳೆತನ।
ಕಾಲ ಬೀಳುವ ತೋರು ಕರುಣ ॥.............1

ನನ್ನ ಮನಸ್ಸಿನ ಮಾಮರದಾಗ ಗಂಗಾ ಕೋಗಿಲೆಯಾಗಿ ಕೂಗಲಾಕ ಹತ್ಯಾಳ ನವಿಲಾಗಿ ಕುಣಿಲಾಕ ಹತ್ಯಾಳ, ನೀ ಸಹಾಯ ಮಾಡಬೇಕು.

ಎಂದು ಅಂದ ತಕ್ಷಣವೇ ಪರವ್ವ ಬೆಚ್ಚಿ ಬೀಳುತ್ತಾಳೆ. ಏನಿದು ಪತ್ತಾರಣ್ಣ ನೀ ಮಾಡದು ಸರಿನಾ ಎಂದು ಗದರಿಸುತ್ತಾಳೆ. ಆದರೂ ಪತ್ತಾರನು ಬಿಡುವುದೇಯಿಲ್ಲ. ಮುಂದೆ ಪರವ್ವನನ್ನು ಬಂಗಾರದ ಆಸೆಗೆ ಅಂಟಿಸಿಬಿಡುತ್ತಾನೆ. ನೀ ಮನಸ್ಸು ಮಾಡಿದರೆ ನಿನಗೆ ಒಂದು ತೋಲಿ ಬಂಗಾರ ಕೊಡುತ್ತೇನೆ. ಪೂರ್ತಿ ಅವಳನ್ನ ನನಗೆ ಒಲಿಸಿಕೊಟ್ಟರೆ ನಿನಗೆ ಇನ್ನೊಂದು ತೋಲಿ ಬಂಗಾರ ಕೊಡುತ್ತೇನೆ. ನಿ ಹ್ಯಾಂಗಾರ ಮಾಡಿ ಈ ಕೆಲಸ ಮಾಡಿಸು, ನಿನಗೆ ಒಟ್ಟು ಎರಡು ತೊಲಿ ಬಂಗಾರ ಕೊಡುತ್ತೆನೆಂದು ಹೇಳುತ್ತಾನೆ.

ಖರೇ ಖರೇ ಸಂಗ್ಯಾ ಬಾಳ್ಯ ಪುಟ ಸಂಖ್ಯೆ : 12

ಪುಕ್ಕಟ್ಟೆಯಾಗಿ ಎರಡು ತೋಲಿ ಬಂಗಾರ ಬರುತ್ತದೆಂದ ಮೇಲೆ ಪರವ್ವನ ಮನಸ್ಸು ಕೂಡ ಬದಲಾವಣೆಯ ಹಾದಿ ಹಿಡಿಯುತ್ತದೆ. ಅನಾವಶ್ಯಕವಾಗಿ ಬಯಸದೇ ಎರಡು ತೋಲಿ ಬಂಗಾರ ಬರುತ್ತದಲ್ಲ. ಎಂದು ಕೊಂಡ ಪರವ್ವ ಸ್ವಲ್ಪ ಮೆತ್ತಗಾಗುತ್ತಾಳೆ. ಪತ್ತಾರನ ಕೈಯಲ್ಲಿ ಅಂದರೆ ಆತನ ಹಿಡಿತಕ್ಕೆ ಸಿಲುಕುವಂತಾಗುತ್ತಾಳೆ. ನೋಡು ಪತ್ತಾರಣ್ಣ ನನಗೆ ಅವಳನ್ನು ನಿನಗ ಒಲಿಸುವ ಕೆಲಸ ನನ್ನಿಂದ ಆಗದ ಮಾತು. ಇಷ್ಟ ಮಾತ್ರ ಮಾಡ್ತಿನಿ.

ಅವಳ ಮುಂದ ನಿನ್ನ ವರ್ಣನ ಮಾಡ್ತಿನಿ. ಆದರ ನಿನ್ನ ಆಸೆ ಅವಳಿಗೆ, ನನಗಂತೂ ಹೇಳಲು ಆಗುವುದೇಯಿಲ್ಲ. ನಾಳೆ ಅವಳಿಗೆ ನಿನ್ನ ಬಂಗಾರ ಅಂಗಡಿಗೆ ಕರ್‍ಕಂಡು ಬಂದು, ಅವಳನ್ನು ಒಬ್ಬಳಿಗೆ ಬಿಟ್ಟು ನಾ ಬೇರೆ ಕೆಲಸದ ನೆಪ ಹೇಳಿ ಹೋಗುತ್ತೇನೆ. ನೀ ಏನನ್ನೂ ಕೇಳುವುದಿದೆ ಅದನ್ನು ಕೇಳು ಎಂದು ಹೊರಡುತ್ತಾಳೆ. ಹೊರಡುವಾಗ ಒಂದು ತೋಲಿ ಬಂಗಾರ ತೆಗೆದುಕೊಂಡೆ ಅಲ್ಲಿಂದ ಕಾಲು ತೆಗೆಯುತ್ತಾಳೆ.

ಗಂಗಾ ಮತ್ತು ಈರಪ್ಪಾ ಮನೆಯಲ್ಲಿ ಆರಾಮವಾಗಿ ಕಾಲ ಕಳೆಯುತ್ತಿರುತ್ತಾರೆ. ಗಂಡ, ಹೆಂಡತಿಯರಿಬ್ಬರು ಸ್ವಚಂದವಾಗಿ ಹರಟೆ ಹೊಡೆಯುತ್ತಾರೆ. ಗಂಗಿಗೆ ಎಲ್ಲಿಲ್ಲದ ಸಂತಸ ಗಂಡ ಹೆಂಡತಿ ಆನಂದದಿಂದಿರುವಾಗ. ಮೈದುನರು ಮನೆಗೆ ಬರದಿರುವುದಕ್ಕೆ ಗಂಗಾ ಚಡಪಡಿಸುತ್ತಾಳೆ. ಮಕ್ಕಳು ಎಷ್ಟಂತ ದುಡಿಯಬೇಕು. ಎಂದು ನೋವಿನ ಮಾತುಗಳನ್ನು ಆಡುತ್ತಿರುವಾಗಲೇ ಸಂಗಣ್ಣ ಮನೆಗೆ ಬರುತ್ತಾನೆ. ಸಂಗಣ್ಣ ಮತ್ತು ಈರಪ್ಪ ಇಬ್ಬರೂ ಆತ್ಮೀಯ ಗೆಳೆಯರು, ಒಬ್ಬರನ್ನೊಬ್ಬರು ಕಂಡರೆ ಅತಿಯಾದ ಗೌರವಾದರಗಳು. ಅಷ್ಟೊಂದು ಸಲಿಗೆಯಿಂದ ಕಾಲಕಳೆಯುತ್ತಾರೆ. ಗಂಗಿಯಂತು ಇವರಿಬ್ಬರ ಸಲಿಗೆಯನ್ನು ಕಂಡು ಏನ ಇಬ್ಬರು ಥೇಟ ಅಣ್ಣ ತಮ್ಮ ರಾಂಗ ಇದ್ದಿರಿ ಎಂದು ಚೇಷ್ಟೆ ಮಾಡುತ್ತಾಳೆ. ಈರಪ್ಪ ಮತ್ತು ಸಂಗಣ್ಣ ಇಬ್ಬರು ತಮ್ಮ ತಮ್ಮ ವ್ಯಾಪಾರದ ಬಗ್ಗೆ ಮಾತನಾಡುತ್ತಾರೆ. ಅವರಿಗೆ ವ್ಯಾಪಾರದ ಚಿಂತೆ. ಅಪರೂಪದ ಸಂಗತಿಗಳು ಚರ್ಚಿಸುತ್ತಾ ಮಾತನಾಡುತ್ತಿರುತ್ತಾರೆ. ಸಂಗಣ್ಣ ಗಂಗವ್ವಳಿಗೆ ಪ್ರತಿಯೊಂದು ಮಾತಿನಲ್ಲೂ, ನುಡಿಯಲ್ಲೂ ಕೂಡ ತಂಗಿಯೆಂದೇ ಕರೆಯುತ್ತಾನೆ. ಒಂದಷ್ಟು ಕಲ್ಮಶ ಆತನ ಮನಸ್ಸಿನಲ್ಲಿ ಇರುವುದಿಲ್ಲ. ತುಂಬಾ ಅನೋನ್ಯವಾಗಿ ಕಾಲಕಳೆಯುವ ಸುಖ ಕುಂಟುಂಬ ಅದು. ಲಗಳೆರ ಮನೆತನಕ್ಕೆ ಹೇಳಿಸಿ ಮಾಡಿದಂಥ ಗೆಳೆಯ ಆತ.

ಸಂಗಣ್ಣ, ಈರಪ್ಪಾ, ಗಂಗಮ್ಮ ಮೂವರು ಮಾತನಾಡುತ್ತಿರುವಾಗ. ಪರವ್ವ ಏನ್ಮಾಡ್ತಾಯಿದ್ದೆ ಗಂಗವ್ವ ತಾಯಿ, ಎಂದು ಪರವ್ವ ಮನೆಯಲ್ಲಿ ಬರುತ್ತಾಳೆ. ಎಲ್ಲರೂ ಆನಂದದಿಂದ ಕುಳಿತಿರುತ್ತಾರೆ. ಗಂಗಮ್ಮ ಪರವ್ವ ಇಬ್ಬರೂ ಎದ್ದು ಹೋಗಿ ಮಾತನಾಡುತ್ತಾರೆ. ಬಂಗಾರದ ಅಂಗಡಿಯಲ್ಲಿ ಪತ್ತರಣ ಮಾಡಿರುವ ಒಡವೆಗಳ ಬಗ್ಗೆ ಹೇಳುತ್ತಾಳೆ. ಒಡವೆ ವರ್ಣನೆಯನ್ನು ಮಾಡುತ್ತಾಳೆ ಜೊತೆಗೆ ಪತ್ತಾರನ ವರ್ಣನೆಯನ್ನು ಅತಿಯಾಗಿ ಮಾಡುತ್ತಾಳೆ.

ಖರೇ ಖರೇ ಸಂಗ್ಯಾ ಬಾಳ್ಯ ಪುಟ ಸಂಖ್ಯೆ : 15

ಏನ ಒಡವಿ ಮಾಡ್ಯಾನ ತಾಯಿ ಪತ್ತಾರ ನಡಿನೀನ ಅಲ್ಲಿಗೆ ಬರಬೇಕೆಂತ ಹೇಳ್ಯಾನ ಯಾಕಂದ್ರ ನಿನಗ ಒಪ್ಪುವ ಹಾಂಗ ಇನ್ನೂ ಕುಸುರಿ ಕೊಡ್ತಿನಿ ಅಂತ ಹೇಳ್ಯಾನ ಎಂದು, ಹೇಳಿದಾಗ ಗಂಡ ಈರಪ್ಪನ ಪರವಾನಿಗೆ ಪಡೆದುಕೊಂಡ ಗಂಗವ್ವ ಅಂಗಡಿಗೆ ಹೋಗಲು ಸಿದ್ಧಳಾಗುತ್ತಾಳೆ. ದಾರಿಯುದಕ್ಕೂ ಹೋಗುವಾಗ ಆ ಪರವ್ವ ಪತ್ತಾರನ ವರ್ಣನೆಯನ್ನು ಮಾಡತ್ತಲಿಯೇ ಹೋಗುತ್ತಾಳೆ. ಗಂಗವ್ವನ ಒಡವಿಗಳೊಂದಿಗೆ ಪತ್ತರನ ಕೈ ಚಳಕದ ವರ್ಣನೆಯು ಗಂಗವ್ವಳಿಗೆ ಮನ ಮುಟ್ಟುವಂತೆ ವರ್ಣನೆ ಮಾಡುತ್ತಿರುತ್ತಾಳೆ. ಇಬ್ಬರು ಸೇರಿಕೊಂಡು ಪತ್ತಾರನ ಅಂಗಡಿಗೆ ಹೋಗುತ್ತಾರೆ. ಮೋದಲೆ ಯೋಜನೆಯನ್ನು ಹಾಕಿರುವ ಪರವ್ವಳ ಪ್ರಕಾರ ಗಂಗವ್ವಳನ್ನು ಅವನ ಅಂಗಡಿಯಲ್ಲಿ ಬಿಟ್ಟು ತುರಾತುರಿಯಲ್ಲಿ ಗಡ ಬಡಿಯಿಂದ ಮನೆಯಿಂದ ಬರುವಾಗ ಬಾಗಿಲು ಹಾಕಿ ಬಂದಿಲ್ಲ. ಎಂದು ಗಡಬಿಡಿಯಿಂದ ಅಲ್ಲಿಂದ ಎದ್ದು ಪರವ್ವ ಮನೆಯ ಕಡೆಗೆ ಬರುತ್ತಾಳೆ.

ಗಂಗವ್ವಳ ರೂಪ ಲಾವಣ್ಯಕ್ಕೆ ತತ್ತರಿಸಿ ಹೋಗಿರುವ ಪತ್ತಾರ, ಹ್ಯಾಂಗರ ಮಾಡಿ ಗಂಗಿಯನ್ನು ಮುಟ್ಟಬೇಕು. ಅವಳನ್ನು ಅತಿ ಸಲಿಗೆಯಿಂದ ಮಾತಾಡಿ ಅವಳ ರೂಪ ಲಾವಣ್ಯ ಸವಿಯಬೇಕು ಎಂದು ಕೊಂಡು ಗಂಗವ್ವಳ ಕೈ ಮುಟ್ಟುತ್ತಾನೆ. ಇದರಿಂದ ಕುಪಿತಳಾದ ಗಂಗವ್ವ ಒಮ್ಮಿಂದೊಮ್ಮೆ ಪಟ್ಟನೆ ಎದ್ದು ನಿಂತು ತಗೋ ನಿನ್ನ ನೂರ ರೂಪಾಯಿ ಮಜೂರಿ, ಕಟ್ಟಿಕೋಡು ನನ ಬಂಗಾರ ಎಂದು ಹೇಳ್ತುತಾಳೆ. ಆಗ ಪತ್ತಾರ ಹಾಂಗಲ್ಲ ಗಂಗವ್ವ ನಿನಗೆ ಮತ್ತ ಹತ್ತು ತೋಲಿ ಕೊಡುತ್ತೀನಿ ನೀ ಹುಂ ಅನ್ನು ಎನ್ನುತ್ತಾನೆ. ಗಂಗಿ ಯಾವುದಕ್ಕೂ ಹೂಂ ಅನಬೇಕು ಎಂದಾಗ ನೀ ನನಗೆ ಪ್ರೀತಿ ಮಾಡು ಎಂದು ಹೇಳುತ್ತಾನೆ. ಗಂಗವ್ವ ಬೆಂಕಿಯಂತಾಗಿ ನಿಮ್ಮಂಥ ದೊಡ್ಡವರು, ಅಂದರ ಸಭ್ಯರು ಆಡುವ ಮಾತಲ್ಲ ಇದು. ಎಂದು ಗದರಿಸಿ ಆತನಿಂದ ಎದ್ದು ನೇರವಾಗಿ ಮನೆಯ ಹಾದಿ ಹಿಡಿಯ್ತುತಾಳೆ.

ಸಂಗಣ್ಣನ ಜೀವದ ಗೆಳೆಯ ಅಂದರೆ ಬಾಳಣ್ಣ, ಬಾಳಣ್ಣ ಎಂದರೆ ಸಂಗ್ಯಾನಿಗೆ ಎಲ್ಲಿಲ್ಲದ ಪ್ರೀತಿ. ಅವರ ಗೆಳೆತನ ಅತಿಯಾದ ರುಚಿಯಿಂದ ಹುಟ್ಟುಕೊಂಡಿದೆ. ಸಂಗ್ಯಾಬಾಳ್ಯರ ಪ್ರೀತಿಯು ಅತಿಯಾಗಿ ಈ ಕೃತಿಯಲ್ಲಿ ಮೈಗೂಡಿಸಿಕೊಂಡಿದೆ. ಬಾಳಣ್ಣ ಸಂಗಣ್ಣ ಜೀವದ ಜೋಡಿ ಗೆಳೆಯರು. ಆದರೆ ಸಂಗಣ್ಣನಿಗೆ ಇರುವಷ್ಟು ಶ್ರೀಮಂತಿಕೆಯು ಬಾಳಣ್ಣನಿಗೆ ಇರುವುದಿಲ್ಲ. ಆದರೆ ಇಲ್ಲಿ ಅಂದರೆ ಗೆಳೆತನದಲ್ಲಿ ಬಡವ - ಬಲ್ಲಿದ ಎನ್ನುವ ಭೇದ ಯಾವದೂ ಇಲ್ಲಿ ಕಾಣುವುದಿಲ್ಲ. ಸಂಗಣ್ಣ ತನಗೆ ಎಂತಹ ಬಟ್ಟೆ, ಬರಿ, ಇದೆಯೋ. ಅದೇ ರೀತಿಯಲ್ಲಿ ಬಾಣ್ಣನಿಗೂ ಇರಲಿ ಎನ್ನುವ ಆಶಯ ಸಂಗಣ್ಣನದು. ಹೀಗಾಗಿ ಈರಪ್ಪ ತನ್ನ ಗೆಳೆಯನಾದ ಸಂಗಣ್ಣನಿಗೆ ಕೊಟ್ಟ , ಜರದಾರಿ ರುಮಾಲು ಸಂಗಣ್ಣ ತನ್ನ ಗೆಳೆಯ ಬಾಣ್ಣಾನಿಗೆ ಕೊಡುತ್ತಾನೆ ಬಾಳಣ್ಣ ಬೇಡ ಸಂಗಣ್ಣ ಇದು ನಿನಗೆ ಅಂತ ಈರಪ್ಪಣ್ಣ ಕೊಟ್ಟಾನ ಅದು ನೀನು ಇಟಗೋ ಎಂದರೂ ಇಲ್ಲಿ ಸಂಗಣ್ಣ ಕೇಳುವುದಿಲ್ಲ. ಅದನ್ನು ಬಾಳಣ್ಣನಿಗೆ ಕೊಡುತ್ತಾನೆ.

ಖರೇ ಖರೇ ಸಂಗ್ಯಾ ಬಾಳ್ಯ ಪುಟ ಸಂಖ್ಯೆ : 28

ಹೀಗೆ ಇರುವಾಗ ಸಂಗಣ್ಣಾ ತನ್ನ ಗೆಳೆಯ ಬಾಳಣ್ಣಾನ ಸ್ಥಿತಿಯನ್ನು ಅರಿತು ಪೇಟೆಗೆ ಬಾಳಣ್ಣಾನನ್ನು ಕರೆದುಕೊಂಡು ಹೋಗುತ್ತಾನೆ. ಅಂಗಡಿಯಲ್ಲಿ ಗುಜರಾತದಿಂದ ವ್ಯಾಪಾರಕ್ಕೆಂದು ಬಂದಿರುವ ಮಾರವಾಡಿಯ ಹತ್ತಿರ ಸಂಗಣ್ಣಾ ತನ್ನ ಗೆಳೆಯ ಬಾಳಣ್ಣಾನಿಗೆ ಜರದಾರಿ ರುಮಾಲು, ಬಟ್ಟೆ ಬರಿ ಎಲ್ಲವೂ ಕೊಡಿಸುತ್ತಾನೆ. ಗೆಳೆಯ ಅಂದರೆ ಥೇಟ ನನ್ನಹಾಂಗೆ ಇರಬೇಕು. ಇಲ್ಲದಿದ್ದರೆ ನನ್ನ ಗೆಳೆಯ ಅಂತ ಹ್ಯಾಗೆ ಕರೆಯುತ್ತಾರೆ. ಎಂದು ಸಂತೋಷದಿಂದ ಬಾಳಣ್ಣಾನಿಗೆ ಬಟ್ಟೆ ಕೊಡಿಸಿ ಅತಿ ಆನಂದದಿಂದ ಮನೆಗೆ ಬರುತ್ತಾರೆ. ಬಾಳಣ್ಣಾ ಎಂದರೆ ಸಂಗಣ್ಣಾ, ಸಂಗಣ್ಣಾ ಎಂದರೆ ಬಾಳಣ್ಣಾ ಎನ್ನುವ ಅನ್ಯೋನ್ಯವಾದ ಗೆಳೆತನ ಇದಾಗಿದೆ. ಹೀಗಾಗಿ ಸಂಗ್ಯಾ ಬಾಳ್ಯಾರ ಗೆಳೆತನ ಅಪರೂಪವೆಂಬಂತೆ ಕಂಡು ಬಂದಿದೆ. ಬಟ್ಟೆಗಳನ್ನು ಖರಿದಿಸಿ ಮನೆಗೆ ಹಿಂತಿರುಗುವಾಗ ಆನಂದದಿಂದ ಕುಣಿಯುತ್ತಾ. ಹಾಡುತ್ತಾ, ಅತಿ ಪ್ರೀತಿಯಿಂದ ಕಾಲ ಕಳೆಯುತ್ತಾ ಮನೆಯ ಅಂಗಳಕ್ಕೆ ಬಂದು ಮತ್ತೆ ಪಗಡೆಯಾಟದಲ್ಲಿ ತೊಡಗುತ್ತಾರೆ. ಹಾಗೂ ಸಂಗ್ಯಾನಿಗೆ ಪಗಡೆ ಆಡುವ ಹುಚ್ಚು ಅತಿಯಾಗಿದೆ, ಪಗಡೆ ಆಟ ಅಂದರೆ ಪಂಚ ಪ್ರಾಣ ಬಾಳಣ್ಣಾ ಆತನ ಸಹಾಯಕ್ಕಾಗಿ ನಿಂತು ಕೊಂಡಿರುತ್ತಾನೆ. ಒಟ್ಟಾರೆಯಾಗಿ ಸಂಗ್ಯಾಬಾಳ್ಯಾರ ಪ್ರೀತಿಯು ಅತಿ ಅಕ್ಕರೆಯಿಂದ ಕೂಡಿದೆ ಎಂದು ಹೇಳಬಹುದು.

ಪತ್ತಾರ ಗಂಗಿಯನ್ನು ಹೇಗಾದರೂ ಮಾಡಿ ಪುಸಲಾಯಿಸುವ ತಂತ್ರವೇನು ಮಾಡುತ್ತಾನೆ. ಆತನ ತಂತ್ರಗಳು ಫಲಿಸುವುದಿಲ್ಲ. ಗಂಗವ್ವನ ಹೆದರಿಸಿ, ಬೆದರಿಸಿ ಅನೇಕ ಇಲ್ಲಸಲ್ಲದ ಅಪವಾದ ಹೇರುವ ಕುತಂತ್ರದ ಹಾದಿಯನ್ನು ಹಿಡಿದರೂ ಗಂಗವ್ವ ಜಗ್ಗಲಿಲ್ಲ. ಇನ್ನೂ ಮುಂದೆ ಏನಾದರೂ ಮಾಡಲೇಬೇಕು. ಗಂಗಿಯನ್ನು ಕಾಡಿಸಿರುವ ಪರಿ ಎಲ್ಲವೂ ನೂರಾಬಟ್ಟೆಯಾಗಬೇಕು. ಅವಳ ಸೌಂದರ್ಯಕ್ಕೆ ಮಾರು ಹೋಗಿ ಯಾವ ಮಾರ್ಗದಿಂದಾದರೂ ಸರಿ ಅವಳ ಸಂಗ ಮಾಡಲು ಏನೆಲ್ಲಾ ತಂತ್ರಗಳು ವಿಫಲವಾಗುತ್ತವೆ. ಪರವ್ವಳ ಉಪಾಯದಂತೆ ಹೋದರು. ಇಲ್ಲಿ ಪತ್ತಾರನ ನಿರೀಕ್ಷೆಯ ಉಪಾಯ ನೀರು ಕುಡಿಯುತ್ತದೆ. ಆತನ ಕುತಂತ್ರಗಳು ವಿಫಲಗೊಳ್ಳುತ್ತದೆ. ಗರತಿ ಎನಿಸಿಕೊಂಡ ಗಂಗವ್ವ ಪತ್ತಾರನನ್ನು ತಿದ್ದುವತ್ತ ಮನಸ್ಸು ಹರಿಸಿದರೂ ಅಲ್ಲಿ ಇವಳ ಪ್ರಯೋಗವು ಫಲಪ್ರದವಾಗವುದಿಲ್ಲ. ಇದರಿಂದ ಈತನ ಕೆಟ್ಟದಾರಿಯ ಯೋಚನೆಗಳು ಮಾತ್ರ ಮುಂದುವರಿಯುತ್ತಲೆ ಇರುತ್ತವೆ.

ಪತ್ತಾರನು ಇಲ್ಲಿ ಒಬ್ಬ ಕೆಟ್ಟ ವ್ಯಕ್ತಿಯಾಗಿ ಕಾಣುತ್ತಾನೆ. ಒಂದು ಸಭ್ಯ ಮನೆತನ ಸುಸಂಸ್ಕೃತ ಮನೆತನ. ಅಂಥದರಲ್ಲಿ ಸೌಂದರ್ಯವತಿ ಎಂದ ಮಾತ್ರಕ್ಕೆ ಅವಳನ್ನು ತನ್ನ ತೋಳ ತೆಕ್ಕೆಯಲ್ಲಿ ಪಡೆಯುವ ಇವನ ಆಶೆಗೇನು ಕಮ್ಮಿಯಿಲ್ಲ. ಗಂಗವ್ವ ಒಬ್ಬಳೆ ತನ್ನ ಅಂಗಡಿಯಲ್ಲಿ ಇರುವಾಗ.

ಏನ ಬಗೆ, ಬ್ಯಲೆಗೆ ಬದ್ದಿ ಭಾಳ ದಿನಕ
ಹುಣಿವಿ ಚಂದ್ರ ಮೂಡಿಧಾಂಗ ಮರ್ತೇಕ।
ಕಣ್ಣಿಗೆ ದೀಪ ಹಚ್ಚಿಂಥಾಗ ನಿನ್ನ ಬೆಳಕ।
ಜರದ ಸೆಲ್ಲೆ ಹಾಸತೀನಿ ನಿನ ಪಾದ ಬುಡಕ।
ಹುಡಗಿ ಮಾತನಾಡ ಜರಾನನ್ನ ಸೋಂಕ।
ಬಾಳೆ ಮಾಡು ಜಂದಗಾನಿ ಯಾಕ ಬೇಕ।

ಖರೇ ಖರೇ ಸಂಗ್ಯಾ ಬಾಳ್ಯ ಪುಟ ಸಂಖ್ಯೆ : 23

ಎನ್ನುತ್ತಲ್ಲಿಯೇ ಗರತಿ ಗಂಗವ್ವನ ಹತ್ತಿರ ರಾಯಪ್ಪ ಬಂದಾಗ, ಗಂಗವ್ವ ಎದ್ದು ನಿಂತು ಈತನ ಕುತಂತ್ರಕ್ಕೆ ತಿರಸ್ಕರಿಸುತ್ತಾಳೆ. ಮೊದಲೇ ಗತಿ ಇಲ್ಲದ ದರಿದ್ರ ನಾಯಿ ತರಹ ಇರುವ ಇವನ ಕಾಮಾತುರದ ರೀತಿಯಿಂದ ಸಿಟ್ಟಿಗೆ ಬಂದು ಗಂಗವ್ವ ಬೆಚ್ಚಿ ಬೀಳುತ್ತಾಳೆ. ಪತ್ತಾರನಿಗೆ ಬೈದು ಆತನಿಂದ ಜಾರಿಕೊಂಡು, ಆತನಿಗೆ ಕೊಡಬೇಕಾದ ಮಜೂರಿ ಕೊಟ್ಟು ಅಲ್ಲಿಂದ ಅಂದರೆ ಆತನ ಕೈಯಿಂದ ತಪ್ಪಿಸಿಕೊಂಡು ಮನೆಯದಾರಿ ತುಳಿದ ಗಂಗವ್ವ ಯಾವದೋ ಒಂದು ಚಿಂತೆಯಲ್ಲಿ ಮನೆಗೆ ಬಂದು ಸೇರುತ್ತಾಳೆ.

ಪತ್ತಾರ ಇನ್ನೂ ಮುಂದೆ ಸೌಂದರ್ಯದ ಚಲುವೆ ನನ್ನ ಕೈಗೆ ಸಿಗುವುದಿಲ್ಲ ಎಂದು ಅರಿತ ಕ್ಷಣವೇ ತನ್ನ ಮುಂದಿನ ಯೋಚನೆಗಳನ್ನು ಜಾರಿಗೆ ತರುವಲ್ಲಿ ಪ್ರಯತ್ನಿಸುತ್ತಾನೆ. ಗಂಗಿಯಂತು ಎನಗೆ ಸಿಗುವ ಸಾಧ್ಯತೆಯಿಲ್ಲ. ಅವಳನ್ನು ಏನು ಮಾಡಲಿ ಎಂದು ಕುತಂತ್ರ ತನಕ್ಕೆ ಇಳಿಯುತ್ತಾನೆ. ಗಂಗಿ ಎನ್ನ ಕೈಗೆ ಸಿಗದಿದ್ದರೆ ಏನಾಯ್ತೂ ಇವಳ ಮಾನ ಮರ್ಯಾದೆ ಯಾವುದೇ ರೀತಿಯಾದರೂ ಸರಿ ಯಾವುದೇ ಮಾರ್ಗವಾದರೂ ಸರಿ, ಇವಳ ಚಾರಿತ್ರ್ಯ ಹಾಳು ಮಾಡಲೇಬೇಕು. ಇದು ಮಾಡದಿದ್ದರೆ ಬಿಡುವುದೆಯಿಲ್ಲ. ಇವಳ ಗಂಡನ ಗೆಳೆತನ ಬೆಳಸಿ ಗಂಡನನ್ನು ನನ್ನ ಕೈಗೆ ತೆಗೆದುಕೊಂಡು ಗಂಗಿಯ ಬಗ್ಗೆ ಇಲ್ಲಸಲ್ಲದ ಅಪವಾದಗಳು ಸೃಷ್ಠಿಸಿ ಆತನ ಮನಸ್ಸು ಗಂಗಿಯ ಮೇಲೆ ಸಂಶಯ ಬರುವಂತೆ ಮಾಡಬೇಕೆಂದು ನಿರ್ಧಾರ ಮಾಡುತ್ತಾನೆ.

ವ್ಯಾಪಾರಕ್ಕೆಂದು ಹೋದ ಈರಪ್ಪಾ ಊರಿನಿಂದ ಊರಿಗೆ ತಿರಗುವ ಮನುಷ್ಯ ಮತ್ತೆ ವ್ಯಾಪಾರ ಸಲುವಾಗಿ ಬಳ್ಳಾರಿಗೆ ಹೋಗಬೇಕು. ಹೋಗುವಾಗ ತಮ್ಮಂದಿರು ಬೇಡ ಎನ್ನುತ್ತಾರೆ. ಆದರೆ ಈರಪ್ಪ ಹಾಗಾಗಲಪ್ಪ ವ್ಯಾಪಾರ ಅಂದ್ರೆ ಹೋಗಲೇಬೇಕು. ಏಕೆಂದರೆ ಕುಂತು ಏನ ಮಾಡಬೇಕು. ಅದರಿಂದ ಯಾವ ಲಾಭ , ಶಕ್ತಿ ಇರುವವರೆಗೂ ದುಡಿಯಬೇಕು. ಎಂದು ಹೇಳುತ್ತಿದ್ದಂತೆಯೇ ಹೊರಬಾಗಿಲಲ್ಲಿ ಪತ್ತಾರ ರಾಯಪ್ಪ ಬಂದಿರುತ್ತಾನೆ. ಆತನು ಬಾಗಿಲಲ್ಲಿ ನಿಂತು ಸಾವುಕಾರ ಎಂದು ಕೂಗುತ್ತಿರುತ್ತಾನೆ. ಆದರೆ ಈರಪ್ಪರಿಗೆ ಗೊತ್ತೆ ಸಿಗಲಿಲ್ಲ. ಹಾಂ ರಾಯಪ್ಪ ಯಾಕ ಈ ಕಡೆ ಬಂದಿ ಏನ ಕೆಲ್ಸ ಎಂದು ಕೇಳಿದಕ್ಕೆ ಪತ್ತಾರ ಅದೇ ಬೇರೆ ಕೆಲಸ ಇತ್ತು. ಹಾಗೆ ಈಕಡೆ ಬಂದೆ ಎನ್ನುತ್ತಾನೆ. ಆವಾಗ ಪತ್ತಾರ ಮಾಡಿದ ಒಡವೆಗಳ ಬಗ್ಗೆ ಈರಪ್ಪ ವರ್ಣಿಸುತ್ತಾನೆ. ಆಕೆಗೆ ಒಪ್ಪುವ ಹಾಗೆ ಮಾಡಿದ್ದಿಯಾ ಎಂದು ವರ್ಣಿಸುತ್ತಾನೆ. ಇದರಿಂದ ಪತ್ತಾರ ಸಂತೋಷ ಪಡುತ್ತಾನೆ. ಹೌದು ಗಂಗವ್ವ ತಾಯಿ ಎಲ್ಲಿ. ಅದರ ಎಂದು ಕೇಳಿದಾಗ, ಅವಳು ಬಂಗಾರ ತಂದಾಗಿನಿಂದ ಮನೆಯಲ್ಲಿ ಹಾಸಿಗೆ ಹೊದ್ದು ಮಲಗಿದ್ದಾಳೆ. ಎಂದಾಗ ಪತ್ತಾರ ಮನಸ್ಸಲ್ಲಿ ತಿಳಿಯುತ್ತಾನೆ. ಅವಳಿಗೆ ದೃಷ್ಠಿಯಾಗಿರಬೇಕೆಂದು. ಅಷ್ಟರಲ್ಲಿ ಮನೆಯಿಂದ ಹೊರಗೆ ಹೋಗುವಾಗ ಈರಪ್ಪನ ತಮ್ಮಂದಿರಾದ ಇರಪಕ್ಷಿ ಮತ್ತು ಬಸವಂತ ಮತ್ತೆ ಹಾಗೆ ಬರುತ್ತಾ ಇರು ಪತ್ತಾರ ರಾಯಪ್ಪ ಯಾಕೆಂದ್ರೆ ನಮ್ಮ ಅತ್ತಿಗೆಗೆ ಇನ್ನೂ ಒಡುವೆ ಮಾಡಸಬೇಕಾಗಿದೆ ಎಂದು ಹೇಳಿದ್ದೆ ತಡ ಅವಕಾಶ ಸಿಕ್ಕಿತು ಮನೆಗೆ ಬರಲು ಎಂದು ತಿಳಿದ ಪತ್ತಾರ ರಾಯಪ್ಪ ಮನೆಯಿಂದ ಹೊರಡುತ್ತಾನೆ.

ಈರಪ್ಪ ಬಳ್ಳಾರಿಗೆ ಹೊರಡಲು ಬೇಕಾದ ತಯಾರಿ ಗಂಗವ್ವ, ಮನೆಯಲ್ಲಿ ಮಾಡಿರುತ್ತಾಳೆ. ಈರಪ್ಪನಿಗೂ ಹೆಂಡತಿಯನ್ನೂ ಬಿಟ್ಟು ಹೋಗಲು ಮನಸ್ಸು ಆಗುವುದಿಲ್ಲ. ಆದರೂ ಅನಿವಾರ್ಯ ಎಂಬಂತೆ ಹೋಗಲೇಬೇಕು. ಹೆಂಡತಿಯಾದವಳು ತರತರಹದ ತಿನಿಸುಗಳನ್ನು ಮಾಡಿ ಇಡುತ್ತಾಳೆ. ಹೆಂಡತಿಯನ್ನು ಮನೆಯಲ್ಲಿ ಒಬ್ಬಳನೇ ಹೇಗಿ ಇರಬೇಕು. ಎಂದು ತಿಳಿದು, ಪಕ್ಕದ ಮನೆಯ ಪರವ್ವನನ್ನು ಜೊತೆಯಾಗಿ ಇರಲು ಹೇಳಿರುತ್ತಾನೆ. ಆದರೆ ಇದಕ್ಕೆ ಗಂಗವ್ವ ಬೇಡ ಹುಲಿಯಂಥ ಮೈದುನರು ಇರುವರು ನನಗೇನು ಭಯ.

ಸುಮ್ನೆ ತಲೆ ತಿನ್ನುವ ಪರವ್ವಳನ್ನು ಏಕೆ ಎಂದು ತಿರಸ್ಕರಿಸಿದರೂ, ಈರಪ್ಪ ಒಂದು ಹೆಣ್ಣಿಗೆ ಹೆಣ್ಣು ಜೋತಿಯಿದ್ದರೆ ಚಂದ ಎಂದು ತಿಳಿದು ಪರವ್ವನನ್ನು ಜೊತೆಯಿರಲು ತಿಳಿಸಿ ಹೇಳಿ ಹೋಗಿರುತ್ತಾನೆ. ಮೇಲಾಗಿ, ತನ್ನ ಗೆಳೆಯನಾದ ಸಂಗಣ್ಣನಿಗೂ ಆಗಾಗೆ ಮನೆಗೆ ಬರಲು ಹೇಳಿರುತ್ತಾನೆ. ಇದರಿಂದ ಸಂಗಣ್ಣನು ಕೂಡ ಗೆಳೆಯನ ಇಚ್ಛೆಯಂತೆ ಮನೆಗೆ ಬರಲು ಪ್ರಾರಂಭಿಸುತ್ತಾನೆ. ಈರಪ್ಪ ಹೋದಂದಿನಿಂದ ಆಗಾಗ್ಗೆ ಸಂಗಣ್ಣ ಬರುತ್ತಿರುವುದು. ಪಾರವ್ವ ಜೊತೆಗಿರುವುದು ಇರಪಕ್ಷಿ, ಬಸವಂತ ಹೊಲ ಮನೆ ಎನ್ನುತ ಅಲೆಯುವುದು ಸರ್ವ ಸಾಮಾನ್ಯವಾಗಿರುತ್ತದೆ.

ಯಾರು ಮನೆಯಲ್ಲಿ ಇಲ್ಲದ ಸಮಯ ಸಾಧಿಸಿ ಪತ್ತಾರ ರಾಯಪ್ಪ ಮನೆಗೆ ಬರಬೇಕೆಂದು ಸಮಯ ಹುಡುಕುತ್ತಾನೆ. ಅಂಥದರಲ್ಲಿ ಈರಪ್ಪಾ ಬಳ್ಳಾರಿಗೆ ವ್ಯಾಪಾರಕ್ಕೆಂದು ಹೋಗಿರುವ ಸುದ್ದಿಯನ್ನು ಅರಿತವನೆ. ಇದು ಒಳ್ಳೆಯ ಸಮಯ ಗಂಗಾ ಮನಿಯಾಗ ಒಬ್ಬಳೆ ಹ್ಯಾಂಗ ಇರತಾಳ, ಗಂಡ ಇಲ್ಲದ ಒಬ್ಬಂಟಿ ಜೀವಾ ಇದ್ದರೆ, ಯಾವ ಹೆಣ್ಣಿಗೂ ಒಂಟಿತನ ಕಾಡುತ್ತದೆ. ಅದಕ್ಕಾಗಿ ಅವಳು ಒಬ್ಬಳೆ ಇರುವದನ್ನು ಗೊತ್ತು ಮಾಡಿಕೊಂಡ ಪತ್ತಾರ ರಾಯಪ್ಪ ನೇರವಾಗಿ ಗಂಗಿಯ ಮನೆಗೆ ಬರುತ್ತಾನೆ. ಯಾರು ಇಲ್ಲದ ಸಮಯ ಅರಿತ ಇತ ನೇರವಾಗಿ ಗಂಗಿಯ ಮನೆಯಲ್ಲಿ ಕುಳಿತು ಬಿಡುತ್ತಾನೆ. ಇದರಿಂದ ರೊಚ್ಚಿಗೆದ್ದ ಗಂಗವ್ವ ಆತನನ್ನು ಹಿಗ್ಗಾ ಮುಗ್ಗಾ ಮೂದಲಿಸಿದರೂ ಅಲ್ಲಿಂದ ಎದ್ದು ಹೋಗುವುದೇಯಿಲ್ಲ. ಅಷ್ಟರಲ್ಲಿ ಇರಪಕ್ಷಿ ಬಸವಂತ ಮನೆಗೆ ಬರುತ್ತಾರೆ. ಬಂದ ತಕ್ಷಣವೇ ಗಂಗವ್ವ ಅಲ್ಲಿಂದ ಒಳ ಮನೆಗೆ ಹೋಗುತ್ತಾಳೆ. ಯಾಕ ಬಂದಿ ರಾಯಪ್ಪ ಏನ ಕೆಲಸ ಅದಾ ಎಂದು ಕೇಳಿದಾಗ ಏನೂ ಇಲ್ಲ, ಸುಮ್ನೆ ಬಂದಿದ್ದೆ ಮೊದಲೇ ಸಂಗಣ್ಣ ಬಂದಿದ್ದಾ. ಆತ ಹೋದ ತಕ್ಷಣವೇ ನಾನು ಬಂದೆ ಎಂದು ಹೇಳುತ್ತಾನೆ. ಸಂಗಣ್ಣ ಬಂದಿರುವದೇಯಿಲ್ಲ. ಆದರೂ ಬಂದ ಬಗ್ಗೆ ಸುಳ್ಳು ಸುದ್ದಿ ಬಿತ್ತುತ್ತಾನೆ. ಪತ್ತಾರನ ದುಷ್ಟ ಬುದ್ಧಿಯು ಏನೇನೋ ಕಾಲ್ಪನಿಕ ಕಥೆಯನ್ನು ಮನಸ್ಸಿನಲ್ಲಿಯೇ ಸೃಷ್ಠಿಸುತ್ತಾ. ಗಂಗಿಯ ಬಗ್ಗೆ ಭಗ್ನ ಕನಸುಗಳನ್ನು ಹೊತ್ತು ಕನವರಿಸುವ ಈ ಪತ್ತಾರ ರಾಯಪ್ಪ ನಿಜಕ್ಕೂ ಎಟುಕದ ವಿಷಯಕ್ಕೆ ಕೈ ಹಾಕುತ್ತಿರುತ್ತಾನೆ.

ಮರಡಿ ಬಸವಣ್ಣನ ಜಾತ್ರೆಯಂದರೆ ಇಡಿ ಊರಿಗೆ ಊರೆ ಆಚರಿಸುವ ಒಂದು ಜಾತ್ರೆ ಪ್ರತಿ ಮನೆ ಮನೆಯ ಒಂದೊಂದು ಕೂಸು ಕೂಡ ಜಾತ್ರೆಗೆ ಬರುವಂಥ ಸರಳ ಜಾತ್ರೆಯದ್ದು ಅಂಥದರಲ್ಲಿ ಜಾತ್ರೆಗೆಂದು ಗಂಗವ್ವ ಮತ್ತು ಪರವ್ವ ಒಡವೆ ವಸ್ತ್ರ ಹಾಕಿಕೊಂಡು , ನೈವಿದ್ಯ ತೆಗೆದು ಕೊಂಡು ಜಾತ್ರೆಗೆ ಹೊರಡುತ್ತಾರೆ. ಮರಡಿ ಬಸವಣ್ಣ ಎಂದರೆ ಲಗಳೆರ ಮನೆತನದ ಮನೆಯ ದೇವರು, ಹೀಗಾಗಿ ಆ ಜಾತ್ರೆಗೆ ಗಂಗವ್ವ ಹೋಗಲೇಬೇಕು. ಈರಪ್ಪಾ ಬಳ್ಳಾರಿಗೆ ವ್ಯಾಪರಕ್ಕೆಂದು ಹೋಗುವಾಗ ಹೇಳಿಯೇ ಹೋಗಿರುತ್ತಾನೆ. ಜಾತ್ರೆ ಮುಗಿಸಿಕೊಂಡು ಮನೆಗೆ ಬರುತ್ತಾಳೆ. ಮನೆಗೆ ಬಂದವಳೇ ದೇವರ ದಯದಿಂದ ಎಲ್ಲವೂ ಒಳ್ಳೆಯದಾಗಲಿ ಎಂದುಕೊಂಡು ತಂದ ನೈವಿದ್ಯ ದೇವರ ಮುಂದೆ ಇಟ್ಟು ನಮಸ್ಕರಿಸುತ್ತಾಳೆ.

ಪತ್ತಾರನು ತನ್ನ ಪ್ರಯತ್ನವನೆಲ್ಲಾ ಮುಂದುವರಿಸಿರುತ್ತಾನೆ. ಜಾತ್ರೆಯಲ್ಲಿಯ ಗಂಗವ್ವ ಹಿಂದೆ ಅಲೆದಿರುವ ಈ ಘಾತಕ ಶಕ್ತಿ ಗಂಗವ್ವಳಿಗೆ ಸಮಸ್ಯೆಗಳನ್ನು ತಂದಿಡಲು ಮುಂದಾಗುತ್ತದೆ. ಪರವ್ವ ಪತ್ತರನ ಕೈಗೊಂಬೆಯಾಗಿದ್ದಾಳೆ. ಪರವ್ವಳಿಗೆ ಹಣ ಬಂಗಾರ ಬೇಕು. ಅದನ್ನು ಆತ ಅಂದರೆ ಪತ್ತಾರ ರಾಯಪ್ಪ ಕೊಡುತ್ತಿದ್ದಾನೆ. ಇದನ್ನೆ ಬೇಕೆನ್ನುವ ಇವಳಿಗೆ ಇನ್ನೊಬ್ಬರ ಮಾನ ಮರ್ಯಾದೇ ಇವಳಿಗೆ ಯಾಕೆ ಬೇಕು. ಪತ್ತಾರನ ಕುತಂತ್ರಕ್ಕೆ ಕೈ ಜೋಡಿಸಿ ಮುಂದಿನ ಒಂದೊಂದು ಸಮಸ್ಯೆಗೂ ಇವಳೇ ಕಾರಣಿಭೂತಳಾಗುತ್ತಾಳೆ.

ಇರಪಕ್ಷಿ ಮತ್ತು ಬಸವಂತ ಹೊಲದಿಂದ ಮನೆಗೆ ಬರುವಾಗ ಸಂಗಣ್ಣನ ಬಗ್ಗೆ ಸಂಶಯ ಬರುವ ರೀತಿಯಲ್ಲಿ ಏನೇನೋ ಕಾಲ್ಪನಿಕವಾಗಿ ಕಥೆ ಹೇಳುತ್ತಾರೆ. ಪರವ್ವ ಹೇಳಿದ ಮೇಲೆ ಪತ್ತರ, ನಂತರ ಕೆಲವು ಜನರು ವ್ಯಂಗವಾಗಿಯು ಸಂಗಣ್ಣನ ಮತ್ತು ಗಂಗವ್ವನ ಇವರಿಬ್ಬರ ಅನ್ಯೆತಿಕ ಸಂಬಂಧ ಮುಂದುವರೆದಿದೆ ಎನ್ನುವ ಧಾಟಿಯಲ್ಲಿ ಮಾತನಾಡುತ್ತಾರೆ. ಇದನ್ನು ನಂಬುವಂತೆಯ ಕಲಾತ್ಮಕವಾಗಿ ಪತ್ತರ ರೂಪಿಸಿದ ತಂತ್ರ ಇರಪಕ್ಷಿ ಮತ್ತು ಬಸವಂತರೂ ನಂಬುವಂತೆ ಮಾಡುತ್ತದೆ. ಇಲ್ಲಿ ಸಂಗಣ್ಣ ಮತ್ತು ಗಂಗಿಯ ಯಾವ ಸಂಬಂಧಗಳು ಇರುವುದಿಲ್ಲ. ಆದರೂ ರಾಯಪ್ಪ ಹೆಣದಿರುವ ತಂತ್ರಗಳು ನಂಬುವ ರೀತಿಯಲ್ಲಿ ಗಂಗಿಯ ಮೈದುನರನ್ನು ನಂಬಿಸುತ್ತವೆ. ಕಲಾತ್ಮಕ ಬುದ್ಧಿ ಇರುವ ಈ ಪತ್ತಾರ ರಾಯಪ್ಪ ಏನೆಲ್ಲಾ ಕತೆಯ ಕಟ್ಟಿ ಒಂದು ಹೆಣ್ಣಿನ ಚಾರಿತ್ರ್ಯವನ್ನು ಇಲ್ಲಿ ಹಾಳು ಮಾಡಲು ಹೊರಟಿರುವ ವ್ಯಕ್ತಿ ಎಂದೇ ಹೇಳಬಹುದು.

ಈರಪ್ಪ ಹೋಗಿರುತ್ತಾನೆ, ಗಂಗಿಯ ಜೀವನದ ಮೇಲೆ ಒಂದು ಕಪ್ಪು ಚುಕ್ಕೆಯು ಬೀಳುವಂಥ ಸ್ಥಿತಿ ನಿರ್ಮಾಣವಾಗುತ್ತದೆ. ಮೈದುನರಾದವರು ಸತ್ಯಸತ್ಯತೆಯನ್ನು ಅರಿಯುವ ಗೋಜಿಗೆ ಹೋಗಲಾರರು. ಅವರು ವಿಚಾರಿಸುವಷ್ಟು ಬುದ್ಧಿಶಕ್ತಿಯು ಅವರಲ್ಲಿ ಇರುವುದಿಲ್ಲ. ಹೀಗಾಗಿ ಪತ್ತಾರ ಮತ್ತು ಪರವ್ವಳ ಗಂಗಿಯು ಇಲ್ಲಸಲ್ಲದ ಅಪಾವಾದಗಳು ಗುಲ್ಲೆಬಿಸುತ್ತಾರೆ.

ಕೆಟ್ಟ ಸುದ್ದಿ ಕಿವಿಯಲ್ಲಿ ಬಿದ್ದುದರ ಫಲ ಎಂತದ್ದು ಎಂದು ಇಲ್ಲಿ ಗುರುತಿಸುವ ವಿಷಯವಾಗಿದೆ. ಏಕೆಂದರೆ ಸುಖವಾಗಿ ಬದುಕುವ ಇವರ ಜೀವನದಲ್ಲಿ ಸಂಶಯದ ಸುಳಿ ಇದ್ದಕಿದ್ದಂತೆ ಪ್ರಾರಂಭವಾಗುತ್ತದೆ. ಇರಪಕ್ಷಿ ಮತ್ತು ಬಸವಂತರ ಮನಸ್ಸುಗಳು ಹಿಡಿತದಲ್ಲಿರುವುದಿಲ್ಲ. ಯಾವುದೋ ಚಿಂತೆಯಂಬಂತೆ ಚಡಪಡಿಸುತ್ತಾರೆ. ಅವರ ಭಾವನೆಗಳ ತೊಳಲಾಟ ಮೇಲಿಂದ ಕೆಳಗೆ, ಕೆಳಗಿನಿಂದ ಮೇಲೆ ಎಂಬಂತೆ ಕಾದ ತುಪ್ಪನ ಸ್ಥಿತಿಯಂತೆ ಹೊಯ್ದಾಡುತ್ತಿರುತ್ತದೆ. ಆಡಲಾರ ಅನುಭವಿಸಲಾರ ಎನ್ನುವಂಥ ಸ್ಥಿತಿ ಅವರದ್ದು. ಜನರಾಡುವ ಚುಚ್ಚು ಮಾತುಗಳು ಇವರ ಕಿವಿಯಲ್ಲಿ ಕಾದ ತುಪ್ಪದಂತೆ ಬೀಳುತ್ತಿರುತ್ತವೆ. ಇಬ್ಬರು ಅಣ್ಣ ತಮ್ಮಂದಿರು ಚಡಪಡಿಸುವ ರೀತಿ ಇದು.

ಇರಪಕ್ಷಿ : ಚುಚ್ಚು ಮಾತ ಚುಚ್ಚು ತಾವ ಕಿವಿಯಾಗ ।
ಬಿಚ್ಚಿ ಬಿತ್ತು ನಮ್ಮ ಮಾನದಾರ್‍ಯಾಗ ॥
ಬಸವಂತಃ ಕಾಳಕತ್ಲ ತುಂಬ್ಯಾದ ಕಣ್ಣಾಗ।
ದಾರಿ ಕಾಣುವಲ್ಲು ನನ್ನ ಕಾಲಾಗ॥................1

ಖರೇ ಖರೇ ಸಂಗ್ಯಾ ಬಾಳ್ಯ ಪುಟ ಸಂಖ್ಯೆ : 42

ಇಬ್ಬರು : ಬೆಳದಿಂಗ್ಳ ಹೋಗಿ ಬಂತು ಬಿಸಿಲ.........
ಒಳಗ ! ಸಣ್ಣಗ ಸುಡತಾದ ಒಡಲ.......
ಹೆಣ್ಣ ಅಂತಾರ ಸ್ವರ್ಗಕ್ಕೆ ದಾರಿ........
ದಾರಿ ತಪ್ಪಿದ್ರು ಮನೆತನಕ್ಕೆ ಮಾರಿ.......

ಎಂದು ಚಡಪಡಿಸುತ್ತ ಅಣ್ಣ ತಮ್ಮಂದಿರು ತಮ್ಮ ಮನೆಯ ಮರ್ಯಾದೆಯ ಬಗ್ಗೆ ತಮ್ಮಿಬ್ಬರಲ್ಲಿಯೇ ಹಂಚಿಕೊಳ್ಳತ್ತ ಮನೆಯ ಕಡೆಗೆ ಬರುತ್ತಾರೆ. ಮನೆಗೆ ಬಂದವರೇ ಮನೆಯಲ್ಲಿ ಯಾರು ಇರುವುದಿಲ್ಲ. ಅತ್ತಿಗೆ ಮಾತ್ರ ಮನೆಯಲ್ಲಿ ಇರುತ್ತಾಳೆ. ಮೈದನರು ಯಾಕೆ ಊಟಕ್ಕೆ ಬಂದಿಲ್ಲ ಎಂದು ದಾರಿ ಕಾಯುತ್ತಿರುತ್ತಾಳೆ. ಅದೇ ಸಮಯಕ್ಕೆ ಮನಸ್ಸು ಭಾರಮಾಡಿಕೊಂಡು ಮನೆಗೆ ಬರುತ್ತಾರೆ. ಅತ್ತಿಗೆ ಜೊತೆಗೆ ಸರಿಯಾದ ಮಾತುಗಳು ಕೂಡ ಆಡುವುದಿಲ್ಲ ಮನೆಗೆ ಬಂದವರು ಊಟವು ಮಾಡುವುದಿಲ್ಲ. ಅಷ್ಟರಲ್ಲಿ ಸಂಗಣ್ಣ ಮನೆಗೆ ಬರುತ್ತಾನೆ. ಅವನು ಮನೆಗೆ ಬಂದಿರುವ ವಿಷಯ ಸಮಯ ಇವರಿಗೆ ಕಿಂಚಿತವು ಸರಿ ಕಾಣುವುದಿಲ್ಲ. ಗಂಗವ್ವನ ಬಗ್ಗೆಯೂ ಸಂಶಯದ ಹುತ್ತು ಹುಟ್ಟಿಕೊಂಡಿರುತ್ತದೆ. ಅಂಥದವರಲ್ಲಿ ಸಂಗಣ್ಣ ಮನೆಗೆ ಬಂದರೆ ಮತ್ತೆ ಇವರಿಗೆ ಸಂಶಯ ಅತಿಯಾಗಿ ಕಾಣುತ್ತದೆ. ಅವರು ಆಡುವ ಮಾತುಗಳು ಸಂಶಯಗಳು ಹೆಚ್ಚಾಗುತ್ತಲ್ಲಿಯೇ ಹೊರಡುತ್ತವೇ. ವಿನಹ ಕಡಿಮೆಯಾಗುವುದಿಲ್ಲ. ಅತ್ತಿಗೆಯಂದರೆ ದೇವರ ಸಮಾನ ಎಂದು ತಿಳಿದಿರುವ ಇವರು ಅವಳ ಮೇಲೆ ಸಂಶಯ ಕಾಣಲು ಪ್ರಾರಂಭಿಸುತ್ತಾರೆ. ಹೊಲ ಮನೆ ಎಲ್ಲಾ ಇದ್ದರೂ, ಇವರಿಗೆ ಬರಿ ಅತ್ತೆಗೆ ಮತ್ತು ಸಂಗಣ್ಣನ ಬಗ್ಗೆಯೆ ಮಾತುಗಳು ತಲೆಯಲ್ಲಿ ಸುತ್ತುತ್ತಿರುತ್ತವೆ. ಅಣ್ಣ ಮನಿಗೆ ಬಂದರೆ ನಾವು ಯಾವ ರೀತಿಯಾಗಿ ಅಣ್ಣನಿಗೆ ಇದರ ಬಗ್ಗೆ ಹೇಳಬೇಕು. ಎಂದು ಚಡಪಡಿಸುತ್ತಾರೆ. ಅಣ್ಣ ನಮ್ಮ ಬಗ್ಗೆ ಏನು ತಿಳಿದುಕೊಂಡಾನು ಎನ್ನುವ ಭಯವು ಅವರಿಗೆ ಕಾಡುತ್ತದೆ.

ಪತ್ತಾರ ರಾಯಪ್ಪ ಮತ್ತು ಪರವ್ವ ಅವರ ಕೆಟ್ಟ ಪ್ರವೃತ್ತಿಯಿಂದ ಸುಂದರವಾಗಿ ಬದುಕುತ್ತಿರುವ ಮನೆಯಲ್ಲಿ ಹುಳಿ ಹಿಂಡುವ ಕೆಲಸದಿಂದ ಆಗುವ ಅನಾಹುತಗಳು ಮುಂದೆ ಯಾವ ರೀತಿಯ ಸ್ವರೂಪ ಪಡೆದುಕೊಳ್ಳುತ್ತದೆ. ಎನ್ನುವುದರ ಬಗ್ಗೆಯು ಚಿಂತಿಸದೆ ಇರುವ ಕೆಟ್ಟ ವ್ಯಕ್ತಿಗಳಾಗಿ ಕಂಡುಬರುತ್ತಾರೆ.

ಇರಪಾಕ್ಷಿ ಮತ್ತು ಬಸವಂತರು ಚಡಪಡಿಸುತ್ತಿರುತ್ತಾರೆ. ಇತ್ತ ಕಡೆ ಅತ್ತಿಗೆಯ ಮೇಲೆ ಅನೇಕ ಸಂಶಯ ಮೂಡಿರುತ್ತದೆ. ಅಂಥದರಲ್ಲಿ ಮತ್ತೊಂದು ಘಟನೆಯು ಇಲ್ಲಿ ಘಟಿಸುತ್ತದೆ. ಪರವ್ವ ಮೊದಲೇ ಗಂಗಿಯನ್ನು ಹಾಳು ಮಾಡಲು ಪ್ರಯತ್ನಿಸುತ್ತಾಳೆ. ಗಂಗಿಯ ಪತಿವೃತತ್ತೆಯು ಇವಳಿಗೆ ಅರ್ಥವಾಗದು, ಒಂದು ಹೆಣ್ಣಾಗಿ ಹೆಣ್ಣಿನ ಮರ್ಯಾದೆ ತೆಗೆಯುವ ಪ್ರವೃತ್ತಿ ಇವಳಲ್ಲಿ ಬೆಳೆಯುತ್ತದೆ. ಪರವ್ವಳಿಗೆ ಹಣಬೇಕು. ಹಣವೊಂದಿದ್ದರೆ ಸಾಕು ನಾನು ಯಾವ ಕೆಲಸವು ಮಾಡಲು ಸಿದ್ಧ ಎಂಬಂತೆ ಪರವ್ವ ಒಂದಲ್ಲ ಒಂದು ತಂತ್ರಕ್ಕೆ ಕೈಹಾಕುತ್ತಲ್ಲಿಯೇ ಇರುತ್ತಾಳೆ. ಪತ್ತಾರನ ಕೈ ಗೊಂಬೆಯಾಗಿರು ಪರವ್ವ ಗಂಗಿಯ ಬಗ್ಗೆ ಹಾದರದ ಅಪವಾದ ಹೊರಿಸುವ ಸಲುವಾಗಿಯೇ ಒಂದೊಂದು ಕ್ರಿಯೆಯನ್ನು

ಮುಂದುವರಿಸುತ್ತಲ್ಲಿಯೇ ಇರುತ್ತಾಳೆ. ಪರವ್ವ ಹೇಗೋ ಮಾಡಿ ಸಂಗಣ್ಣನ ಎಲೆಯ ಚೀಲವನ್ನು ಪರವ್ವ ಕದಿಯುತ್ತಾಳೆ., ಇದೆ ಒಂದು ವಸ್ತು ಸಂಗ್ಯಾನ ಮತ್ತು ಗಂಗಿಯ ನಡುವಿನ ಅಪವಾದದ ಬೆಸಿಗೆಗೆ ಒಂದು ಪ್ರಮುಖ ಪಾದ ಅಸ್ತ್ರವಾಗಿ ಪರಿಣಮಿಸುತ್ತದೆ. ಇದನ್ನು ತೆಗೆದುಕೊಂಡ ಪರವ್ವ ನೇರವಾಗಿ ಓಡೋಡಿ ಹೋಗಿ ಪತ್ತಾರ ರಾಯಪ್ಪನ ಹತ್ತಿರ ತೆಗೆದುಕೊಂಡು ಬಂದು ಪತ್ತಾರನಿಂದ ಇದಕ್ಕೆ ಒಂದು ಉಪಾಯ ಹಾಡಿ ಇದರಿಂದ ಒಳ್ಳೆಯದಾದ ಒಂದು ಲಾಭ ತೆಗೆಯಲು ಯೋಜನೆಯನ್ನು ರೂಪಿಸುತ್ತಾರೆ.

ಪರವ್ವ ತಂದ ಸಂಗಣ್ಣನ ಎಲೆಯ ಚೀಲವನ್ನು ತಿರುಗಿ ಪರವ್ವಳಿಗೆ ಒಪ್ಪಿಸುತ್ತಾನೆ. ಪರವ್ವ ಇದನ್ನು ನೀನು ತೆಗೆದುಕೊಂಡ ಹೋಗು ಇದನ್ನು ನೀನು ಹೇಗಾದರೂ ಮಾಡಿ ಗಂಗವ್ವನ ಮಂಚದ ಮೇಲಿನ ತಲೆದಿಂಬಿಗೆಯ ಕೆಳಗೆ ಇಡು ಇದರಿಂದ ಅವಳ ಗಂಡ ಈರಪ್ಪನಿಗೆ ಇದರಿಂದ ಸಂಶಯ ಆಗೇ ಆಗುತ್ತದೆ. ಮೊದಲೇ ಈ ಸುದ್ದಿ ಇಡಿ ಊರಿಗೂರೆ ಹಬ್ಬಿದೆ. ಮೇಲಾಗಿ ಇದೊಂದು ಸಾಕ್ಷಿಯಾಗಿ ಈರಪ್ಪನಿಗೆ ಕಂಡರೆ ಸಾಕು ಗಂಗಿಯ ಕಥೆ ಮುಗಿಯಿತು ಎಂದು ಹೇಳುತ್ತಾನೆ.

ಬಳ್ಳಾರಿಯಿಂದ ವ್ಯಾಪಾರ ಮುಗಿಸಿಕೊಂಡು ಈರಪ್ಪ ಮನೆಗೆ ಬರುತ್ತಾನೆ. ಮನೆಗೆ ಬಂದವನೇ ನೇರವಾಗಿ ತನ್ನ ಮನೆಯ ತೋಟಕ್ಕೆ ಹೋಗುತ್ತಾನೆ. ತೋಟದಲ್ಲಿ ಅಣ್ಣ ತಮ್ಮಂದಿರು ಮನಸ್ಸಿಲ್ಲದ ಮನಸ್ಸಿನಿಂದ ಕೆಲಸ ಮಾಡುತ್ತಿರುತ್ತಾರೆ. ಅವರ ಮುಖದಲ್ಲಿ ನಿರಾಶೆಯ ಛಾಯೆ ಮೂಡಿದೆ. ಅವರಲ್ಲಿ ಉತ್ಸಾಹವಿಲ್ಲ ಕೆಲಸದಲ್ಲಿ ಮನಸಿಲ್ಲ ಏನೋ ಒಂದು ಸಮಸ್ಯೆ ಆವರಿಸಿದಂತೆ ಕಂಡು ಬರುತ್ತದೆ. ಯಾರು ಸರಿಯಾಗಿ ಮಾತನಾಡುವುದಿಲ್ಲ ಅಣ್ಣ ಬಂದಿರುವ ಬಗ್ಗೆ ಯಾರಿಗೂ ಸಂತಸ ತರುವ ಲಕ್ಷಣಗಳು ಕಂಡು ಬರುತ್ತಿಲ್ಲ. ಏಕೋ ತಮ್ಮಗಳ ಮುಖದ ಹಾವಭಾವ ಅರಿತ ಈರಪ್ಪ ಇವರಲ್ಲಿ ಗೌಪ್ಯವಾಗಿ ಅಡಗಿರುವ ವಿಷಯವನ್ನು ಹೊರತೆಗೆಯಲು ಪ್ರಯತ್ನಿಸುತ್ತಾನೆ. ಏಕೋ ತಮ್ಮಗಳ ಮನಸ್ಸು ಭಾರವಿದ್ದಂತೆ ಕಾಣುತ್ತಿದೆಯಲ್ಲ. ಎಂದು ಕೇಳಲು ಪ್ರಯತ್ನಿಸಿದರೂ ಒಮ್ಮಿಂದೊಮ್ಮೆ ಉತ್ತರ ಹೊರಬರಲಿಲ್ಲ. ಈರಪ್ಪನು ತಮ್ಮರ ಹತ್ತಿರ ಬರುತ್ತಾನೆ. ತಮ್ಮಂದಿರ ಸ್ಥಿತಿಯನ್ನು ಅರಿತು ತಮ್ಮಗಳಿರಾ ನನ್ನಿಂದ ಏನೋ ಮುಚ್ಚಿಡುತ್ತಿರುವಿರಿ. ಅದು ಏನಾಗಿದೆ ಎನ್ನುವುದು ಹೇಳಲೇಬೇಕು. ಹೇಳದಿದ್ದರೆ ನಾನು ಸುಮ್ಮನಿರುವುದಿಲ್ಲ. ನನಗೆ ಹುಲಿಯಂತೆ ಇರುವ ನೀವು ನನ್ನಿಂದ ಮುಚ್ಚಿಡುವುದಾದರೂ ಏನು ? ಏಕೆ ಭಯಪಡುತ್ತಿರುವಿರಿ ಇದರ ಮರ್ಮವಾದರೂ ಏನೂ ? ಎಂದು ಹತ್ತು ಹಲವಾರು ಪ್ರಶ್ನೆಗಳನ್ನು ಕೇಳುತ್ತಿರುತ್ತಾನೆ. ತಮ್ಮಂದಿರ ಕಣ್ಣುಗಳು ಭಾರದಿಂದ ತುಂಬಿವೆ. ಏನನ್ನು ಉತ್ತರಿಸಲಾರು ಒಮ್ಮಿಂದೊಮ್ಮೆ ದುಖಃ ಉಮ್ಮಳಿಸು ಬಂದು ಇಬ್ಬರು ತಮ್ಮ ಅಕ್ಕರೆಯ ಅಣ್ಣನನ್ನು ಅಪ್ಪಿಕೊಳ್ಳುತ್ತಾರೆ.

ಬಸವಂತ	:	ಬಳ್ಳಾರ್ಯಾಗ ಹ್ಯಾಂಗ ಇದ್ದೀ ?
ಈರಪ್ಪ	:	ಆರಾಮ ಇದ್ದೆ
ಬಸವಂತ	:	ಯಾಕ ಪತ್ರಬರಿಯಲಾರದೆ ಬಂದಿ ?
ಈರಪ್ಪ	:	ಏನು ಹೇಳೋದು ಮೊನ್ನೆ ರಾತ್ರಿ ಕೆಟ್ಟ ಕನಸು ಬಿತ್ತು. ಗಡಬಡಿಸಿಕೊಂಡು ಬಂದೆ
ಇರಪಕ್ಷಿ	:	ಏನ ಬಿತ್ತು

ಖರೇ ಖರೇ ಸಂಗ್ಯಾ ಬಾಳ್ಯ ಪುಟ ಸಂಖ್ಯೆ : 47

ಈರಪ್ಪಾ : ನಾವೆಲ್ಲಾ ತಿಪ್ಯಾಗ ಮಲಗ ಕೊಂಡಾಂಗ ಕನಸ ಬಿತ್ತು ಈರಪ್ಪ ಬಳ್ಳಾರಿಯಲ್ಲಿ ತನಗಾದ ಕನಸಿನ ಕಥೆಯನ್ನು ಹೇಳುತ್ತಿದಂತೆಯೇ ಇರಪಾಕ್ಷಿ ಮತ್ತು ಬಸವಂತ ಒಮ್ಮಿಂದೊಮ್ಮೆ ಅಳಲು ಪ್ರಾರಂಭಿಸುತ್ತಾರೆ. ಅವರಿಗೆ ತಮ್ಮ ಮನೆಯ ಸ್ಥಿತಿ ನಿಜವಾಗಿಯು ಅಣ್ಣನಿಗೆ ಕನಸ್ಸು ಬಿದ್ದಂತೆಯೇ ಆಗಿದೆ ಎಂದು ದುಖಿಃಸುತ್ತಾರೆ.

ಬಳ್ಳಾರಿಯಲ್ಲಿ ಬಿದ್ದ ಅಣ್ಣನ ಕನಸ್ಸಿಗೂ ಮತ್ತು ಈಗಿರುವ ನಮ್ಮ ಮನೆಯ ಪರಸ್ಥಿತಿಗೂ ತುಂಬಾ ಹತ್ತಿರವಿದೆ ಅಣ್ಣ ಎಂದು ಅಳುತ್ತಾರೆ. ಅಣ್ಣ ನಮ್ಮ ಮನೆಯ ಮರ್ಯಾದೆಯಲ್ಲವೂ ಆ ಸಂಗ್ಯಾನಿಂದ ಹಾಳಾಗಿ ಹೋಯಿತು. ಆತ ನಮ್ಮ ಅತ್ತಿಗೆಯೊಂದಿಗೆ ಸರಸಕ್ಕ ಹತ್ಯಾನ ಈ ಸುದ್ದಿ ಊರು ತುಂಬ ಹಬ್ಬಿದೆ. ಎಂದು ಇಬ್ಬರು ತಮ್ಮಂದಿರು ಹೇಳುತ್ತಾರ. ಇದರಿಂದ ಏನನ್ನು ಅರಿಯದ ಈರಪ್ಪ ಹೇಳುವುದಾದರೂ ಏನು ? ತನ್ನ ಹೆಂಡತಿಯ ಶೀಲ ಶಂಕಿಸದೇ ಇರುವ ಒಂದು ಪವಿತ್ರ ಸ್ತ್ರೀಯ ಬಗ್ಗೆಯೂ ವಿಚಾರಿಸುವುದಕ್ಕೆ ಚಿಂತೆ ಮಾಡುತ್ತಾನೆ. ಆದರೆ ತಮ್ಮಂದಿರು ಈ ಭಯ ಸನ್ನಿವೇಷವನ್ನು ಸತ್ಯಾಸತ್ಯೆಯಿಂದಿರುವದೋ ಅಥವಾ ಸುಳ್ಳಿನಿಂದ ಕೂಡಿರುವುದೋ ಎಂದು ಖಾತ್ರಿ ಪಡಿಸಲು ಮುಂದಾಗುತ್ತಾರೆ.

ತಮ್ಮಗಳಿರಾ ಯಾವತ್ತು ನಾವು ಯಾರೆ ಆಗಲಿ ಏನಾದರೂ ಅಂದರೆ, ಅದರ ಬಗ್ಗೆ ಮೊದಲು ಸೂಕ್ಷ್ಮವಾಗಿ ವಿಚಾರಿಸುವುದು ನಮ್ಮ ಕರ್ತವ್ಯ. ಒಮ್ಮಿಂದೊಮ್ಮೆ ನಾವು ಒಂದು ನಿರ್ಧಾರಕ್ಕೆ ಬರುವುದು ಸರಿಯಲ್ಲ. ಯಾವುದಕ್ಕೆ ಮೊದಲು ವಿಚಾರಿಸಬೇಕು. ಅಂದಾಗಲೇ ಅದಕ್ಕೆ ಒಂದು ಅರ್ಥ ನಿರ್ಧಾರಕ್ಕೆ ಬರಬೇಕಾಗುತ್ತದೆ. ಗಂಗಿ ಎಂದೂ ತಪ್ಪುದಾರಿಯಿಂದ ನಡೆದವಳಲ್ಲ. ಆದರೂ ಇವಳ ಬಗ್ಗೆ ವಿಚಾರಿಸದೇ ಬಿಡುವುದು ಸರಿ ಇಲ್ಲ. ಎಂದು ನಿರ್ಧರಿಸಿ ಹೊತ್ತು ಮುಳುಗಿದ ಸಮಯಕ್ಕೆ ನೇರವಾಗಿ ಮನೆಗೆ ಬರುತ್ತಾರೆ. ಮನೆಯಲ್ಲಿ ಎಂದಿನಂತೆ ವಾತವರಣ. ಗಂಗವ್ವಳಿಗೆ ಯಾವುದರ ಭಯವುಯಿಲ್ಲ. ಯಾವುದಾದರೂ ಚಿಂತೆಯೂ ಇಲ್ಲ. ನಿರ್ಭಯವಾಗಿ ಗಂಗಿ ಮನೆಯ ಉದ್ದಕ್ಕೂ ಅಲೆದಾಡುತ್ತಿದ್ದಾಳೆ. ಗಂಗಿಗೆ ಇದರ ಬಗ್ಗೆ ಏನನ್ನು ಗೊತ್ತಿಲ್ಲ. ಮನೆಗೆ ದೂರದ ಊರಿನಿಂದ ಬಂದಿರುವ ಗಂಡನ ಬಗ್ಗೆಯೂ ಅವಳಿಗೆ ಎಲ್ಲಿಲ್ಲದ ಆದರ ಗೌರವಗಳು ಮೇಲಾಗಿ ಮೈದುನರ ಬಗ್ಗೆಯಂತು ಅವಳಿಗೆ ತುಂಬಿದ ಗೌರವ ಹೊರಗಡೆ ವಿನಾಕಾರಣ ನಡೆಯುವ ತನ್ನ ಶೀಲದ ಬಗ್ಗೆ ಎದ್ದಿರುವ ಬಿರುಗಾಳಿಯಂಥ ಸಮಸ್ಯೆಯ ಗಾಳಿಯು ಇವಳಿಗೆ ತಾಕಿಲ್ಲ. ಯಾವುದೇ ಸಂಶಯ ಭಯವಿಲ್ಲದೆ ನಿರಾಂತಕವಾಗಿ ಕಾಲ ಕಳೆಯುವ ಕಲ್ಮಶ ಇಲ್ಲದ ಗಂಗಿಯ ಮನಸ್ಸು ಅಪ್ಪಟ್ಟ ಕೆಟ್ಟದು. ಒಳ್ಳೆಯದು ನಿರೀಕ್ಷಿಸದ ಸ್ಥಿತಿಯಲ್ಲಿ ಬದುಕುತ್ತಿರುತ್ತಾಳೆ. ಆದರೂ ಕೆಲವು ಸಮಸ್ಯೆಗಳು ಗಂಗಿಯನ್ನು ಹುಡುಕಿಕೊಂಡು ಬಂದಿವೆ. ಅವಳ ಸೌಂದರ್ಯ ಅವಳಿಗೆ ಜೀವನದ ಮುಳುವಾಗಿದೆ. ಅಂಥ ಒಂದು ಪವಿತ್ರತೆಯ ಜೀವಕ್ಕೆ ಕೆಟ್ಟ ಘಳಿಗೆ ಘಟಿಸಿರುವುದ ಅವಳಿಗೆ ಅರಿವಿಗೆ ಬರುವುದಿಲ್ಲ.

ಪತ್ತಾರನ ಕೆಟ್ಟ ದೃಷ್ಠಿಯು ಫಲ ಪದವಾಗದೇ ಇರುವಾಗ ಒಂದು ಸುಂದರ ಸಂಸಾರವನ್ನು ಹಾಳು ಮಾಡುವಲ್ಲಿ ಮುಂದಾಗುತ್ತಾನೆ. ಪರವ್ವಳ ಅತಿಯಾದ ಆಶೆಯು ಈ ಸಂದರ್ಭದಲ್ಲಿ ಎದ್ದು ಕಾಣುತ್ತದೆ ರಾತ್ರಿಯ ಸಮಯ ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡುತ್ತಿರುತ್ತಾರೆ. ಆದರೆ ಯಾರ ಮುಖದಲ್ಲಿಯು ಸಂತಸದ ಲಕ್ಷಣಗಳು ಕಂಡು ಬರುವುದಿಲ್ಲ.

ಗಂಡ ಮೈದುನರು ದೃಷ್ಟಿಯಲ್ಲಿ ಗಂಗಿ ನಡತೆಗೆಟ್ಟಯವಳಾಗಿ ಬಿಡುತ್ತಾಳೆ. ಯಾರೇ ಆಗಲಿ ಏನನ್ನು ಅರಿಯದ ಗಂಗಿಯ ಬಗ್ಗೆ ಸತ್ಯತೆಯನ್ನು ಹುಡುಕುವ ಗೋಜಿಗೆ ಹೋಗುವುದೇ ಇಲ್ಲ. ರಾತ್ರಿಯಾಗುತ್ತಿದ್ದಂತೆಯೆ ಗಂಡ ಹೆಂಡತಿ ತಮ್ಮ ಮಂಚದ ಮೇಲೆ ನಿದ್ರೆಗೆ ಹೊರಟಾಗ ಅಲ್ಲಿ ಈರಪ್ಪನಿಗೆ ನಿದ್ರೆಯು ಬರದೆ ಆತನಿಂದ ದೂರವಿರುತ್ತದೆ. ರಾತ್ರಿ ಅದೇ ಸಮಯದಲ್ಲಿ ಬೆಳಗ್ಗೆ ಎದ್ದವನೇ ಈರಪ್ಪನ ತಲೆಯ ದಿಂಬಿನ ಕೆಳಗೆ ಸಂಗಣ್ಣನ ಎಲೆಯ ಚೀಲ ಸಿಗುತ್ತದೆ. ಆಗ ಈರಪ್ಪನ ಸಿಟ್ಟು ರೌದ್ರಾವತಾರ ತಾಳುತ್ತದೆ. ಗಂಗಿಯನ್ನು ಕೊಲ್ಲಬೇಕು, ಕಡಿಯಬೇಕು ಎಂದುಅರ್ಭಟಿಸುತ್ತಾನೆ. ಗಂಗಿ, ಏಲೆ ಸೂಳೆ ಹಾದರ ಮಾಡಿಯೇನ ನೀನು ಎಂದು ಕಿರಚಾಡುತ್ತಾನೆ.

ಗಿನಿ ಹಾಂಗ ಸಾಕಿದ್ದೆ
ಗಿಡಗಾಗಿ ಕಾಡದಿ
ಗೂಡನ್ನು ಕೇಡಸಿದಿ ಗಂಗೀ। ಗಂಗೀ। ಗಂಗೀ

ಗೆಳೆಯ ಅಂತ ನಂಬಿದ್ದೆ
ಗೋಣನ್ನು ಮುರಿದೆಯೋ
ಮುಳಗಿಸಿದ ಹಡಗನ್ನು ಸಂಗ್ಯಾ। ಸಂಗ್ಯಾ। ಸಂಗ್ಯಾ।.............1

ಗಂಗಿ ಇವರು ಕಿರುಚಾಡುವುದುನ್ನು ಕಂಡು ಭಯ ಪಡುತ್ತಾಳೆ. ಏನಾಗಿದೆ ಇವರಿಗೆ ಎಂದು ಆದರೆ ಈರಪ್ಪನ ಕೋಪ ಎಲ್ಲಾ ಗಂಗಿಯ ಮೇಲೆ ನನ್ನ ಹೆಂಡತಿ ಬಂಗಾರದಂಥವಳು ಎಂದು ತಿಳಿದಿರುವ ನನಗೆ ಎಂಥ ಘಾತ ಮಾಡಿರುವಳು ಎಂದು ಕೋಪದ ಭರಾಟೆ ಯೋಚನೆಗೆ ಅವಕಾಶ ಕೊಡುವುದೆ ಇಲ್ಲ. ಗಂಗಿಯನ್ನು ಮೊದಲು ಯಾವ ರೀತಿಯಲ್ಲಿ ಕಂಡಿರುವ ಬಗ್ಗೆ ಸ್ವತ ಈರಪ್ಪ ಹೇಳುತ್ತಾನೆ. ಗಿಳಿಯಂತೆ ಸಲುವಿದರೆ ಹದ್ದಾಗಿ ಕುಕ್ಕಿ ಕೊಲ್ಲಿಸಿದೆ. ಎಂದು ಗಂಗಿಯನ್ನು ಏನು ಮಾಡಲಿ ದಿಕ್ಕು ತೋಚದವರಂತೆ ಇತ್ತಿಂದತ್ತ ಅತ್ತಿಂದಿತ್ತ ತಿರುಗುತ್ತಾನೆ.

ಪಾರವ್ವ ಮೊದಲೇ ಹಣದ ಆಸೆಗಾಗಿ ಪತ್ತರ ರಾಯಪ್ಪನ ಪ್ರಕಾರ ಸಂಗಣ್ಣನ ಎಲೆ ಅಡಿಕೆ ಚೀಲವು ಈರಪ್ಪನ ಮಂಚದ ತಲೆದಿಂಬಿನ ಕೆಳೆಗೆ ಮೇಲೆ ಸಿಗುತ್ತದೆ. ಇದರಿಂದ ಕುಪಿತನಾದ ಈರಪ್ಪ ಗಂಗಿಗೆ ಹಾದರ ಹಚ್ಚುತ್ತಾನೆ. ಅವಳು ಏನೇ ಬೇಡಿಕೊಂಡರು. ಅದಕ್ಕೆ ಕ್ಯಾರೆ ಎನ್ನದ ಈರಪ್ಪ ಗಂಗಿಯ ತುರಬ, ಮೊಲೆ ಕೊಯ್ಯುವದಾಗಿ ತಮ್ಮರನ್ನು ಕರೆಯುತ್ತಾನೆ. ತಮ್ಮಂದಿರು ಗಂಗಿಯ ದುಃಖ ಕ್ಕೆ ಸಹಾಯಕರಾಗುವುದಿಲ್ಲ. ಅತಿಗೆವ್ವ ನೀ ಹಾದರಮಾಡಿ ನಮ್ಮ ಮಾನ ಮರಿಯಾದೆ ಮುರಾ ಬಟ್ಟೆ ಮಾಡಿದಿಯಾ. ನಿನ್ನನ್ನು ಕ್ಷಮಿಸುವ ಪ್ರಶ್ನೆಯೇ ಇಲ್ಲ ಅಣ್ಣನಿಗೆ ಹೇಳುತ್ತಾರೆ. ಅವಳ ಮೂಗು, ತುರುಬ, ಮೊಲೆ ಕತ್ತರಿಸುವುದು ಸರಿಯಲ್ಲ ಎಂದು ಇರಪಾಕ್ಷಿ ಬಸವಂತ ನಿಶ್ಚಯಿಸಿ ಗಂಗಿಯ ವಸ್ತ್ರ ಒಡವೆ ಎಲ್ಲವನ್ನು ಕಸಿದುಕೊಂಡು ರಾತೋ ರಾತ್ರಿ ಎತ್ತಿನ ಗಾಡಿಯಲ್ಲಿ ಕುಳ್ಳರಿಸಿಕೊಂಡ, ಮೈದಾನರು ಅವಳನ್ನು ತವರು ಮನೆಗೆ ಬಿಟ್ಟು ಬರುತ್ತಾರೆ. ಇಲ್ಲಿಗೆ ಗಂಗಿಯ ಸಂಬಂಧ ಲಗಳೆರ ಮನೆಯಿಂದ ಕಡಿದು ಹೋಗುತ್ತದೆ.

ಖರೇ ಖರೇ ಸಂಗ್ಯಾ ಬಾಳ್ಯ ಪುಟ ಸಂಖ್ಯೆ : 52

ಇಲ್ಲಿ ಮುಖ್ಯವಾಗಿ ಗಂಗಿಗೆ ಅನ್ಯಾಯವಾಗುತ್ತದೆ. ಬರಬಾರದ ಅನ್ಯಾಯದ ಹೊರೆ ಹೊರುವ ಪ್ರಸಂಗ ನಡೆದು ಹೋಗುತ್ತದೆ. ಗಂಗಿಯ ಜೀವನವಂತು ಅನ್ಯಾಯದ ಹೊಸ್ತಿಲಕ್ಕೆ ಅಟ್ಟುತ್ತದೆ. ಇಲ್ಲಿ ನ್ಯಾಯ ಸತ್ತು ಹೋಗುತ್ತದೆ. ಯಾರೇ ಆಗಲಿ ನಿಜವಾದ ಸತ್ಯಾಂಶವನ್ನು ಹೊರತೆಗೆಯುವ ಪ್ರಯತ್ನ ಮಾಡುವುದಿಲ್ಲ. ಗಂಗಿಯ ಹಾದರದ ವಿಷಯ ಬಿರುಗಾಳಿಯಾಗಿ ಬೀಸುತ್ತದೆ. ಅಮಾಯಕ ಸ್ತ್ರೀಯ ಶೋಷಣೆಯು ನಡೆದಿದೆ. ಗಂಗಿಯ ಜೀವನ ದುರಂತಮಯವಾಗಿದೆ. ಗಂಗಿಯ ಜೀವನ ಇಲ್ಲಿಗೆ ಕೊನೆಯಾಗುತ್ತದೆ.

ಬಸವಣ್ಣ ಇರಪಕ್ಷಿ ಮತ್ತು ಈರಪ್ಪನ ನೆತ್ತರು ಸಿಟ್ಟಿನಿಂದ ಕುದಿಯುತ್ತಿರತ್ತದೆ. ಅವರ ಸೇಡಿಗಾಗಿ ಚಡಿಪಡಿಸುತ್ತಾರೆ. ತಮ್ಮ ಮನೆಯ ಮರ್ಯಾದೆ ಬೀದಿಗೆ ಬಂದಿರುವುದರಿಂದ ಗ್ರಾಮದಲ್ಲಿ ತಲೆ ಎತ್ತಿ ತಿರುಗದಂತೆ ಆಗಿರುತ್ತದೆ. ಗೌರವದ ಮನೆತನವಾಗಿರುವ ಲಗಳೆಯರ ಸ್ಥಾನಮಾನ ಕುಂದಿರುತ್ತದೆ. ಸುಳ್ಳಿನ ಮಹಾ ಪುರವೇ ಗಂಗಿಯ ದಿಕ್ಕು ತಪ್ಪಿಸುತ್ತದೆ. ಸತ್ಯವೋ ಸುಳ್ಳೋ ಎಂದು ಅರಿಯದ ಲಗಳೆಯರು ಅನಾವಶ್ಯಕವಾಗಿ ತಮ್ಮ ಬದುಕನ್ನು ಬೀದಿಗೆ ಬರುವಂತೆ ತಾವಾಗಿಯೇ ಮಾಡಿಕೊಳ್ಳುತ್ತಾರೆ. ಸಂಗ್ಯಾನ ಕೊಲೆಗೆ ಸಂಚು ರೂಪಿಸಿರುತ್ತಾರೆ. ಹೇಗಾದರೂ ಮಾಡಿ ಗಂಗಿಯನ್ನು ಮೋಹಿಸಿರುವ ಸಂಗ್ಯಾನನ್ನು ಬಡಬಾರದು ಎಂದು ಆತನ ಅಂತ್ಯದ ದಿನಗಳಿಗಾಗಿ ಕಾಯುತ್ತಿರುತ್ತಾರೆ. ಇದಕ್ಕೆ ಯಾವ ರೀತಿಯಾಗಿ ಸಂಗ್ಯಾನನ್ನು ಬೇಟೆಯಾಡಬೇಕು ಎಂದು ಸಮಯ ಸಾಧಿಸುತ್ತಾರೆ.

ಗ್ರಾಮದ ಮರಡಿ ಬಸವಣ್ಣನ ಗುಡಿಯ ಹತ್ತಿರ ಸಂಗ್ಯಾನ ಕೊಲೆ ಮಾಡಲು ಸಂಚು ರೂಪಿಸುತ್ತಾರೆ. ಇದಕ್ಕಾಗಿ ಸಂಗ್ಯಾನ ಜೀವದ ಗೆಳೆಯ ಬಾಳ್ಯಾನನ್ನು ಬಳಸಿಕೊಳ್ಳುತ್ತಾರೆ. ಬಾಳ್ಯಾ ಇಲ್ಲಿ ಹಣದ ಆಸೆ, ಆಮೀಷಗಳಿಗೆ ಜೋತು ಬೀಳುವ ಬಾವಲಿಯಂತೆ ಕೆಲಸ ಮಾಡಿದ್ದಾನೆ. ಜೀವದ ಗೆಳೆಯ ಸಂಗ್ಯಾನ ಕೊಲೆಯಾಗುತ್ತದೆ. ಬಾಳ್ಯಾನಿಗೆ ಸಂಗ್ಯಾನ ಕೊಲೆ ಮಾಡುವವರಿದ್ದಾರೆ ಎನ್ನುವ ವಿಷಯ ಬಾಳ್ಯಾ ಅರಿಯುವುದೇಯಿಲ್ಲ.ಲಗಳೆಯರು ಬಾಳ್ಯಾನ ಎದುರಿಗೆ ಮಾಡಿರುವ ಅಪವಾದಗಳೆಲ್ಲವು ಸರಿ ಎಂದು ನಂಬಿರುತ್ತಾನೆ. ಆದರೂ ಜೀವದ ಗೆಳೆಯನಾದ ಸಂಗ್ಯಾನ ಬಗ್ಗೆ ಅನುಕಂಪವಿದೆ, ಲಗಳೆಯರು ಹೇಗಾದರೂ ಮಾಡಿ ಸಂಗ್ಯಾನನ್ನು ರಾತ್ರಿ ಮರಡಿ ಬಸವಣ್ಣನ ಗುಡಿಯ ಹತ್ತಿರ ಕರೆದುಕೊಂಡು ಬಾ ಎಂದು ಹೇಳುತ್ತಾರೆ. ಈ ಕೆಲಸ ನೀನು ಮಾಡಿದರೆ ನಿನಗೆ ಐದು ಎಕರೆ ಜಮೀನು ಕೊಡುವುದಾಗಿ ಹೇಳುತ್ತಾರೆ.ಇಲ್ಲಿ ಪ್ರತಿಯೊಂದು ಘಟನೆಗೆ ದುರಾಸೆಯೇ ಪ್ರಮುಖ ಕಾರಣ.

ಗಂಗಿಯ ದಿವಾಳಿಗೆ ಬಂಗಾರ ಕೆಲಸ ಮಾಡುತ್ತದೆ. ಪರವ್ವ ಬಂಗಾರದ ಆಸೆಗೆ ಏನೆಲ್ಲಾ ಮಾಡಿ ಗಂಗಿಯನ್ನು ಬೀದಿಗೆ ತರುತ್ತಾಳೆ. ಮುಂದೆ ಸಂಗ್ಯಾನ ದುರಂತಕ್ಕೂ ಬಾಳ್ಯಾ ಸಂಗ್ಯಾನ ಕರೆದುಕೊಂಡು ಬರುವಲ್ಲಿ ಐದು ಎಕರೆ ಭೂಮಿಯ ಕೆಲಸ ಮಾಡುತ್ತದೆ. ಸಂಗ್ಯಾನ ಮನೆಗೆ ಬಾಳ್ಯಾ ಹೋಗಿ ಆದ ಘಟನೆಯನೆಲ್ಲಾ ವಿವರಿಸುತ್ತಾನೆ. ಇದರ ಬಗ್ಗೆ ಮರಡಿ ಬಸವಣ್ಣನ ಗುಡಿಯಲ್ಲಿ ಅವರಿಗೆ ಸತ್ಯಸತ್ಯೆತೆಯನ್ನು ಹೇಳಬಿಡು. ಅವರಿಗೆ ನಿನ್ನ ಮೇಲೆ ತಪ್ಪು ಕಲ್ಪನೆಯಾಗಿದೆ ಎಂದು ಹೇಳಿ. ಸಂಗ್ಯಾನನ್ನು ಮರಡಿ ಬಸವಣ್ಣನ ಗುಡಿಯ ಹತ್ತಿರ ಕರೆದುಕೊಂಡು ಹೋಗುತ್ತಾನೆ. ಅಲ್ಲಿ ಹೊಂಚು ಹಾಕಿ ಕುಳತಿರವ ಮೂವರು ಸಹೋದರರು ಮತ್ಯಾವ ವಿಷಯ ಪ್ರಸ್ತಾಪಿಸುವ ಗೋಜಿಗೆ ಹೋಗುವದೇಯಿಲ್ಲ ಅನಾವಶ್ಯಕವಾಗಿ ಸಂಗ್ಯಾನನ್ನು ಯಾವುದೇ ವಿಚಾರಿಸದೆ ಕೊಲೆ ಮಾಡಲು ತಯ್ಯಾರಿ ನಡೆಸಿರುತ್ತಾರೆ.ಸಂಗಣ್ಣ ಬಂದ ತಕ್ಷಣವೇ ಆತನಿಗೆ ಯಾವುದನ್ನು ಹೇಳಲು ಅವಕಾಶ ನೀಡುವುದೇಯಿಲ್ಲ.

ಮರಡಿ ಗುಡಿಯ ಹತ್ತಿರ ಸಂಗಣ್ಣನನ್ನು ಅನಾವಶಕವಾಗಿ ತೆಗಳುತ್ತಾರೆ. ಸಂಗಣ್ಣ ಕಾಲಿಗೆ ಬಿದ್ದು ಕೇಳಿಕೊಳ್ಳುತ್ತಾನೆ. ಚಡಪಡಿಸುತ್ತಾನೆ. ಗಂಗವ್ವ ಮತ್ತು ನನ್ನದು ಯಾವುದು ತಪ್ಪೆಯಿಲ್ಲ. ಆದರೆ ಇದಕ್ಕೆ ಯಾರೋ ಇಲ್ಲಸಲ್ಲದ ಅಪವಾದಗಳು ಹೇರಿ ನಮ್ಮ ಮ್ಯಾಲೆ ಕೂಡಸ್ಯಾರ. ಎಂದು ಹೇಳಿದರೂ ಸಂಗಣ್ಣ ಹೇಳುವ ಮಾತುಗಳು ಯಾರೂ ಕೇಳುವ ಹಾಗೆ ಇಲ್ಲವೆ ಇಲ್ಲ. ಸಂಗ್ಯಾನನ್ನು ಹಿಡಿಯಲು ಮುಂದಾದಾಗ ಸಂಗ್ಯಾ ಓಡಬೇಕೆನ್ನುವಷ್ಟರಲ್ಲಿ.

ಸಂಗ್ಯಾ ಗಂಗಿ
ಕರದಾಳೋ ಹೀಂಗ ನಡೀ ನಡೀ।
ಕಾಲ ಹಿಡದ
ಕಂಟ್ಯಾಗ ಇವನ ಏಳೀ ಏಳೀ।
ಒತ್ತಿ ಹಿಡದ
ಇವನ ಶಿರ ಹರೀ ಹರೀ। 1

ಎನ್ನುತ್ತ ಕೈಕಾಲು ರುಂಡವನ್ನೆಲ್ಲಾ ಕಡಿದು ಗದ್ದಲ ಮಾಡುತ್ತ ಹೋಗುತ್ತಾರೆ. ತಾವಾಗಿಯೇ ಹೋಗಿ ಬ್ರಿಟಿಷ ಸರಕಾರಕ್ಕೆ ಶರಣಾಗುತ್ತಾರೆ. ಇಲ್ಲಿಗೆ ಸಂಗ್ಯಾನ ಕೊಲೆಯಾಗುತ್ತದೆ. ಗಂಗಿಯ ಸಂಸಾರ ಕಡಿದು ಬೀದಿಗೆ ಬೀಳುತ್ತದೆ. ಈ ನಾಟಕದಲ್ಲಿ ಮುಖ್ಯವಾಗಿ ಗಂಗಿ ಮತ್ತು ಸಂಗ್ಯಾರ ಜೀವನದ ಕಥೆಯು ದುರಂತದಲ್ಲಿಯೇ ಕಥೆ ಮುಗಿದು ಹೋಗುತ್ತದೆ.

ಅನೇತ ತಂತ್ರಗಳನ್ನು ರೂಪಿಸಿ ಗಂಗಿಯ ಹಾದರತನಕ್ಕೆ ಮತ್ತು ಸಂಗ್ಯಾನ ಭೀಕರ ಕೊಲೆಗೆ ಕಾರಣಿ ಭೂತನಾದ ಪತ್ತಾರ ರಾಯಪ್ಪ ಈ ವಿಷಯ ತಿಳಿದು ಊರು ಬಿಟ್ಟು ಹೋಗಿರುತ್ತಾನೆ. ಪರವ್ವ ಈ ಒಂದು ಪ್ರಮುಖ ವಿಷಯವನ್ನು ಆತನಿಗೆ ಹೇಳಲು ಆತುರಾತುರದಿಂದ ಓಡಿ ಹೋಗುತ್ತಾಳೆ.

ಪತ್ತಾರಣ್ಣಾ ರಾಯಪ್ಪ ನಿನಗೆ ಒಂದು ಸುದ್ದಿ ಹೇಳ್ತಿನಿ ಕೇಳು ಎಂದಾಗ ಪತ್ತಾರ ಹೇಳುತ್ತಾನೆ. ನೀ ಹೇಳುವುದು ನನಗೆ ಮೊದಲೇ ಗೊತ್ತಿದೆ. ಅದಕ್ಕಾಗಿಯೇ ನಾನು ಊರು ಬಿಟ್ಟು ಹೋಗಿದ್ದೆ. ಎನ್ನುತ್ತಾನೆ. ಪರವ್ವ ಮತ್ತೆ ಆತನಿಂದ ಒಂದು ತೋಲಿ ಬಂಗಾರ ಪಡೆದುಕೊಂಡು ತನ್ನ ಮನೆಗೆ ಬರುತ್ತಾಳೆ. ಪತ್ತಾರ ರಾಯಣ್ಣನ ಕುತಂತ್ರಕ್ಕೆ ಒಂದು ಸುಂದರವಾದ ಸಂಸಾರ ಹಾಳು ಆಗುತ್ತದೆ. ಮತ್ತು ಒಬ್ಬ ನಿರಪರಾಧಿಯ ಕೊಲೆಯು ಆಗುತ್ತದೆ. ಹೀಗಾಗಿ ಇದೊಂದು ಕೃತಿಯಲ್ಲಿ ದುರಂತದ ಛಾಯೆ ಅತಿ ಭಯಾನಕವಾದ ರೀತಿಯಲ್ಲಿ ಕಂಡುಬರುತ್ತದೆ.

ಖರೇ ಖರೇ ಸಂಗ್ಯಾ ಬಾಳ್ಯಾರ ಕಥೆಯ ವಸ್ತುವಿನಲ್ಲಿ ಗಂಗಿಯು ತಲೆ ಎತ್ತಿ ತಿರುಗಾಡದ ಸ್ಥಿತಿಯಲ್ಲಿ ತವರು ಮನೆಯ ಮೂಲೆಯಲ್ಲಿ ಬಿದ್ದಿರುತ್ತಾಳೆ. ಗಂಗಿಯ ಹಾದರದ ವಿಷಯ ಬೈಲವಾಡಿದಲ್ಲಿಯ ಗೊತ್ತಾಗುತ್ತದೆ. ಅಲ್ಲಿಯು ಅವಳಿಗೆ ನೆಮ್ಮದಿ ಇರುವುದಿಲ್ಲ. ಗಂಗಿಯ ಬದುಕು ಸತ್ತ ಜೀವಂತ ಶವವಿದ್ದಂತೆ ಆಗಿ ಬಿಡುತ್ತದೆ. ಸಂಗ್ಯಾನು ಕೂಡ ಯಾವುದೇ ತಪ್ಪು ಮಾಡದಿದ್ದರೂ ಕೊಲೆಯಾಗಿ ಹೋಗುತ್ತಾನೆ. ಆತನ ಕೊಲೆಗೆ ಯಾರು ರಕ್ಷಣೆ ಕೊಡುವುದಿಲ್ಲ. ಅನಾವಶ್ಯಕವಾಗಿ ಬರ್ಬರವಾಗಿ ಕೊಲೆಯಾಗಿ ಹೋಗುತ್ತಾನೆ.

ಖರೇ ಖರೇ ಸಂಗ್ಯಾ ಬಾಳ್ಯ ಪುಟ ಸಂಖ್ಯೆ : 62

ಬ್ರಿಟೀಷ ಸರಕಾರದ ಹಾವಳಿಯ ಕಾಲವದು, ಈರಪ್ಪ ಮತ್ತು ಆತನ ಎರಡು ತಮ್ಮಂದಿರು ಕೊಲೆ ಮಾಡಿ ಸರಕಾರಕ್ಕೆ ತಾವೇ ಖುದ್ದಾಗಿ ಹೋಗಿ ಶರಣಾಗುತ್ತಾರೆ. ಅಲ್ಲಿ ಕೊಲೆಯು ಪಾಪದ ಕೆಲಸ ಎಂದು ಸಾಬೀತಾಗುತ್ತದೆ. ಕೊಲೆಗೆ ಕಾರಣರಾದ ಮೂವರನ್ನು ಗಲ್ಲು ಶಿಕ್ಷೆ ವಿಧಿಸಲು ನ್ಯಾಯಾಲಯ ಆದೇಶ ನೀಡುತ್ತದೆ. ಆದರೆ ಒಂದು ಷರತ್ತಿನ ಮೇಲೆ ಅದು ಯಾವುದೆಂದರೆ.

ನೀವು ಮೂವರು ಕೊಲೆಗಡುಕರು ನಿಮ್ಮನ್ನು ಈ ಕೊಲೆಯಿಂದ ಕ್ಷಮೆ ಮಾಡುತ್ತೇವೆ. ಆದರೆ ನೀವು ಹಿಂದೂ-ಧರ್ಮ ಬಿಟ್ಟು ಕ್ರೈಸ್ತ ಧರ್ಮಕ್ಕೆ ಬರಬೇಕು. ಅಂದರೆ ನಿಮಗೆ ಕ್ಷಮೆ ನೀಡುತ್ತೇವೆ. ಇಲ್ಲದಿದ್ದರೆ ಮೂವರನ್ನು ಗಲ್ಲು ಶಿಕ್ಷೆಗೆ ಗುರಿ ಪಡಿಸುವುದಾಗಿ ಆದೇಶ ಹೊರಡಿಸುತ್ತಾರೆ. ಆವಾಗ ಈರಪ್ಪ ಧರ್ಮ ಬದಲಾವಣೆಗೆ ಒಪ್ಪುವುದಿಲ್ಲ. ಕ್ರೈಸ್ತ ಧರ್ಮ ಸ್ವಿಕರಿಸಲು ನಿರಾಕರಿಸುತ್ತಾನೆ. ಆದರೆ ತಮ್ಮಂದಿರು ಜೀವಕ್ಕೆ ಹೆದರಿ ಒಪ್ಪಿರುತ್ತಾರೆ. ಆದರೆ ಈರಪ್ಪನ ಮನಸ್ಸು ಕುಂದಿರುತ್ತದೆ. ಹೆಂಡತಿಯ ಮನಸ್ಸು ನಾನು ಸರಿಯಾಗಿ ತಿಳಿದಿಲ್ಲ. ನಾನು ಬದುಕುವ ಗೋಜಿಗೆ ಹೋಗಲಾರೆ ಎಂದು ಗಲ್ಲು ಶಿಕ್ಷೆಗೆ ಗುರಿಯಾಗುತ್ತಾನೆ. ತಮ್ಮಂದಿರು ಮಾತ್ರ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿ ಜೀವದಾನ ಪಡೆಯುತ್ತಾರೆ.

-ಇಲ್ಲಿಗೆ ಖರೇ ಖರೇ ಸಂಗ್ಯಾ ಬಾಳ್ಯ ಕಥೆಯು ಮುಕ್ತಾಯವಾಗುತ್ತದೆ.

೨. ಖರೇ ಖರೇ ಸಂಗ್ಯಾ ಬಾಳ್ಯಾ ಕೃತಿಯ ಪಾತ್ರ ಚಿತ್ರಣ

೧. ಗಂಗವ್ವ

ಗ್ರಾಮೀಣರ ಆಡು ಭಾಷೆಯಲ್ಲಿ ರಚನೆಯಾಗಿರುವ ಖರೇ ಖರೇ ಸಂಗ್ಯಾ ಬಾಳ್ಯಾ ಕೃತಿಯು ಓದುಗರಿಗೂ ಮತ್ತು ನೋಡುಗರಿಗೂ ಈ ಭಾಷೆಯು ಉತ್ತರ ಕರ್ನಾಟಕದ ಜನರಿಗೆ ಥಟ್ಟನೆ ಅರ್ಥವಾಗುತ್ತದೆ. ಅಂಥವರಲ್ಲಿ ಖರೇ ಖರೇ ಸಂಗ್ಯಾ ಬಾಳ್ಯಾ ನಾಟಕವು ಸತ್ಯತೆಯ ಮೇಲೆ ನಿಂತಿರುವ ನಾಟಕವೆಂದು ಸ್ವತಃ ಲೇಖಕರೇ ತಮ್ಮ ನಿವೇದನೆಯಲ್ಲಿ ಪ್ರಸ್ತಾಪಿಸಿದ್ದಾರೆ. ಸತ್ಯತೆಯನ್ನು ಹುಡುಕಿ ನಿಜವಾದ ಸಂಗತಿಯನ್ನು ಹೊರಗಳೆದಿದ್ದೇವೆ ಎಂಬ ಸಂತಸವು ಅವರಿಗಿದೆ. ಹೀಗಾಗಿ ಅವರು ಈ ನಾಟಕವನ್ನು ರಂಗ ಮಂದಿರದ ಮೇಲೆಯೂ ಪ್ರದರ್ಶಿಸಿ ತೋರಿಸಿ ಪ್ರಶಂಶೆಯು ಪಡೆದಿದ್ದಾರೆ.

ಸಜ್ಜನರ ಮೇಲೆಯೂ ಸುಳ್ಳು ಶಾಬ್ದಿಕ ಹಲ್ಲೆ ವಿಜೃಂಬಿಸುತ್ತಿರುವ ಕಾಲವಿದು. ನೂರು ವರ್ಷಗಳ ಹಿಂದೆ ನಿರಪರಾಧಿ ಗಂಗಿಯ ವಿಷಯದಲ್ಲಿ ಸೃಷ್ಠಿಯಾದ ಇಂಥ ಒಂದು ಹಲ್ಲೆಗೆ ಅಕ್ಷರ ರೂಪ ಕೊಡಲು ಮಾಡಿದ ಪ್ರಯತ್ನ. ಈ ಸಣ್ಣಾಟ ಹೀಗಾಗಿ ಗಂಗಿಯ ವಿಗ್ರಹ ಭಂಜನೆ ಮಾಡುತ್ತ. ಇಂದು ರಂಗದ ಮೇಲೆ ವಿಜೃಂಭಿಸುತ್ತಿರುವ ಆ ಸಂಗ್ಯಾ ಬಾಳ್ಯಾ ಸಣ್ಣಾಟ ಮತ್ತು ಖರೇ ಖರೇ ಸಂಗ್ಯಾ ಬಾಳ್ಯಾ ಸಣ್ಣಾಟದ ಮುಖಾ ಮುಖಿ ಸೃಷ್ಠಿಯೆನಿಸಿದೆ. 1

ಈ ಕಥೆಯ ಮೂಲ ರೂಪವು ಗಂಗಿಯ ಹಾದರದ ಕಥೆಯನ್ನು ಒತ್ತು ಕೊಟ್ಟು ರಚನೆಯಾಗಿರುವ ಕೃತಿಯಾಗಿದೆ. ನಂತರ ಈ ಕಥೆಯನ್ನೇ ಸುಳ್ಳು ಇದರಲ್ಲಿ ದ್ವೇಷದ ಕಿಡಿ ಇದೆ. ನಿಜವಾದ ಅಂಶ ಇಲ್ಲಿ ಇಲ್ಲ. ಇರಬೇಕಾದುದನ್ನು ಸೃಷ್ಟಿಗೊಂಡಿಲ್ಲ. ಇರಲಾರದ ಕಥೆಯು ಬರವಣಿಗೆಯ ಕೌಶಲ್ಯದಲ್ಲಿ ರೂಪಗೊಂಡು ಒಂದು ಸುಳ್ಳು ವಿಷಯ ವಸ್ತು ಇದಾಗಿದೆ. ಯಾವುದೇ ಒಂದು ಘಟನೆಯ ಸತ್ಯಾಂಶದಿಂದ ಕೂಡಿರುವ ಘಟನೆಯಾದರೂ, ಅಲ್ಲಿ ಅಸತ್ಯತೆಯನ್ನು ಕೃತಿಯಲ್ಲಿ ತುಂಬುವುದು ತೀರಾ ತಪ್ಪು. ಹೀಗಾಗಿ ಸತ್ಯತೆಯ ಇನ್ನೊಂದು ಮುಖವನ್ನು ಒರೆ ಹಚ್ಚಿ ಹೊರ ಹಾಕಿರುವ ಕ್ರಿಯೇ ಇಲ್ಲಿ ನಡೆದಿದೆ.

ಬೈಲವಾಡದಿಂದ ಬಂದ ಕನ್ಯೆ ಈ ಗಂಗವ್ವ ಮುಂದೆ ಪ್ರತಿಷ್ಠೆಯ ಮನೆತನವಾಗಿರುವ ಲಗಳೆಯರ ಮನೆತನದ ಸೊಸೆಯಾಗುತ್ತಾಳೆ. ಇವಳಿಗೆ ಅತಿಯಾದ ಮಾನ, ಮರ್ಯಾದೆ, ಗೌರವ ಎಲ್ಲವೂ ಲಗಳೆಯರ ಮನೆಯಿಂದ ದೊರೆಯುತ್ತದೆ. ಗಂಗವ್ವ ಎಂದರೆ ಗಂಗಾನದಿಯಂಥ ಮನಸ್ಸಿನವಳು ಎಂದು ಇಡಿ ಊರಿಗೂರೆ ಪ್ರಶಂಶೆ ವ್ಯಕ್ತಪಡಿಸುತ್ತದೆ. ತುಂಬು ಮನೆತನಕ್ಕೆ ತುಂಬಿದ ಮನಸ್ಸಿನ ಗೃಹಿಣಿ ಬಂದಿರುವುದು ಮನೆತನಕ್ಕೆ ಹೆಚ್ಚಿನ ಮರ್ಯಾದೆಯನ್ನು ತಂದುಕೊಡುತ್ತದೆ. ಗಂಗವ್ವನೇ ಮನೆತನದಲ್ಲಿ ಪ್ರಭಾವಿ ಸ್ತ್ರೀಯಾಗಿ ಕಂಡುಬರುತ್ತಾಳೆ. ಲಗಳೆಯರ ಮನೆತನದಲ್ಲಿ ಕಂಡು ಬರುವವರೆಂದರೆ ಮೂವರ, ಈರಪ್ಪ, ಇರಪಾಕ್ಷಿ ಮತ್ತು ಬಸವಂತ ಈ ಮೂವರು ಅಣ್ಣ ತಮ್ಮಂದಿರು, ಅದರಲ್ಲಿ ಮೊದಲನೆಯ ಅಣ್ಣನೇ ಈರಪ್ಪಾ. ಈ ಈರಪ್ಪನ ಹೆಂಡತಿಯಾಗಿ ಗಂಗವ್ವ ಲಗಳೆಯರ ಮನೆತನದ ಪ್ರಥಮ ಸೊಸೆಯಾಗಿ ಮನೆ ತುಂಬುತ್ತಾಳೆ.

ಲಗಳೆಯರ ಮನೆತನದಲ್ಲಿ ಈ ಮೂವರಾದ ಈರಪ್ಪ, ಇರಪಾಕ್ಷಿ ಬಸವಂತರನ್ನು ಬಿಟ್ಟರೆ, ಮತ್ತೆ ಯಾರು ಇರುವುದೇ ಇಲ್ಲ. ಪುರುಷ ಪ್ರಧಾನ ಕುಟುಂಬ ಎಂಬಂತೆ ಎದ್ದು ಕಾಣುತ್ತದೆ. ಹೀಗಾಗಿ ಈ ಮೂವರು ಅಣ್ಣ ತಮ್ಮಂದಿರು ಚಿಕ್ಕ ವಯಸ್ಸಿನಲ್ಲಿಯೇ ತಂದೆ-ತಾಯಿಯನ್ನು ಕಳೆದುಕೊಂಡವರು. ಅಂಥದರಲ್ಲಿ ಮನೆತನಕ್ಕೆ ಹಿರಿಯನಾದ ಅಣ್ಣ ಈರಪ್ಪನೇ ತನ್ನ ಚಿಕ್ಕ ವಯಸ್ಸಿನ ತಮ್ಮರನ್ನು ತನ್ನ ಒಡಲಲ್ಲಿ ಇಟ್ಟು ಸಾಕುತ್ತಾನೆ.

---

1) ಖರೆ ಖರೇ ಸಂಗ್ಯಾ ಬಾಳ್ಯಾ ಸಣ್ಣಾಟ ಕೃತಿಯಲ್ಲಿನ ಅರಿಕೆ -

ಲಗಳೆಯರ ಮನೆತನವು ಸಿರಿಸಂಪತ್ತಿನಿಂದ ತುಂಬಿ ತುಳುಕುವ ಮನೆತನ. ಗಂಗವ್ವ ಇವರ ಮನೆಗೆ ಕಾಲಿಟ್ಟ ನಂತರ ವಂತೂ ಮನೆಯಲ್ಲಿ ಸಾಕ್ಷಾತ ಧನಲಕ್ಷ್ಮಿ ದೇವತೆಯೇ ಕಾಲು ಮುರಿದುಕೊಂಡು ಬದ್ದಾಳೆ ಎಂದು ಸಂತಸ ಪಡುವ ಮೈದುನರಿಗೆ ಎಲ್ಲಿಲ್ಲದ ಆನಂದ ಅತ್ತಿಗೆ ಎಂದರೆ ನಮ್ಮ ಮನೆಯ ಭಾಗ್ಯ ಎಂದು ಅರಿತು, ಅವಳ ಯೋಗ ಕ್ಷೇಮತೆಯತ್ತಲೂ ಮೈದುನರ ಕಾಳಜಿ ಜಾಸ್ತಿಯಾಗುತ್ತದೆ. ಈ ವರ್ಷ ಅತಿ ಹೆಚ್ಚಿನ ಲಾಭ ಗಳಿಕೆ ಆಗಿರುತ್ತದೆ. ಆದುದರಿಂದಲೇ ಸಂತೋಷದಿಂದ ಇರಪಕ್ಷಿ ಮತ್ತು ಬಸವಂತರೂ ಅಕ್ಕರೆಯಿಂದ ಅಣ್ಣನ ಎದುರಿಗೆ ಊಟ ಮಾಡುವಾಗ ಅತ್ತಿಗೆ ಸಲುವಾಗಿಯೇ ಸಂತೋಷದಿಂದ ಐದೈದು ತೊಲಿ ಬಂಗಾರ ಅತ್ತಿಗೆಗಾಗಿ ಕೊಡುತ್ತಾರೆ. ಅತ್ತಿಗೆ ಬೇಡ ಎಂದರೂ ಕೇಳುವುದೇ ಇಲ್ಲ ನನಗೆ ಬಂಗಾರ ಒಡವಿ ವಸ್ತ್ರ ಎಲ್ಲವೂ ನೀವೆ ಆಗಿರುವಾಗ ಇಧರಿಂದ ನನಗೇನು ಲಾಭ ಎಂದರು, ಮೈದುನರು ಕೇಳುವುದೇ ಇಲ್ಲ. ಆದರೂ ಅನಿವಾರ್ಯ ಎಂಬಂತೆ ಮೈದುನರ ಸಂತೋಷ ಮತ್ತು ಪ್ರೀತಿಯ ಬಳುವಳಿಯನ್ನು ಪಡೆಯುತ್ತಾಳೆ. ಹಠಮಾರಿತನದಿಂದ ಮೈದುನರು ಕೊಟ್ಟಿರುವ ಈ ಬಂಗಾರದ ಉಡುಗೋರೆಯ ಗಂಗಿಯ ಜೀವನದಲ್ಲಿ ಸಂತಸದ ಬುಗ್ಗೆಯಾಗಿ ಚಿಮ್ಮುತ್ತದೆ. ನನೆಗ ಇಂಥ ಮನೆತನ, ಇಂಥ ವಾತ್ಸಲ್ಯ ದೊರೆತಿರುವುದು ನಿಜಕ್ಕೂ ನನಗೆ ಹೆಮ್ಮೆಯ ವಿಷಯವೇ ಎಂದು ಸಂತೋಷದಿಂದ ಕಾಲ ಕಳೆಯುತ್ತಾಳೆ.

ಮೈದುನರು ಕೊಟ್ಟಿರುವ ಬಂಗಾರದಿಂದ ಒಡವಿಗಳನ್ನು ಮಾಡಿಸಲು ಬಂಗಾರದ ಅಂಗಡಿಗೆ ಹೋಗಬೇಕು. ಜೊತೆಯಲ್ಲಿ ಪರವ್ವನನ್ನು ಬಿಟ್ಟರೆ ಬರುವವರಾದರೂ ಯಾರು. ಇವರ ಮನೆಯ ಹತ್ತಿರದ ನೆರೆಹೊರೆಯವಳು. ಇವಳನ್ನು ಕರೆದುಕೊಂಡು, ಗಂಡನಿಂದ ಅಪ್ಪಣೆಯನ್ನು ಪಡೆದು ಬಂಗಾರದ ಅಂಗಡಿಗೆ ಹೊರಡುತ್ತಾಳೆ. ಮೊದಲೇ ಸೌಂದರ್ಯದ ಸೊಬಗು ಇವಳ ರೂಪ ಲಾವಣ್ಯ ಎಂಥವರ ದೃಷ್ಠಿಯು ಇವಳ ಮೇಲೆ ಬೀಳುವಂಥದ್ದು. ಯಾರ ದೃಷ್ಠಿ ಬಿದ್ದರು ದಿಟ್ಟಿಯಾಗುತ್ತದೆ. ಎನ್ನುವಂಥ ಬಂಗಾರದಂಥ ಚಲುವೆ, ಬೀದಿಯಲ್ಲಿ ಹೋಗುವಾಗ ಎಲ್ಲರ ದೃಷ್ಠಿಯು ಗಂಗಿಯ ಮೇಲೆ ಬಿದ್ದು ಅವಳನ್ನು ದೃಷ್ಠಿ ತಾಕುವಂತೆ ಮಾಡುತಿತ್ತು. ಅಂಗಡಿಯ ಬೀದಿಯಿಂದ ಬಂಗಾರದ ಅಂಗಡಿಗೆ ಹೊರಟಿರುವ ಗಂಗ ಮತ್ತು ಪಾರವ್ವ ನೇರವಾಗಿ ಅಕ್ಕಸಾಲಿಗನಾದ ಫತ್ತಾರ ರಾಯಪ್ಪನ ಬಂಗಾರದ ಅಂಗಡಿಗೆ ಹೋರುಡುತ್ತಾರೆ.

ಪತ್ತಾರ ರಾಯಪ್ಪ ಒಬ್ಬ ಅಕ್ಕಸಾಲಿಗನು ಹೌದು ಮತ್ತು ಸಾಹಿತಿಯು ಹೌದು ಹೀಗಿರುವಾಗ ಬಂಗಾರದ ಒಡವೆ ಮಾಡಿಸಲು ಹೋದಾಗ ಗಂಗಿಯ ರೂಪಕ್ಕೆ ಮಾರು ಹೋಗಿ ಮಾತು ಬಿಟ್ಟು ಮಾತು ಆಡಲು ಪ್ರಾರಂಭಿಸುತ್ತಾನೆ. ಗಂಗಿಯ ರೂಪಲಾವಣ್ಯ ಪತ್ತಾರನ ದೃಷ್ಟಿ ಕುಕ್ಕುತ್ತದೆ. ಅವಳ ರೂಪ ಲಾವಣ್ಯಕ್ಕೆ ಮಾರು ಹೋಗುತ್ತಾನೆ. ಬಂಗಾರ ಕೆಲಸದ ಮೇಲಿರದೇ ಇವನ ದೃಷ್ಟಿಯು ಗಂಗಿಯ ಮೇಲೆ ಕಾಮದಾಹದ ನಗೆಯನ್ನು ಬೀರುತ್ತಿರುತ್ತದೆ. ಇಂಥ ಚಲುವೆಯನ್ನು ನಾನು ನೋಡಿಯೇ ಇಲ್ಲ ಎಂದು ಆಂತರಿಕವಾಗಿ ಚಡಪಡಿಸುತ್ತಾ ಗಂಗಿಯ ಮೇಲೆ ವ್ಯಾಮೋಹಕನಾಗಿ ಬಿಡುತ್ತಾನೆ.

ಗಂಗಿ ಮತ್ತು ಪರವ್ವ ಬಂಗಾರದ ಒಡವೆಯನ್ನು ಯಾವ ಯಾವ ಆಕಾರದಲ್ಲಿ ಮಾಡಿಸಬೇಕು. ಹೇಗಿರಬೇಕು. ಎಂದು ಎಲ್ಲವೂ ಹೇಳುತ್ತಾರೆ. ನಂತರ ಗಂಗವ್ವ ಗಡಿಬಿಡಿಯಿಂದ ಪರವ್ವನನ್ನು ಅಕ್ಕಸಾಲಿಗಾನಾಗದ ಪತ್ತಾರ ರಾಯಪ್ಪನ ಅಂಗಿಡಿಯಲ್ಲಿ ಬಿಟ್ಟು, ಪರವ್ವ ನೇ ಎಲ್ಲವೂ ಹೇಳಿ ಬಿಡು ಅದರ ಮೌಲ್ಯ, ಅಂದರೆ ಅಕ್ಕಾ ಸಾಲಿಗನ ಮಜೂರಿ (ಕೂಲಿ) ಎಷ್ಟು ಎಲ್ಲವೂ ಕೇಳಿಕೊಂಡು ಬಂದು ಬಿಡು ಎಂದು ಹೇಳಿ, ಗಡಿಬಿಡಿಯಿಂದ ಮನೆಯ ಕಡೆಗೆ ಧಾವಿಸಿ ಬರುತ್ತಾಳೆ. ಪರವ್ವ ಒಬ್ಬಳೆ ಅಕ್ಕಸಾಲಿಗನ ಹತ್ತಿರ ಗಂಗವ್ವಳಿಗೆ ಬೇಕಾದ

ಒಡುವೆ ಯಾವುವು ಎಂಬುದರ ಬಗ್ಗೆ ಹೇಳುತ್ತಾಳೆ. ಪತ್ತಾರ ಪರವ್ವ ಹೇಳುವುದನ್ನು ಕೇಳಿಸಿಕೊಂಡರೂ, ಹಾಗೆಯೇ ಗಂಗೆಯ ರೂಪ ಲಾವಣ್ಯಕ್ಕೆ ಮಾರು ಹೋಗಿರುವ ಸಂಗತಿಯು ಪರವ್ವ ಅರಿತಿರುತ್ತಾಳೆ.

ಪತ್ತಾರ ರಾಯಪ್ಪ ಗಂಗಿಯ ಸೌಂದರ್ಯದ ಬಗ್ಗೆ ಪರವ್ವಳ ಮುಂದೆ ಹೇಳುತ್ತಿರುತ್ತಾನೆ. ಆಗ ಪರವ್ವ ಏ ಪತ್ತಾರಣ್ಣ ನೀ ಮೊದಲು ನಿನ್ನ ಕೆಲಸ ಮಾಡು ಆ ಮೇಲೆ ನಿಂದು ನೀ ನಂದು ನಾವು ತಿಳಿತಿಲ್ಲ. ಯಾಕೋ ಬ್ಯಾರೆ ಬ್ಯಾರೆ ಮಾತ ಆಡ್ತಾಯಿದ್ದಿಯಲ್ಲ. ಎಂದು ಗದರಿಸುತ್ತಾಳೆ. ಆದರೂ ಪತ್ತಾರ ರಾಯಪ್ಪ ಗಂಗಿಯ ಸೌಂದರ್ಯವನ್ನು ಸವಿಯಲು ಆಂತರಿಕವಾಗಿ ಚಡಪಡಿಸುತ್ತಾನೆ. ಗಂಗವ್ವಗೆ ಒಪ್ಪುವಂಥ ಒಡವಿ ಮಾಡುತ್ತೇನೆ. ಪರವ್ವ ಅವಳು ನಮ್ಮೂರಾಕಿ ಅಂದಿಯಿಲ್ಲ. ನಾ ಅವಳನ್ನು ನೋಡಿಯೇ ಇಲ್ಲ. ಎಂದು ಹೇಳುತ್ತಾನೆ. ಒಟ್ಟಾರೆ ನಮ್ಮ ಬೈಲವಾಡದವಳೆ ಎಂದು ಅರಿತರು , ಅವಳ ಸೌಂದರ್ಯ, ರೂಪ ಲಾವಣ್ಯ, ಈತನ ಮುಂದೆ ಬರುತ್ತಲೇ ಇರುತ್ತದೆ.

ಪರವ್ವಳಿಗೆ ತನ್ನ ಮನದ ಆಸೆಯನ್ನು ತಿಳಿಸುತ್ತಾನೆ. ನೋಡಪರವ ನೀನು ಹ್ಯಾಗಾದರೂ ಮಾಡಿ ಗಂಗಿಯನ್ನು ನನಗೆ ಒಲಿಯುವಂತೆ ಮಾಡಿದರೆ. ನಿನಗೆ ಎರಡು ತೊಲಿ ಬಂಗಾರಕೊಡುವುದಾಗಿ ಹೇಳಿ, ಅವಳನ್ನು ತನ್ನ ಕೈಯಲ್ಲಿ ಹಿಡಿದುಕೊಳ್ಳುತ್ತಾನೆ. ಮೊದಲೇ ಬಂಗಾರದ ಆಸೆಗೆ ಪರವ್ವ ಒಮ್ಮಿಂದೊಮ್ಮೆ ಪತ್ತರನ ಕೈವಶವಾಗುತ್ತಾಳೆ. ಆದರೆ ಪರವ್ವ ಪತ್ತಾರನಿಗೆ ಹೇಳುತ್ತಾಳೆ. ನಿನ್ನ ವರ್ಣನ ಅವಳ ಮುಂದೆ ಮಾಡುತ್ತೇನೆ. ಮೇಲಾಗಿ ನಾಳೆ ನಿನ್ನ ಅಂಗಡಿಗೆ ಬರುತ್ತೇವೆ. ನೀ ಒಡವಿ ಸಿದ್ಧ ಮಾಡಿದ ತಕ್ಷಣವೇ ಕರೆದುಕೊಂಡು ಬಂದು ಯಾವುದಾದರೂ ಒಂದು ಕುಂಟು ನೆಪ ಮಾಡಿ ನಾನು ಮನೆಗೆ ಹೋಗುತ್ತೇನೆ. ಆಗ ಅವಳು ಒಬ್ಬಳೇ ನಿನ್ನ ಹತ್ತಿರು ಇರುತ್ತಾಳೆ. ನೀನೆ ಅವಳನ್ನು ಬೇಕಾದರೆ ಕೇಳು ಎಂದು ಹೇಳಿ ಒಂದು ತೋಲಿ ಬಂಗಾರ ತೆಗೆದುಕೊಂಡು ಪರವ್ವ ತನ್ನ ಮನೆಗೆ ಹೋಗುತ್ತಾಳೆ.

ಮರುದಿವಸ ಪತ್ತಾರಣ್ಣ ಮಾಡಿರುವ ಒಡವೆಗಳ ಬಗ್ಗೆ ಗುಣಗಾನ ಮಾಡುತ್ತ, ಮತ್ತು ಪತ್ತಾರನ ವರ್ಣನೆಯನ್ನು ಮಾಡುತ್ತಾ, ಗಂಗಿಯ ಮನೆಗೆ ಬರುತ್ತಾಳೆ. ಗಂಗಿಯ ಮುಂದೆ ಪತ್ತಾರ ರಾಯಪ್ಪನ ವರ್ಣನೆಯೂ ಬಂಗಾರ ಒಡುವೆಗಳಿಗಿಂತಲೂ ಅತಿಯಾಗಿ ಆತನ ವರ್ಣನೆ ಮಾಡುತ್ತಾಳೆ. ಗಂಗವ್ವಳ ಅವನದೇನೂ ಹೇಳ್ತಿಯಾ ಪಾರವ್ವ ಬಿಡು ಆತನ ಮುಜೂರಿ(ಕೂಲಿ) ಕೊಟ್ಟು ಆ ಒಡವೆಗಳನ್ನು ತೆಗೆದುಕೊಂಡು ಬಾ ಎಂದು ಹೇಳುತ್ತಾಳೆ. ಆದರೆ ಪರವ್ವ ಹಾಗಲ್ಲ ನನ್ನ ತಾಯಿ ನೀ ಅಲ್ಲಿಗೆ ಬಂದ ಮೇಲೆ ಒಡವೆ ಮಾಡತ್ತಾನಂತ. ಏಕೆಂದರೆ ನಿನ್ನ ರೂಪಕ್ಕೆ ಒಪ್ಪುವ ರೀತಿಯಲ್ಲಿ ಒಡವೆಗೆ ಇನ್ನೂ ಕುಸುರಿ ಮಾಡುವುದು ಇದೆಯಂತ. ಅದಕ್ಕಾಗಿ ನೀನೇ ಬರಬೇಕೆಂದು ಹೇಳಿದ್ದಾನೆ. ಅವಳು ಹೇಳಿರುವಂತೆಯೇ ಗಂಗವ್ವ ಪರವ್ವನ ಮಾತಿಗೆ ಬೆಲೆಕೊಟ್ಟು ಪತ್ತಾರನ ಅಂಗಡಿಗೆ ಇಬ್ಬರೂ ಬರುತ್ತಾರೆ.

ಪತ್ತಾರ ರಾಯಪ್ಪ ಗಂಗಿಯ ಬರುವಿಕೆಗಾಗಿ ಕಾಯುತಲ್ಲಿರುತ್ತಾನೆ. ಪರವ್ವ ಆತನ ಮಾತಿನ ಅಣತಿಯಂತೆ ರಾಯಪ್ಪನಲ್ಲಿಗೆ ಬಂದು ಗಂಗವ್ವಳನ್ನು ಆತನ ಅಂಗಡಿಯಲ್ಲಿ ಬಿಟ್ಟು ಮನೆಯ ಬಾಗಿಲ ಹಾಕುವುದನ್ನು ಮರೆತು ಹಾಗೆಯೇ ಬಿಟ್ಟು ಬಂದಿರುವೆನೆಂದು ನೆಪ ಹೇಳಿ, ಅಲ್ಲಿಂದ ಎದ್ದು ಹೊರಡುತ್ತಾಳೆ. ಗಂಗವ್ವ ಏ ಪರವ್ವ ಹಾಗೆ ಎಲ್ಲಿಗೇ ಬಾ ಎಂದರು ಕೇಳದೇಯೆ ಅವಳನ್ನು ಒಬ್ಬಂಟಿಯಾಗಿ ಅಂಗಡಿಯಲ್ಲಿ ಬಿಟ್ಟು ನೇರವಾಗಿ ಮನೆಯ ಕಡೆಗೆ ಬರುತ್ತಾಳೆ. ಗಂಗವ್ವಳು ಪತ್ತಾರನಿಗೆ ತನ್ನ ಒಡವೆಯನ್ನು ಕೇಳುತ್ತಾಳೆ ಜೊತೆಗೆ ಆತನ ಮುಜೂರಿಯು ಎಷ್ಟೇಂದು ಕೇಳುತ್ತಾಳೆ. ಪತ್ತಾರನು ಒಡುವೆಗಳು ಕೊಡುವುದೇ. ಏನಾದರೂ ಒಂದು ಕುಂಟು ನೆಪ ಹೇಳಿ ಅಲ್ಲಿಯೇ ಗಂಗವ್ವಳನ್ನು ಕುಳಿತು ಕೊಳ್ಳುವಂತೆ ಮಾಡುತ್ತಾನೆ. ಆತನ ನಡೆ ನುಡಿ- ಆಡುವ ಮಾತುಗಳು ಗಂಗವ್ವಳಿಗೆ ತಿಳಿಯುತ್ತದೆ. ಯಾಕೋ ಈತನ ಹಾವ ಭಾವಗಳ ಬದಲಾವಣೆಯನ್ನು ಗಮನಸಿದಿ ಗಂಗವ್ವ ಬೇಗನೆ ಎದ್ದು ಹೋಗಲು ಪ್ರಯತ್ನಿಸಿದರೂ ಅತನು ಅದಕ್ಕೆ ಅವಕಾಶ ಕೊಡುವುದೇ ಇಲ್ಲ.

ಗಂಗಾ ನೀನು ಮನಸ್ಸು ಮಾಡಿದರೆ ನಿನಗೆ ಹತ್ತು ತೋಲಿ ಬಂಗಾರ ಕೊಡುತ್ತೇನೆ. ನಿನ್ನ ಸೌಂದರ್ಯ ನನ್ನ ಮನಸ್ಸಿನಲ್ಲಿ ಕುಣಿಯುತ್ತದೆ. ಹೇಗಾದರೂ ಮಾಡಿ ನೀನು ನನ್ನವಳಾಗೂ, ನಿನಗೆ ಸುಂದರವಾದ ಒಡವೆಗಳನ್ನು ಮಾಡಿರುತ್ತೇನೆ. ಎಂದು ಹಾಗೆ ಹೀಗೆ ಹೇಳುತ್ತಾ ಹತ್ತಿರ ಬರಲು ಶುರು ಮಾಡುತ್ತಾನೆ. ಗಂಗಿ ನೋಡು ಪತ್ತರಣಾ ನಾ ಹಂತಾಕಿ ಅಲ್ಲ ನೀನು ಈ ರೀತಿ ವ್ಯಾಪರದ ವ್ಯಕ್ತಿ ಅಂಗಡಿಗೆ ಬಂದವರಿಗೆಲ್ಲ ಇದೇ ರೀತಿ ಮಾಡಿದರೆ ಮುಂದೆ ನಿನ್ನ ಗತಿಯ ಬಗ್ಗೆ ವಿಚಾರಿಸಿಕೋ. ಎಂದು ಬುದ್ದಿವಾದ ಹೇಳಿದರೂ, ಪತ್ತಾರ ರಾಯಪ್ಪನಿಗೆ ತಿಳಿಯುವುದೇಯಿಲ್ಲ. ಪತ್ತಾರ ಗಂಗಿಯ ಮೈ ಮುಟ್ಟಲು ಹತ್ತಿರ ಬರುತ್ತಿದ್ದಂತೆ.ಗಂಗಿಗೆ ವಿಪರೀತ ಕೋಪಬಂದು ಅಲ್ಲಿಂದ ಥಟನೆ ಎದ್ದವಳೇ ಅತನ ಮುಖದ ಮೇಲೆ ನೂರು ರೂಪಾಯಿ ಮಜೂರಿ ಕೊಟ್ಟು, ಆತನಿಂದ ಅವಳ ಒಡವೆಗಳನ್ನೆಲ್ಲಾ ಕಿತ್ತುಕೊಂಡು ಅಲ್ಲಿಂದ ಜಾರಿಕೊಂಡು ನೇರವಾಗಿ ತನ್ನ ಮನೆಗೆ ಬರುತ್ತಾಳೆ.

ಬಂಗಾರದ ಒಡವೆಗಳನ್ನೆಲ್ಲಾ ತೆಗೆದುಕೊಂಡು ನೇರವಾಗಿ ತನ್ನ ಮನೆಗೆ ಬಂದ ಗಂಗವ್ವ, ಥಾಸಿಗೆ ಹೊದ್ದುಕೊಂಡು ಮಲಗಿ ಬಿಡುತ್ತಾಳೆ. ಪತ್ತಾರ ರಾಯಪ್ಪ ಅಂದರೆ ಅಕ್ಕಸಾಲಿಗನ ಪ್ರವೃತ್ತಿಯಿಂದ ಬೆಸತ್ತು, ಎಂಥೆಂಥ ಜನ ಭೂಮಿಯ ಮೇಲೆ ಬದುಕಿದ್ದಾರೆ. ಎಂದು ನಿರಾಶೆಯ ಭಾವನೆಯಿಂದ ತನ್ನ ಕೋಣೆಯ ಮಂಚದ ಮೇಲೆ ಮಲಗುತ್ತಾಳೆ. ಪತ್ತಾರ ಮತ್ತೆ ಒಡವೆ ಏನಾದರೂ ಮಾಡಿಸುವವರಿರಬಹುದು, ಮೇಲಾಗಿ ನಿನ್ನೆಯಂತೂ ಗಂಗಿ ನನ್ನ ಅಂಗಿಡಿಯಿಂದ ಕೋಪದಲ್ಲಿಯೇ ಹೋಗಿದ್ದಾಳೆ. ಎಂದು ಎಲ್ಲವೂ ಸೂಕ್ಷ್ಮವಾಗಿ ಗಮನಿಸುವ ಸಲುವಾಗಿ ಲಗಳೆಯರ ಮನೆಗೆ ಬರುತ್ತಾನೆ. ಮನೆಯ ಅಂಗಳದಲ್ಲಿ ಇರಪಾಕ್ಷಿ ಮತ್ತು ಬಸವಂತ, ಈರಪ್ಪ ಹಾಗೂ ಈತನ ಗೆಳೆಯ ಸಂಗಣ್ಣ ಎಲ್ಲರೂ ಕುಳಿತುಕೊಂಡು ಹರಟೆ ಹೊಡೆಯುತ್ತಿರುತ್ತಾರೆ.

ಪತ್ತಾರ ರಾಯಪ್ಪ ಬಂದಿರುವುದನ್ನು ಅರಿತ ಈರಪ್ಪ, ಏನು ಚನ್ನಾಗಿ ಮಾಡಿದೆ ಎಲ್ಲಾ ಒಡವೆಗಳು ಎಂದು ರಾಯಪ್ಪನಿಗೆ ಪ್ರಶಂಸೆ ಕೊಡುತ್ತಾನೆ. ರಾಯಪ್ಪ ಹೌದು ಮತ್ತೆನಾದರೂ ಕೆಲಸ ಇದ್ದರೆ ನನಗೆ ಕೊಡುವಿರಿ ಅಂತ ಹೇಳುತ್ತಾನೆ. ಅಮ್ಮ ತಾಯಿಯವರು ಕಾಣುತ್ತಲೆ ಇಲ್ಲವಲ್ಲ ಎಂದು ಕೇಳುತ್ತಾನೆ. ಆವಾಗ ಈರಪ್ಪ ಅವಳು ನಿನ್ನೆ ಅಂಗಡಿಯಿಂದ ಬಂದವಳು ಹಾಗೆ ಮಲಗಿಕೊಂಡಿದ್ದಾಳೆ. ಇದನ್ನು ಕೇಳಿದ ರಾಯಪ್ಪ ಓಹೋ ಅಂದರೆ ನನ್ನ ಒಡವಿಯಿಂದಲೇ ಇವಳಿಗೆ ಥಿಟ್ಟಯಾಗಿರಬೇಕೆಂದು ಅಂದಕೊಂಡು ಪುನಃ ತನ್ನ ಅಂಗಡಿಯ ಕಡೆಗೆ ಹೊರಟು ಹೋಗುತ್ತಾನೆ. ಗಂಗಿಯ ಮುಖದ ಹಾವ ಭಾವವಾದರೂ ಎಂಥದ್ದು ನೋಡಬೇಕು ಎಂದುಕೊಂಡು ಬಂದಿರುವ ಅಕ್ಕಸಾಲಿಗ ರಾಯಪ್ಪನಿಗೆ ಯಾವುದು ಗೊತ್ತಾಗುವುದೇ ಇಲ್ಲ. ಗಂಗವ್ವ ಮನೆಯಿಂದ ಹೊರ ಬರುವುದೇ ಇಲ್ಲ.ಹೀಗೆ ರಾಯಪ್ಪಾ ಬಂದದಾರಿಗೆ ಸುಂಕವಿಲ್ಲ ಎಂದು ಕೊಂಡು ಹೊರಟು ಹೋಗುತ್ತಾನೆ.

ವ್ಯಾಪಾರ ಎಂದರೆ ಊರಿಂದ ಊರು ಅಲೆಯುವುದು ವ್ಯಾಪಾರಸ್ಥರ ವೃತ್ತಿ ಅದು. ಅದು ಬಿಟ್ಟರೆ ಮಾಡುವುದಾದರೂ ಏನು, ಎಂದು ಸಂಗಣ್ಣ ಈರಪ್ಪನವರು ಮಾತು ಆಡುತ್ತಾ ಕುಳಿತಿರುವರು. ಈ ದೃಶ್ಯ ಕಂಡ ರಾಯಪ್ಪನ ತಲೆಯಲ್ಲಿ ಒಂದು ವಿಚಾರ ಸುತ್ತುತ್ತಲಿಯೇ ಇರುತ್ತದೆ. ಈ ಸಂಗಣ್ಣ ಈರಪ್ಪನಿಗೆ ಬೇಕಾದ ವ್ಯಕ್ತಿ ಎಂದುಕೊಂಡು. ಮತ್ತು ಆತನ ಗೆಳೆಯನು ಎಂದು ತಿಳಿದು ಇವರ ಮಧ್ಯೆ ಜಗಳದ ಹೋಗೆ ಹೇಗೆ ಆಡಿಸಬೇಕು. ಏಕೆಂದರೆ ಒಂದು ವೇಳೆ ಗಂಗಿಯು ನನ್ನ ಕೈ ವಶ ಆಗದಿದ್ದರೆ ಅವಳನ್ನು ಮೂರಾಬಟ್ಟೆ ಮಾಡಬೇಕು. ಎಂದು ವಿಚಾರಿಸುತ್ತಾ ಪರವ್ವಳ ಸಹಾಯವನ್ನು ಚಾಚುತ್ತಾ ಹೋರಡುತ್ತಾನೆ. ಮುಂದಿನ ಬೇಳವಣಿಗೆಗ ನೀಲಿನಕ್ಷೆ ತಯಾರಿಸುತ್ತಾ ಮುಂದುವರಿಯುತ್ತಾನೆ.

ಲಗಳೆಯರ ಮನೆತನದಲ್ಲಿ ಈರಪ್ಪ ಮನೆಯ ಹಿರಿಯ ತಮ್ಮಂದಿರ ಪಾಲನೆ ಪೋಷಣೆಯು ಮಾಡುವುದು ಆತನ ಜವಾಬ್ದಾರಿ, ಜೊತೆಗೆ ಮನೆಯಲ್ಲಿ ಒಂದು ಹೆಣ್ಣಿನ ಅವಶ್ಯಕತೆಯು ಇರುತ್ತದೆ. ಎಂದು ಅರಿತು ಬೈಲವಾಡದಿಂದ ಗಂಗಿ ಎಂಬ ಸುಂದರಿಯನ್ನು ಮದುವೆ ಮಾಡಿಕೊಂಡು ಮನೆ ತುಂಬಿಸಿಕೊಳ್ಳುತ್ತಾನೆ. ಮನೆಗೆ ಒಪ್ಪುವಂತೆ ಸ್ತ್ರೀಯನ್ನು ಈರಪ್ಪಾ ಆಯ್ಕೆ ಮಾಡಿಕೊಂಡಿರುತ್ತಾನೆ. ಗಂಗವ್ವ ಮದುವೆಯಾಗಿ ಮನೆಗೆ ಬಂದ ಮೇಲೆ ತನ್ನ ಮೈದುನರಾದ ಇರಪಾಕ್ಷಿ ಮತ್ತು ಬಸವಂತರನ್ನು ಅತಿ ಅಕ್ಕರೆಯಿಂದ ಪಾಲನೆ ಪೋಷಣೆ ಮಾಡುತ್ತಾಳೆ . ತನ್ನ ಮೈದನರು ಎಂದು ಭಾವಿಸದೆ ಸ್ವತ : ತನ್ನ ಮಕ್ಕಳೇ ಇವರು ಎಂದು ಅವರನ್ನು ಗುರುತಿಸಿಕೊಂಡಿದ್ದಾಳೆ. ಗಂಗವ್ವ ಮನೆತನಕ್ಕೆ ತಾನು ಒಬ್ಬಳೇ ಹೆಣ್ಣು. ನನ್ನ ಬಿಟ್ಟರೆ ಮತ್ಯಾರು ಈ ಮನೆಯಲ್ಲಿ ಇಲ್ಲ. ಎಲ್ಲವೂ ನಾನೇ ನಿಭಾಯಿಸಬೇಕೆಂದು ಅರಿತ ಗಂಗವ್ವ ಮುಂದೆ ಪ್ರತಿಯೊಂದು ಮನೆಯ ವಿಷಯವು ಆಸಕ್ತಿಯಿಂದ ನಿಭಾಯಿಸುತ್ತಾಳೆ.

ಈರಪ್ಪನ ವೃತ್ತಿಯು ವ್ಯಾಪಾರ ವೃತ್ತಿ ಯಾವಾಗಲೂ ವ್ಯಾಪರ ಎಂದರೆ ವಾರಗಟಲೇ, ತಿಂಗಳ ಗಟಲೇ, ಊರು ಬಿಟ್ಟು ಹೋಗುವ ವ್ಯಾಪಾರದ ಅಸಾಮಿ. ಹೀಗಾಗಿ ಮದುವೆಯಾದ ಕೆಲವು ದಿನಗಳಲ್ಲಿ ಹೆಂಡತಿಯನ್ನು ಮನೆಯಲ್ಲಿ ಬಿಟ್ಟು ವ್ಯಾಪಾರಕ್ಕೆ ಹೋಗಲು ಸಿದ್ಧನಾಗಿರುತ್ತಾನೆ. ಗಂಗಿಯು ಹೊಸ ಹೆಣ್ಣು, ಮನೆಯಲ್ಲಿ ಅವಳನ್ನು ಒಬ್ಬಳೇ ಹೇಗೆ ಬಿಡಲು ಸಾಧ್ಯವೆಂದು ಅರಿತ ಈರಪ್ಪಾ ಪಕ್ಕದ ಮನೆಯ ಪರವ್ವಳನ್ನು ಗಂಗೆಯ ಸಹಾಯಕ್ಕಾಗಿ ಬಿಟ್ಟು ವ್ಯಾಪಾರಕೆಂದು ಬಳ್ಳಾರಿಗೆ ಹೊರಡುತ್ತಾನೆ. ವ್ಯಾಪಾರಕ್ಕೆ ಹೋಗುವ ಪೂರ್ವದಲ್ಲಿ ಹೆಂಡತಿಗೆ ಮನೆಯ ಸಂಪೂರ್ಣ ಜವಾಬ್ದಾರಿಯನ್ನು ಕೊಟ್ಟು ಹೋಗುತ್ತಾನೆ. ತನ್ನ ತಮ್ಮಂದಿರ ಬಗ್ಗೆಯಂತು ತನಗಿಂತಲೂ ಹೆಚ್ಚಿನ ಕಾಳಜಿ ಅವಳಿಗೆ ಇದೆ ಎಂದು ಅರಿತರೂ. ಮತ್ತೆ ಅವರ ಯೋಗ ಕ್ಷಮತೆಯ ಬಗ್ಗೆ ಹೇಳುವುದು ಮರಿಯುವುದಿಲ್ಲ.

ವ್ಯಾಪಾರಕ್ಕೆಂದು ಹೊರಡಲು ಸಿದ್ದನಾದ ಈರಪ್ಪನಿಗೆ, ಅಂದರೆ ತನ್ನ ಗಂಡನಿಗೆ ಊಟಕ್ಕೆಂದು ಏನೆಲ್ಲಾ ಬೇಕು, ಅದನೆಲ್ಲಾ ಪೂರೈಸಲು ಹೆಂಡತಿಯಾದ ಗಂಗವ್ವ ತರತರದ ಅಡುಗೆ, ರೊಟ್ಟಿ, ಚಟ್ನಿ, ತುಪ್ಪ, ಉಪ್ಪಿನಕಾಯಿ ಹೀಗೆ ಹತ್ತು ಹಲವಾರು ಪದಾರ್ಥಗಳು ತಯ್ಯಾರಿಸಿ, ಗಂಡನಿಗಾಗಿ ಒಂದು ಚೀಲದಲ್ಲಿ ತುಂಬುತ್ತಾಳೆ. ಗಂಡ ಊರಿಗೆ ಹೊರಡುವುದುನ್ನು ಮನದಲ್ಲಿ ನಿರಾಶೆಯಿಂದ ವಿರೋಧಿಸುತ್ತಾಳೆ. ಆದರೂ ವ್ಯಾಪಾರ ಅಂದರೆ ಹೀಗೆ. ಅದನ್ನು ಬಿಡಲು ಹೇಗೆ ಬರುತ್ತದೆ ಎಂದು ಅರಿತು, ಗಂಡನನ್ನು ಹತ್ತಾರು ಸಲ ನಿಮ್ಮ ಆರೋಗ್ಯ ಸರಿಯಾಗಿ ನೋಡಿಕೊಳ್ಳಿ. ಸಮಯಕ್ಕೆ ಸರಿಯಾಗಿ ಊಟ ಮಾಡಿ, ಯಾವತ್ತು ಆರೋಗ್ಯದ ಬಗ್ಗೆ ನಿರ್ಲಕ್ಷೆ ಮಾಡಬೇಡಿರಿ ಎಂದು ಪದೇ ಪದೇ ಗಂಡನಿಗೆ ಹೇಳುತ್ತಾಳೆ. ಅವರನ್ನು ದಾರಿಯುದ್ದಕ್ಕೂ ಹೋಗುವಾಗ, ಹುಷಾರು, ಕಳ್ಳಕಾಕರ ಭಯ ಹೆಚ್ಚು ರಾತ್ರಿ ಪ್ರಯಾಣ ಮಾಡಬೇಡಿರಿ, ಎಂದು ಧರ್ಮ ಪತ್ನಿಯಾಗಿ ತನ್ನೆಲ್ಲಾ ವಿಚಾರಗಳನ್ನು ಗಂಡನಿಗೆ ಹೇಳಿಕೊಟ್ಟು ಕಳುಹಿಸುತ್ತಾಳೆ.

ಈರಪ್ಪ ಮನೆಬಿಟ್ಟು ಹೋಗಿರುತ್ತಾನೆ. ಗಂಗವ್ವ ಮನೆಯಲ್ಲಿ ಮನೆ ಕೆಲಸ, ಆ ಕೆಲಸ, ಈ ಕೆಲಸ, ಎಂದು ಗೃಹಿಣಿಯಾಗಿ ತನಗೆ ಇರಬೇಕಾದ ಕೆಲಸಗಳನ್ನು ಪೂರೈಸುತ್ತಾ ಮನೆ ಒಡತಿಯಾಗಿ ಕಾಲ ಕಳೆಯುತ್ತಾಳೆ. ಈರಪ್ಪಾ ವ್ಯಾಪಾರಕ್ಕೆಂದು ಹೋಗುವಾಗ ತನ್ನ ಗೆಳೆಯನಾದ ಸಂಗಣ್ಣನಿಗೆ ಮನೆಯ ಕಡೆ ಸ್ವಲ್ಪ ದೃಷ್ಟಿ ಇಟ್ಟಿರು, ಆಗಾಗ ನೀ ಬಂದು ಹೋಗುತ್ತಿರು. ಮನೆಯಲ್ಲಿ ಹಿರಿಯರು ಯಾರು ಇಲ್ಲ ಎಂದು ಹೇಳಿಯೇ ಹೋಗಿರುತ್ತಾನೆ. ಹೀಗಾಗಿ ಸಂಗಣ್ಣನು ಆಗಾಗ ಯಾವಗೋ ಎಂಬಂತೆ ಮನೆಯ ಕಡೆಗೆ ಒಮ್ಮೊಮ್ಮೆ ಬಂದು ಹಾದು ಹೋಗಿರುತ್ತಾನೆ. ಹೀಗಾಗಿ ಸಂಗಣ್ಣಾ ಈ ಮನೆಗೆ ಈರಪ್ಪನ ಗೆಳೆಯನು.

ಹೌದು ಮತ್ತು ಇವರ ಮನೆಯ ಹಿತೈಷಿಯು ಹೌದು'ು. ಹೀಗಿರುವಾಗ ಸಂಗಣ್ಣ ಮನೆಯ ಕಡೆಗೆ ಹೆಚ್ಚಿನ ಗಮನ ಕೊಡುತ್ತಾನೆ. ಈರಪ್ಪಾ ವ್ಯಾಪಾರಕ್ಕೆಂದು ಹೋದ ಮೇಲೆ ಸ್ವಲ್ಪ ಹೆಚ್ಚು ಕಾಳಜಿಯಿಂದಲೇ ನೋಡಿಕೊಳ್ಳುತ್ತಾ ಗೆಳೆಯನ ಮಾತನ್ನು ನಿಭಾಯಿಸುತ್ತಾನೆ.

ಹಣದ ಆಶೆಗಾಗಿ ಪರವ್ವ ಹೇಗಾದರೂ ಮಾಡಿ ಗಂಗಿಯನ್ನು ಪತ್ತಾರ ರಾಯಪ್ಪನ ಕಾಮದ ಕುಂಡಕ್ಕೆ ತಳ್ಳ ಬೇಕೆಂದಿರುವ ಅವಳ ಎಲ್ಲಾ ಪ್ರಯತ್ನಗಳು ವಿಫಲವಾಗುತ್ತವೆ. ಗಂಗಿಯಂತು ನಾನು ಎಷ್ಟೇ ಪ್ರಯತ್ನ ಮಾಡಿದರೂ ಪತ್ತಾರನ ಕೈಗೆ ದೊರೆಯುವ ಲಕ್ಷಣಗಳು ಕಾಣುವುದಿಲ್ಲ. ಗಂಗಿಯ ಸೌಂದರ್ಯ ಸವಿಯಲು ಪತ್ತಾರ ರಾಯಪ್ಪನಿಂದ ಹಣ, ಬಂಗಾರ ಪಡೆಯುವ ಪರವ್ವಳ ತಂತ್ರ ಯಾವುದೇ ಫಲ ಕೊಡುವುದಿಲ್ಲ. ಪರವ್ವಳು ಗಂಗಿಯ ಮೇಲೆ ದ್ವೇಷ ಕಾಡುತ್ತಾಳೆ. ನನ್ನದೇನು ನಡಿಯುವುದಿಲ್ಲವಲ್ಲ ಎಂದುಕೊಂಡು ಚಡಪಡಿಸುತ್ತಾಳೆ. ಮುಂದೆ ಇವಳು ಕೂಡಾ ಹಣದ ಆಸೆಗೆ ಕೆಟ್ಟ ದಾರಿಯನ್ನು ಅನುಸರಿಸುತ್ತಾಳೆ.

ಗಂಗಿಯ ಸಂಸಾರದಲ್ಲಿ ಹುಳಿ ಹಿಂಡುವ ಕೆಲಸಕ್ಕೆ ಪಾರವ್ವ ಕೈ ಹಾಕಿ, ಇಲ್ಲಸಲ್ಲದ ಅಪವಾದಗಳು, ಗಂಗಿಯ ಮೇಲೆ ಹಾಕುತ್ತಾಳೆ. ಗಂಗಿಯ ಮನೆಗೆ ಆಗಾಗ ಸಂಗಣ್ಣ ಬರುತ್ತಿರುತ್ತಾನೆ. ಆತನು ಬಂದು ಹೋಗುವುದು ಅರಿತ ಪರವ್ವ ಮತ್ತು ಪತ್ತಾರ ರಾಯಪ್ಪ ಇವರಿಬ್ಬರು ಸಂಚು ರೂಪಿಸಿ, ಗಂಗಿಯ ಮತ್ತು ಸಂಗಣ್ಣನ ಮಧ್ಯೆ ಹಾದರ ನಡೆಯುತ್ತಿದೆ ಎಂದು ಗ್ರಾಮದ ತುಂಬೆಲ್ಲಾ ಟಂಟಂ ಹೊಡೆಯುತ್ತಾರೆ. ಈ ವಿಷಯ ಊರಿನಲ್ಲಿ ಕಾಳ್ಗಿಚಿನಂತೆ ಹಬ್ಬಿ ಬಿಡುತ್ತದೆ. ಸಂಗಣ್ಣನ ಮನಸ್ಸಿನಲ್ಲಿಯೇ ಆಗಲಿ, ಗಂಗಿಯ ಮನಸ್ಸಿನಲ್ಲಿಯೇ ಆಗಲಿ, ಇದ್ಯಾವ ವಿಚಾರಗಳು ಇರುವುದೇ ಇಲ್ಲ. ಆದರೂ ಸುಳ್ಳು ಸುದ್ದಿ ಎಂದು ಗೊತ್ತಿರುವುದು ರಾಯಪ್ಪ ಮತ್ತು ಪರವ್ವಳಿಗೆ ಮಾತ್ರ. ಆದರೆ ಇದು ಮುಂದೆ ಹೋದಂತೆಲ್ಲಾ ಭೀಕರ ಸ್ವರೂಪ ತಳೆಯುತ್ತದೆ. ಸಂಗಣ್ಣ ಗಂಗಿಯ ಮನೆಯ ಕಡೆಗೆ ಹೋಗುವ ವಿಷಯವನ್ನು ಹಾದರದ ವಿಷಯವಾಗಿ ಕುಂತಲ್ಲಿ, ನಿಂತಲ್ಲಿ, ಜನರು ಮಾತು ಆಡಲಾರಂಭಿಸುತ್ತಾರೆ. ಸಂಗಣ್ಣ ಈರಪ್ಪನ ಮನೆಗೆ ಬರುವುದು ಚಹಾ ಕುಡಿಯುವುದು, ಅಲ್ಲಿಯೇ ಎಲೆ ಅಡಿಕೆ ಹಾಕಿಕೊಳ್ಳುವುದು, ಇವೆಲ್ಲವೂ ಪರವ್ವ ಸೂಕ್ಷ್ಮವಾಗಿ ತನ್ನ ಉಪಯೋಗಕ್ಕೆ ಬಳಸಿಕೊಳ್ಳುತ್ತಾಳೆ.

ಇರಪಕ್ಷಿ ಬಸವಂತ ಹೊಲದಿಂದ ಮನೆಗೆ ಬರುತ್ತಿರುತ್ತಾರೆ. ದಾರಿಯಲ್ಲಿ ಕಂಡ ಕಂಡವರು ವಕ್ರತೆಯ ಮಾತುಗಳು ಆಡುತ್ತಿರುತ್ತಾರೆ. ಅಣ್ಣ ತಮ್ಮಂದಿರು ಮಾತು ಆಡಿಕೊಳ್ಳತ್ತ ಬರುವಾಗ

ಬಸವಂತ	:	ಊರಾಗ ಜನ ಗುಜುಗುಜು ಮಾತಾಡ್ತಾರಂತ
ಇರಪಾಕ್ಷಿ	:	ಏನ ಮತಾಡ್ತಾರಂತೆ
ಬಸವಂತ	:	ಈರಪ್ಪ ಊರಾಗ ಇಲ್ಲ, ಸಂಗಣ್ಣ ಹಗಲು ನಮ್ಮ ಮನಿ, ರಾತ್ರಿ ಅವನ ಮನಿ ಅಂತ ಆಡಕೊಳ್ಳತ್ತಾರಂತ.
ಒಬ್ಬ	:	(ದಾರಿಯಲ್ಲಿ ಎದುರಾಗಿ) ನಮಸ್ಕಾರ್ರಿ, ಸಾವಕಾರ, ಇಬ್ಬರೂ ಆರಾಮ ಇದ್ದೀರಾ ? ಹೊಲದಿಂದ ಹೊರಟಾಂಗ ಕಾಣ್ತದ. ಒಂದಿಷ್ಟು ದಿನ ಮನ್ಯಾಗ ಇರ್ರಿ.
ಇನ್ನೊಬ್ಬ	:	ನಮಸ್ಕಾರ ಬಸವಂತಪ್ಪ, ಒಂದು ತಿಂಗಳಾಯ್ತು ಈರಪ್ಪಣ್ಣ, ಊರಾಗಿಲ್ಲವಂತ ಇಷ್ಟು ದಿನ ಮನಿ ಬಿಟ್ಟು ಹೋಗೂದ ?....1

1) ಖರೆ ಖರೇ ಸಂಗ್ಯಾ ಬಾಳ್ಯಾ ಸಣ್ಣಾಟ ಕೃತಿಯಲ್ಲಿನ ಪುಟ 42

ಇರಪಾಕ್ಷಿ : ಚುಚ್ಚು ಮಾತು ಚುಚ್ಚುತಾವ ಕಿವಿಯಾಗ
ಬಿಚ್ಚಿ ಬಿತ್ತು ನಮ್ಮ ಮಾನಾ ದಾರ್‍ಯಾಗ।

ಬಸವಂತ : ಕಾಳಕತ್ಲ ತುಂಬ್ಯಾದ ಕಣ್ಣಾಗ
ದಾರಿ ಕಾಣುವಲ್ದು ನನ್ಗ ಕಾಲಾಗ।

ಇಬ್ಬರೂ : ಬೆಳದಿಂಗಳ ಹೋಗಿ ಬಂತು ಬಿಸಲ...
ಒಳಗ। ಸಣ್ಣಗ ಸುಡತದ ಒಡಲ....।
ಹೇಶ್ ಅಂತಾರ ಸ್ವರ್ಗಕ್ಕೆ ದಾರಿ....
ದಾರಿ ತಪ್ಪಿದ್ರ ಮನೆತನಕ್ಕೆ ಮಾರಿ..........1

ಇರಪಾಕ್ಷಿ ಮತ್ತು ಬಸವಂತನ ಮನಸ್ಸು ನುಚ್ಚು ನೂರಾಗಿದೆ. ಯಾರ ಎದುರಿಗೂ, ತಲೆ ಎತ್ತಿ ತಿರುಗುವಂತಿಲ್ಲ. ಗ್ರಾಮದ ಜನರ ಮುಂದೆ ನಮ್ಮ ಮರ್ಯಾದೆ ಏನು ಇಲ್ಲದಂತಾಗಿದೆ. ಅತ್ತಿಗೆ ಹೀಗೆ ಏಕೆ ಮಾಡಿರುವಳು, ಎಂಬ ಹತ್ತು ಹಲವಾರು ಪ್ರಶ್ನೆಗಳು ತಲೆಯಲ್ಲಿ ತಿರುಗುತ್ತವೆ. ಹೊಲದಲ್ಲಿಯೂ ಕೆಲಸ ಮಾಡಲು ಮನಸ್ಸಿಲ್ಲ. ಮನೆಯಲ್ಲಿ ಬಂದರೂ ಅತ್ತಿಗೆಯ ಮುಂದೆ ಕುಳಿತುಕೊಳ್ಳಲು ಆಗುತ್ತಿಲ್ಲ. ಹೀಗಾಗಿ ಅಣ್ಣನ ಬರುವಿಕೆಗಾಗಿ ದಾರಿ ಕಾಯುತ್ತ ಕುಳಿತಿರುವ ಗಂಗವ್ವನ ಮೈದುನರು, ಅಣ್ಣ ಬಂದರೆ ಈ ವಿಷಯ ಅಣ್ಣನಿಗೆ ಹೇಳುವುದಾದರೂ ಹೇಗೆ ಎಂದು ಅವರಿಗೆ ಚಿಂತೆ ಕಾಡುತ್ತಲೇ ಇರುತ್ತದೆ. ಮನೆಯ ಕಡೆ ನೀವಿದ್ದು ಏನು ಮಾಡಿರುವಿರಿ. ಮನೆಯ ಕಡೆ ಗಮನ ಏಕೆ ಕೊಡಲಿಲ್ಲ. ಎಂದು ನಮ್ಮನ್ನೆ ಬೈಯಬಹುದು ಎಂತಲೂ ಚಿಂತಿಸುತ್ತಾರೆ.

ಬಳ್ಳಾರಿಯಿಂದ ವ್ಯಾಪಾರ ಮುಗಿಸಿಕೊಂಡು ಬಂದ ಮೇಲೆ ತಮ್ಮಂದಿರ ಮುಖದಲ್ಲಿ ನಗೆ ಇರದಿರುವುದನ್ನು ಅರಿಯುತ್ತಾನೆ. ಬಳ್ಳಾರಿಯಲ್ಲಿ ತಾನು ಇರುವಾಗ ಕೆಟ್ಟ ಕನಸ್ಸು ಬಿದ್ದಿರುತ್ತದೆ. ಅದು ತಿಪ್ಪೆಯಲ್ಲಿ ಮಲಗಿರುವ ದೃಶ್ಯ ಈ ಒಂದು ಅಂಶವು ಥಟ್ಟನೆ ಈರಪ್ಪನ ಗಮನಕ್ಕೆ ಬರುತ್ತದೆ. ಮನೆಯಲ್ಲಿ ಏನೋ ಎಡವಟ್ಟು ಆಗಿರುವ ಬಗ್ಗೆ ಅನುಮಾನ ಬಂದೆ ಬಿಡುತ್ತದೆ. ತಮ್ಮಂದಿರಿಂದ ಮನೆಯ ಕಡೆ ಆಗಿರುವ ಬದಲಾವಣೆಯನ್ನು ಮೌನವಾಗಿ ಆಲಿಸುತ್ತಾನೆ. ಗಂಗಿಯ ಹಾದರರದ ಸುದ್ದಿ ಗ್ರಾಮದ ತುಂಬೆಲ್ಲಾ ಹರಡಿರುತ್ತದೆ. ಇದರಿಂದ ಮನಸ್ಸು ಬೆಂಕಿಯಂತೆ ಆಗುತ್ತದೆ. ಸಿಟ್ಟು ಕುದಿಯುತ್ತದೆ. ಆದರೂ ತಾಳ್ಮೆಯನ್ನು ಕಾಯ್ದುಕೊಳ್ಳುತ್ತಾನೆ.

ತಮ್ಮಗಳಿರಾ ನಾವು ಒಮ್ಮಿಂದೊಮ್ಮೆ ಈ ನಿರ್ಧಾರಕ್ಕೆ ಬರುವುದು ತಪ್ಪು, ಜನರು ಏನೇ ಅಂದರು ನಾವು ಮೊದಲು ಒರೆಗೆ ಹಚ್ಚಿ ನೋಡಬೇಕು. ಅಲ್ಲಿಯವರೆಗು ನಾವು ಯಾವುದಕ್ಕ ತಲೆ ಕೆಡಿಸಿಕೊಳ್ಳಬಾರದು. ಎಂದು ತಿಳಿಸಿ ಹೇಳುತ್ತಾನೆ. ತಮ್ಮಂದಿರು ಇದಕ್ಕೆ ಸಮ್ಮತಿಸುತ್ತಾರೆ. ಮನೆಗ ಬಂದ ಮೇಲೆ ಗಂಗಿಯಲ್ಲಿ ಯಾವುದೇ ರೀತಿಯ ಬದಲವಾಣೆಗಳು ಕಂಡು ಬರುವುದು ಇಲ್ಲ. ಅವಳಿಗೆ ಯಾವ ಸಂಶಯವು ಇಲ್ಲ.ಏಕೆಂದರೆ ಅವಳಲ್ಲಿ ಯಾವ ಕೆಟ್ಟ ಪ್ರವೃತ್ತಿಯೇ ಇಲ್ಲ.

ರಾತ್ರಿ ಗಂಡ ಹೆಂಡತಿ ಇಬ್ಬರೂ ಸಂತೋಷದಿಂದ ಕಾಲ ಕಳೆಯಬೇಕು. ವ್ಯಾಪಾರಕ್ಕೆಂದು ಬಹಳ ದಿವಸಗಳ ವರೆಗೆ ಹೋಗಿ ಇವಾಗ ಮನೆಗ ಬಂದಿದ್ದಾರೆ. ಈ ಸಮಯ ಗಂಡನೊಂದಿಗೆ ಸಂತಸದ ಸಮಯ ಕಳೆಯಬೇಕು ಎಂದು ತವಕದಲ್ಲಿರುತ್ತಾಳೆ. ಗಂಡನಲ್ಲಿ ಯಾಕೋ ಅಂತಹ ಉತ್ಸಾಹ ಕಾಣದೇ ಇರುವುದನ್ನು ಗಂಗಿ ಗಮನಿಸುತ್ತಾಳೆ. ಉತ್ಸಾಹ ಕಾಣದೇ ಅದನ್ನು ತಿಳಿದುಕೊಳ್ಳಲು ಗಂಗಿ ಪ್ರಯತ್ನಿಸುತ್ತಾಳೆ. ಅದು ಅವಳಿಂದ ಸಾಧ್ಯವಾಗುವುದಿಲ್ಲ. ಗಂಗಿಗೆ ಏಕೋ ನನ್ನ ಗಂಡನಿಗೆ ಯಾವುದೋ ಚಿಂತೆ ಕಾಡುತ್ತಿದೆ ಎಂದು ತಿಳಿಯಲು ಚಡಪಡಿಸುತ್ತಾಳೆ.

---

1) ಖರೆ ಖರೇ ಸಂಗ್ಯಾ ಬಾಳ್ಯಾ ಸಣ್ಣಾಟ ಕೃತಿಯಲ್ಲಿನ ಪುಟ 42

ಪರವ್ವ ಮೊದಲೇ ವಿಚಾರಿಸಿದಂತೆ ಗಂಗವ್ವ ಮತ್ತು ಈರಪ್ಪ ಊಟ ಮುಗಿಸಿದ ತಕ್ಷಣವೇ ತಮ್ಮ ಕೋಣೆಗೆ ಹೋಗಬೇಕೆಂದು ಕೊಂಡಿರುವ ಮೊದಲೇ, ಪರವ್ವ ತನ್ನ ಕುತಂತ್ರದ ಬುದ್ಧಿ ಪ್ರದರ್ಶಿಸುತ್ತಾಳೆ. ಯಾರಿಗೂ ತಿಳಿಯದಂತೆ ಗಂಗಿಯ ಮತ್ತು ಈರಪ್ಪನ ಮಂಚದ ತಲೆಯ ದಿಂಬಿನ ಕೆಳಗೆ ಸಂಗಣ್ಣನ ಎಲೆ ಅಡಿಕೆ ಚೀಲ ಇಟ್ಟಿರುತ್ತಾಳೆ. ಅಂದರೆ ಇದು ಈರಪ್ಪನಿಗೆ ಸಿಕ್ಕರೆ ಸಂಗಣ್ಣ ನನ್ನ ಮಂಚದ ವರೆಗೆ ಬಂದಿದ್ದಾನೆ. ಇನ್ನೂ ಮೇಲೆ ಉಳಿದಿದಾರೂ ಏನು ಎಂದು ತಿಳಿದು ಗಂಗೆಯ ಸಂಸಾರ ಮೂರಾ ಬಟ್ಟೆ ಯಾಗಲಿ ಎಂದು ಪ್ರಯತ್ನಿಸಿ ಈ ಕೆಲಸ ಮಾಡಿರುತ್ತಾಳೆ. ಯಥಾವತ್ತಾಗಿ. ಸಂಪ್ರದಾಯದಂತೆ ಗಂಡ ಹೆಂಡತಿಯರು ಮಂಚದ ಮೇಲೆ ವಿರಾಮ ಪಡೆಯಬೇಕು, ಎನ್ನುವದರಲ್ಲಿಯೇ ಈರವ್ವನಿಗೆ ಸಂಗಣ್ಣ ಎಲೆ ಅಡಿಕೆ ಚೀಲ ಕೈಗೆ ಸಿಗುತ್ತದೆ. ಇದರಿಂದ ಕುಪಿತನಾದ ಈರಪ್ಪ ಹೆಂಡತಿಯನ್ನು ಮನಬಂದಂತೆ ಬೈಯುತ್ತಾನೆ. ತನ್ನ ತಮ್ಮಂದಿರು ಹೇಳಿರುವುದಕ್ಕೂ ಮತ್ತು ಇದಕ್ಕೂ ತಾಳೆ ಹಾಕಿದ ಈರಪ್ಪ, ಗಂಗಿಗೆ ಹಾದರಗಿತ್ತಿ ಎಂದು ಬೈದು ಅವಳನ್ನು ರಾತೋ ರಾತ್ರಿ ಮನೆಯಿಂದ ಹೊರ ಹಾಕಲು ನಿರ್ಧರಿಸುತ್ತಾನೆ.

ಏನನ್ನು ನಿರೀಕ್ಷಿಸದ ಗಂಗಿಯು ಒಮ್ಮಿಂದೊಮ್ಮೆ ದಿಗ್ಭ್ರಾಂತವಾಗಿ ನಿಲ್ಲುತ್ತಾಳೆ. ಗಂಡನು ತನ್ನ ಬಾಯಿಂದ ಬಿಡುವ ಹೊಲಸು ಪದಗಳಿಗೆ ಉತ್ತರಿಸದೆ ಮೂಕಳಾಗಿ ನಿಲ್ಲುತ್ತಾಳೆ. ಗಂಡನನ್ನು ಕುರಿತು, ನೀವು ಮಾತಾಡುವ ರೀತಿ ನನಗೆ ಅರ್ಥವಾಗುತ್ತಿಲ್ಲಾ ? ನನಗೆ ಇದು ಯಾವುದು ಗೊತ್ತಿಲ್ಲ ? ಈ ಎಲೆಚೀಲ ಯಾರದ್ದು ? ಅದು ಇಲ್ಲಿಗೆ ಹೇಗೆ ಬಂತು ? ಅದನ್ನು ಇಲ್ಲಿಗೆ ತಂದವರು ಯಾರು ? ಎನ್ನುವ ಹತ್ತು ಹಲವಾರು ಪ್ರಶ್ನೆಗಳು ತಲೆಯಲ್ಲಿ ಸುಳಿಯುತ್ತಿವೆ. ಇದು ಯಾವುದು ನನಗೆ ಗೊತ್ತಿಲ್ಲ. ಎಂದು ಗಂಡನನ್ನು ಕೇಳಿಕೊಂಡರು ಅವನ ಕೇಳುವ ಸ್ಥಿತಿಯಲ್ಲಿ ಇಲ್ಲ. ನೀ ಸಂಗ್ಯಾನ ಸೂಳಿ, ಸಂಗ್ಯಾ ಮತ್ತು ನಿನ್ನ ಹಾದರ ಶುರು ಆಗಿದ್ದು, ಇಡೀ ಊರಿಗೂರೆ ಮಾತಾಡುತ್ತಿದೆ. ನಾವು ವ್ಯಾಪಾರಕ್ಕೆ ಹೋಗಿದ್ದಾಗಿನಿಂದ ಇಂಥ ಹೊಲಸು ಕಾಯಕಕ್ಕೆ ಕೈಹಾಕಿದೇಯಲ್ಲಾ, ನೀ ಹಾದರ ಮಾಡಿದ್ದು ಈ ಎಲೆ ಅಡಿಕೆ ಚೀಲದಿಂದಲೇ ತಿಳಿಯುತ್ತದೆ ನೀನು ಈ ಮನೆಯಲ್ಲಿ ಇರುವ ಯೋಗ್ಯತೆ ನಿನಗೆ ಇಲ್ಲ, ನಡಿ ಮೊದಲು ಮನೆಯಿಂದ ಎನ್ನುತ್ತಾನೆ. ಏನನ್ನು ಅರಿಯದ ಗಂಗಿಯ ಮೇಲೆ ಹಾದರದ ಅಪವಾದ ಗುಡ್ಡದಂತೆ ಬೆಳೆದು ನಿಲ್ಲುತ್ತದೆ. ಗಂಡನಿಗೆ ಎದುರಾಗಿ ನಿಂತು ಮಾತಾನಾಡುತ್ತಾಳೆ. ತನ್ನದೇನು ತಪ್ಪಿಲ್ಲ ಎಂದು ವಾದ ಮಾಡುತ್ತಾಳೆ. ಆದರೆ ಅದು ಯಾವುದ ಫಲ ಕೊಡುವುದಿಲ್ಲ.

ಕೇವಲ ಜನರಾಡುವ ಮಾತುಗಳು, ಜನರಿಂದ ಬಂದ ಆಹವಾಲುಗಳು, ಗಂಡನ ಮನಸ್ಸಿನಲ್ಲಿ ಮತ್ತು ಮೈದುನರ ಮನಸ್ಸಿನಲ್ಲಿ ಮಲೀನತೆ ಮಾಡಿರುತ್ತವೆ. ಇದು ಗಂಗಿಯಿಂದ ಸ್ವಚ್ಛ ಮಾಡಲು ಆಗುವುದಿಲ್ಲ. ತಾನು ಗಂಡನಿಗೆ ಏನೆಲ್ಲಾ ಪರಿತಪಿಸುತ್ತಾಳೆ, ಬೇಡಿಕೊಳ್ಳುತ್ತಾಳೆ, ಎಲ್ಲವೂ ಹೊಳೆಯಲ್ಲಿ ಹುಣಸೆ ಹಣ್ಣು ತೊಳೆದಂತೆ ಆಗುತ್ತದೆ. ಗಂಗಿಯ ಯಾವ ಮಾತುಗಳು ಇಲ್ಲಿ ಕವಡಿಗೆ ಕಿಮ್ಮತು ಇಲ್ಲಾ ಎನ್ನುವಂಥ ಸ್ಥಿತಿ ಸೃಷ್ಟಿ, ಆಗಿರುತ್ತದೆ. ಅನಾವಶ್ಯಕವಾದ ಸುಳ್ಳು ಅಪವಾದ ಹೊತ್ತು ಗಂಗಿಗೆ ಮನೆ ಬಿಟ್ಟು ಹೋಗಲು ಆಗುವುದು ಇಲ್ಲ. .ತಾನು ತಪ್ಪಿತಸ್ಥಳು ಎನ್ನುವುದನ್ನು ಬಾಹ್ಯಪ್ರಪಂಚಕ್ಕೆ ಅರ್ಥವಾಗಿದೆ. ಆದರೂ ಆಂತರಿಕವಾದ ಮನಸ್ಸುಗಳು ಇಲ್ಲಿ ಕೆಲಸ ಮಾಡಲೇ ಇಲ್ಲ, ಹಿಗಾಗಿ ಗಂಗಿ ಗಂಡನ ಮನೆಯಿಂದ ತನ್ನ ತವರು ಮನೆ ಬೈಲವಾಡಕ್ಕೆ ಹೊರಡಲು ಅಂಗಳದಲ್ಲಿ ಎತ್ತಿನ ಬಂಡಿ ಸಿದ್ಧವಾಗಿರುತ್ತದೆ. ಗಂಗಿಯ ಋಣ ಈ ಲಗಳೆಯರ ಮನೆತನ ಕೊನೆಯಗಳಿಗೆ ಆಗಿ ಬಿಡುತ್ತದೆ. ಈ ಮನೆ ಯಾರುದ್ದು ? ಇಲ್ಲಿರುವ ನಾನು ಯಾರು ? ನನಗೆ ಅನಾವಶ್ಯಕವಾಗಿ ಈ ಗತಿಗೆ ತಂದವರು ಯಾರು ? ಇದರಲ್ಲಿ ನನ್ನದೇನು ತಪ್ಪಿದೆ ? ಎಂದು ಮನದಲ್ಲಿ ಕೊರಗುತ್ತಾಳೆ. ಆದರೂ ಅನಿವಾರ್ಯತೆ ಗಂಗಿಯನ್ನು ಬಿಡುವುದೇ ಇಲ್ಲ.

ರಾತೋ ರಾತ್ರಿ ಮನೆಯಿಂದ ಯಾವ ಜನರಿಗೂ ಗೊತ್ತಾಗದ ರೀತಿಯಲ್ಲಿ ಮನೆಯಿಂದ ಹೋರ ಹೋಗಬೇಕು ಬೆಳಗಾದರೇ ಜನರು ನನ್ನನ್ನು ನೋಡುತ್ತಾರೆ. ಲಗಳೆಯರ ಮನೆಯಿಂದ ಹೊರ ಹೋಗುವ ಗತಿಯಿಂದ ಇಡೀ ಊರಿಗೆ ಊರೇ ಆಡುವ ಮಾತಾಗುತ್ತದೆ ಎಂದು ಗಂಗಿ ತಡಪಡಿಸುತ್ತಾಳೆ.

ಗಂಡನ ಮನೆಯಿಂದ ತನಗೆ ಸಿಕ್ಕಿರುವ, ಬೆಳ್ಳಿ, ಬಂಗಾರ, ಅಲಂಕಾರ ವಸ್ತ್ರಾಭರಣಗಳು, ಉಡುಗೆ ತೊಡುಗೆ, ಎಲ್ಲವೂ ಬಿಟ್ಟು ಗಂಡನ ಕೈಯಲ್ಲಿ ತೆಗೆದಿಡುತ್ತಾಳೆ. ಒಂದನ್ನು ಮಾತ್ರ ತನ್ನ ಮರ್ಯಾದೆಗಾಗಿ ಗಂಡನಿಗೆ ಬೇಡಿಕೊಂಡು ಉಳಿಸಿಕೊಳ್ಳುತ್ತಾಳೆ. ಅದು ಮಾಂಗಲ್ಯ(ಕೊರಳ ತಾಳಿ) ಹಿಗಾಗಿ ಅನ್ಯಾಯದ, ಮೋಸದ ಗಾಳಕ್ಕೆ ಗಂಗಿಯ ಸುಂದರ ಬದುಕು ಹರಿದು ಹಂಚಿ ಹೋಗುತ್ತದೆ. ಗಂಡನ ಮನೆಯಿಂದ ಹೊರ ಬೀಳುವಾಗ ಗಂಗಿಯ ದುಖಃ ಉಮ್ಮಳಿಸಿ ಬರುತ್ತದೆ. ಯಾವ ಬಾಗಿಲಿನಿಂದ ಹೊಸ್ತಿಲು ತುಂಬಿರುವಳೋ. ಅದೇ ಮನೆಯಿಂದ ಬಾಗಿಲಿಗೆ ಹಣೆಕೊಟ್ಟು. ಅಂತಿಮ ನಮನ ಸಲ್ಲಿಸಿ ಮನೆಯಿಂದ ಹೊರ ನಡೆಯುತ್ತಾಳೆ.

ಮದುವೆಯಾಗಿ ಮನೆಗೆ ಬರುವಾಗ ಗಂಗಿಯನ್ನು ಬರಮಾಡಿಕೊಂಡಿರುವ ಸನ್ನಿವೇಶ ಕಂಡರೆ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಒಳ್ಳೆಯದಾದರೆ ನೂರಾರು ಜನ ಕೆಟ್ಟರೆ ಯಾರು ಇಲ್ಲ. ಎಂಬಂತೆ ಗಂಗಿ ಏಕಾಂತವಾಗಿ. ಮನೆಯ ಮುಂದಿನ ಅಂಗಳದಲ್ಲಿ ನಿಂತಿರುವ ಎತ್ತಿನ ಬಂಡಿಯಲ್ಲಿ ಕುಳಿತುಕೊಳ್ಳುತ್ತಾಳೆ. ಇಲ್ಲಿ ಗಂಗಿಗೆ ಅನ್ಯಾಯವಾಗಿದೆ.ಯಾರಿಗೂ ಗೊತ್ತಾಗದ ರೀತಿಯಲ್ಲಿ ಕಾಣದ ಕೈಗಳು ಕೆಲಸ ಮಾಡಿರುತ್ತವೆ. ಅಗೋಚರ ದುಷ್ಟ ಶಕ್ತಿಗಳ ಕುತಂತ್ರದಿಂದ ಒಂದು ಸುಂದರ ಬದುಕು ನುಚ್ಚು ನೂರಾಗುತ್ತದೆ. ಗಂಗಿಯು ಒಬ್ಬ ದುರಂತ ನಾಯಕಿಯಾಗಿ ಇಲ್ಲಿ ಕಂಡು ಬರುತ್ತಾಳೆ. ಈ ಘಟನೆಯನ್ನು ಅರಿತ ಪ್ರೇಕ್ಷಕ ವರ್ಗ ಕಣ್ಣೀರು ಹಾಕುತ್ತದೆ. ಮೋಡ ಮುಸುಕಾಗಿದೆ. ಚುಕ್ಕಿಗಳು ಕಾರಣ ಸಿಗುವುದಿಲ್ಲ. ಯಾವ ಪಕ್ಷಿ ವರ್ಗ, ಪ್ರಾಣಿ ವರ್ಗ, ಮೂಕ ಪ್ರೇಕ್ಷಕರಾಗಿ ನಿಂತು ಬಿಡುತ್ತವೆ. ಅಂಥ ಗಳಿಗೆಯಲ್ಲಿ ಗಂಗಿಗೆ ಆದ ಅನ್ಯಾಯವನ್ನು ಮೆಟ್ಟಿ ನಿಲ್ಲುವಂತ ಯಾವ ಶಿಷ್ಟ ಶಕ್ತಿಯು ಎದ್ದು ಕಾಣವುದು ಇಲ್ಲವೆ ಇಲ್ಲ.

ದುಷ್ಟರ ಸಂಹಾರ ಶಿಷ್ಟರ ರಕ್ಷಣೆ ಇದು ಮಾನವ ಧರ್ಮದ ಸಿದ್ಧಾಂತ. ಆದರೆ ಇಲ್ಲಿ ಯಾವುದು ನಡೆಯುವುದೇ ಇಲ್ಲ. ಇಲ್ಲಿ ಕಂಡು ಬರುವ ಪ್ರಮುಖ ಅಂಶ ವೆಂದರೆ, ಶಿಷ್ಟರ ಸಂಹಾರ ದುಷ್ಟರ ರಕ್ಷಣೆಯಾಗಿ ಕಂಡು ಬರುತ್ತದೆ.

ಗಂಗಿ ಎಲ್ಲವನ್ನು ಸಹಿಸಿಕೊಂಡು ಸಮಾಜದಲ್ಲಿ ಘೋರವಾದ ಪ್ರಮಾದಹೊತ್ತುಕೊಂಡು, ಗಂಡನ ಮನೆಯಿಂದ ರಾತೋರಾತ್ರಿ ತನ್ನ ತವರು ಮನೆ ಸೇರುವ ವಿದ್ರಾವಕ ಸನ್ನಿವೇಷ ಈ ಕೃತಿಯಲ್ಲಿ ಮೂಡಿದೆ. ಗಂಗಿಗೆ ಅತಿಯಾದ ಅನ್ಯಾಯವಾಗಿರುವುದು ಇಲ್ಲಿ ಸ್ವತಃ ಪ್ರತಿಯೊಬ್ಬ ಪ್ರೇಕ್ಷಕರು ಅರಿತಿರುವ ವಿಷಯ.

ಅದು ಏನೇ ಇರಲಿ ಗಂಗಿ ಮಾತ್ರ ಇಲ್ಲಿ ಜೀವಂತ ಶವದಂತೆ ಇರುವ ಒಂದು 'ಜೀವಿ ಕೊನೆಗೆ ಗಂಗಿಯ ಬಾಳು, ನ್ಯಾಯ ಸಿಗದೇ ದುರಂತದ ಪ್ರಪಾತಕ್ಕೆ ಧುಮುಕಿರುವ ಪಾತ್ರ. ಎನ್ನುವುದಕ್ಕಿಂತ, ದುರಂತದ ಮಹಾಪ್ರಪಾತಕ್ಕೆ ದುಷ್ಟರಿಂದ ತಳಲ್ಪಟ್ಟ ಮಹಾದುರಂತದ ಬದುಕು ಎಂದು ಹೇಳಿದರು ತಪ್ಪಗಲಾರದು. ಹೀಗಾಗಿ ಸಂಸಾರವನ್ನು ಕಡಿದುಕೊಂಡು ಬದುಕನ್ನು ಅರ್ಥವಿಲ್ಲದಂತೆ ಕಮರಿ ಹೋಗಿದೆ ಗಂಗಿಯ ಜೀವನ.

ಪತ್ತಾರ ರಾಯಪ್ಪ

ಪತ್ತಾರ ರಾಯಪ್ಪ ಒಬ್ಬ ವ್ಯಾಪಾರಿ, ಅಂದರೆ ಅಕ್ಕಸಾಲಿಗ, ಬಂಗಾರದ ಕರಕುಶಲ ಕೆಲಸ ಮಾಡುವ ಒಬ್ಬ ಅಕ್ಕಸಾಲಿಗನು. ಬಂಗಾರಕ್ಕೆ ತರತರಹದ ಕರಕುಶಲ ಮಾಡಿ ಸುಂದರವಾದ ಒಡವೆಗಳನ್ನು ತಯ್ಯಾರಿಸುವಲ್ಲಿ ಅತಿ ಚಾಣಕ್ಷತನ, ಈ ಪತ್ತಾರ ರಾಯಪ್ಪನಲ್ಲಿ ಅಡಗಿದೆ. ಹೀಗಾಗಿ ತನ್ನ ವ್ಯಾಪರ ವೃತ್ತಿಯಲ್ಲಿ ಯಶಸ್ಸನ್ನು ಕಂಡುಕೊಂಡಿರುವನು. ಅಕ್ಕಸಾಲಿಗನು ಎಂದ ಮೇಲೆ ಮುಗಿಯಿತು. ಹತ್ತಾರು ಹಲವಾರ ಹೆಣ್ಣು ಮಕ್ಕಳು ಈತನಲ್ಲಿಗೆ ಬರುವುದು ಸಹಜ.

ಅಲಂಕಾರ ವಸ್ತುಗಳಿಗೆ ದುಂಬಾಲು ಬಿದ್ದಿರುವವರು ಎಂದರೆ, ಹೆಚ್ಚಾನು ಹೆಚ್ಚಾಗಿ ಹೆಂಗಳೆಯರೇ, ಹೀಗಾಗಿ ಅಕ್ಕಸಾಲಿಗರು ಎಂಬ ಪದವನ್ನು ಅಕ್ಕ ಎನ್ನುವ ಶಬ್ದದೊಂದಿಗೆ ಪ್ರಾರಂಭಿಸಿರಬೇಕು ಎಂದು ಅರ್ಥವಾಗುತ್ತದೆ. ಮೂಲತ : ಬೈಲವಾಡದವನಾದ ಈ ರಾಯಪ್ಪ ಎರಡು ಮೂರ ವರ್ಷಗಳ ಹಿಂದೆಯೇ ತನ್ನ ಮೂಲ ಊರನ್ನು ಬಿಟ್ಟು, ವ್ಯಾಪಾರ ವೃತ್ತಿಯನ್ನು ಅರಸಿಕೊಂಡು ಬೈಲಹೊಂಗಲಕ್ಕೆ ಬಂದಿರುತ್ತಾನೆ. ಈ ಒಂದು ವೃತ್ತಿಯಲ್ಲಿಯೇ ಇದ್ದುಕೊಂಡು, ತನ್ನ ಹರಿತವಾದ ಲೇಖನಿಯಿಂದ ಕೆಲವೊಂದು ಕೃತಿಯನ್ನು ಬರೆದಿರುವ ಶ್ರೇಯಸ್ಸು ಕೂಡ ಈತನಿಗಿದೆ. ಹೀಗಾಗಿ ಅಕ್ಕಸಾಲಿಗನು ಹೌದು ಮತ್ತು ಲೇಖಕನು ಹೌದು ಎರಡು ಪ್ರಮುಖವಾದ ಕೌಶಲ್ಯಗಳನ್ನು ಹೊಂದಿರುವ ಪತ್ತಾರ ರಾಯಪ್ಪನನ್ನು ನಾಟಕಕಾರನು ಎಂತಲು ಕರೆಯುತ್ತಾರೆ. ವೃತ್ತಿ ಧರ್ಮದೊಂದಿಗೆ ಲೇಖನಿ ಕೆಲಸವೂ ಈತನಿಗೆ ಒಲಿದು ಬಂದಿರುವ ಬಳುವಳಿಯಾಗಿದೆ.

ಒಂದು ಮಾತ್ರ ಈತನಲ್ಲಿ ಕಂಡು ಬರುವ ಕೆಟ್ಟ ಪ್ರವೃತ್ತಿಯಂದರೆ ತನ್ನ ಅಂಗಡಿಗೆ ಬಂಗಾರದ ಪ್ರಯುಕ್ತವಾಗಿ ಬರುವ ಹೆಣ್ಣು ಮಕ್ಕಳನ್ನು ಕಾಮದೃಷ್ಠಿಯಿಂದ ಕಾಣುವುದು. ವೃತ್ತಿಯಲ್ಲಿ ತುಂಬಾ ಚಾಣಕ್ಷನಾದ ಈತನಿಗೆ ಅದೊಂದು ಅಂಟಿಕೊಂಡು ಬಂದಿರುವ ಕೆಟ್ಟ ಶಾಪವಾಗಿದೆ. ಹೀಗಾಗಿ ಮುಂದೆ ತಾನು ಒಬ್ಬ ಕೆಟ್ಟ ವ್ಯಕ್ತಿಯಾಗಿಯೇ ನಿಲ್ಲುತ್ತಾನೆ.

ಲಗಳೆಯರ ಮನೆತನದ, ಶ್ರೀಮಂತನ ಹೆಂಡತಿಯಾದ ಗಂಗವ್ವ, ಒಮ್ಮೆ ಬಂಗಾರದ ಒಡವೆಗಳು ಮಾಡಿಸಿಕೊಳ್ಳಲು ತನ್ನ ಅಂಗಡಿಗೆ ಬರುತ್ತಾಳೆ. ಅವಳ ಜೊತೆಯಲ್ಲಿ ಒಬ್ಬ ವಯಸ್ಸಾದ ಪರವ್ವ ಎನ್ನುವ ಹೆಣ್ಣು ಮಗಳೊಂದಿಗೆ. ಬಂಗಾರದ ಒಡವೆಗಳನ್ನು ಮಾಡಿಸಿಕೊಳ್ಳಲು ಬಂದ ಗಂಗವ್ವಳ ರೂಪಲಾವಣ್ಯದಲ್ಲಿ ಸುರಸುಂದರಿ, ಇಡಿ ಗ್ರಾಮದ ತುಂಬೆಲ್ಲಾ ಸುತ್ತಿದರೂ ಅಂಥ ಸೌಂದರ್ಯದ ಖನಿಯನ್ನು ಎಲ್ಲಿಯೂ ಕಾಣಸಿಗುವುದಿಲ್ಲ. ಅಪರೂಪಕ್ಕೆಂಬಂತೆ ಹೇಳಿ ಮಾಡಿಸಿರುವಂಥ ಸೌಂದರ್ಯದ ಸಿರಿ ಈ ಪತ್ತಾರ ರಾಯಪ್ಪನ ಅಂಗಡಿಗೆ ಬಂದಿರುವಳು ಗಂಗವ್ವ ಈತನ ಅಂಗಡಿಯಲ್ಲಿ ಕಾಲ ಇಡುವುದರಲ್ಲಿಯೇ ಇವಳ ಸೌಂದರ್ಯಕ್ಕೆ ಮಾರು ಹೋಗುತ್ತಾನೆ. ಗಂಗಿಯ ಮೇಲೆ ತನ್ನ ಕೆಟ್ಟ ದೃಷ್ಟಿಯ ಕಣ್ಣು ಅವಳ ಮೇಲೆ ಹಾಕುತ್ತಾನೆ. ಇಂಥ ಸೌಂದರ್ಯವತಿಯನ್ನು ಜೀವಮಾನದಲ್ಲಿಯೇ ನಾನು ನೋಡಿಲ್ಲ ಎಂದು ಅಂತರಂಗದಲ್ಲಿ ತಳಮಳಿಸುತ್ತಾನೆ.

ಪರವ್ವ ಪತ್ತಾರಣ್ಣ ನಾವು ನಿನ್ನಲಿಗೆ ಬಂದಿರುವ ವಿಷಯ ಗೊತ್ತದವೋ ಅಥವಾ ಇಲ್ಲವೋ. ನಾವು ಬಂದು ನಿನ್ನ ಅಂಗಡಿಯಲ್ಲಿ ನಿಂತರೂ ಬರಿ ನೋಡುವುದನ್ನು ಮಾಡುತ್ತಿರುವಿಯಾ ? ನಮ್ಮದೇನು ಕೇಳುವ ಹಾಗೆ ನೀ ಕಾಣಸಲ್ಲ. ಎಂದಾಗ ಹಾಗೇನಿಲ್ಲ. ಏನ ನಿಮ್ಮ ಕೆಲಸ ಎಂದು ಕೇಳುತ್ತಾನೆ. ನೋಡು ಪತ್ತಾರಣ ಈ ತಾಯಿ ಯಾರು ನಿನಗೆ ಗೊತ್ತಾ, ಇವಳು ಸಾವುಕಾರ ಲಗಳೆರ ಮನೆತನದ

ಈರಪ್ಪನ ಹೆಂಡತಿ. ಇವಳಲ್ಲಿ ಹತ್ತು ತೊಲಿ ಬಂಗಾರ ಇದೆ. ಇದರಲ್ಲಿ ಇವಳಿಗೆ ಒಪ್ಪುವಂಥ ಒಡವೆಗಳನ್ನು ಮಾಡಿಸಬೇಕು. ಅದಕ್ಕೆ ನೀ ಈ ಕೆಲಸ ಚನ್ನಾಗಿ ಮಾಡುತ್ತಿಯಾ ಎಂದು ನಾವು ಎಲ್ಲಾ ದುಕಾನ(ಅಂಗಡಿ) ಬಿಟ್ಟು ನಿನ್ನ ಅಂಗಡಿಗೆ ಬಂದಿದ್ದೇವೆ ಎಂದು ಹೇಳುತ್ತಾಳೆ.

ಪರವ್ವ ಹೇಳಿರುವುದೇ ತಡ ಪತ್ತರನ ಚಿತ್ತ ಆವಾಗ ಇವರ ಕೆಲಸದತ್ತ ಬಂದಿರುತ್ತದೆ. ಹೌದು ಆಯ್ತು ನಾವು ಒಡವಿ ಮಾಡಕ್ಕೆ ಕುಂತಿದ್ದೆವು. ಒಳ್ಳೆಯ ಒಡವಿ ಮಾಡಿದರೆ, ನಿಮ್ಮಂತವರು ನಮ್ಮಲ್ಲಿಗೆ ಬರುವುದು. ಅದು ನಮ್ಮ ಭಾಗ್ಯ ಅಲ್ಲವೆ. ಎಂದು ಹೇಳುತ್ತಾನೆ.

ಗಂಗವ್ವ ಪರವ್ವಳನ್ನು ಕುರಿತು, ಪರವ್ವ ನೀ ಈ ಪತ್ತಾರಣ್ಣ ಏನೇನು ಹೇಳುತ್ತಾನೆ ಮತ್ತು ಈತನ ಮೂಜೂರಿ ಎಷ್ಟು ಎನ್ನುವುದನ್ನು ಎಲ್ಲವು ಸರಿಯಾಗಿ ಕೇಳಿಸಿಕೊಂಡು ಬಾ. ಎಂದು ಹೇಳಿ ಮನೆಯ ಕಡೆ ಕೆಲಸವಿದೆಯಂದು ಹೇಳಿ, ಮನೆಯ ಕಡೆಗೆ ಬರುತ್ತಾಳೆ. ಗಂಗವ್ವ ಮನೆಗೆ ಬಂದ ಮೇಲೆ ರಾಯಪ್ಪ ನಿಧಾನವಾಗಿ ಗಂಗವ್ವನ ಬಗ್ಗೆ ಪರವ್ವಳಿಂದ ಒಂದೊಂದು ತಿಳಿದುಕೊಳ್ಳಲು ಪ್ರಾರಂಭಿಸುತ್ತಾನೆ. ಪರವ್ವ ! ಈ ಗಂಗವ್ವಗೆ ನಾನು ಬಹಳಷ್ಟು ಸುಂದರವಾದ ಇವಳಿಗೆ ಒಪ್ಪುವಂಥ ಒಡವೆಗಳನ್ನು ಮಾಡುತ್ತೇನೆ. ಏಕೆಂದರೆ ಇಂಥ ಸುಂದರಿಯನ್ನು ನಾ ಎಲ್ಲಿಯು ನೋಡಿಯೇ ಇಲ್ಲ. ಎಂದಾಗ ಪರವ್ವ ಬಂಗಾರಣ್ಣ ಅವಳದೇನ ವರ್ಣನೆ ಮಾಡಿರುವೆ ? ಮೊದಲ ನಿನ್ನ ಕೆಲಸ ನೀ ಮಾಡು ಎಂದು ಗದರಿಸುತ್ತಾಳೆ.

ಪರವ್ವಳಿಂದ ಏನನ್ನು ತಿಳಿದುಕೊಳ್ಳಲು ಚಡಪಡಿಸುವನೋ ಅದನ್ನು ಅವಳ ಬಾಯಿಂದ ಬರದೇ ಇದ್ದಾಗ, ಅವಳಿಗೆ ಬಂಗಾರದ ಆಸೆ ಹುಟ್ಟಿಸುತ್ತಾನೆ. ಪರವ್ವ ನೀ ನಾನು ಹೇಳುವ ಕೆಲಸಕ್ಕೆ ಒಪ್ಪಿದರೆ, ನಿನಗೆ ಎರಡು ತೋಲಿ ಬಂಗಾರ ಕೊಡುತ್ತೇನೆ. ನೀ ಈ ಕೆಲಸ ಮಾಡಲೇ ಬೇಕೆಂದು ಅವಳ ಮೇಲೆ ಬಂಗಾರದ ಆಸೆಯು ಒಡುತ್ತಾನೆ. ಪರವ್ವಳ ಭಾವನೆಗಳು ಅಡ್ಡದಾರಿ ಹಿಡಿಯುತ್ತವೆ. ಆಸೆಯ ಭೂತ ಅವಳನ್ನು ಆವರಿಸುತ್ತದೆ. ಮುಂದುವರಿದು ಪತ್ತಾರನ ಗುಲಾಮಗಿರಿ ಕೆಲಸಕ್ಕೆ ಮುಂದಾಗುತ್ತಾಳೆ. ಇದಕ್ಕೆ ಪರವ್ವ ಪತ್ತಾರನಿಗೆ ಗೋಡೆಯ ಮೇಲೆ ದೀಪವಿಟ್ಟಂತೆ ಮಾತು ಕೊಡುತ್ತಾಳೆ. ತನ್ನ ಬಾಯಿಂದ ಕೇಳಲು ಆಗದ ಮಾತು ಅದು ಆದರೂ ನಿನಗೆ ಸಹಾಯಕ್ಕಾಗಿ ನಿಲ್ಲುತ್ತೇನೆ ಎಂದು ಹೇಳಿ ಹೊರಡುತ್ತಾಳೆ.

ಮರು ದಿವಸ ಪತ್ತಾರ ರಾಯಪ್ಪ ಮತ್ತು ಪರವ್ವಳ ಯೋಜನೆಯಂತೆ ಗಂಗವ್ವ ಪತ್ತಾರ ರಾಯಪ್ಪನ ಅಂಗಡಿಗೆ ಬರುತ್ತಾಳೆ. ಪರವ್ವಳು ಕೂಡ ಬರುತ್ತಾಳೆ. ಪರವ್ವ ತಾನು ಯೋಚಿಸಿದಂತೆಯೇ. ಮನೆಯ ಬಾಗಿಲು ಮುಚ್ಚಿಲ್ಲ ಎಂದು ಹೇಳಿ ಗಂಗಿಯನ್ನು ಪತ್ತಾರನ ಅಂಗಡಿಯಲ್ಲಿ ಒಬ್ಬಳೇ ಬಿಟ್ಟು ಹೋಗುತ್ತಾಳೆ. ಫತ್ತಾರನು ಮೊದಲೇ ಕಾಮುಕ ವ್ಯಕ್ತಿ. ಗಂಗಿಯನ್ನು ಹಲವಾರು ಗೊಡ್ಡು ಆಮಿಷಗಳಿಗೆ ಬಲೆ ಬೀಳುವಂತೆ ಮಾಡುತ್ತಾನೆ. ಆದರೂ ಗಂಗಿ ಈತನ ಹೊಲಸು ಪ್ರವೃತ್ತಿಯನ್ನು ಮೆಟ್ಟಿ ನಿಂತು ಅಲ್ಲಿಂದ ಆತನ ಮುಖದ ಮೇಲೆ ಆತನಿಗೆ ಕೊಡಬೇಕಾದ ಹಣ(ಮಜೂರಿ) ಕೊಟ್ಟು, ಒಡವೆ ಕಿತ್ತುಕೊಂಡ, ಸಿಟ್ಟಿನಿಂದ ಎದ್ದು ಬರುತ್ತಾಳೆ.

ಗಂಗಿಯು ಇನ್ನು ಮುಂದೆ ನನಗೆ ದಕ್ಕುವುದಿಲ್ಲ ಎಂದು ಅರಿತು, ಅವಳ ಮೇಲೆ ಸೇಡಿನ ಪ್ರತಿಕಾರಕ್ಕಾಗಿ ಕಾಯುತ್ತಾನೆ. ಗಂಗಿಗೆ ಅನಾವಶ್ಯಕವಾಗಿ ಈರಪ್ಪನ ಗೆಳೆಯನಾದ ಸಂಗಣ್ಣನನ್ನು ಗಂಗಿಯನ್ನು ಜೊತೆಗೆ ಹಾದರದ ಲೇಪ ಬಳಿಯುತ್ತಾನೆ. ಇಡೀ ಊರಿಗೂರೆ ನಂಬುವಂತೆ ಮಾಡಿರುತ್ತಾನೆ. ಗಂಗಿಯ ಜೊತೆಗೆ ತನ್ನ ಸಂಬಂಧ ಕುದುರುವುದಿಲ್ಲ ಎಂದು ಅರಿತ ಮೇಲೆ ಇಲ್ಲಸಲ್ಲದ ಅಪವಾದಹೇರುವ ನರಿಯಂಥ ಕುತಂತ್ರಕ್ಕೆ ಕೈಹಾಕುತ್ತಾನೆ.

ತನಗೆ ಸಿಗದಿದ್ದರೂ ಚಿಂತೆಯಿಲ್ಲ. ಆದರೆ ಇವಳ ಬಂಗಾರದಂಥ ಸಂಸಾರ ನುಚ್ಚು ನೂರು ಮಾಡಲು ಸಂಚು ರೂಪಿಸುತ್ತಾನೆ.ಕುತಂತ್ರಕ್ಕೆ ಹೆಸರಾದ ಆಸೆ ಬುರುಕ ಪರವ್ವ ಮುಂದಿನ ರಾದ್ಧಾಂತಕ್ಕೆ ಎಡೆ ಮಾಡಿ ಕೊಡುತ್ತಾಳೆ.

ಪತ್ತಾರ ರಾಯಪ್ಪನ ಬುದ್ಧಿಯು ಅತಿ ಹೇಯ ಕಾರ್ಯ ಮಾಡುತ್ತಿರುತ್ತದೆ. ನಿರಾಪರಾಧಿ ಸಂಗಣ್ಣ ಮತ್ತು ನಿರಾಪರಾಧಿ ಗಂಗವ್ವರ ನಡುವೆ ಅನೈತಿಕದ ಸಂಬಂಧ ಕಲ್ಪಿಸಿ. ಈ ಸುದ್ದಿ ಇಡಿ ಗ್ರಾಮದ ತುಂಬೆಲ್ಲಾ ಹರಡಿಸಿರುತ್ತಾನೆ. ಈರಪ್ಪ ಮತ್ತು ಗಂಗಿಯ ಸಂಸಾರದ ಸಂಬಂಧ ಹದಗೆಡಿಸುತ್ತಾನೆ. ಗಂಗಿ ತನಗೆ ಒಲಿಯದಿದ್ದರೆ. ಅವಳ ಬಗ್ಗೆ ಅಪಪ್ರಚಾರ ಬರೆದು, ನಾಟಕವನ್ನಾಗಿಸಿ, ರಂಗ ಮಂದಿರದ ಮೇಲೆ ಆಡಿ ಎಲ್ಲಾ ಜನರು ನೋಡುವ ಹಾಗೆ ನಾಟಕ ಆಡುತ್ತೇನೆ, ಎಂದು ಹೇಳುತ್ತಾನೆ. ಈ ರೀತಿ ಮಾಡುವುದರಿಂದ ಒಂದು ಸಂಸಾರ ಖುದ್ದು ನನ್ನಿಂದಲೇ ಭಗ್ನವಾಗುತ್ತದೆ. ಎನ್ನುವ ನ್ಯಾಯದ ಕಣ್ಣು ಇರದೇ ಇರುವ ಒಂದು ವಿಕೃತ ಮನಸ್ಸು ಎಂದು ಪತ್ತಾರನನ್ನೂ ಇಲ್ಲಿ ಗುರುತಿಸುತ್ತೇವೆ.

ಗಂಗಿಯ ಮತ್ತು ಸಂಗಣ್ಣನ ಹಾದರದ ಕಾಲ್ಪನಿಕ ಕತೆಯನ್ನು ಸುಳ್ಳಿನ ಕತೆಯಾಗಿಸಿ ಇಡಿ ಊರ ಜನರು ನಿಜ ಎಂದು ತಿಳಿಯುವಂತೆ ಮಾಡುವಲ್ಲಿ ನಿಸ್ಸಿಮನಾಗಿ ತೋರಿ ಬರುತ್ತಾನೆ. ಪರವ್ವಳ ಕೈಯಿಂದ ಸಂಗಣ್ಣನ ಎಲೆ ಅಡಿಕೆ ಚೀಲವನ್ನು ಈರಪ್ಪ ಮತ್ತು ಗಂಗಿಯ ತಲೆಯ ದಿಂಬಿನಲ್ಲಿ ಅಡಗಿಸಿ ಇಟ್ಟೂ. ಅದು ನಿಜ ಎನ್ನುವುದನ್ನು ಈರಪ್ಪನಿಗೆ ಮನವರಿಕೆ ಮಾಡಿಕೊಡುವಲ್ಲಿ ಸ್ವತಃ ಪರವ್ವ ಮತ್ತು ರಾಯಪ್ಪಾ ಮಾಡಿರುತ್ತಾರೆ. ಇದೇ ಒಂದು ಸಣ್ಣ ಸಾಕ್ಷಿಯಿಂದ, ಒಂದು ಅಮಾಯಕ ಹೆಣ್ಣಿನ ಭವಿಷ್ಯದ ಮೇಲೆ ಕಲ್ಲು ಹಾಕಿ, ಸಂತೋಷ ಪಡುವ ದರೀದ್ರ ಹೀನಾಯ ಪ್ರವೃತಿಯ ಪತ್ತಾರ ಎಂದು ಗುರುತಿಸಬೇಕಾಗುತ್ತದೆ.

ಪತ್ತಾರ ರಾಯಪ್ಪನಿಗೆ ಈ ಕೃತಿಯಲ್ಲಿ ಮೌಲ್ಯಗಳಿರದ ಮಹಾ ರಾಕ್ಷಸಿಯಂತಲೂ, ಕುತಂತ್ರಿಯಂತಲೂ, ಇನ್ನೊಬ್ಬರ ಸಂಸಾರ ಹಾಳುಗೆಡಿಸುವ, ಮತ್ತು ಅಮಾಯಕರ ಕೊಲೆ ಮಾಡಿಸುವ ಹೇಯ್ಯ ಕೃತ್ಯದ ಕ್ರೂರ ವ್ಯಕ್ತಿ ಎಂದರೆ ಪತ್ತಾರ ರಾಯಪ್ಪನೆ ಪತ್ತಾರ ಎನ್ನುವ ಹೆಸರಿಗೆ ತಕ್ಕಂತೆ, ಕನ್ನಡದಲ್ಲಿ ಇದಕ್ಕೆ ಕಲ್ಲು ಎಂತಲೂ ಗುರುತಿಸುತ್ತಾರೆ. ಈ ಕಲ್ಲಿಗೆ ಯಾವ ಗುಣ ಇರುತ್ತದೆ ಹೇಳಿ ಅದರಂತೆ ಮಾನ ಮರ್ಯಾದೆ ಮಾನವೀಯ ಮೌಲ್ಯಗಳಿರದ ಒಂದು ಭಯಾನಕ ಕ್ರೂರ ಮೃಗವಾಗಿದ್ದಾನೆ.

ಸಂಗ್ಯಾನ ಕೊಲೆಗೂ ಈತನೇ ಕಾರಣನು, ಸಂಗ್ಯಾನ ಮೇಲೆ ಇಲ್ಲಸಲ್ಲದ ಅಪವಾದಗಳನ್ನು ಹೇರಿ ಅಮಾಯಕವಾಗಿ ಆತನ ಕೊಲೆಗೆ ಸಂಚು ರೂಪಿಸಿದವನೇ ಈ ಪತ್ತಾರ ರಾಯಪ್ಪ. ಪತ್ತಾರನಿಂದ ಯಾರ್ಯಾರಿಗೆ ಹೇಗೆ ಅನ್ಯಾಯವಾಗಿದೆ ಎಂದರೇ ಪಟ್ಟಿ ಹಾಕಿಯೇ ಲೆಕ್ಕ ಕೊಡಬಹುದು.

೧) ಗಂಗಿಯ ದಾಂಪತ್ಯ ಜೀವನ ಮುರಿದು ಬಿದ್ದು, ಸಂಸಾರದಿಂದ ವಂಚಿತಳಾಗಿ, ಗಂಡನಿಂದ, ಅನೈತಿಕ ಸಂಬಂಧದ ಹೊರೆ ಹೊತ್ತು ತವರು ಮನೆ ಸೇರಿರುವ ನಿಸ್ಸಾಯಕ ಹೆಣ್ಣು.

೨) ಗಂಗಿಯೊಂದಿಗೆ ಅನೈತಿಕ ಸಂಬಂಧದ ಸುಳ್ಳು ಪ್ರಮಾದಕ್ಕೆ ಗುರಿಯಾಗಿ ಸಂಗಣ್ಣನನ್ನು ಈರಪ್ಪ, ಇರಪಾಕ್ಷಿ ಮತ್ತು ಬಸವಂತರಿಂದ ಕೊಲೆಯಾಗುತ್ತಾನೆ. ಈರಪ್ಪನ ಆತ್ಮೀಯ ಗೆಳೆಯನಾಗಿರುವ ಸಂಗಣ್ಣ ಇಲ್ಲಿ ಕೊಲೆಯಾಗಲು ಕಾರಣ ಈ ಪತ್ತಾರ ರಾಯಪ್ಪನೆ.

೩) ಲಗಳೆಯರ ಮನೆತನದ ಮರ್ಯಾದೆ ಬೀದಿಗೆ ತಂದಿರುವವನು. ಈ ರಾಯಪ್ಪನೆ

೪) ಈರಪ್ಪ ಬ್ರಿಟಿಷ ಸರಕಾರದ ಕೆಂಗಣ್ಣಿಗೆ ಗುರಿಯಾಗಿ ನೇಣು ಗಂಬಕ್ಕೆ ಏರಿದ್ದು.
ಈತನ ಕುತಂತ್ರದಿಂದಲೇ.

೫) ಇರಪಾಕ್ಷಿ ಮತ್ತು ಬಸವಂತರು ಹಿಂದೂ ಧರ್ಮದಿಂದ ಕ್ರೈಸ್ತ ಧರ್ಮಕ್ಕೆ
ಮತಾಂತರಗೊಂಡಿದ್ದು, ಈತನ ಕಪಿ ಬುದ್ಧಿವಂತಿಕೆಯಿಂದಲೇ,

- ಇಷ್ಟೇಲ್ಲಾ ಕಾರಣಕ್ಕೆ ಕಾರಣಿಭೂತನೆ ಈ ಪತ್ತಾರ ರಾಯಪ್ಪ. ಏನೇ ಆಗಲಿ ಮನುಷ್ಯತ್ವದ ಗಂಧವೇ ಇಲ್ಲದ ವ್ಯಕ್ತಿ ರಾಯಪ್ಪನೆಂದು ಇಲ್ಲಿ ಕಂಡು ಬರುತ್ತದೆ.

ಸಂಗಣ್ಣ

ಏನನ್ನು ಅರಿಯದ ಜೀವಿ ಯಾವುದನ್ನು ಬಯಸದ ವ್ಯಕ್ತಿ, ಇನ್ನೊಬ್ಬರದು ಹಾಳು ಮಾಡದಿರುವ ವ್ಯಕ್ತಿ, ಸಂಗಣ್ಣ. ಖರೇ ಖರೇ ಸಂಗ್ಯಾ ಬಾಳ್ಯಾ ಕೃತಿಯಲ್ಲಿ ಒಬ್ಬ ದುರಂತದ ನಾಯಕನ ಪಾತ್ರದಲ್ಲಿ ಕಂಡುಬರುತ್ತಾನೆ. ಲಗಳೆಯರ ಮನೆತನದ ಗೆಳೆಯನಾಗಿರುವ ಈ ಸಂಗಣ್ಣ, ಈರಪ್ಪನ ಆತ್ಮೀಯಗೆಳೆಯನು. ಯಾವಾಗಲೂ ಲಗಳೆಯರ ಮನೆತನದೊಂದಿಗೆ ಸಂಪರ್ಕ ಇಟ್ಟುಕೊಂಡಿರುವವನು. ಈರಪ್ಪನೊಂದಿಗೆ ನಿಕಟವರ್ತಿಯಾಗಿ ಬದಕುವ ಸಂಗಣ್ಣ ಆತ್ಮೀಯ ಮಿತ್ರನಾಗಿ ಕಂಡುಬರುತ್ತಾನೆ.

ವ್ಯಾಪಾರಕ್ಕೆಂದು ಹೊರಡುವ ಈರಪ್ಪಾ, ಸಂಗಣ್ಣನನ್ನು ನಮ್ಮ ಮನೆಯ ಕಡೆ ಸ್ವಲ್ಪ ಗಮನ ಇಟ್ಟರು ಎಂದು ಹೇಳಿ ಹೊರಡುತ್ತಾನೆ. ಗೆಳೆಯನು ವ್ಯಾಪಾರಕ್ಕೆಂದು ಊರು ಊರು ಅಲೆಯುವ ಅಸಾಮಿ .ಅಂಥದರಲ್ಲಿ ಮನೆಯ ಕಡೆ ಯಾರೂ ಇಲ್ಲ. ಎಂದು ಅರಿತು ಕೊಂಡು ಯಾವಾಗೋ ಎಂಬಂತೆ ಕೆಲವು ದಿವಸಗಳಿಗೊಮ್ಮೆ ತನ್ನ ಗೆಳೆಯನಾದ ಲಗಳೆಯರ ಈರಪ್ಪನ ಮನೆಯ ಕಡೆ ಬಂದು ಹೋಗುತ್ತಿರುತ್ತಾನೆ. ಇರಪಾಕ್ಷಿ ಮತ್ತು ಬಸವಂತರ ಬಗ್ಗೆ ಆಗಲಿ. ಗಂಗವ್ವನ ಬಗ್ಗೆ ಆಗಲಿ ಅತಿ ಸಲಿಗೆಯಿಂದ ಸ್ವತಃ ನಾನು ಈ ಮನೆಯವನು ಎನ್ನುವ ಭಾವನೆಯಿಂದ ಕಾಲ ಕಳೆಯುತ್ತಾನೆ. ಇದೇ ಸುದ್ದಿ ಮುಂದೆ ಕೆಟ್ಟ ಸುದ್ದಿಯಾಗಿ ಪರಿಣಮಿಸುತ್ತದೆ. ಕೆಲವು ಕೆಟ್ಟ ವ್ಯಕ್ತಿಗಳಿಂದ, ಹೇಗೆಂದರೆ ಗಂಗಿ ಮತ್ತು ಸಂಗ್ಯಾರ ಸಂಗ ಊರಲ್ಲಿ ಅತಿಯಾಗಿ ಮೆರೆಯುತ್ತಿದೆ. ಇವರಿಬ್ಬರ ನಡುವೆ ಏನೋ ಗುಸು ಗುಸು ನಡೆಯುತ್ತಿದೆ. ಮೇಲಾಗಿ ಈರಪ್ಪಾ ಊರಲ್ಲಿ ಇಲ್ಲ, ಅದು ಒಳ್ಳೆಯದಾಗಿದೆ ಈ ಸಂಗಣ್ಣನಿಗೆ ಎಂದು ಇಡೀ ಊರಿಗೆ ಊರೇ ಮನೆ ಮಾತಾಗಿ ಬಿಡುತ್ತದೆ. ಆದರೆ ಸಂಗಣ್ಣ ಮತ್ತು ಗಂಗವ್ವಳ ಮಧ್ಯೆ ಆಂತರಿಕವಾಗಿ ಅಂಥ ಯಾವುದೇ ಗುಮಾನಿ ಪಡುವಂಥ ವಿಷಯ ಇರುವುದಿಲ್ಲ.

ಪತ್ತಾರ ರಾಯಪ್ಪ ಮತ್ತು ಪರವ್ವಳ ಕುತಂತ್ರದಿಂದ ಈ ಸುದ್ದಿ ಗಾಳಿ ಸುದ್ದಿಯಾಗಿ ಹಬ್ಬಿ ಇಡೀ ಊರಿಗೆ ಊರೇ ಆಡಿಕೊಳ್ಳುವ ಮಾತಾಗಿ ಬಿಡುತ್ತದೆ. ಪತ್ತಾರ ರಾಯಪ್ಪ ಮತ್ತು ಪರವ್ವ ಈ ಇಬ್ಬರೂ ಗೌಪ್ಯವಾಗಿ ಸುಳ್ಳಿನ ಬಿರುಗಾಳಿ ಎಬ್ಬಿಸಿರುವರು. ಏಕೆಂದರೆ ಪತ್ತಾರ ರಾಯಪ್ಪನ ಕುತಂತ್ರ ಸೌಂದರ್ಯದ ಚಲುವೆಯಾಗಿರುವ ಗಂಗಿಯನ್ನು ಪ್ರೀತಿಸಿ ಸವಿದು ಬಿಡಬೇಕೆನ್ನುವ ಆತನ ಕನಸುನನಸ್ಸಾಗುವುದಿಲ್ಲ. ಹೀಗಾಗಿ ನನ್ನ ಕೈಗೆ ಗಂಗಿ ಸಿಗದೇ ಹೋದರೂ. ಹೋಗಲಿ ಅವಳ ಸಂಸಾರವಾದರೂ ಹರಿದು ಹಾಕಬೇಕು. ಅವಳು ನನ್ನ ಮುಂದೆ ನೆಮ್ಮದಿಯಿಂದ ಬದುಕಬಾರದು ಎಂದು ಕೊಂಡ್ರು ಇಲ್ಲ ಸಲ್ಲದ ಅಪವಾದ ಎಬ್ಬಿಸುತ್ತಾನೆ. ಜನ ಇದನ್ನೇ ಸತ್ಯವೆಂದು ನಂಬಿಬಿಡುತ್ತಾರೆ.

ಲಗಳೆಯರ ಮನೆತನ ಗೌರವದ ಮನಸ್ಸಿನ. ಇವರ ಮರ್ಯಾದೆಯು ಅನಾವಶ್ಯಕವಾಗಿ ಬೀದಿಯಲ್ಲಿ ತಂದು, ಪತ್ತಾರ ರಾಯಪ್ಪ ಮತ್ತು ಪರವ್ವ ನಿಲ್ಲಿಸುತ್ತಾರೆ. ಈ ವಿಷಯವು ಈರಪ್ಪಾ ಮತ್ತು ಆತನ ತಮ್ಮಂದಿರ ಕಿವಿಯ ಮೇಲೆ ಬಿದ್ದು, ಒಂದು ದೊಡ್ಡ ದುರಂತವೇ ಸೃಷ್ಠಿಯಾಗುತ್ತದೆ. ನಮ್ಮ ಆತ್ಮೀಯ ಗೆಳೆಯನೆಂದುಕೊಂಡ ಸಂಗ್ಯಾ, ನನ್ನ ಹೆಂಡತಿಯ ಮಂಚದವರೆಗೂ ಮುಟ್ಟಿರುವುದು ಎಂದರೆ ಗಂಗಿ ಮತ್ತು ಸಂಗ್ಯಾರ ಹಾದರದ ಮಾತು ಊರ ತುಂಬಾ ಹರಡದೇ ಇರುತ್ತದೆಯೇ. ಪರವ್ವಳ ತಂತ್ರಗಾರಿಕೆಯಿಂದ ಸಂಗಣ್ಣನ ಎಲೆ ಅಡಿಕೆ ಚೀಲದ ಸಾಕ್ಷಿಯು ಗಂಗವ್ವಳ ಭವಿಷ್ಯದ ಚಿತ್ರಣವನ್ನೇ ಬದಲಾಯಿಸಿ ಬಿಡುತ್ತದೆ. ಗಂಗಿ ಇದರಿಂದ ತವರು ಮನೆ ಸೇರುತ್ತಾಳೆ.

ಈರಪ್ಪಾ ಮತ್ತು ಆತನ ತಮ್ಮಂದಿರೂ ಅತಿಯಾದ ಸಿಟ್ಟು ತುಂಬಿಕೊಂಡು ತಿರುಗುತ್ತಾರೆ. ಸಂಗ್ಯಾನನ್ನು ಹೇಗಾದರೂ ಮಾಡಿ, ಆತನ ಕೊಲೆ ಮಾಡಲೇ ಬೆಕೆಂದು ನಿರ್ಧರಿಸುತ್ತಾರೆ. ಲಗಳೆಯರ ಮನೆತನದ ಮಾನ, ಮರ್ಯಾದೆ, ಬೀದಿಗೆ ತಂದಿರುವ ಈ ಸಂಗ್ಯಾನನ್ನು ಬಿಡುವದಾದರೂ ಹೇಗೆ ಎಂದು ಯೋಚಿಸುತ್ತಾರೆ.

ಅಮಾಯಕ ಸ್ಥಿತಿಯಲ್ಲಿರುವ ಸಂಗ್ಯಾನಿಗೆ ಯಾವುದೂ ಗಮನಕ್ಕೆ ಬರುವುದೇ ಇಲ್ಲ, ತಪ್ಪು ಮಾಡದೇ ಇರುವ ವ್ಯಕ್ತಿಯ ಮೇಲೆ ಅಪವಾದ ಕೂರಿಸುವುದು ಒಂದು ಅನೈತಿಕ ನೀತಿಯೇ ಸರಿ, ಆದರೆ ಅದನ್ನು ಯಾರು ಪ್ರತಿಭಟಿಸಬೇಕು ? ಸಂಗ್ಯಾನಿಗಾಗಿ ಸಹಾಯ ಮಾಡುವವರಾದರೂ ಯಾರು ? ಈರಪ್ಪಾ ಮತ್ತು ಆತನ ಸಹೋದರರಿಗೆ ತಿಳಿಸಿ ಹೇಳುವವರಾದರೂ ಯಾರು ? ಹೀಗೆ ಸಮಸ್ಯೆಯ ಸುಳಿಯಲ್ಲಿ ಸಂಗಣ್ಣ ಸಿಕ್ಕಿಕೊಂಡಿರುತ್ತಾನೆ.ಸಂಗ್ಯಾನ ಕೊಲೆ ಮಾಡಲೇಬೇಕೆಂದು ತಂತ್ರ ರೂಪಿಸಿಕೊಂಡಿರುವ ಲಗಳೆಯರು, ಸಂಗ್ಯಾನ ಹುಡುಕುವ ಸಲುವಾಗಿ ಕಾರ್ಯತಂತ್ರ ರೂಪಿಸುತ್ತಾರೆ.

ಬಾಳ್ಯಾ ಸಂಗ್ಯಾನ ಜೀವದ ಗೆಳೆಯ ಹಾಗಾಗಿ ಬಾಳ್ಯಾನನ್ನು ಹಣದ ಆಮೀಷ ತೋರಿಸಿ ಆತನನ್ನು ಊರ ಸಮೀಪ, ಅಂದರೆ ಗುಡ್ಡದ ಮೇಲಿರುವ ಮರಡಿ ಬಸವಣ್ಣ ದೇವರ ಗುಡಿಯ ಹತ್ತಿರ ಕರೆದುಕೊಂಡು ಬರುವದಾಗಿ, ಬಾಳ್ಯಾನನ್ನು ತಿಳಿಸಿ ಹೇಳುತ್ತಾರೆ. ಇದೇ ವಿಷಯ ಬಾಳ್ಯಾ ತನ್ನ ಗೆಳೆಯನಾದ ಸಂಗ್ಯಾನನ್ನು, ನಿನ್ನ ಮೇಲೆ ಹೊರಿಸಿರುವ ಸುಳ್ಳು ಅಪವಾದವನ್ನು ಅವರಿಗೆ ತಿಳಿಸಿ ಹೇಳಲು ಹೋಗೋಣ, ನಡಿ ಎಂದು ಆತನನ್ನು ಕರೆದುಕೊಂಡು ಗುಡ್ಡದ ಮೇಲಿರುವ ಮರಡಿ ಬಸವಣ್ಣನ ದೇವಾಲಯಕ್ಕೆ ರಾತ್ರಿಯ ಸಮಯದಲ್ಲಿ ಬರುತ್ತಾರೆ.

ತನ್ನ ಜೀವನದ ಗೆಳೆಯನ ಮಾತುಗಳನ್ನು ನಂಬಿಕೊಂಡಿರುವ ಸಂಗ್ಯಾ ಆತನನ್ನು ನಂಬಿ ಲಗಳೆಯರ ಭೇಟಿ ಮಾಡಲು ಹೊರಟು ಹೋಗುತ್ತಾನೆ. ಮರಡಿ ಬಸವಣ್ಣನ ದೇವಾಲಯ ಪಕ್ಕದಲ್ಲಿರುವ ಗುಡಿಯ ಭಾವಣಿ ಕೆಳಗಡೆ ಕುಳಿತಿರುವ ಮೂವರು ಅಣ್ಣತಮ್ಮಂದಿರು ಸಂಗ್ಯಾ ಬರುತ್ತಿರುವುದನ್ನು ದೂರದಿಂದಲೇ ಕಂಡು, ತಕ್ಷಣವೇ ಕಾರ್ಯ ಪ್ರವರ್ತರಾಗುತ್ತಾರೆ.ಸಂಗಣ್ಣಾ ಎದುರಿಗೆ ಬಂದ ತಕ್ಷಣವೇ ಆತನಿಗೆ ಸುತ್ತುವರಿಯುತ್ತಾರೆ. ಮಾತನಾಡಲು ಹಾಗೂ, ಏನನ್ನು ಹೇಳಲೂ ಕೂಡಾ, ಅವಕಾಶವೇ ಕೊಡುವುದಿಲ್ಲಾ, ನಮ್ಮ ಮನೆತನ ಮರ್ಯಾದೆಯನ್ನು ಬೀದಿಗೆ ತಂದಿರುವ ನಿನ್ನನ್ನೂ ಸುಮ್ಮನೆ ಬಿಡುವುದಾದರು ಹೇಗೆ ಎಂದು ತುಂಬಿದ ಸಿಟ್ಟಿನಿಂದ ಮೂವರು ಅಣ್ಣ-ತಮ್ಮಂದಿರು ಏಕಾ ಏಕಿಯಾಗಿ ಏನನ್ನೂ ಅರಿಯದ, ಯಾವ ತಪ್ಪನ್ನು ಮಾಡದ ಬರೀ ಸುಳ್ಳು ವದಂತಿಗಳಿಗೆ ಬಲಿಯಾಗಿ, ಲಗಳೆಯರ ಕೈಯಿಂದ ಮನಬಂದಂತೆ ಚುಚ್ಚಿಸಿಕೊಂಡು, ಭಯಾನಕವಾದ ರೀತಿಯಲ್ಲಿ ಸಾವನ್ನಪ್ಪುತ್ತಾನೆ. ಲಗಳೆಯರು ವಿಚಾರ ಮಾಡುವ ಗೋಜಿಗೆ ಹೋಗದೆ, ಒಂದು ಅಮಾಯಕ ಜೀವಿಯನ್ನು ಕೊಲೆ ಮಾಡುತ್ತಾರೆ. ಇದರಿಂದ ನಿರಪರಾಧಿಯ ಸಂಗಣ್ಣ ಸಾವನ್ನುಪ್ಪುತ್ತಾನೆ. ಈ ರೀತಿಯಾಗಿ ಸಂಗಣ್ಣನ ಕೊಲೆ ಆಗುತ್ತದೆ ಎಂದು ಬಾಳಣ್ಣ ತಿಳಿದಿರುವುದೇ ಇಲ್ಲ. ಅದು ಏನೇ ಆದರೂ, ತಪ್ಪು ಮಾಡದ ಸಂಗಣ್ಣನ ಸಾವು ದುರಂತದ ಹಾದಿಯಲ್ಲಿ ಅಂತ್ಯವಾಗುತ್ತದೆ.

ಪರವ್ವ
ಬಾಳಣ್ಣ
ಈರಪ್ಪಾ
ಬಸವಂತ
ಇರಪಾಕ್ಷಿ

ಈ ಮೇಲಿನ ಎಲ್ಲಾ ಪಾತ್ರಗಳು ಮೂಲತಃ ಸಂಗ್ಯಾ ಬಾಳ್ಯಾ ಕೃತಿಯಲ್ಲಿ ಇರುವ ಪಾತ್ರದ ಹಾಗೆಯೇ ಇಲ್ಲಿಯೂ ವ್ಯಕ್ತವಾಗಿವೆ. ಆದುದರಿಂದ, ಈ ಪಾತ್ರಗಳಲ್ಲಿ ಅಂಥದೇನೂ ಹೇಳಿಕೊಳ್ಳುವಂಥಹ ವಿಷಯ ಕಂಡು ಬರುವುದಿಲ್ಲಾ, ಪರವ್ವಳ ಕುತಂತ್ರ ಎರಡು ಕೃತಿಗಳಲ್ಲಿ ಒಂದೇ ತೆರನಾಗಿ ಕಂಡು ಬರುತ್ತದೆ. ಅದೇ ರೀತಿಯಾಗಿ ಬಾಳಣ್ಣನ ಪಾತ್ರವೂ ಕೂಡಾ ಅದೇ ವಿಷಯ ವಸ್ತುವಿನ ಮೇಲೆ ರೂಪಗೊಂಡಿದೆ.

ಈರಪ್ಪಾ, ಇರಪಾಕ್ಷಿ ಮತ್ತು ಬಸವಂತರು, ಮೂವರು ಲಗಳೆಯರ ಮನೆತನದವರು ಈ ಕೃತಿಯಲ್ಲಿಯು ಕೂಡಾ, ಒಂದೇ ಪ್ರವೃತಿಯನ್ನು ಅನುಸರಿಸಿಕೊಂಡ ಬಂದಂತಹ ಪಾತ್ರಗಳಾಗಿವೆ. ಒಟ್ಟಾರೆ ಹೇಳುವುದಾದರೆ ಇಲ್ಲಿರುವ ಪಾತ್ರಗಳು, ಅಲ್ಲಿಯೂ ಕಂಡು ಬಂದಿವೆ. ಕೇವಲ ಫತ್ತಾರ ಮಾಸ್ತರನನ್ನು ಬಿಟ್ಟರೆ ಎಲ್ಲವೂ ಒಂದೇ ತೆರನಾಗಿವೆ ಎಂದು ಹೇಳಬಹುದು.

ಅಧ್ಯಾಯ ೪

ಈ ಕೃತಿಯಲ್ಲಿ ಪ್ರಾದೇಶಿಕತೆಯ ಚಿತ್ರಣ

೧. ಪ್ರಾದೇಶಿಕತೆ

೨. ಭಾಷೆ

೩. ಸಂಸ್ಕೃತಿ

1. ಪ್ರಾದೇಶಿಕತೆ

ನಮ್ಮ ಇತಿಹಾಸದ ಪುಟಗಳನ್ನು ತಿರುಗಿಸಿ ನೋಡಿದಾಗ, ಅಥವಾ ಸಾಹಿತ್ಯದ ಘಟ್ಟಗಳನ್ನು ಗುರುತಿಸುತ್ತಾ ಹೋದಂತೆಲ್ಲಾ ನಮಗೆ ಭಿನ್ನವಾದ ಪರ್ವಗಳು ದೊರೆಯುತ್ತವೆ. ಅದರಂತೆ ಸಾಹಿತ್ಯದಲ್ಲಿ ನಾವು ಅನೇಕ ಸ್ಥಿತ್ಯಾಂತರಗಳನ್ನು ಕಾಣುತ್ತೇವೆ. ಭಾರತವು ಅನೇಕ, ಅಂದರೆ ಭಾರತದೇಶ ಅನೇಕ ಭಾಷೆಗಳಿಗೆ ಜನ್ಮ ನೀಡಿರುವ ದೇಶ, ಎಂದು ಹೇಳುತ್ತೇವೆ. ಭಾರತಾಂಬೆಯ ಮಕ್ಕಳಂತೆ, ಇವೆಲ್ಲಾ ಭಾಷೆಗಳು ಹುಟ್ಟಿಕೊಂಡಿವೆ. ಈ ರೀತಿಯಲ್ಲಿ ಭಾಷೆಯ ಉಗಮವಾಗುವ ಕಾರಣವೆಂದರೆ. ನಾವು ಮುಖ್ಯವಾಗಿ ಗಮನಿಸುವ ಅಂಶವೆಂದರೆ ಪ್ರಾದೇಶಿಕತೆ.

ಪ್ರಾದೇಶಿಕತೆ ಎಂದರೇನು ? ಎನ್ನುವ ಪ್ರಶ್ನೆ ಸಹಜವಾಗಿಯೇ ನಮಗೆ ಎದುರಾಗುವ ಪ್ರಶ್ನೆ. ಪ್ರಾದೇಶಿಕತೆ ಎಂದರೆ ನಾವು ಇಲ್ಲಿ ಹೆಚ್ಚಿಗೆ ಹೇಳಲು ಹೋಗುವುದಿಲ್ಲ. ಏಕೆಂದರೆ ಇದೊಂದು ಸಂಶೋಧನೆ ವಿಷಯವಾದುದರಿಂದ ವರ್ಣನೆಯನ್ನು ಪ್ರತಿಬಿಂಬಿಸಿ ಹೇಳುವ ಅವಶ್ಯಕತೆ ಇರುವುದಿಲ್ಲ. ಒಟ್ಟಾರೆ ಹೇಳುವುದಾದರೆ, ಆಯಾ ಪ್ರದೇಶಗಳ ವಿಶಿಷ್ಟತೆಯ ಮೇಲೆ ನಾವು ಪ್ರಾದೇಶಿಕತೆಯನ್ನು ಗುರುತಿಸುತ್ತೇವೆ. ಉದಾ : ಭಾಷೆ, ಸಂಸ್ಕೃತಿ, ಪ್ರಕೃತಿ, ಹಿನ್ನಲೆಯಲ್ಲಿ ಪ್ರಾದೇಶಿಕತೆಯನ್ನು ಗುರುತಿಸುತ್ತೇವೆ.

ಭಾರತ ದೇಶವು ಅನೇಕ ರಾಜ್ಯಗಳನ್ನು ಹೊಂದಿರುವ ದೇಶ. ಈ ದೇಶದಲ್ಲಿ ಆಡಳಿತಾತ್ಮಕ ದೃಷ್ಠಿಯಿಂದ ರಾಜ್ಯಗಳು ಹುಟ್ಟಿಕೊಂಡಿರುವುದು ಅಷ್ಟೆ ಅಲ್ಲ. ಒಂದು ರಾಜ್ಯವನ್ನು ಒಂದೇ ಸನ್ನಿಧಿಯಲ್ಲಿ ಬರುವಂತೆ ನೀಲ ನಕ್ಷೆ ಸಿದ್ದ ಪಡಿಸಬೇಕಾದರೆ, ಅದಕ್ಕೊಂದು ನಿಯಮವಿದೆ. ಒಂದು ರಾಜ್ಯವನ್ನು ನಾವು ಅಧಿಕಾರದ ವ್ಯಾಪ್ತಿಗೆ ತರಬೇಕಾದರೆ. ಅಲ್ಲ ಪ್ರಮುಖವಾಗಿ ಒಂದೆ ಭಾಷೆ ಹೆಚ್ಚಾಗಿರುವ ಭಾಗಗಳನ್ನು ಒಟ್ಟಿಗೆ ಒಗ್ಗೂಡಿಸಿ ಒಂದು ಆಡಳಿತಾತ್ಮಕ ರಾಜ್ಯವನ್ನಾಗಿ ವಿಂಗಡಿಸುತ್ತಾರೆ. ಏಕೆಂದರೆ ಜನರಿಗೆ ಭಾಷೆಯು ತೊಂದರೆಯಾಗಬಾರದು. ಎನ್ನು ದೃಷ್ಠಿಯಿಂದ ರಾಜ್ಯಗಳು ಹುಟ್ಟಿಕೊಂಡಿವೆ. ಅದಕ್ಕಾಗಿ ಭಾಷೆ ದೃಷ್ಟಿಯಿಂದಲೇ

ಕನ್ನಡ ಮಾತನಾಡುವ ಪ್ರದೇಶವನ್ನು ಕರ್ನಾಟಕವೆಂದು
ತೆಲಗು ಮಾತನಾಡುವ ಪ್ರದೇಶವನ್ನು ಆಂದ್ರ ಪ್ರದೇಶ ವೆಂದು
ಮರಾಠಿ ಮಾತನಾಡುವ ಪ್ರದೇಶವನ್ನು ಮಹಾರಾಷ್ಟ್ರವೆಂದು
ತಮಿಳು ಮಾತನಾಡುವ ಪ್ರದೇಶವನ್ನು ತಮಿಳುನಾಡವೆಂದು
ಮಲೆಯಾಳಂ ಭಾಷೆ ಇರುವ ಭಾಗವನ್ನು ಕೇರಳ.

ಎಂತಲೂ ಹೀಗೆ ಆಯಾ ಪ್ರಾದೇಶಿಕತೆಯ ಭಿನ್ನತೆಯ ಮೇಲೆ ಆಡಳಿತಾತ್ಮಕ ದೃಷ್ಟಿಯಿಂದ ಭಾರತದ ಭಾಗಗಳನ್ನು, ಭಾಷೆಯ ಭಿನ್ನತೆಯ ಆಧಾರದ ಮೇಲೆ, ಇವುಗಳನ್ನು ಒಂದೊಂದು ಪ್ರದೇಶಗಳನ್ನಾಗಿ ವಿಂಗಡಿಸಿರುವುದು ಪ್ರಮುಖವಾದ ಉದ್ದೇಶವಾಗಿದೆ.

ಇದನ್ನು ನಾವು ಪ್ರಾದೇಶಿಕತೆ ಎಂದು ಕರೆಯುತ್ತೇವೆ. ಅದೇ ರೀತಿಯಲ್ಲಿ ಕರ್ನಾಟಕವು ಭಾಷೆಯ ದೃಷ್ಟಿಯಿಂದ ಹುಟ್ಟಿಕೊಂಡಿರುವ ನಾಡು ಎಂದು ನಾವು ಅರಿಯಬೇಕು. ಕನ್ನಡ ಭಾಷೆಯು ಎಲ್ಲೆಲ್ಲಿ ತನ್ನ ಪ್ರಾಬಲ್ಯವನ್ನು ಮೆರೆದಿದೆಯೋ ಅಲ್ಲಿಯವರೆಗೆ ಕನ್ನಡ ನಾಡು ರೂಪಗೊಂಡಿರುವುದು ಸತ್ಯ.

ಕರ್ನಾಟಕವು ಒಂದು ಪ್ರಾದೇಶಿಕತೆಯ ನೆಲೆಯ ಮೇಲೆ ರೂಪ ತಳೆದಿರುವ ನಾಡು. ಇಲ್ಲಿಯು ನಾವು ಪ್ರಮುಖವಾಗಿ ನಾಲ್ಕು ಭಾಗಗಳನ್ನು ಭಾಷೆಯ ದೃಷ್ಠಿಯಿಂದ ಕಾಣುತ್ತೇವೆ. ಕರ್ನಾಟಕ ಎಂದ ಮೇಲೆ ಇದರಲ್ಲಿಯು ಪ್ರಾದೇಶಕತೆಯ ವಾಸನೆ ಇದೆ. ಒಂದು ರಾಜ್ಯ ಎಂದ ಮೇಲೆ ಅದರ ಅಕ್ಕಪಕ್ಕದ ಗ್ರಾಮಗಳು ನೆರೆ ಹೊರೆಯ ಗಡಿ ಗ್ರಾಮಗಳು, ಹೀಗಿದ್ದ ಮೇಲೆ ಅಲ್ಲಿಯ ಭಾಷೆಯು ಆಭಾಗದ ಗಡಿಭಾಗಗಳು ಭಾಷೆಯು ಮಿಶ್ರ ಭಾಷೆಗಳಾಗಿರುವುದು ಸಹಜ.

ಮುಂಬೈ ಕರ್ನಾಟಕ ಭಾಗವೆಂದು ಕರೆಯುವ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಮರಾಠಿ ಭಾಷೆಯ ಪ್ರಭಾವವು ಅತಿಯಾಗಿ ಬಳಕೆಯಾಗಿರುವುದು ಸತ್ಯ. ಅಂತೆಯೇ, ಹೈದ್ರಾಬಾದ ಕರ್ನಾಟಕ ಈ ಭಾಗಗಳಲ್ಲಿ ತೆಲಗು ಮಿಶ್ರಿತ ಭಾಷೆಯಾಗಿರುವುದು ಸಹಜವೆ. ಹೀಗಾಗಿ ಮೈಸೂರು, ಪ್ರಾಂತ್ಯ, ಮುಂಬೈ ಪ್ರಾಂತ್ಯ, ಹೈದ್ರಾಬಾದ ಪ್ರಾಂತ್ಯ ಎಂತಲೂ ನಾವು ಪ್ರಾದೇಶಿಕತೆಯಾಗಿ ವಿಂಗಡಿಸಿರುತ್ತೇವೆ.

ಸಂಗ್ಯಾ ಬಾಳ್ಯಾ ನಾಟಕವು ಒಂದು ಪ್ರಾದೇಶಿಕತೆಯ ಚಿತ್ರಣವನ್ನು ಕಲೆ ಹಾಕಿ ನಿಂತಿರುವ ನಾಟಕ ಇದೊಂದು ಸಣ್ಣಾಟ ಎಂದು ನಾವು ಗುರುತಿಸಿದ್ದೇವೆ. ಉತ್ತರ ಕರ್ನಾಟಕ (ಮುಂಬೈ- ಕರ್ನಾಟಕ) ಪ್ರಾದೇಶಿಕತೆಯು ದೃಷ್ಠಿಯಿಂದ ಗುರುತಿಸಲಾಗಿದೆ. ಇಲ್ಲಿಯ ಭಾಷೆಯು ಮರಾಠಿ ಮತ್ತು ಕನ್ನಡ, ಹಿಂದಿ ಭಾಷೆಯ ಪ್ರಭಾವ ಇದ್ದಿರುತ್ತದೆ. ಕನ್ನಡ ಭಾಷೆಯ ಮೇಲೆ ಮರಾಠಿ ಭಾಷೆಯ ಪ್ರಭಾವ ಅತಿಯಾಗಿದೆ. ಕರ್ನಾಟಕಕ್ಕೆ ಸೇರಿರುವ ಗ್ರಾಮಗಳಲ್ಲಿಯು ಕನ್ನಡದ ಕೊಲೆಯಾಗಿದೆ. ಅವರು ಮರಾಠಿ ಭಾಷೆಯೇ ತಮ್ಮ ಮಾತೃಭಾಷೆಯನ್ನಾಗಿಸಿಕೊಂಡಿದ್ದಾರೆ. ನಾವು ಕನ್ನಡದಲ್ಲಿ ಮಾತನಾಡಿದರೂ ಹಾಗೂ ಅವರಿಗೂ ಕನ್ನಡ ಭಾಷೆ ಆಡಲು ಬಂದರೂ, ಅವರು ಕನ್ನಡ ಭಾಷೆಯ ಬಳಕೆ ಮಾಡುವುದಿಲ್ಲ. ಮರಾಠಿಯ ಪ್ರಭಾವ ಈ ಮುಂಬೈ ಕರ್ನಾಟಕದೆಡೆಗೆ ಅತಿಯಾಗಿ ಬಳಕೆಯಾಗಿರುವ ಭಾಷೆಯಾಗಿದೆ.

ಬೆಳಗಾಂವ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಈ ಬೈಲವಾಡ ಗ್ರಾಮದಲ್ಲಿ ಕನ್ನಡ ಪ್ರಧಾನವಾಗಿದ್ದರೂ. ಮರಾಠಿ ಭಾಷೆ ಈ ನಾಟಕದಲ್ಲಿ ಬಳಕೆಯಾಗಿದೆ. ಹೀಗಾಗಿ ಈ ಒಂದು ಜನಪದ ನಾಟಕ ಪ್ರದೇಶಿಕತೆಯನ್ನು ಬಿಂಬಿಸುವ ಒಂದು ಸ್ಪಷ್ಟವಾದ ಪ್ರಾದೇಶಿಕ ನಾಟಕ ಎಂದು ಹೇಳಿದರೆ ಆತಿಶಯೋಕ್ತಿಯಾಗಲಾರದು. ಆ ಪ್ರದೇಶದ ಭಾಷೆ, ನಾಡು ನುಡಿ, ಸಂಸ್ಕೃತಿ, ಆಚಾರ ವಿಚಾರಗಳು, ಇವುಗಳೆಲ್ಲವುಗಳ ಆಧಾರದ ಮೇಲೆಯೇ ಪ್ರಾದೇಶಿಕತೆ ಎಂದು ವಿಭಾಗಿಸುತ್ತೇವೆ.

ನಾಟಕ ಪ್ರಕಾರಗಳಾದ ಸಣ್ಣಾಟ, ದಪ್ಪಿನಾಟ, ದೊಡ್ಡಾಟ, ರಂಗಭೂಮಿ, ವೃತ್ತಿರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿ ಹೀಗೂ ನಾವು ಹೆಸರಿಸುತ್ತಾ ಹೋಗಬಹುದು. ಇದು ಯಾವುದೋ ಸಾಹಿತ್ಯದ ಕ್ಷೇತ್ರವಾಗಿರಲಿ.

ಕಥೆ, ಕಾದಂಬರಿ, ನಾಟಕ, ಸಣ್ಣ ಕಥೆ, ಹೀಗೆ ಯಾವುದು ಪ್ರಕಾರವಾದರೂ. ಆ ಭಾಗದ ಅಂದರೆ, ಸಾಹಿತಿಯ ಮೂಲ ಸ್ಥಾನದ ಪರಿಕಲ್ಪನೆಯ ವಾಸನೆಯು ನಾವು ಅವರು ರಚಿಸಿರುವ ಸಾಹಿತ್ಯ ಪ್ರಕಾರದಿಂದ ತಿಳಿದು ಬರುತ್ತದೆ. ಕುವೆಂಪು ರಚಿಸಿರುವ ಬೆರಳ್ಗೆ ಕೊರಳ ಎಂಬ ನಾಟಕವು ಮಲೆನಾಡಿನ ಚಿತ್ರಣವನ್ನು ತೋರಿಸುವ ಒಂದು ನಾಟಕವಾಗಿದೆ. ಹೀಗೆ ನಾವು ಕಾದಂಬರಿಯಲ್ಲಿಯೂ ರಚನಕಾರನ ಮೂಲ ಸ್ಥಳದ, ಅಂದರೆ ಆತನ ವಾಸ ಸ್ಥಾನ, ಪ್ರದೇಶದ ಚಿತ್ರಣ, ಆ ಕಾದಂಬರಿಯಲ್ಲಿ ಬಂದೆ ಬರುತ್ತದೆ. ಇಂಥ ರೀತಿಯಲ್ಲಿ ಸಾಹಿತ್ಯ ಹುಟ್ಟಲು ಕಾರಣ ಎಂದರೆ ಆ ಭಾಗದ ಜನರು ಆಡುವ ಭಾಷೆಯ ಮೇಲೆ ಅವಲಂಬಿತವಾಗಿರುತ್ತದೆ.

ಒಟ್ಟಾರೆ ನಾವು ಹೇಳುವುದಾದರೆ ಸಂಗ್ಯಾಬಾಳ್ಯ ಒಂದು ಬಯಲಾಟ ಹೌದು ಡಪ್ಪಿನಾಟವು ಹೌದು. ಇದೊಂದು ಬೆಳಗಾಂವ ಜಿಲ್ಲೆಯ ಜನ ಜೀವನ ಚಿತ್ರಿಸುತ್ತದೆ. ನದಿಕೆರೆ, ಊರು, ಬೆಳೆಯುವ ಪೈರು, ಜನರ ವಾಸ. ಹೀಗೆ ಎಲ್ಲವನ್ನು ಎತ್ತಿ ತೋರಿಸುವ ಅಪ್ಪಟ ಪ್ರಾದೇಶಿಕ ನಾಟಕ ಎಂದು ನಾವು ಗುರುತಿಸುತ್ತೇವೆ. ಈ ಒಂದು ಅಂಶವು ಈ ಕೃತಿಯು ಪ್ರಾದೇಶಿಕ ದೃಷ್ಟಿಯಿಂದ ಉತ್ತಮವಾಗಿದೆ.

2. ಭಾಷೆ :-

ಉತ್ತರ ಕರ್ನಾಟಕದ ಭಾಷೆಯ ವೈಶಿಷ್ಟ್ಯವು ಈ ಸಂಗ್ಯಾ ಬಾಳ್ಯ ಕೃತಿಯದಲ್ಲಿ ಎದ್ದು ಕಾಣುತ್ತದೆ. ಭಾಷೆಯು ತುಂಬಾ ಭಿನ್ನವಾದ ರೀತಿಯಲ್ಲಿ ವ್ಯಕ್ತವಾಗಿದೆ. ಭಾಷೆಯ ಉಚ್ಚಾರವು ಭಿನ್ನವಾಗಿದೆ. ಅಪ್ಪಟ ಆಡುಭಾಷೆಯು, ಗ್ರಾಮೀಣ ನುಡಿಗಟ್ಟಿನಿಂದ, ಅರ್ಥವತ್ತಾದ ನುಡಿಗಟ್ಟುಗಳ ಚಿತ್ರಣವು ಈ ನಾಟಕದಲ್ಲಿ ಕಂಡು ಬರುತ್ತದೆ. ಮೊದಲೇ ಬೆಳಗಾಂವ ಜಿಲ್ಲೆಯೂ ಮಹಾರಾಷ್ಟ್ರದ ಗಡಿ ಭಾಗವಾಗಿರುವುದರಿಂದ ಮರಾಠಿ ಭಾಷೆಯ ಪ್ರಭಾವವು ಅತಿಯಾಗಿ ಈ ಕೃತಿಯ ಮೇಲೆ ಅದರ ಉದ್ದಕ್ಕೂ ತನ್ನ ಛಾಪನ್ನು ಮೂಡಿಸದೆ, ಕೃತಿಯು ಕೊನೆಯವರೆಗೂ ಭಾಷೆಯ ಶೈಲಿಯು ಒಂದು ತೆರನಾದ ಧಾಟಿಯಲ್ಲಿ ಸಾಗಿದೆ.

ಬಾಳ್ಯಾನು ಸಂಗ್ಯಾನನ್ನು ಹುಡುಕುತ್ತಾ ಗ್ರಾಮದಲ್ಲಿ ಮನೆಯಿಂದ ಮನೆಗೆ ಅಲೆಯುತ್ತಿರುವಾಗ, ಒಮ್ಮಿಂದೊಮ್ಮೆ ಸಂಗ್ಯಾ ಬಾಳ್ಯಾ ಎದುರು ಬದುರಾಗಿ ಹಾಯುತ್ತಾರೆ. ನಂತರ ಇಬ್ಬರು ಒಂದು ಗಳಿಗೆ ವಿಚಾರಿಸಿದವರಂತೆ ಕಂಡು, ತಮ್ಮ ತಮ್ಮ ಜ್ಞಾಪಕ ಶಕ್ತಿಗೆ ಒಬ್ಬರನ್ನೊಬ್ಬರು ಬಂದು, ತದನಂತರ ಅತಿಯಾದ ಸಂತೋಷದಿಂದ ಕರೆದುಕೊಳ್ಳುತ್ತಾರೆ. ಏ ಸಂಗ್ಯಾ, ಏ ಬಾಳ್ಯಾ ಎಲ್ಲಿದ್ದೋ ಅನ್ನುತ್ತಾ ಆತ್ಮಿಯದಿಂದ ತಬ್ಬಿಕೊಳ್ಳುತ್ತಾರೆ. ಈ ಮಾತು ಅಂದರೆ ಏ ಸಂಗ್ಯಾ, ಏ ಬಾಳ್ಯಾ ಎನ್ನುವುದು ಆತ್ಮಿಯತೆಯಿಂದ ಬಂದ ನುಡಿಗಳು, ಇಂದಿಗೂ ಕೂಡ ಗ್ರಾಮಗಳಲ್ಲಿ ಬಳಕೆಯಲ್ಲಿವೆ. ಯಾರದೇ ಹೆಸರಾದರೂ ಅದಕ್ಕೆ ಒಳ್ಳೆಯ ಸಂಸ್ಕಾರದಿಂದ ಕರೆಯುವುದೇ ಇಲ್ಲ. ಹೀಗಾಗಿ ಇಲ್ಲಿ ಎಲ್ಲಾ ಪಾತ್ರಗಳು. ತಮ್ಮ ಹತ್ತಿರದವರನ್ನು ಗುರುತಿಸುವ ವಿಧಾನ ಈ ತೆರನಾಗಿದೆ.

ಈರಪ್ಪಾ - ಈರ್‍ಯಾ
ಗಂಗವ್ವಾ - ಗಂಗಿ
ಸಂಗಣ್ಣಾ - ಸಂಗ್ಯಾ
ಬಾಳಣ್ಣ - ಬಾಳ್ಯಾ
ಪಾರವ್ವ - ಪರವ್ವ

-ಹೀಗೆ ಅಲ್ಪ ಶಬ್ದಗಳಿಂದಲೇ ಕರೆದುಕೊಳ್ಳುತ್ತಾರೆ. ಅದನ್ನೆ ಯಥವತ್ತಾಗಿ ಕೃತಿಯಲ್ಲಿ ಹಾಗೆಯೇ ಮೂಡಿ ಬಂದಿದೆ.

---

1) ಸಂಗ್ಯಾ ಬಾಳ್ಯಾ : ಚಲನ ಚಿತ್ರದ ಸಂಭಾಷಣೆ :-

ಉತ್ತರ ಕರ್ನಾಟಕದ ವಾಸನೆಯನ್ನು ಬೀರುವ ಕಂಪು ಈ ಕೃತಿಯಲ್ಲಿ ವ್ಯಕ್ತವಾಗಿದೆ. ಕೃತಿಯ ಉದ್ದಕ್ಕೂ ಅನೇಕ ಮರಾಠಿ ಮತ್ತು ಹಿಂದಿ ಭಾಷೆಗಳು ವ್ಯಕ್ತವಾಗಿವೆ. ಗ್ರಾಮೀಣ ಬದುಕಿನ ಆಡು ಭಾಷೆಯ ಶೈಲಿಯಲ್ಲಿ ಈ ಕೃತಿಯು ಜನ್ಮ ತಾಳಿದೆ. ಹಾಗೆಯೇ ಗಾದೆಗಳು, ಒಗಟು, ಒಡಪುಗಳ ಬಳಕೆಯು ಆ ಭಾಗದ ಜನರ ಭಾಷೆಯನ್ನು ಎತ್ತಿ ತೋರಿಸುವ ಕನ್ನಡಿಯಾಗಿದೆ.

ಸಂಗ್ಯಾ ಬಾಳ್ಯಾ ಕೃತಿಯ ತುಂಬೆಲ್ಲಾ ನಾವು ಭಾಷೆಯ ದೃಷ್ಟಿಯಿಂದ ಅವಲೋಕನ ಮಾಡಿದರೆ ದಿನನಿತ್ಯ ಬಳಕೆಯ ಪದ ಪ್ರಯೋಗ, ಈ ಕೃತಿಯಲ್ಲಿ ಒಡ ಮೂಡಿ ಬಂದಿದೆ. ಆ ಭಾಷೆಗೆ ಅಂಟಕೊಂಡು ಅಂದರೆ ಹೊಂದಿಕೊಂಡು ಓದಿದರೆ ಮಾತ್ರ ಅರ್ಥವಾಗುತ್ತದೆ. ಇಲ್ಲದಿದ್ದರೆ ಕಠಿಣ ವೆನಿಸುತ್ತದೆ.

ಗಂಗಿಯು ಸಂಗ್ಯಾ ರಾತ್ರಿ ತನ್ನ ಮನೆಗೆ ಯಾವ ಸಮಯದಲ್ಲಿ ಬರಬೇಕು ಎನ್ನುವುದನ್ನು ತುಂಬಾ ಅರ್ಥವತ್ತಾಗಿ ಮೂಡಿ ಬಂದಿದೆ. ಇದನ್ನು ನಾವು ಒಗಟು ರೂಪದಲ್ಲಿರುವುದನ್ನು ಕಾಣುತ್ತೆವೆ.

ಕಟ್ಟಿ ಕದಲಿರಬೇಕು
ಮರಕ ಮರ ಹೊಂದಿರಬೇಕು
ಮಲಗೀ ಹೂ ಅಳ್ಳಿರಬೇಕು

ಈ ರೀತಿಯಾಗಿ ಹೇಳುವುದರ ಅರ್ಥವನ್ನು ಗಮನಿಸಿದಾಗ ಇದೊಂದು ಗ್ರಾಮೀಣರಲ್ಲಿ ಕಂಡು ಬರುವ ವಿಶೇಷತೆಯನ್ನು ಎತ್ತಿ ತೋರಿಸುತ್ತದೆ. ಇಂಥ ಒಗಟ್ಟಿನ ಅರ್ಥ ಕಟ್ಟಿ ಕದಲಿರಬೇಕು. ಎಂದರೆ ಕಟ್ಟಿಯ ಮೇಲೆ ಕುಳಿತಿರುವ ಜನರು ಮನೆ ಸೇರಿರಬೇಕು. ಎಂದ ಹಾಗೆ. ಮರಕ ಮರ ಹತ್ತಿರಬೇಕು. ಎಂದರೆ ಬಾಗಿಲಿನ್ನು ಗಿಡದ ಕಟ್ಟಿಗೆಯಿಂದ ಮಾಡಿರುವಂಥದ್ದು ಮರಕ್ಕೆ ಮರ ಹತ್ತುವುದೆಂದರೆ ರಾತ್ರಿಯಾಗಬೇಕು ಎಂದು ಮಲಗೀ ಹೂ ಅರಳಿರಬೇಕು ಎಂದರೆ ಚುಕ್ಕೆಗಳು ಬಿದ್ದಿರಬೇಕು ಎಂದು, ಚುಕ್ಕಿಗಳು ಬೀಳುವುದೇ ರಾತ್ರಿಯಲ್ಲಿ ಹೀಗೆಲ್ಲಾ ನಾವು ಇದರ ಅರ್ಥವನ್ನು ಹುಡುಕಿದರೆ, ರಾತ್ರಿ ಸಮಯ ಎಂದು ಖುದ್ದಾಗಿ ಅರ್ಥವಾಗುತ್ತದೆ.

ಈ ರೀತಿಯಾಗಿ ನಾವು ಇನ್ನು ಅನೇಕ ರೀತಿಯ ಗ್ರಾಮೀಣ ಭಾಷೆಯ ಪ್ರಯೋಗ ಈ ಕೃತಿಯಲ್ಲಿ ನಡೆದಿದೆ. ಹಾಗೆಯೇ ಶಬ್ದಗಳ ಅರ್ಥಗಳನ್ನು ನಾವು ಕೃತಿಯಲ್ಲಿ ಕಾಣುತ್ತೇವೆ. ಅವುಗಳು ಈ ಮುಂದಿನಂತಿವೆ.

ಶಬ್ದಾರ್ಥಗಳು :-

ಅಡರು	-	ಏರು, ಹತ್ತು
ಅಡ್ಡಾಡಕ	-	ತಿರುಗಾಡಲು
ಅನ್ನೇದ	-	ಅನ್ಯಾಯದು
ಅರವಿ	-	ಬಟ್ಟೆ
ಆಲುಬತ್ತು	-	ಅವಶ್ಯ, ಅರ್ಜಂಟ

ಇಸಾ	-	ವಿಕ್ಷ, ಕಹಿ
ಈ ಬತ್ತಿ	-	ವಿಭೂತಿ
ಉಳ್ಯಾರ	-	ಬದುಕುವುದಕ್ಕೆ
ಊಂಚ	-	ಊಂಚ, ಅತ್ಯುತ್ತಮ
ಏನಕೇನಾರ	-	ವಾಂಛೆ, ಅತ್ಯುತ್ತಮ ಅಲ್ಪಟ
ಒಗತನ	-	ಸಂಬಂಧ
ಬತ್ತಾರಾ	-	ತೀವ್ರ
ಕಕಲಾತಿ	-	ಅಂತ : ಕರಣ
ಕಠಿನ	-	ಕಠಿಣ
ಕದ, ಕದ್ದ	-	ತಟ್ಟೆ, ಬಾಗಿಲು, ಕದದ, ತಟ್ಟೆಯ
ಕಪಡಾ	-	ಬಟ್ಟೆ
ಕುಂಟತನ	-	ಹಾದರಕ್ಕಾ ಹಾದಿ ಮಾಡುವವ
ಕುನೆ	-	ಖುಷಿ, ಸಂತೋಷ
ಕೂನಾ	-	ಗುರುತ
ಖರೆ	-	ನಿಜ
ಬೋಡಿ	-	ಮುರ್ಖ
ಗಡಾನ	-	ತೀವ್ರ
ಗಡಿಬಿಡಿ	-	ಅವಸರ
ಗರಿಕೀಲಿ	-	ಅವಸರ
ಗೊಡವಿ	-	ಚಿಂತಿ, ಉಸಾಬರಿ
ಚಾಲಿವರದ	-	ಅಗ್ರಾಹ ಪೂರ್ವಕ
ಚಿಲ್ಲರ	-	ಬಿಡಿಕಾಸು
ಚೈ	-	ಜೈನಿ
ಜಗದ	-	ಕೆಲಸ
ಜರಾ	-	ಸ್ವಲ್ಪ
ಜಿಂದಗಾನಿ, ಜೇರಾ	-	ಅಜಾರಿ, ಜಡ್ಡು
ಟೀಪನಿ	-	ವಾಹನದ ಗಾಲಿ ಟ್ಯುಬ
ತರ	-	ಯೋಗ್ಯ

ತಲಬ	-	ಚಟ
ತಾಬಡ ತೋಬಡ	-	ತೀವ್ರ
ತಾರಕ್ಕೆ	-	ಚಿಕ್ಕೆ, ನಕ್ಷತ್ರ
ತಿಕಾಣಿ	-	ಠಿಕಾಣಿ, ಜಾಗೆ
ತೆಕ್ಕಸರಿ	-	ಸರಳವಲ್ಲದ
ದಿನಮೇಕ	-	ದಿನ ಮುಂದೆ ಹೋಗು
ದುಕ್ಕ	-	ದು:ಖ
ನಾಕಮತ	-	ನಾಲ್ಕು ಮಾತ
ನಾಜೂಕ	-	ಸೂಕ್ಷ್ಮ
ನಾಡಾಡಿ	-	ನಾಡು ಅಡ್ಡಾಡುದ
ನಿವಳ	-	ಒಳ್ಳೆದು
ಪಂಟ	-	ಸುಳ್ಳು
ಪಡಪೋಸಿ	-	ವಿಚಾರ ಇಲ್ಲದು
ಪದರಾಗು	-	ಉಡಿಯಲ್ಲಿ
ಪರಸಾದಾ	-	ಪ್ರಸಾದ
ಪಾರಗಾಣಿಸು	-	ಪಾರಮಾಡು, ದಾಟಿಸು
ಪಾವ	-	ಕಾಳು ಅಳಿಯುವ ಸೇರು,
ಪಾವಡ	-	ಟಾವೆಲ್ಲ, ವಸ್ತ್ರ
ಪುರಮಾಸೆ	-	ಒಳ್ಳೆಯ
ಪುರಸೊತ್ತು	-	ಸವಡು
ಪೋಲಿಮಿ	-	ವ್ಯವಸ್ಥೆ
ಫಡಕಿ	-	ಧೋತರು,
ಫಳಾರ	-	ಫಲಹಾರ
ಬಂಗಾಲಿ	-	ಬೆರಕಿ
ಬಡಿವಾರಾ	-	ಜಂಭ
ಬವಳಿಕಿ	-	ಚಕ್ರ ತಿರುಗು
ಬಾಸಿ	-	ಭಾಷೆ: ವಚನ
ಬೆರತಾ	-	ಕೂಡಿಕೊಂಡು
ಬೆಲಿಗೇಡಿ	-	ಬೆಲೆ ಕಳೆದುಕೊಂಡದ್ದು
ಬೇತ	-	ಮೋಸ

ಹೀಗೆ ಹಲವಾರು ಶಬ್ದಗಳು ನಾವು ಸೂಕ್ಷ್ಮವಾಗಿ ಅರ್ಥೈಸಿಕೊಳ್ಳಬೇಕಾಗುತ್ತದೆ. ಈ ಭಾಷೆಯ ಸೊಗಡು ಹೈದರಬಾದ - ಕರ್ನಾಟಕದವರಿಗೆ, ಹೆಚ್ಚಾಗಿ ಅರ್ಥವಾಗದೇ ಇರಬಹುದು. ಅದೇ ರೀತಿ ಮೈಸೂರು ಕಡೆಯವರಿಗೂ ತಟ್ಟನೆ ಅರ್ಥವಾಗದೇ ಇರಬಹುದು. ಏಕೆಂದರೆ ಆ ಭಾಷೆಗಳು ಅವರವರ ಪ್ರದೇಶದವರಿಗೆ ಅರ್ಥವಾಗುವ ರೀತಿಯಲ್ಲಿ ಇರುವುದು ಒಂದು ಸಂತಸದ ಸಂಗತಿ. ಇಲ್ಲಿಯ ವಿಶೇಷತೆ ಅದಾಗಿದೆ, ಏಕೆಂದರೆ ಒಂದೇ ಮಾತ್ರ ಭಾಷೆಯಾದರೂ, ಅದರಲ್ಲಿಯೂ ನಾವು ಭಿನ್ನತೆಯನ್ನು ಕಾಣುತ್ತೇವೆ.

ಸಂಗ್ಯಾ ತನ್ನ ಜೀವದ ಗೆಳೆಯ ಬಾಳ್ಯನನ್ನು ಬಟ್ಟೆ ಕೊಡಿಸಲು, ಬೈಲ ಹೊಂಗಲದ ಮಾರವಾಡಿ ಅಂಗಡಿಗೆ ಕರೆದುಕೊಂಡು ಬರುತ್ತಾನೆ. ಮಾರವಾಡಿ ವ್ಯಾಪಾರಿಯು ವೃತ್ತಿಯ ದೃಷ್ಠಿಯಿಂದ ಬಟ್ಟೆ ಮಾರುವವ ಕನ್ನಡ ಭಾಷೆ ಮಾತನಾಡಲು ಬರದೇ ಇದ್ದರೂ ಕೂಡ ಅಲ್ಪ ಸ್ವಲ್ಪ ಕನ್ನಡ ಮಾತನಾಡುವ ರೀತಿಯು ನೋಡುವ ದೃಷ್ಠಿಯಿಂದ ಹಾಸ್ಯವನ್ನು ಪ್ರತಿಬಿಂಬಿಸುತ್ತದೆ.

ಹಾಗೆಯೇ ಕೆಲವೊಂದು ಅನ್ಯಭಾಷೆಯ ಪದಗಳು ಕೂಡ ಕೃತಿ ಉದ್ದಕ್ಕೂ ಸಂದರ್ಭಕ್ಕೆ ತಕ್ಕಂತೆ ಸೇರ್ಪಡೆಗೊಳ್ಳುತ್ತಾ ಹೋಗಿವೆ. ಜಾನಪದ ಕೃತಿಕಾರನಿಗೆ ಕೆಲವೊಂದು ಕನ್ನಡ ಪದಗಳು ಅವರ ಗಮನಕ್ಕೆ ಬರುವುದೆಯಿಲ್ಲ ಏಕೆಂದರೆ ಆ ಪದಗಳಿಗೆ ಕನ್ನಡದಲ್ಲಿ ಇರುವ ಅರ್ಥ ಅವರಿಗೆ ಗಮನಕ್ಕೆ ಬರುವುದಿಲ್ಲ. ಕಾರಣ ಪತ್ತಾರ ಕವಿಯು ಅಕ್ಷರ ಪಾಂಡಿತ್ಯಕ್ಕಿಂತ ಆತನಲ್ಲಿ ಜ್ಞಾನ ಪಾಂಡಿತ್ಯ ಹೆಚ್ಚು. ಹೀಗಾಗಿ ಕೃತಿಕಾರ ಅನ್ಯಭಾಷೆ ಶಬ್ದಗಳು ಯಥಾವತ್ತಾಗಿ. ಹಾಗೆಯೇ ಕೃತಿಯಲ್ಲಿ ಸೇರಿಸಿರುತ್ತಾರೆ. ಹೀಗಾಗಿ ಈ ಒಂದು ಪ್ರಮುಖ ಕೃತಿಯಲ್ಲಿ ಕೆಲವೊಂದು ಬೇರೆ ಭಾಷೆಯ ಶಬ್ದಗಳು ಕೂಡ ಇಲ್ಲಿ ಬಳಕೆಯಾಗಿವೆ.

ತಾಬಡು ತೋಡ	-	ತೀವ್ರ
ಜಿಂದಗಾನಿ	-	ಸಂಸಾರ
ತಲಬ	-	ಚಟ
ಮಸಲತ್ತ	-	ಹೊಂಚು ಹಾಕು
ಮರ್ಜಿ	-	ಮನಸ್ಸು
ಮುಜರಿ	-	ನಮಸ್ಕಾರ
ಮೇರ್ಹಾನಕಿ	-	ಉಪಕಾರ

ಹೀಗೆ ಕೃತಿಯ ಉದ್ದಕ್ಕೂ ಅನ್ಯಭಾಷೆಯು ಪ್ರಭಾವವು ಅತಿಯಾಗಿ ಬಳಕೆಯಾಗಿರುತ್ತದೆ.

ಸಂಸ್ಕೃತಿ

ಸಂಸ್ಕೃತಿಯ ಬಗ್ಗೆ ನಾವು ಈಗಾಗಲೇ ಅನೇಕ ಕಡೆ ಇದರ ಬಗ್ಗೆ ಅನೇಕರು, ಅನೇಕ ರೀತಿಯಲ್ಲಿ ವ್ಯಾಖ್ಯಾನವನ್ನು ಕೊಟ್ಟಿರುವರು. ಸಂಸ್ಕೃತಿಗೆ ಹಲವಾರು ಸಾಹಿತಿಗಳು, ಪಾಶ್ಚಾತ್ಯಸಾಹಿಗಳು ಸಮಾಜ ಶಾಸ್ತ್ರಜ್ಞರು, ಇತಿಹಾಸಕಾರರು, ಲಾಕ್ಷಣಿಕರು, ವಿದ್ವಾಂಸರು, ಹೀಗೆ ಹತ್ತು ಹಲವಾರು ಜನರು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಗಳನ್ನು ಕೊಟ್ಟಿರುವರು. ಅವರು ಯಾವ ರೀತಿಯಲ್ಲಿ ಹೇಳಿದರೂ, ಯಾವ ಧಾಟಿಯಲ್ಲಿಯೇ ಹೇಳಿದರೂ, ಅದರ ಒಳಗಡೆ ಇರುವ ಹುರುಳು ಮಾತ್ರ ಒಂದೆಈ ಹೀಗಾಗಿ ಹೇಳುವ ಪದ್ಧತಿಯಲ್ಲಿ ಭಿನ್ನವಾದರೂ ಕೂಡ ಅರ್ಥ ಮಾತ್ರ ಒಂದೆ ತೆರನಾಗಿ ಇರುವುದರಿಂದ, ಇಲ್ಲಿ ಸಂಸ್ಕೃತಿ ಪದದ ಮೂಲ ಜಾಡನ್ನು ಹಿಡಿದು ಹೋಗುವ ಕೆಲಸಕ್ಕೆ ಕೈ ಹಾಕುವುದಿಲ್ಲ. ಮುಖ್ಯವಾಗಿ ಸಂಸ್ಕೃತಿ ಪದದ ಅರ್ಥಗೊತ್ತಿದ್ದರೆ ಸಾಕು. ಈ ಅಧ್ಯಯನದಲ್ಲಿ ನಾವು ವಿಶ್ಲೇಷಣೆಯನ್ನು ಹುಡುಕುತ್ತಾ ಹೋಗುತ್ತಿಲ್ಲ. ಮುಖ್ಯವಾಗಿ ಸಂಸ್ಕೃತಿ ಎಂದರೇನು ? ಎನ್ನುವುದಕ್ಕೆ ಸ್ವಲ್ಪ ಹೇಳಲು ಪ್ರಯತ್ನಿಸುತ್ತೇವೆ.

ಸಂಸ್ಕೃತಿ ಎಂದರೆ ? ಮೂಲತ : ಅದು ಆಯಾ ಪ್ರದೇಶದ ಜನ ಜೀವನ, ಅವರ ಬದುಕು, ಉಡುಗೆ ತೊಡುಗೆ, ಕಲೆ ವಾಸ್ತು ಶಿಲ್ಪಿ, ಆಚಾರ ವಿಚಾರ, ನಡೆನುಡಿ ರೂಢಿ ಕಂದಾಚಾರಗಳು, ಬದುಕಿನ ರೀತಿ ನೀತಿ, ಮೂಡನಂಭಿಕೆಗಳು, ಪೂಜೆ ಪುನಸ್ಕಾರಗಳು, ಬದುಕುವ ರೀತಿ, ಹೀಗೆ ಅಲ್ಲಿಯ ಸಮಗ್ರ ಚಿತ್ರಣವನ್ನು ಅಧ್ಯಯನ ಮಾಡುವುದೇ ಸಂಸ್ಕೃತಿ. ಹೀಗೆ ನಾವು ಸಂಸ್ಕೃತಿಯ ಪದದ ಬಗ್ಗೆ ಅರಿವು ಇದ್ದರೆ ಸಾಕು, ಅದೇ ಮುಖ್ಯ.

ಸಂಗ್ಯಾ ಬಾಳ್ಯಾ ನಾಟಕದಲ್ಲಿಯೇ ಆಗಲಿ ಅಥವಾ ಖರೇ ಖರೇ ಸಂಗ್ಯಾಬಾಳ್ಯಾ ನಾಟಕದಲ್ಲಿಯೇ ಆಗಿರಲಿ, ಇಲ್ಲಿಯ ಸಂಸ್ಕೃತಿ ಮಾತ್ರ ಒಂದೆ ಆಗಿದೆ. ಈ ಎರಡು ಕೃತಿಗಳಲ್ಲಿ ಸಂಸ್ಕೃತಿಯ ಬಗ್ಗೆ ನಾವು ನೋಡಿದಾಗ, ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ.

ಬೈಲವಾಡ ಮತ್ತು ಬೈಲಹೊಂಗಲು ಪ್ರದೇಶಗಳು ಹಳ್ಳಿಯ ಜನಜೀವನವನ್ನು ಪ್ರತಿಬಿಂಬಿಸುವ ಮತ್ತು ಗ್ರಾಮೀಣ ಸಂಸ್ಕೃತಿಯನ್ನು ಬಿಂಬಿಸುವ ಕೃತಿಗಳು. ಇಲ್ಲಿ ನಾವು ಮುಖ್ಯವಾಗಿ ನೋಡುವ ಸಂಗತಿಗಳೆಂದರೆ, ಕೆರೆಯ ದಂಡೆಯ ಮೇಲಿರುವ ಗ್ರಾಮುಗಳ ಚಿತ್ರಣ, ಗಿಡ ಮರಗಳ ಸಂಗಮ, ಪ್ರಕೃತಿಯ ಸುಂದರ ಬಟ್ಟ ಬಯಲು, ಗಿಡ ಮರಗಳು, ಜುಳು ಜುಳು ಹರಿಯುವ ಕೆರೆ, ನೀರು, ಗ್ರಾಮಕ್ಕೆ ಹೊಂದಿಕೊಂಡಿರುವ ಮರಡಿ ಬಸವಣ್ಣಾನ ದೇವಾಲಯ ಇದ್ದಿರುತ್ತದೆ. ಎತ್ತರ ಪ್ರದೇಶದ ದೊಡ್ಡ ಗುಡ್ಡದ ಮೇಲೆ ಕಟ್ಟಿರುವ ಒಂದು ಗುಡಿ. ಪ್ರತಿ ವರ್ಷವೂ ಚಿಕ್ಕದಾದರೂ ಚೊಕ್ಕ ಎಂಬಂತೆ ಈ ಜಾತ್ರೆ. ಈ ಮರಡಿ ಬಸವಣ್ಣನ ಜಾತ್ರೆಯು ಇಡಿ ಊರಿಗೂರೆ ಸಂಭ್ರಮದಿಂದ ಆಚರಿಸುವಂಥದ್ದು. ಊರಿನ ಜನರು ಜಾತ್ರೆಗೆ ಹೋಗಿ ದೇವರ ದರ್ಶನ ಪಡೆಯುವುದು, ಈ ಜಾತ್ರೆಯಲ್ಲಿ ಹತ್ತು ಹಲವಾರು ಸಿಹಿ ಪದಾರ್ಥಗಳನ್ನು ಸಿದ್ದಪಡಿಸಿ ದೇವರಿಗೆ ನೈವಿದ್ಯ ಸಲ್ಲಿಸುವುದು, ಅಂದ ಚೆಂದದ ಹೊಸ ಹೊಸ ಉಡುಗೆ – ತೊಟ್ಟು ಗಂಡು ಹೆಣ್ಣು ಮಕ್ಕಳು, ಸರಿಸಮಾನರಾಗಿ, ಯಾವ ಜಾತಿ ಮತ ಭೇದ ಅನ್ನದೆ ನಾವೆಲ್ಲರೂ ಒಂದೇ ಎನ್ನುವಂತೆ ಎಲ್ಲರೂ ಜಾತ್ರೆಯಲ್ಲಿ ಪಾಲ್ಗೊಳ್ಳುವುದು. ಒಂದು ವಿಶೇಷ ಹಾಗೆಯೇ ಈ ಜಾತ್ರೆಯಲ್ಲಿ ಪಗಡೆ ಆಡುವುದು, ಸಣ್ಣ ಸಣ್ಣ ನಾಟಕ ಪ್ರದರ್ಶಿಸುವುದು, ಹತ್ತು ಹಲವಾರು ಜನಪದ ಕಲೆಗಳನ್ನು ತೋರಿಸುವುದು ಜಾತ್ರೆಯ ವೈಶಿಷ್ಟ್ಯ ಎಂದು ನಾವು ಹೇಳಲು ಉತ್ಸುಕರಾಗುತ್ತೇವೆ.

ಇನ್ನೂ ಈ ಭಾಗದ ಜನರ ಉಡುಗೆ, ತೊಡುಗೆಯ ಉತ್ತರ ಕರ್ನಾಟಕದ ಸಂಸ್ಕೃತಿಯನ್ನು ಬಿಂಬಿಸುವ ಂಥ ವಿಶೇಷತೆಯಿಂದ ಕೂಡಿದೆ. ಉಡುಗೆ - ತೊಡುಗೆಗಳು ಹೆಚ್ಚಾಗಿ ಕಂಡು ಬರುವುದು. ಗಂಡಸಿನ ಉಡುಗೆ ಎಂದರೆ, ಧೋತಿ, ಅಂಗಿ, ತಲೆಗೊಂದು ಜರತಾರಿ ರುಮಾಲು, ಕೈಯಲ್ಲಿ ಒಂದು ಬಡಿಗೆ, ಕಾಲಲ್ಲಿ ಖಡ್ಗ ಇದು ಗಂಡಸರು ಧರಿಸುವ ಉಡುಗೆಗಳು. ಹಣೆಯ ಮೇಲೆ ವಿಭೂತಿ, ವಿಭೂತಿಯ ಮಧ್ಯದಲ್ಲಿ ಒಂದು ಕುಂಕುಮದ ಬೊಟ್ಟು ಇಷ್ಟು ಗಂಡಸರಿಗೆ ಇರುವ ಉಡುಗೆ, ತೊಡುಗೆಗಳು.

ಇನ್ನು ಮುಂದೆ ಸ್ತ್ರೀಯರಿಗೆ ಎಂದರೆ ಚಂದ್ರ ಕಾಳಿ ಸೀರೆ, ಮೂಗಿಗೆ ಒಂದು ಒಳ್ಳೆಯ ಆಕಾರದ ಓಲೆ, ಕೈಯಲ್ಲಿ ಬಳೆ, ಸೊಂಟಕ್ಕೆ ತಪ್ಪದೆ ಸೊಂಟ ಪಟ್ಟಿ, ಹಣೆಯ ಮೇಲೆ ವಿಭೂತಿ, ಗಂಡು ಕಚ್ಚೆ, ಕಿವಿಯೋಲೆ, ಕೊರಳುಸರ, ಕಾಲು ಚೈನ ಕುಪ್ಪಸ, ತಲೆಯ ಮೇಲೆ ಸೀರೆಯ ಸೆರಗು ಇದು ಗಂಡಸರಿಗೆ ಕೊಡುವ ಮರ್ಯಾದೆ. ಒಂದೊಂದು ಸಲ ಹೆಣ್ಣು ಮಕ್ಕಳು ತಮ್ಮ ತಮ್ಮಲ್ಲಿಯೇ ಮಾತನಾಡುತ್ತ ಮೈಮರೆತಿರುವಾಗ ದಿಢೀರನೇ ಒಬ್ಬ ಪುರುಷ ಕಂಡರೆ ಥಟ್ಟನೆ ತಮ್ಮ ಸೀರೆಯ ಸೆರಗನ್ನು ತಲೆಯ ಮೇಲೆ ಹೊದ್ದುಕೊಳ್ಳುತ್ತಾರೆ. ಈ ಸಂಪ್ರದಾಯ ಇಂದಿಗೂ ಅಲ್ಲಿ ಬದುಕಿ ಉಳಿದಿದೆ.

ಪುರುಷ ಪ್ರಧಾನತೆಯನ್ನು ಪ್ರತಿ ಬಿಂಬಿಸುವ ಸಂಪ್ರದಾಯ ಆ ಭಾಗದ ವೈಶಿಷ್ಟ್ಯ, ಪ್ರತಿಯೊಂದು ವಿಷಯವು ಗಂಡು ಪಾತ್ರಗಳೇ ನಿಭಾಯಿಸುತ್ತವೆ. ಗ್ರಾಮದಲ್ಲಿ ಸ್ತ್ರೀಯರಿಗೆ ಅಷ್ಟೊಂದು ಮನ್ನಣೆ ಕೊಡದಿರುವುದು, ಒಂದು ವಿಪರ್ಯಾಸವೇ ಸರಿ. ಪ್ರತಿಯೊಂದು ಮನೆತನವು ರೈತರ ಬದುಕನ್ನು ಎತ್ತಿ ತೋರಿಸುತ್ತದೆ. ಬೈಲಹೊಂಗಲದ ಮುಖ್ಯ ವೃತ್ತಿ ಕಸಬು ಎಂದರೆ ಒಕ್ಕಲುತನ. ಆ ನಾಟಕಗಳಲ್ಲಿ ನಾವು ಮುಖ್ಯವಾಗಿ ತಿಳಿದಿರುವ ಅಂಶವೆಂದರೆ. ಯಾವ ವ್ಯಕ್ತಿಯ ಮೇಲೂ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಅಲ್ಲಿ ಆಗದಿರುವುದು ಒಂದು ಹೆಮ್ಮೆಯ ವಿಷಯ. ಅಪ್ಪಟ ನಮ್ಮ ನಾಡಿನ ಸಂಸ್ಕೃತಿಯನ್ನು ಎತ್ತಿ ತೋರಿಸುವ ಕೈಗನ್ನಡಿಯಾಗಿದೆ. ಸ್ತ್ರೀ ಪಾತ್ರವೇ ಆಗಲಿ ಪುರುಷ ಪಾತ್ರವೇ ಆಗಲಿ ಅವರ ಉಡುಗೆಯು ನಮ್ಮ ದೇಶದ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಬ್ರಿಟಿಷ ಸರಕಾರದ ದಬ್ಬಾಳಿಕೆಯಲ್ಲಿಯೂ ನಮ್ಮ ಸಂಸ್ಕೃತಿಗೆ ಧಕ್ಕೆಯಾಗದಂತೆ ನೋಡಿಕೊಂಡಿದ್ದಾರೆ.

ಜಾತ್ರೆಯ ಸಮಯದಲ್ಲಿ ನರ್ತನ, ಕುಣಿತ, ಬಡಿತ ಎಲ್ಲವೂ, ನಮ್ಮ ನಾಡಿದ್ದೆ. ಜಾತ್ರೆಯಲ್ಲಿ ಹಾಡುಗಳು, ಭಜನೆ, ಗಟ್ಟಿಮೇಳ ಹೀಗೆ ಹತ್ತು ಹಲವಾರು ಜನಪಾದ ಕಲೆಗಳು ಸಂಗ್ಯಾಬಾಳ್ಯಾ ಚಲನಚಿತ್ರಗಳಲ್ಲಿಯೂ ಪ್ರದರ್ಶನವಾಗಿವೆ. ಸಂಸ್ಕೃತಿಯು ನಮ್ಮ ನಾಡಿನ ಪರಂಪರೆಯನ್ನು ಎತ್ತಿ ತೋರಿಸುವಂಥ ಕೈಗನ್ನಡಿಯಾಗಿದೆ. ಸಮಾಜದಲ್ಲಿ ಹೆಂಡತಿಯಾದವಳು, ತನ್ನ ಗಂಡನನ್ನು ಬಿಟ್ಟು ಬೇರೆ ಮತ್ಯಾವ ಗಂಡನನ್ನು ಕಣ್ಣು ಎತ್ತಿ ನೋಡದವಳು, ನೋಡಲು ಬಾರದು. ಏಕೆಂದರೆ ಅದೊಂದು ಸಂಸ್ಕೃತಿಯ ಪ್ರತೀಕವಾಗಿದೆ. ಗಂಡನಾದವನು ಹೆಂಡತಿಯ ಯೋಗಕ್ಷಮತೆಯೊಂದಿಗೆ, ಮನೆಯ ಜವಾಬ್ದಾರಿ ಹೊರಬೇಕು, ಹೀಗಿರುವಾಗ ಅದೊಂದು ಸುಸಂಸ್ಕೃತ ಮನೆತನವೆನಿಸುತ್ತದೆ.

ಇಲ್ಲಿಯ ಈ ಕೃತಿಗಳಲ್ಲಿ ಸಂಸ್ಕೃತಿಗೆ ಧಕ್ಕೆಯಾಗಿರುವುದಂತು ನಿಜವಾದ ಸಂಗತಿಯೇ, ಹೇಗಂದರೆ, ಮೊದಲು ಇಲ್ಲಿ ಹೆಜ್ಜೆ ತಪ್ಪಿರುವುದು. ಗಂಗಿಯ ಗಂಡ ಈರ್ಯಾನೇ ಏಕೆಂದರೆ ಆತನಿಗೆ ತಲೆಯಲ್ಲಿ ಮುಖ್ಯವಾಗಿ ಇರುವ ಅಂಶವೆಂದರೆ ವ್ಯಾಪಾರ, ವ್ಯಾಪಾರಕ್ಕೆ ಹೆಚ್ಚಿನ ಮನ್ನಣೆಯನ್ನು ಕೊಟ್ಟು ಬದುಕುವಂತವ. ಗಂಗಿಯನ್ನು ಮದುವೆ ಆದಂದಿನಿಂದ, ಹೊಸತರದಲ್ಲಿ ಈರ್ಯಾನ ಹೆಂಡತಿಯಾಗಿ ಮನೆಗೆ ಬಂದ ಹೆಂಡತಿಯನ್ನು ಮನೆಯಲ್ಲಿಯೆ ಬಿಟ್ಟು ಬಳ್ಳಾರಿ, ಹುಬ್ಬಳ್ಳಿಗೆ ವ್ಯಾಪಾರ ಎಂದು ಹೊರಟು ಹೋಗುವವ. ಹೆಂಡತಿಯ ಮನಸ್ಸಿನ ಜವಬ್ದಾರಿಯೇನು? ಅವಳ ಅಂತರಂಗವೇನು ? ಅವಳಿಗೂ ತನ್ನದೆ ಆದ ಆಸೆ ಆಕಾಂಕ್ಷೆಗಳು ಇವೆ. ಎಂದು ಅರಿಯುವ ಗೋಜಿಗೆ ಹೋಗುವುದೇ ಇಲ್ಲ. ಹೀಗಾಗಿ ಹೆಂಡತಿಯ ಇದರಿಂದ ಬೇಸತ್ತು.

ಮುಂದೆ ಗಂಗಾ ಅನಾವಶ್ಯಕವಾಗಿ ಕೆಟ್ಟ ಪ್ರಮಾದಗಳಿಗೆ ಗುರಿಯಾಗಬೇಕಾಗುತ್ತದೆ. ಇಲ್ಲಿ ಹೆಂಡತಿಯ ಮನಸ್ಸು ಅರಿಯದೇ ಇರುವದು ಗಂಡಿನ ಸಂಸ್ಕೃತಿಯಲ್ಲ. ಆದುದರಿಂದಲೇ ಗಂಗಿಯು ಮುಂದೆ ಅನೇಕ ಅನಾಹುತಗಳಿಗೆ ಗುರಿಯಾಗುತ್ತಾಳೆ. ಒಂದು ವೇಳೆ ಗಂಡನಾದ ಈರ್ಯಾ ಎಲ್ಲವನ್ನು ಅರಿತು, ಹೆಂಡತಿಯ ಬಯಕೆಯನ್ನು ಈಡೇರಿಸಿದರೆ ಯಾವುದೇ ಸಮಸ್ಯೆಯಾಗುತ್ತಿರಲಿಲ್ಲ. ವ್ಯಾಪರಕ್ಕೆ ಎಷ್ಟು ಮಹತ್ವ ಕೊಟ್ಟಿರುವನೋ ಅಷ್ಟೇ ಮಹತ್ವ ಗಂಗಿಯ ಬದುಕಿಗೂ ಕೊಟ್ಟರೆ. ಸಮಸ್ಯೆಯೇ ಉದ್ಭವಿಸುತ್ತಿರಲಿಲ್ಲ. ಇಲ್ಲಿ ಸಂಸ್ಕೃತಿ ಸತ್ತು ಹೋಗಿದೆ.

ಪರವ್ವಳ ಪಾತ್ರದಿಂದ ಸಂಸ್ಕೃತಿಯು ಅನೈತಿಕತೆಯ ದಾರಿ ಹಿಡಿದಿದೆ. ಗಂಡನಾದವನು ಊರು ಬಿಟ್ಟು ವ್ಯಾಪಾರಕ್ಕೆಂದು ಅಲೆಯುತ್ತಿರುವ ಮಾತ್ರಕ್ಕೆ. ಗಂಗಿಯನ್ನು ಅದೇ ವಿಷಯ ತಲೆಯಲ್ಲಿ ಹಾಕಿ ಅವಳ ಬದುಕನ್ನು ಮೂರಾಬಟ್ಟೆ ಮಾಡುತ್ತಾಳೆ. ನಿನ್ನ ಗಂಡ ನಿನ್ನ ಬಗ್ಗೆ ಸರಿಯಾಗಿ ತಿಳಿದುಕೊಂಡಿಲ್ಲ. ಆತ ಬರಿ ಹಣಕ್ಕೆ ಗಂಟು ಬೀಳುವ ಧನದಾಹಿ, ಎಂದು ಗಂಗಿಯ ಮನಸ್ಸಿನ ದಾರಿಯನ್ನು ತಪ್ಪಿಸುತ್ತಾಳೆ. ಈ ರೀತಿ ದಾರಿ ತಪ್ಪಿಸುವ ಕೆಲಸ ಪರವ್ವಳ ಸಂಸ್ಕೃತಿಯಲ್ಲ ಎಂದು ನಾವು ಇಲ್ಲಿ ಅರ್ಥೈಸಬೇಕಾಗುತ್ತದೆ.

ಪತ್ತಾರ ರಾಯಪ್ಪನನ್ನು ನಾವು ಸಂಸ್ಕೃತಿಯ ದೃಷ್ಟಿಯಿಂದ ಗಮನಿಸಿದಾಗ, ಆತನು ಒಬ್ಬ ಮಾನವಿಯ ಮೌಲ್ಯಗಳಿರದ ಕಾಮ ಪಿಶಾಚಿಯಂದು ದೂರಿದರೂ ತಪ್ಪಾಗುವುದಿಲ್ಲ. ಗಂಗಿ ಒಬ್ಬ ಸುರಸುಂದರಿ ಹೆಣ್ಣು ಎನ್ನುವುದನ್ನು ತಲೆಯಲ್ಲಿ ತುಂಬಿಕೊಂಡಿರುವವ ಮತ್ತೆ ಯಾವ ಸುತ್ತಮುತ್ತಲಿನ ಸಾಮಾಜಿಕ ಚೌಕಟ್ಟುಗಳನ್ನು ಗಮನಿಸಿರದ ವ್ಯಕ್ತಿಯೇ ಅಲ್ಲ. ಗಂಗಿಗೆ ಒಂದು ಸುಂದರವಾದ ತನ್ನದೇಆದ ಬದುಕು ಇದೆ. ಒಬ್ಬ ಜವಾಬ್ದಾರಿಯುತನ ಹೆಂಡತಿ ಇದ್ದಾಳೆ. ಮೇಲಾಗಿ ಅವಳು ತನ್ನ ಅಂಗಡಿಗೆ ಬಂಗಾರದ ಒಡವೆಗಳು ಮಾಡಿಸಿಕೊಳ್ಳಲು ಬಂದಿರುವಳು. ಗಿರಾಕಿ ಎಂದ ಮೇಲೆ ವ್ಯಾಪಾರಸ್ಥರಿಗೆ ಅವರೇ ದೇವರು. ಅವರನ್ನು ನಾವು ಗೌರವಿಸಬೇಕು. ಅವರ ಮರ್ಯಾದೆಗೆ ಧಕ್ಕೆ ತರುವ ಪ್ರವೃತ್ತಿ ನಮ್ಮಲ್ಲಿ ಎಂದು ಬರಕೂಡದು. ಅದನ್ನು ಅರಿಯುವ ಗೋಜಿಗೆ ಇವನ್ನು ಹೋಗುವುದೇ ಇಲ್ಲ. ಸೌಂದರ್ಯವತಿಯೆಂದು, ಬಾಹ್ಯ ಪ್ರಪಂಚದ ಚಲುವುವನ್ನು ಅರಸಿ, ಹೊರಟಿರುವ ಒಬ್ಬ ನೈತಿಕೆಯಿಲ್ಲದ ಪುರುಷನಾಗಿ ಕಂಡುಬರುತ್ತಾನೆ. ಹೀಗಾಗಿ ಗಂಗೆಯ ಬದುಕಿನಲ್ಲಿ ಚೆಲ್ಲಾಟವಾಡಿ ಒಂದು ಅಮಾಯಕ ಹೆಣ್ಣಿನ ಬದುಕಿನ ಉದ್ದಕ್ಕೂ ಮುಳ್ಳಿನ ಹಾಸಿಗೆಯನ್ನು ಸೃಷ್ಟಿಸಿರುವ, ಮೌಲ್ಯಗಳಿರದ, ಸಂಸ್ಕೃತಿ ಇರದ, ಪಶುವೃತ್ತಿಯ ಪ್ರಾಣಿಯಂತೆ ಕಾಣುತ್ತಾನೆ.

ತನಗೆ ಎಲ್ಲವೂ ಗೊತ್ತಿದ್ದೂ ಕೂಡ ಕೆಟ್ಟ ನೀತಿಯನ್ನು ಅನುಸರಿಸಿ ಸುಂದರವಾದ ಬದುಕನ್ನು ಹೇಳ ಹೆಸರಿಲ್ಲದಂತೆ ಮಾಡಿ ಗಂಗಿಯನ್ನು ಮನೆಯಿಂದ ಹೊರದಬ್ಬುವುದು, ಅಮಾಯಕ, ಏನನ್ನು ಅರಿಯದ ಸಂಗ್ಯಾನನ್ನು ಕೊಲೆಯಲ್ಲಿ ಅಂತ್ಯಗೊಳಿಸುವುದು, ಖರೇ ಖರೇ ಸಂಗ್ಯಾ ಬಾಳ್ಯಾ ನಾಟಕದಲ್ಲಿ ಮುರಿದು ಹೋಗಿರುವ ಸಂಸ್ಕೃತಿಯಂದೆ ಹೇಳಬಹುದು. ಸಂಸ್ಕೃತಿ ಇಲ್ಲದವನ ನೀತಿ, ರೀತಿಗಳು ಎಂದಿಗೂ ಒಬ್ಬ ಮಹಾನ ಪುರುಷನನ್ನು ಹುಟ್ಟು ಹಾಕುವುದಿಲ್ಲ. ಆತ ಜೀವಿಸಿದರೂ ಅಸಂಸ್ಕೃತಿಯ ನೆಲೆಯ ಮೇಲೆ ಬದುಕುತ್ತಾನೆ.

ಸಂಗ್ಯಾ ಬಾಳ್ಯಾ ನಾಟಕದಲ್ಲಿ ಸಂಸ್ಕೃತಿಯು ಸತ್ತು ಹೋಗಿದೆ. ಸಂಗ್ಯಾ ಗಂಗಿಯನ್ನು ಕೊರಳ ಸರಗಿ ಖುದ್ದಾಗಿ ತಾನೇ ಕದಿಯುತ್ತಾನೆ. ಸರಗಿ ಕಳೆದುಕೊಂಡ ಗಂಗಾ ಹುಚ್ಚಳಂತಾಗುತ್ತಾಳೆ. ಮುಂದೆ ಇದೆ ಒಂದು ಸಮಯ ಸೃಷ್ಟಿಸಿ ಗಂಗಿ ಸಂಗ ಮಾಡಿರುವ ಸಂಗ್ಯಾ - ಈ ಕೃತಿಯಲ್ಲಿ ಕೊಲೆಯಾಗಿ ಬಿಡುತ್ತಾನೆ.

ಸಾಮಾಜಿಕ ಮೌಲ್ಯಗಳು ಸಂಬಂಧಗಳು ಎಲ್ಲವೂ ನಮ್ಮ ನಾಡಿನ ಸಂಸ್ಕೃತಿಯನ್ನು ಬಿಂಬಿಸುವ ಪ್ರತೀಕವಾಗಿದೆ. ಎಂದು ಅರ್ಥೈಸುವುದು ಅತ್ಯವಶಕ. ಉಡುಗೆ ತೊಡಗೆ ಮಾತು - ಮೈಲಿಗೆ ಓೀಗೆ ಹತ್ತು ಹಲವಾರು ಸನ್ನಿವೇಷದಲ್ಲಿ ನಮ್ಮ ಸಂಸ್ಕೃತಿ ಎದ್ದು ಕಾಣುತ್ತದೆ. ಹಿರಿಯರನ್ನು ಗೌರವಿಸಬೇಕು, ನಮಸ್ಕರಿಸಬೇಕು. ಏಕೆಂದರೆ ಇದು ನಮ್ಮ ಸಂಸ್ಕೃತಿ. ಹಿರಿಯರಾದರೇನು ಅವರಿಗೆ ಏಕೆ ನಾವು ಗೌರವಿಸಬೇಕು. ಎನ್ನುವ ಪ್ರಶ್ನೆ ಉದ್ಭವಿಸಿದರೆ, ಅಲ್ಲಿ ಸಂಸ್ಕೃತಿ ಸತ್ತು ಹೋಗಿದೆಯೇ ಎಂದರ್ಥ ವ್ಯಕ್ತವಾಗುತ್ತದೆ.

ಸ್ತ್ರಿಯರು, ಪುರುಷ ಸಮಾಜವನ್ನು ಕಂಡಾಗ ತಲೆಯ ಮೇಲೆ ಸೀರೆಯ ಸರಗನ್ನು ಏಕೆ ಹೊದ್ದಿಕೊಳ್ಳಬೇಕು ? ನಾಟಕ ಪ್ರದರ್ಶನವಾಗುತ್ತಿರುವಾಗ ಗಂಡಸರದ್ದು ಒಂದು ಗುಂಪು ಮತ್ತು ಹೆಂಗಸರದ್ದು ಒಂದು ಗುಂಪು ಏಕೆ ಇರಬೇಕು ? ಊಟ ಗಂಡಸರದ್ದು ಆಗಿದ ಮೇಲೆ ಹೆಣ್ಣು ಮಕ್ಕಳು ಏಕೆ ಊಟ ಮಾಡಬೇಕು ? ಗಂಡನೇ ಮನೆಯ ಎಲ್ಲಾ ಜವಾಬ್ದಾರಿಗಳು ಏಕೆ ಹೊರಬೇಕು ? ಎನ್ನುವ ಇನ್ನು ಹತ್ತು ಹಲವಾರು ಪ್ರಶ್ನೆಗಳಿಗೆ ಉತ್ತರ ಹುಡುಕಿದರೆ ಅದು ಅಲ್ಲಿಯ ಸಂಸ್ಕೃತಿ ಎಂದು ಉತ್ತರಿಸಬೇಕಾಗುತ್ತದೆ. ಇದನ್ನೆಲ್ಲಾ ನಾವು ಅನುಸರಿಸಲೇ ಬೇಕು ಎಂದೂ ಕಡ್ಡಾಯವೆನಲ್ಲಾ. ಆದರೆ ಆ ಸಮಯ ಅಲ್ಲಿನ ರೂಢಿಗಳು, ಕಂದಾಚಾರಗಳು, ವಿಚಾರಗಳು, ಇವೆಲ್ಲಾ ಆ ಭಾಗದ ಸಂಪ್ರದಾಯಗಳು ಹೀಗಾಗಿ ಇವನ್ನೂ ನಾವು ಅನುಸರಿಸಲೇಬೇಕು. ಇವುಗಳು ಅಲ್ಲಿಯ ಸಂಸ್ಕೃತಿ ಎಂದು ನಾವು ಗಮನಿಸುತ್ತೇವೆ.

ಒಟ್ಟಾರೆಯಾಗಿ ಹೇಳುವುದಾದರೆ ಸಂಗ್ಯಾ ಬಾಳ್ಯಾ ಕೃತಿಯಲ್ಲಿಯೇ ಆಗಲಿ, ಖರೇ ಖರೇ ಸಂಗ್ಯಾ ಬಾಳ್ಯಾ ಕೃತಿಯಲ್ಲಿಯೇ ಆಗಲಿ, ನಾವು ಗಮನಿಸುವ ಅಂಶ ಎಂದರೆ ಸಂಸ್ಕೃತಿಯು ಅಲ್ಲಿಯ ಜನ -ಜೀವನದ ಮೇಲೆ ಅಪಾರ ರೀತಿಯಲ್ಲಿ ಪ್ರಭಾವ ಬೀರಿದೆ ಎಂದು, ವಿಷಯದುದ್ದಕ್ಕೂ ಹೇಳಬಹುದು. ಸಂಗ್ಯಾ ಬಾಳ್ಯ ಕೃತಿಗಳು ಬೆಳಗಾಂವ ಜಿಲ್ಲೆಯ ಸಂಪ್ರದಾಯಗಳು, ಭಾಷೆ ರೂಢಿ ಕಂದಾಚಾರಗಳು, ಮೀತಿ ಮೀರಿದ ರೀತಿಯಲ್ಲಿ ಹಾಸುಹೊಕ್ಕಾಗಿವೆ. ಇವುಗಳನ್ನು ಚಾಚು ತಪ್ಪದೆ ಜೀವನ ಶೈಲಿಯಲ್ಲಿ ಉಳಿಯಬೇಕು. ಮುಂದಿನ ಪೀಳಿಗೆಗೆ ವಿಷಯ ವಸ್ತು ಆಗಬೇಕೆಂಬುವದು ನಮ್ಮೆಲ್ಲರ ಆಶಯ..

ಅಧ್ಯಾಯ ೫

ಸಮಾರೋಪ

ಸಮಾರೋಪ

ಸಂಗ್ಯಾ ಬಾಳ್ಯಾ ಕೃತಿ ಮತ್ತು ಖರೇ ಖರೇ ಸಂಗ್ಯಾ ಬಾಳ್ಯಾ ಕೃತಿ ಈ ಎರಡೂ ಕೃತಿಗಳು ತೌಲನಿಕ ಅಧ್ಯಯನ ದೃಷ್ಟಿಯಿಂದ ಆಯ್ಕೆ ಮಾಡಿಕೊಂಡಿರುವ ಕೃತಿಗಳಲ್ಲ, ಮೂಲತ : ವಾಗಿ ಆಯ್ಕೆ ಮಾಡಿಕೊಂಡಿರುವುದು ಕೇವಲ ಒಂದು ಅಧ್ಯಯನದ ದೃಷ್ಟಿಯಿಂದ. ಈ ಎರಡೂ ಕಥೆಗಳು ಒಂದೇ ಕಥಾವಸ್ತು ಹೊಂದಿರುವ ಕೃತಿಗಳಾದರೂ, ಎರಡರಲ್ಲಿಯೂ ಸ್ವಲ್ಪ ಭಿನ್ನತೆಯನ್ನು ಕಾಣುತ್ತೇವೆ. ಪತ್ತಾರ ರಾಯಪ್ಪ ಕವಿಯ ಮೂಲ ಕೃತಿಯೆಂದರೆ ಸಂಗ್ಯಾ ಬಾಳ್ಯಾ ಈ ಕೃತಿಯನ್ನು ಆಧಾರವಾಗಿಟ್ಟುಕೊಂಡು ರಚನೆಯಾಗಿರುವ ಕೃತಿಯೆಂದರೆ ಖರೇ ಖರೇ ಸಂಗ್ಯಾ ಬಾಳ್ಯಾ ಇದನ್ನು ಎಂ.ಎಂ.ಕಲಬುರ್ಗಿಯವರು ಸೃಷ್ಟಿಸುವ ಒಂದು ಹೊಸ ಪ್ರಯೋಗ.

ಪತ್ತಾರ ರಾಯಪ್ಪನವರು ರಚಿಸಿರುವ ಸಂಗ್ಯಾ ಬಾಳ್ಯಾ ಕೃತಿಯು ಒಂದು ಸುಳ್ಳು ಅಪವಾದ ಕೃತಿ. ಇದು ಸುಳ್ಳಿನಿಂದ ಕೂಡಿರುವಂಥದ್ದು. ಪತ್ತಾರ ಕವಿಯ ದ್ವೇಷದ ಪ್ರವೃತ್ತಿಯಿಂದ ಹುಟ್ಟಿರುವ ಒಂದು ಕೂಸು. ಎಂದು ಹೇಳಿ ಸತ್ಯಸತ್ಯೆತಯನ್ನು ಹುಡುಕುತ್ತಾ ಹೋಗಿ, ಖರೇ ಖರೇ ಸಂಗ್ಯಾ ಬಾಳ್ಯಾ ಕೃತಿಯನ್ನು ರಚಿಸಿದ್ದಾರೆ. ಸತ್ತವರ ಮೇಲೆ ಗೋರಿ ಕಟ್ಟುವ ಕೆಲಸ ಇಲ್ಲಿ ಕಲಬುರ್ಗಿಯವರು ಮಾಡಿರುವಂಥದ್ದು ಒಂದು ಮೂಲ ಕೃತಿಯಿಂದ ರಚನೆಯಾಗಿರುವ ಕೃತಿಯನ್ನು, ಅಂದರೆ ಖರೇ ಖರೇ ಸಂಗ್ಯಾಬಾಳ್ಯಾ ಕೃತಿಯು, ಒಂದು ಬದಲಾವಣೆಯನ್ನು ಬಯಸಿ ಹುಟ್ಟಿರುವಂಥದ್ದು. ಸತ್ಯತೆಯನ್ನು, ಹೊಸತನವನ್ನು ಬಯಸಿ ನಡೆದಿರುವ ಕ್ರಿಯೇ ಇದಾಗಿದೆ.

ಪತ್ತಾರ ರಾಯಪ್ಪ ಕವಿಯ ವಿರಚಿತ ಸಂಗ್ಯಾಬಾಳ್ಯಾ ಕೃತಿಯು ಒಂದು ವ್ಯವಸ್ಥೆಯಲ್ಲಿ ಬೆಳೆದು ಬಂದಿರುವಂಥದ್ದು. ಇಲ್ಲಿಯ ಪ್ರಮುಖ ಕಥಾವಸ್ತು ಎಂದರೆ ಗಂಗಿ ಮತ್ತು ಸಂಗ್ಯಾರ ದುರಂತ ಚಿತ್ರಣವನ್ನು ಗಮನಿಸುವಂಥದ್ದು. ಗಂಡನಾದ ಲಗಳೆಯರ ಮನೆತನದ ಈರಪ್ಪಾ. ಗಂಗಿಯ ಮನಸ್ಸಿನ ಭಾವನೆಯನ್ನು ಅರಿಯದ ಆಸಾಮಿ. ಹೆಂಡತಿಯ ಜೊತೆ ಸುಖವಾಗಿ ಕಾಲ ಕಳೆದವನೇ ಇಲ್ಲ. ಅವಳ ಅಂತರಂಗ ಅರಿಯುವ ಗೋಜಿಗೆ ಹೋಗುವುದೇ ಇಲ್ಲ. ಬರೀ ವ್ಯಾಪಾರ, ವ್ಯವಹಾರ, ಹೊಲ ಇಷ್ಟನ್ನು ಬಿಟ್ಟರೆ ಬೇರೆ ವಿಷಯಗಳು ಬರಿ ಕಾಟಚಾರಕ್ಕೆ ಎಂಬಂತೆ. ಗಂಗಿಯ ಜೊತೆ ಗೂಡಿ ಸಂಸಾರ ನಡೆಸುವ ವಿಚಾರವಂತು ಇಲ್ಲವೆ ಇಲ್ಲ. ಗಂಗಿಯ ಗಂಡನಾದ ಈರ್ಯಾನಿಂದ ಏನನ್ನು ಬಯಸಿದಳೋ ಅದು ಅಲ್ಲಿ ಸಿಗುವುದಿಲ್ಲ. ಹೆಂಡತಿಯೊಂದು ಸರ-ಸಲ್ಲಾಪಗಳು ಎಲ್ಲಿಯೂ ಕೃತಿಯಲ್ಲಿ ಕಂಡು ಬಂದಿಲ್ಲ. ಹೀಗಾಗಿ ಗಂಗಿಯ ಮನಸ್ಸು ಬರಿ ಕಾದು ನೋಡುವ ತಂತ್ರವಾಗುತ್ತದೆ. ಗಂಡನಿಗೆ ಹೆಂಡತಿಯ ಜೀವನ ಏರಿಳಿತಗಳ ಬಗ್ಗೆ ಕ್ಷಣಿಕವಾಗಿಯೂ ಅರಿಯದವನಾಗಿ ಈರಪ್ಪಾ ಕಂಡು ಬಂದಿದ್ದಾನೆ.

ಗಂಗಿಯೂ ಗಂಡನಿಂದ ಸಿಗದೇ ಇರುವ ಸುಖವನ್ನು ಪಕ್ಕದ ಮನೆಯ ಸಂಗ್ಯಾನಿಂದ ಪಡೆಯುತ್ತಾಳೆ. ಗಂಡ ವ್ಯಾಪಾರಕ್ಕೆಂದು ಬಳ್ಳಾರಿಗೆ ಹೋದಾಗ, ಗಂಗಿಯು ಸಂಗ್ಯಾನ ತೋಳ ತಕ್ಕೆಯಲ್ಲಿ ಮೈ ಮರೆಯುತ್ತಾಳೆ. ಈ ಸುದ್ದಿಯು ಇಡಿ ಊರ ತುಂಬ ಹಬ್ಬಿರುತ್ತದೆ. ಒಂದು ದಿವಸ ವ್ಯಾಪಾರ ಮುಗಿಸಿಕೊಂಡು ಮನೆಯ ಕಡ ಈರಪ್ಪಾ ಬಂದಾಗ ಗಂಗಿ ಮತ್ತು ಸಂಗ್ಯಾ ಈರಪ್ಪನ ಕೈಯಲ್ಲಿ ಸಿಕ್ಕಿ ಬೀಳುತ್ತಾರೆ. ಮನೆಯಲ್ಲಿ ಇಬ್ಬರೆ ಬಾಗಿಲ ಕಡ ಹಾಕಿ ಸರ-ಸಲ್ಲಾಪದಲ್ಲಿ ತೊಡಗಿರುವಾಗ ಸಿಕ್ಕಿ ಬಿದ್ದ ಗಂಗಿ ಮತ್ತು ಸಂಗ್ಯಾ ಇವರು ಭಯಭೀತರಾಗುತ್ತಾರೆ.

ಈರ್ಯಾನ ಕೈಯಿಂದ ತಪ್ಪಿಸಿಕೊಂಡು ಸಂಗ್ಯಾ ಓಡಿ ಹೋಗುತ್ತಾನೆ. ಗಂಗಿ ಮಾತ್ರ ಹಾಗೆಯೇ ಮೂಕಳಾಗಿ ಈರ್ಯಾನ ಮುಂದೆ ಅಪರಾದಿಯಾಗಿ ನಿಲ್ಲುತ್ತಾಳೆ. ಇದರ ಪ್ರತಿಫಲ ಎಂಬಂತೆ ಗಂಗಿಯು ಗಂಡನಿಂದ ಸಂಸಾರ ಕಡಿದುಕೊಂಡು ತವರು ಮನೆ ಸೇರುತ್ತಾಳೆ.

ಇದೇ ಸೇಡಿನ ಪ್ರತಿಕವಾಗಿ ತನ್ನ ಹೆಂಡತಿಯನ್ನು ವರಿಸಿದ ಸಂಗ್ಯಾನ ಕೊಲೆಯು ಈರಪ್ಪಾ ಮತ್ತು ಆತನ ಸಹೋದರರಿಂದ ಭಯಾನಕವಾಗಿ ನಡೆದು ಹೋಗುತ್ತದೆ. ಇದು ಸಂಗ್ಯಾ ಬಾಳ್ಯಾ ಕಥೆಯಲ್ಲಿ ಮೂಡಿ ಬಂದಾ ಘಟನೆ. ಈ ಒಂದು ಸನ್ನಿವೇಷವನ್ನು ಪ್ರೇಕ್ಷಕ ವರ್ಗ ಒಪ್ಪುತ್ತದೆ. ಆದರೆ ಮುಂದೆ ಖರೇ ಖರೇ ಸಂಗ್ಯಾಬಾಳ್ಯಾ ಕೃತಿಯಲ್ಲಿ ಕೆಲವು ಅಂಶಗಳು ಸಂಶಯಕ್ಕೆ ಎಡೆ ಮಾಡಿಕೊಡುತ್ತವೆ. ಅದು ಹೇಗೆಂದರೆ.

ಖರೇ ಖರೇ ಸಂಗ್ಯಾ ಬಾಳ್ಯಾ ಕೃತಿಯಲ್ಲಿ ಪ್ರಧಾನ ಪಾತ್ರದಲ್ಲಿ ಕಂಡು ಬರುವವರೆಂದರೇ ಗಂಗಿಯ ಪಾತ್ರವೇ. ಗಂಗಿಯ ಸುತ್ತಲೂ ಇಲ್ಲಿಯು ಅನೇಕ ಪಾತ್ರಗಳು ತಿರುಗುತ್ತಿರುತ್ತವೆ. ಪತ್ತಾರ ರಾಯಪ್ಪ ಎಂಬ ಅಕ್ಕಸಾಲಿಗ ಗಂಗಿಯ ಸೌಂದರ್ಯ ನೋಡಿ ಬೆರಗಾಗಿ ಬಿಡುತ್ತಾನೆ. ಗಂಗಿಯ ಸಂಗಕ್ಕಾಗಿ ಹಾ ತೊರೆಯುತ್ತಾನೆ. ಮುಂದೆ ಈತನ ಅನೇಕ ಉಪಾಯಗಳು, ಸಂಚುಗಳು, ತಂತ್ರಗಳು, ರೂಪಿಸಿದರು. ಗಂಗಿ ಈತನಿಗೆ ಸಿಗುವುದೇ ಇಲ್ಲ. ಇದರಿಂದ ಕುಪಿತನಾದ ಪತ್ತಾರ ರಾಯಪ್ಪ, ಪರವ್ವ ಎನ್ನುವ ಸ್ತ್ರೀ ಸಹಾಯದದಿಂದ ಗಂಗಿಯ ಬದುಕನ್ನು ಹಾಳು ಮಾಡಲು ಪ್ರಯತ್ನಿಸುತ್ತಾನೆ. ಪರವ್ವಳು ಬಂಗಾರದ ಆಶೆಗಾಗಿ ಪತ್ತಾರನ ಬಯಕೆಯಂತೆ, ಗಂಗಿ ಮತ್ತು ಸಂಗ್ಯಾನ ಹಾದರ ನಡೆದಿದೆ. ಎಂದು ಊರಿಗೂರೆ ಬಾಯಿಬಿಡುವಂತೆ ಸುದ್ದಿ ಮಾಡುತ್ತಾಳೆ. ಹಾದರ ಈ ಸುದ್ದಿಯು ಗಂಗಿಯ ಮೈದುನರ ಕಿವಿಗೂ ಬೀಳುತ್ತದೆ. ಹಾಗೆಯೇ ರಾತ್ರಿ ಸಮಯದಲ್ಲಿ ಗಂಗಿ ಮತ್ತು ಈರಪ್ಪರ ಮಂಚದ ಮೇಲಿನ ತಲೆಯ ದಿಂಬಿನ ಕೆಳಗೆ ಸಂಗ್ಯಾನ ಎಲೆ ಅಡಿಕೆ ಚೀಲ ಇಟ್ಟು, ಈರಪ್ಪನಿಗೂ ಖಾತ್ರೆಯಾಗಿ ಸಂಶಯ ಬರುವಂತೆ ಮಾಡಿರುತ್ತಾಳೆ.

ಇದನ್ನೇ ಸತ್ಯ ಎಂದು ಅರಿತಿರುವ ಈರಪ್ಪಾ ತನ್ನ ಹೆಂಡತಿಯನ್ನು ಮನೆಯಿಂದ ಹೊರ ದಬ್ಬುತ್ತಾನೆ. ಹಾಗೂ ತನ್ನ ಗೆಳೆಯನಾದ ಸಂಗ್ಯಾನನ್ನು ಬಾಳ್ಯಾನ ಸಹಾಯ ಪಡೆದು, ಮರಡಿ ಬಸವಣ್ಣನ ದೇವಾಲಯದ ಸಮೀಪ ಇರುವ ಒಂದು ಗಿಡದ ಕಂಟಿಯಲ್ಲಿ ಸಂಗ್ಯಾನನ್ನು ಭೀಕರವಾಗಿ ಕೊಲೆ ಮಾಡುತ್ತಾರೆ. ಇದನ್ನು ಒಂದು ಭಯಾನಕವಾದ ದುರಂತ ಎನ್ನಬಹುದು. ಏಕೆಂದರೆ ಸಂಗ್ಯಾ ಮತ್ತು ಗಂಗಿಯ ಹಾದರ ಸುದ್ದಿ ಊರ ತುಂಬ ಹರಡಿದರೂ ಹರಡಲಿ. ಯಾರು ಗಂಗಿ ಮತ್ತು ಸಂಗ್ಯಾನ ಹಾಡರದ ದೃಶ್ಯ ನೋಡಿದವರೇ ಇಲ್ಲ. ಒಂದು ಸಂಸಾರ ಒಡೆಯುತ್ತದೆ. ಆದರೆ ಇಲ್ಲಿ ಯಾವ ಪ್ರಮುಖವಾದ ಸಾಕ್ಷಿಗಳು ಕಂಡುಬರುವದೇಯಿಲ್ಲ. ಬರಿ ಎಲೆ ಅಡಿಕೆ ಚೀಲ ಮತ್ತು ಜನರ ಮಾತುಗಳನ್ನೆ ಸತ್ಯ ಎಂದು ನಂಬಿ ಒಂದು ಕೊಲೆ, ಮತ್ತು ಒಂದು ಹೆಣ್ಣಿನ ನಿರಾಶೆಯ ಬದುಕಿಗೆ ಕಾರಣ ಎಷ್ಟರ ಮಟ್ಟಿಗೆ ಸರಿ ಎನ್ನುವ ಪ್ರಶ್ನೆ ಎಲ್ಲರನ್ನೂ ಕಾಡುವುದು.

ಸಂಗ್ಯಾ ಬಾಳ್ಯಾ ಕೃತಿಯಲ್ಲಿ ಸುಳ್ಳು ಒಂದು ವೇಳೆ ನಮಗೆ ಅನಿಸಿದರೂ, ಅದು ಸುಳ್ಳು ಎನ್ನುವ ರೀತಿಯಲ್ಲಿ ಕೃತಿಯ ಉದ್ದಕ್ಕೆ ತಿಳಿಯುವುದೇಯಿಲ್ಲ. ಗಂಗಿ ಮತ್ತು ಸಂಗ್ಯಾರ ಹಾದರ ದೃಶ್ಯ ಕಣ್ಣ ಮುಂದೆ ಕಂಡಾಗಲೇ ಕೊಲೆ ಮತ್ತು ಗಂಗಿಯ ವಿಚ್ಛೇದನ ನಡೆಯುತ್ತದೆ. ಇದು ಒಪ್ಪುವಂಥದ್ದು.

ಖರೇ ಖರೇ ಸಂಗ್ಯಾ ಬಾಳ್ಯಾ ಕೃತಿಯಲ್ಲಿ ಸಾಕ್ಷ್ಯಾಧಾರಗಳು ಸರಿಯಾಗಿ ಇಲ್ಲದೇ ನಿರ್ಧಾರ ಪ್ರಕಟವಾಗುತ್ತದೆ. ಒಬ್ಬ ಮುದಕಪ್ಪನ ಬಾಯಿಂದ ಅರಿತ ಭಾಗವತ ಏನೇನೂ ಕಥೆಯನ್ನು ತಿರುಚುವತ್ತ ಹೊರಟದ್ದಾನೆ. ಯಾವುದೇ ಪ್ರೇಕ್ಷಕ ವರ್ಗವಾಗಲಿ, ಸಹೃದಯರೇ ಆಗಲಿ, ಮತ್ತ್ಯಾರೇ ಆಗಲಿ, ನಿಜಾಂಶವನ್ನು ಅರಿಯುವುದಿಲ್ಲ. ಸಾಮಾಜಿಕ ಮೌಲ್ಯಗಳು ಸಂಬಂಧಗಳು ಎಲ್ಲವೂ ನಮ್ಮ ನಾಡಿನ ಸಂಸ್ಕೃತಿಯನ್ನು ಬಿಂಬಿಸುವ ಅದು ಯಾವುದು ಇಲ್ಲಿ ನಡೆದಿರುವುದಿಲ್ಲ. ಬರಿ ಊಹಾಪೋಹಗಳಿಗೆ ಕಿವಿ ಕೊಟ್ಟು ಇದನ್ನೇ ಸತ್ಯವಾಗಿದೆ. ಎಂದು ಅರಿಯುವುದು ತಪ್ಪಾಗುತ್ತದೆ. ಹೀಗಾಗಿ ಖರೇ ಖರೇ ಸಂಗ್ಯಾಬಾಳ್ಯಾ ಕೃತಿಯ ಈ ಸಂಶೋಧನೆಯಲ್ಲಿ ಅಷ್ಟೊಂದು ಪ್ರಾಮುಖ್ಯತೆಯನ್ನು ಪಡೆದುಕೊಂಡಿಲ್ಲ. ಎಂದು ಹೇಳಬಹುದು. ಮೂಲ ಕಥೆಯನ್ನು ಯಾವುದೋ ಒಂದು ಕಾರಣದಿಂದ ಒಂದು ಹೊಸತನವನ್ನು .ಹುಡುಕುತ್ತಾ. ಹೊರಟ ಲೇಖಕರಿಗೆ ಇಲ್ಲಿ ನಿರಾಶೆಯಾಗಿದೆ. ಅವರು ಮೂಲ ಕಥೆಯ ಕಥಾವಸ್ತು ಸುಳ್ಳಿನಿಂದ ಕೂಡಿದೆ, ಎಂದು ಹೇಳಲು ಹೊರಟಿರುವುದು ಇಲ್ಲಿ ಸಮಂಜಸ ಎನಿಸದು.

ಒಂದಂಶ ಇಲ್ಲಿ ಹೇಳುವುದಾದರೆ, ಪತ್ತಾರ ರಾಯಪ್ಪರ ಸಂಗ್ಯಾಬಾಳ್ಯಾ ಕೃತಿಯ ಬೆಳಕಿನಲ್ಲಿ ಎಂ.ಎಂ.ಕಲಬುರ್ಗಿಯವರು ದೀಪ ಹಚ್ಚಲು ಹೊರಟಂತೆ ಕಂಡು ಬರುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಎರಡು ಕೃತಿಗಳ ಬಗ್ಗೆ ಅಧ್ಯಯನ ಮಾಡಲು ಸಿಕ್ಕ ಅವಕಾಶ ನನಗೆ ಸಂತೋಷವನ್ನುಂಟು ಮಾಡಿದೆ.

ಗ್ರಂಥ ಋಣ

೧) ಸಂ : ಡಾ. ಲಠ್ಠೆ ಮಲ್ಲಿಕಾರ್ಜುನ ಶಿ
ಕೃತಿ : ರಾಯಪ್ಪ ಪತ್ತಾರ ವಿರಚಿತ
ಸಂಗ್ಯಾ ಬಾಳ್ಯಾ (ಡಪ್ಪಿನಾಟ)
ಪ್ರಕಾಶಕರು : ಗ್ರಿನೋಬಲ್ಸ ಪ್ರಕಾಶನ ಕಲಬುರ್ಗಿ
ಮುದ್ರಣ : ೧೯೯೧

೨) ಸಂ : ಕುರ್ತಕೋಟಿ ಕೀರ್ತಿನಾಥ
: ಚಂದ್ರಶೇಖರ ಕಂಬಾರ
ಕೃತಿ : ಸಂಗ್ಯಾ ಬಾಳ್ಯಾ
(ಬಯಲಾಟ)
ಪ್ರಕಾಶಕರು : ಮನೋಹರ ಗ್ರಂಥಮಾಲಾ
ಲಕ್ಷ್ಮಿ ಭವನ, ಸುಭಾಸ ರಸ್ತೆ,
ಧಾರವಾಡ - ೫೮೦ ೦೦೧
ಮುದ್ರಣ : ೧೯೮೦

೩) ಲೇ : ಕಲಬುರ್ಗಿ ಎಂ.ಎಂ.
ಕೃತಿ : ಖರೇ ಖರೇ ಸಂಗ್ಯಾ-ಬಾಳ್ಯಾ
(ಸಣ್ಣಾಟ)
ಪ್ರಕಾಶಕರು : ಲೋಹಿಯಾ ಪ್ರಕಾಶನ ಬಳ್ಳಾರಿ.
ಮುದ್ರಣ : ೨೦೦೫

೪) ಸಂ : ಬೋರಲಿಂಗಯ್ಯಾ ಹಿ. ಚಿ.
ಕೃತಿ : ಕರ್ನಾಟಕ ಜನಪದ ಕಲೆಗಳ ಕೋಶ
ಪ್ರಕಾಶಕರು : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ - ೫೮೩ ೨೨೧.
ಮುದ್ರಣ : ೧೯೯೬

೫)	ಪ್ರಧಾನ ಸಂಪಾದಕರು :
ಡಾ. ಡಿ.ಬಿ.ನಾಯಕ
ಸಂಪಾದಕರು :
ಡಾ. ಶಾಂತಿನಾಥ ದಿಬ್ಬದ
ಡಾ. ಹೆಚ.ಟಿ. ಪೋತೆ
ಕೃತಿ : ಜ್ಞಾನ ಗಂಗಾ - ೨
ಪ್ರಕಾಶಕರು : ಕನ್ನಡ ಸಾಹಿತ್ಯ ಸಂಘ,
ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ - ೬
ಮುದ್ರಣ : ೨೦೦೫-೦೬

೬)	ಲೇ : ಕೆ. ಮರುಳಸಿದ್ದಪ್ಪ
ಕೃತಿ : ಆಧುನಿಕ ಕನ್ನಡ ನಾಟಕ
ಪ್ರಕಾಶಕರು : ಲಿಪಿ ಪ್ರಕಾಶನ ಬೆಂಗಳೂರು - ೫೬೦ ೦೦೪
ಮುದ್ರಣ : ೧೯೯೩

೭)	ಸಂ : ಪ್ರೊ. ಹಿ.ಶಿ. ರಾಮಚಂದ್ರೆಗೌಡ
ಕೃತಿ : ಜಾನಪದ ಗ್ರಹಿಕೆ : ಪರಿಕಲ್ಪನೆ
ಪ್ರಕಾಶಕರು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಕನ್ನಡ ಭವನ, ಬೆಂಗಳೂರು - ೫೬೦ ೦೦೨.
ಮುದ್ರಣ : ೨೦೦೪

೮)	ಲೇ : ಡಾ. ರಾಮಕೃಷ್ಣ ಮರಾಠೆ
ಕೃತಿ : ಉತ್ತರ ಕರ್ನಾಟಕ ವೃತ್ತಿ ರಂಗಭೂಮಿ
ಪ್ರಕಾಶಕರು : ಇಳಾ ಪ್ರಕಾಶನ, ಬೆಂಗಳೂರು - ೧೮
ಮುದ್ರಣ : ೧೯೯೪

೯)	ಲೇ : ಡಾ. ಎಚ.ಕೆ. ರಂಗನಾಥ
ಕೃತಿ : ಕರ್ನಾಟಕ ರಂಗಭೂಮಿ
ಪ್ರಕಾಶಕರು : ಕರ್ನಾಟಕ ಸರಕಾರ,
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
ಮುದ್ರಣ : ೧೯೭೮

೧೦) ಲೇ : ಎ.ಆರ. ನಾಗಭೂಷಣ
ಕೃತಿ : ನಾಟಕ ಪ್ರವೇಶಿಕೆ
ಪ್ರಕಾಶಕರು : ಅಕ್ಷರ ಪ್ರಕಾಶನ ಹೆಗ್ಗೋಡ ಸಾಗರ
ಕರ್ನಾಟಕ - ೫೭೭ ೪೧೭
ಮುದ್ರಣ : ೧೯೯೪

೧೧) ಲೇ : ವಾಲೀಕಾರ ಚೆನ್ನಣ್ಣ
ಕೃತಿ : ಜಾನಪದ ಲೋಕ
ಪ್ರಕಾಶಕರು : ಅಪ್ಪ ಸಾಹೇಬ ವಾಲೀಕಾರ
ದಲಿತ ಬಂಡಯ ಪ್ರಚಾರ ಸಮಿತಿ,
ಬಡೇಪೂರ ಕಾಲೋನಿ, ಗುಲಬರ್ಗಾ - ೫೮೫ ೧೦೫
ಅಚ್ಚು : ೧೯೯೩

೧೨) ಸಂ : ಪ್ರೊ. ಹಿ.ಶಿ. ರಾಮಚಂದ್ರೆಗೌಡ
ಕೃತಿ : ಜಾನಪದ ಗ್ರಹಿಕೆ : ಪರಿಕಲ್ಪನೆ
ಪ್ರಕಾಶಕರು : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಕನ್ನಡ ಭವನ, ಬೆಂಗಳೂರು - ೫೬೦ ೦೦೨.
೨೦೦೪

೧೩) ಲೇ : ಡಾ. ರಾಮಕೃಷ್ಣ ಮರಾಠೆ
ಕೃತಿ : ಉತ್ತರ ಕರ್ನಾಟಕ ವೃತ್ತಿ ರಂಗಭೂಮಿ
ಪ್ರಕಾಶಕರು : ಇಳಾ ಪ್ರಕಾಶನ, ಬೆಂಗಳೂರು - ೧೮
೧೯೯೪

೧೪) ಲೇ : ಡಾ. ಎಚ.ಕೆ. ರಂಗನಾಥ
ಕೃತಿ : ಕರ್ನಾಟಕ ರಂಗಭೂಮಿ
ಪ್ರಕಾಶಕರು : ಕರ್ನಾಟಕ ಸರಕಾರ,
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
೧೯೭೮